ಮಾನವಿಕ ಕರ್ಣಾಟಕ

ಸಂಪುಟ ೫ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೫ ಸಂಚಿಕೆ ೧

೧೭

ನವೆಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

MANAVIKA KARNATAKA, Kannada quarterly of the University of Mysore. Volume 5, Number 1, November 1974. Edited by H S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಶ್ರೀ ವೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು

ವಿಷಯಸೂಚಿ

ಈ ಸಂಚಿಕೆಯ ಲೇಖನಗಾರರು

ಶ್ರೀಯುತರಾದ

೧ ಗಣೇಶ ಕುರ್ಡಿ, ನ್ಯಾಯವಾದಿಗಳು ಮತ್ತು ವ್ಯಾಪಾರ ಚಿಹ್ನೆ ಸಲಹೆಗಾರರು, 67/ಬಿ, ಪದ್ಮಾನಿಲಯ, ಸರಸ್ವತಿಪುರ ಹೊಸ ಬಡಾವಣೆ, ಮೈಸೂರು ೫೭೦೦೦೯

೨ ಜಿ. ಎನ್. ಚಕ್ರವರ್ತಿ, ಯು. ಜಿ. ಸಿ. ಸಂಶೋಧನ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೩ ಕೆ. ಎಸ್. ದೇಶಪಾಂಡೆ, ಗ್ರಂಥಪಾಲರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪ ಬಾ. ವೇ. ಶ್ರೀಧರ್, ಸಹಾಯಕ ಸಂಪಾದಕರು, ಇಂಗ್ಲಿಷ್–ಕನ್ನಡ ನಿಘಂಟು, ಪ್ರಸಾರಾಂಗ, ಮೈಸೂರು

೫ ಡಾ. ಬಾ. ರಾ. ಗೋಪಾಲ್, ಶಾಸನತಜ್ಞರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೬ ಕಂಠೀರಾವ್, ಪ್ರಭಾರಿ ನಿರ್ದೇಶಕರು, ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ, ಬೆಂಗಳೂರು

೭ ಮು. ಶಿವನಂಜಯ್ಯ, ಪ್ರಧಾನಾಧಿಕಾರಿ, ಶ್ರೀ ಕುವೆಂಪು ವಿದ್ಯಾವರ್ಧಕ ಸಂಘ, ಜಯಲಕ್ಷ್ಮೀಪುರ, ಮೈಸೂರು ೫೭೦೦೧೨

೮ ಎಚ್. ಆರ್. ರಘುನಾಥ ಭಟ್, ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ

೯ ಡಾ. ಕೆ. ಎನ್. ವೆಂಕಟರಾಯಪ್ಪ, ಪ್ರಾಧ್ಯಾಪಕರು ಮತ್ತು ಮುಖ್ಯರು, ಮಾನವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ

೧೦ ಕೆ. ಲಕ್ಷ್ಮೀನಾರಾಯಣ, ಸಂಶೋಧಕರು, ಮಾನವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ

೧೧ ಎಸ್. ನಾರಾಯಣಮೂರ್ತಿ, ಜಿಲ್ಲಾ ನ್ಯಾಯಾಧೀಶರು, ೩೫೭–ಬಿ, ಮಾಗಡಿ ಕಾರ್ಡ್ ರೋಡ್, ವಿಜಯನಗರ, ಬೆಂಗಳೂರು ೫೬೦೦೪೦

೧೨ ಕೆ. ಎಸ್. ರಾಘವನ್, ಅಧ್ಯಾಪಕರು, ಗ್ರಂಥಾಲಯ ವಿಜ್ಞಾನ, ಮಾನಸಗಂಗೋತ್ರಿ

೧೩ ಡಾ. ಎಂ. ಎನ್. ನರಸಿಂಹನ್, ತತ್ತ್ವಶಾಸ್ತ್ರ ವಿಭಾಗ, ಸರ್ಕಾರಿ ಆರ್ಟ್ಸ್ ಕಾಲೇಜು, ಬೆಂಗಳೂರು

೧೪ ಸೀತಾರಾಮ ಜಾಗೀರ್‌ದಾರ್, ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

ಗಣೇಶ ಕುರ್ಡಿ

ಜೋನ್ ಆಫ್ ಆರ್ಕ್

ಪ್ರಪಂಚದ ಅತ್ಯಂತ ಹೆಸರಾಂತ ಮಹಿಳೆಯರ ಪಟ್ಟಿ ಫ್ರಾನ್ಸಿನ ಸಂತ ತರುಣಿ ಜೋನ್ ಆಫ್ ಆರ್ಕಳ ಹೆಸರಿಲ್ಲದೆ ಪೂರ್ಣವಾಗಲಾರದು. ಅವಳು ಲೊರೇನಿನಲ್ಲಿರುವ ಡೊಮ್ರೇಮಿ ಎಂಬ ಒಂದು ಚಿಕ್ಕ ಹಳ್ಳಿಯಲ್ಲಿ ಜನಿಸಿದಳು. ಅವಳ ಜನ್ಮವರ್ಷವನ್ನು 1412 ಎಂದು ಅಂದಾಜು ಮಾಡಲಾಗಿದೆ. ಅವಳ ತಂದೆ ಜಾಕ್ ಡಾರ್ಕ್, ತಾಯಿ ಇಸಬೆಲ ರೊಮಿ. ಅವಳು ಹುಟ್ಟಿದ ಕಾಲದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ನಡುವಿನ ನೂರು ವರ್ಷಗಳ ಯುದ್ಧ ಅರ್ಧ ಮುಗಿದಿದ್ದು ಫ್ರಾನ್ಸು ಹೈರಾಣಾಗಿತ್ತು. ದೇಶದ ಕುಲೀನಮನೆತನಗಳು ತಮ್ಮತಮ್ಮೊಳಗೆ ಬಡಿದಾಡುತ್ತಿದ್ದುವು. ಆಳರಸ ಆರನೆಯ ಚಾರ್ಲ್ಸನಿಗೆ ಹುಚ್ಚು ಹಿಡಿದಿತ್ತು. ಆರ್ಮೆಗ್ನ್ಯಾಕ್ಸ್ ಎಂದು ಕರೆಯಲ್ಪಡುತ್ತಿದ್ದ ಪ್ರಜಾಪಕ್ಷ ದೊರೆತನವನ್ನು ಎತ್ತಿಕಟ್ಟುತ್ತಿದ್ದರೆ ಬರ್ಗಂಡಿಯನ್ನರು ದೊರೆಯ ವಿರುದ್ಧ ಕೈಯೆತ್ತಿ ನಿಂತಿದ್ದರು. ಈ ಪಕ್ಷಗಳ ಮುಖಂಡರು ಸ್ವಿಸ್, ಜರ್ಮನ್ ಮತ್ತು ಸ್ಕಾಟ್ ಕೂಲಿ ಸಿಪಾಯಿಗಳ ಮೂಲಕ ಪ್ರಜೆಗಳನ್ನು ಕೊಳ್ಳೆ ಹೊಡೆಯುತ್ತಿದ್ದರು. ಹಳ್ಳಿಗಾಡಿನ ನಿವಾಸಿಗಳು ತಮ್ಮಮನೆಮಾರುಗಳನ್ನು ಬಿಟ್ಟೋಡಿ ಗುಡ್ಡಗಾಡು ಸೇರಿ ಗುಹೆಗಳಲ್ಲಿ ವಾಸಿಸತೊಡಗಿದ್ದರು. ಹೊಟ್ಟೆಗಿಲ್ಲದ ಅವರು ನರಮಾಂಸಭಕ್ಷಣೆಯಿಂದ ಜೀವಿಸತೊಡಗಿದ್ದರೆಂಬ ವದಂತಿ ಹಬ್ಬಿತ್ತು. ಶಹರುಗಳಲ್ಲೇನೋ ಸುತ್ತಲಿದ್ದ ಕಂದಕಗಳಿಂದಾಗಿ ಹೆಚ್ಚಿನ ಸುರಕ್ಷತೆಯಿದ್ದಿತಾದರೂ ಅವುಗಳಲ್ಲಿ ವಾಸಿಸುತ್ತಿದ್ದವರೂ ತಮ್ಮ ರಕ್ಷಣೆಗಾಗಿ ಮೇಲೆ ಹೇಳಿದ ಪಕ್ಷಗಳ ಮುಖಂಡರನ್ನೇ ಅವಲಂಬಿಸಬೇಕಾಗುತ್ತಿತ್ತು. ಚರ್ಚಿನಾಡಳಿತದಲ್ಲಿಯೂ ಒಡಕುಂಟಾಗಿದ್ದು, ಒಬ್ಬ ಪೋಪನ ಬದಲಾಗಿ ಈರ್ವರಿದ್ದು, ಒಬ್ಬ ರೋಮಿನಲ್ಲೂ ಇನ್ನೊಬ್ಬ ಅವಿಗ್ನಾನಿನಲ್ಲೂ ಇರುತ್ತಿದ್ದರು. 1420ರಲ್ಲಿ ರಾಣಿ ಇಸಬೂ ಹಾಗೂ ಬರ್ಗಂಡಿಯ ಡ್ಯೂಕ್ ಇವರೀರ್ವರೂ ಸೇರಿಕೊಂಡು ಇಂಗ್ಲೆಂಡಿನ ದೊರೆ ಪಂಚಮ ಹೆನ್ರಿಗೆ, ಫ್ರಾನ್ಸಿನ ರಾಜಕುವರಿ ಕ್ಯಾದರೀನಳನ್ನು ಲಗ್ನವಾಗಿ, ಹುಚ್ಚು ದೊರೆಯ ಅವಸಾನದ ಅನಂತರ ದೊರೆಯಾಗಿ ಆಳಲು ಆಮಂತ್ರಣೆಯಿತ್ತರು. ಆದರೆ ಪಂಚಮ ಹೆನ್ರಿ ಆರನೆಯ ಚಾರ್ಲ್ಸನಿಗಿಂತ ಎರಡು ತಿಂಗಳು ಮುಂಚಿತವಾಗಿ ಅಸುನೀಗಿದ. ಅವನ ಒಂಬತ್ತು ತಿಂಗಳ ಮಗನನ್ನೇ (ಆರನೆಯ ಹೆನ್ರಿ) ಫ್ರಾನ್ಸಿನ ದೊರೆಯೆಂದು ಸಾರಲಾಯಿತು. ಶಿಶುರಾಜ ಪ್ರತಿನಿಧಿ ಬೆಡ್‌ಫರ್ಡಿನ ಡ್ಯೂಕ್ ತನ್ನ ಆಂಗ್ಲ ಸೈನಿಕ ಪಡೆಗಳಿಂದ ಫ್ರಾನ್ಸಿನ ಆಕ್ರಮಣವನ್ನು ಪ್ರಾರಂಭಿಸಿದ. ಅವನು ಲೊಯರ್ ನದಿಯನ್ನು ದಾಟಿ ಪ್ರಮುಖ ಶಹರವಾಗಿದ್ದ ಆರ್ಲಿಯನ್ಸಿಗೆ ಮುತ್ತಿಗೆ ಹಾಕಿದ. ಫ್ರಾನ್ಸಿನ ಸಿಂಹಾಸನಕ್ಕೆ ನಿಜವಾಗಿ ಬಾಧ್ಯಸ್ಥನಾಗಿದ್ದ ಆರನೆಯ ಚಾರ್ಲ್ಸನ ಮಗ ಡಾಫಿನ್ನನ (ಫ್ರಾನ್ಸಿನ ದೊರೆಯ ಹಿರಿಯ ಮಗನಿಗೆ ಈ ಹೆಸರಿನಿಂದ ಕರೆಯ

ಲಾಗುತ್ತಿತ್ತು) ಆರ್ಮೆಗ್‌ನ್ಯಾಕ್ಸ್ ಪಕ್ಷದ ಫ್ರೆಂಚ್ ಪಡೆಗಳು ಎಲ್ಲ ಕಡೆಗಳಲ್ಲೂ ಸೋಲನ್ನನು ಭವಿಸಿದ್ದರಿಂದ ಅವನು ಮಧ್ಯ ಫ್ರಾನ್ಸಿನಲ್ಲಿ ಆಶ್ರಯ ಪಡೆದಿದ್ದ. ಇಷ್ಟರಲ್ಲಿಯೇ ಅವನ ತಾಯಿ ಅವನು ಆರನೆಯ ಚಾರ್ಲ್ಸನ ಮಗನಲ್ಲವೆಂತಲೂ ಅನೈತಿಕ ಸಂಬಂಧದಿಂದ ಹುಟ್ಟಿದವನೆಂತಲೂ ಸುದ್ದಿಯನ್ನು ಹರಡಿದ್ದಳಾದ್ದರಿಂದ ಅವನ ಸ್ಥಿತಿ ಇನ್ನಷ್ಟು ಹದಗೆಟ್ಟಿತ್ತು.

ಹದಿಮೂರು ತುಂಬಿದಾಗ ಜೋನಳಿಗೆ ಅಶರೀರ ವಾಣಿಗಳು ಕೇಳಿಬರತೊಡಗಿದುವು. ಮೊತ್ತಮೊದಲನೆಯ ಸಲ ಅವಳು ಒಂದು ಚಿಕ್ಕ ತೊರೆಯ ದಂಡೆಯ ಮೇಲೆ ಅಡ್ಡಾಗಿದ್ದಾಗ ಯಾರೋ ತನ್ನನ್ನು ಮನೆಯಲ್ಲಿ ಕರೆಯುತ್ತಿದ್ದಾರೆಂದು ಹೇಳಿದಂತೆ ಅವಳಿಗೆ ಭಾಸವಾಯಿತು. ಮನೆಗೆ ಹೋಗಿ ವಿಚಾರಿಸಿದಾಗ ತನ್ನನ್ನು ಯಾರೂ ಕರೆದಿರಲಿಲ್ಲವೆಂಬದು ಅವಳಿಗೆ ತಿಳಿದು ಬಂದಿತು. ಆನಂತರ ಅವಳು ತೋಟದೊಳಗೆ ಅಡ್ಡಾಡತೊಡಗಿದಾಗ ಅವಳಿಗೆ ತನ್ನ ಹತ್ತಿರವೇ ಒಂದು ಪ್ರಖರ ಪ್ರಕಾಶದ ಅರಿವಾಗಿ ಅದರ ಮಧ್ಯದೊಳಗಿಂದ ಯಾರೋ, ನೀನು ಒಳ್ಳೆಯ ಹುಡುಗಿ; ಯಾವತ್ತೂ ದೇವಭೀರುವಾಗಿಯೂ ನಮ್ರಳಾಗಿಯೂ ಇರು, ಎಂದು ಹೇಳಿದಂತೆ ಕೇಳಿಸಿತು. ಆದರೂ ಅದನ್ನು ಕೇಳಿದಾಗ ಅವಳು ಹೆದರಿದಳು. ಮುಂದೆ ಅವಳು ಕಾಡಿನಲ್ಲಿ ಅಲೆದಾಡುತ್ತಿರುವಾಗ, ಸಾಯಂಕಾಲದ ಹೊತ್ತಿಗೆ ಚರ್ಚಿನಲ್ಲಿ ಗಂಟೆ ಬಾರಿಸತೊಡಗಿದಾಗ ಮೇಲಿಂದ ಮೇಲೆ ಅಶರೀರವಾಣಿಗಳು ಕೇಳಿಬರತೊಡಗಿ, ಅವಳಿಗೆ ಅದರ ರೂಢಿಯಾಗಿ, ಹೆದರಿಕೆ ತಪ್ಪಿತು. ಸ್ವಲ್ಪ ದೊಡ್ಡವಳಾದ ಬಳಿದ ಅವಳು ಆ ಅಶರೀರವಾಣಿಗಳು ಪ್ರಧಾನ ದೇವದೂತ ಸೇಂಟ್ ಮೈಖೇಲನ ಹಾಗೂ ಸಂತರಾದ ಸೇಂಟ್ ಕ್ಯಾದರೀನ್ ಮತ್ತು ಸೇಂಟ್ ಮಾರ್ಗರೆಟ್ಟರ ಸ್ವರಗಳೆಂದು ಗುರುತಿಸಲು ಶಕ್ಯಳಾದಳು. ಅವರ ವಾಣಿಗಳು ಅವಳಿಗೆ ಸೈನಿಕಳಾಗಿ, ಸೈನಿಕರ ನಾಯಕಿಯಾಗಿ ಡಾಫಿನ್ನನ ಸೇವೆ ಮಾಡಬೇಕೆಂತಲೂ ಅದು ದೇವರ ಕೆಲಸವೆಂದು ತಿಳಿಯಬೇಕೆಂತಲೂ ಹೇಳಿದುವು. ಮುಂದೆ ಅವು ಹೆಚ್ಚು ಸ್ಪಷ್ಟವಾಗಿ, ಅವಳಿಗೆ ಷೀನಾನಿಗೆ (Chinon) ಹೋಗಿ ಆರ್ಲಿಯನ್ಸನ್ನು ಆಂಗ್ಲರ ಮುತ್ತಿಗೆಯಿಂದ ಮುಕ್ತಗೊಳಿಸಿ ಆನಂತರ ಡಾಫಿನ್ನನಿಗೆ ಪಟ್ಟಾಭಿಷೇಕ ಮಾಡುವಂತೆ ಆಜ್ಞೆಯಿತ್ತುವು.

ಜೋನಳು ಗವರ್ನರ್ ರಾಬರ್ಟ್ ಡ ಬಾಡ್ರಿಕೋರ್ಟ್‌ನಲ್ಲಿಗೆ (Robert de Baudricourt) ತನ್ನನ್ನು ಡಾಫಿನ್ನನ ಸಹಾಯಕ್ಕಾಗಿ ಷೀನಾನಿಗೆ (Chinon) ಕಳಿಸುವಂತೆ ಬೇಡಿಕೊಂಡಳು. ಆದರೆ ಅವನು ಅವಳು ಪ್ರಸ್ತಾಪಿಸಿದ ಅಶರೀರವಾಣಿಗಳ ವಿಷಯವನ್ನು ನಂಬದೆ ಅವಳು ತನ್ನ ತಂದೆಯಲ್ಲಿಗೆ ಹಿಂತಿರುಗದಿದ್ದಲ್ಲಿ ಚೆನ್ನಾಗಿ ಥಳಿಸುವುದಾಗಿ ಬೆದರಿಕೆ ಹಾಕಿ ಅಟ್ಟಿದ. ಮುಂದೆ ಆರ್ಲಿಯನ್ಸಿನ ಎದುರಿಗೆ ಡಾಫಿನ್ನನ ಪಡೆಗಳು ಮತ್ತೆ ಸೋಲನ್ನನುಭವಿಸಿದವು. ಆಗ ಅವಳು ಮತ್ತೆ ಗವರ್ನರನ ಹತ್ತಿರ ಹೋಗಿ ತನ್ನ ಹಿಂದಿನ ಕೋರಿಕೆಯನ್ನೇ ತಿರುಗಿ ಹೇಳಿಕೊಂಡಾಗ ಅವನು ನಿರ್ವಾಹವಿಲ್ಲದೆ ಒಪ್ಪಿಕೊಂಡ. ವಾಕೋಲಿಯರ್ಸಿನ (Vaucouleurs) ಪುರಜನರು ಅವಳಿಗೆ ಕುದುರೆಯೊಂದನ್ನು ಕೊಡುಕೊಟ್ಟರು. ಇಬ್ಬರು ಸೈನಿಕರು ಅವಳಿಗೆ ಬೇಕಾಗಿದ್ದ ಆರ್ಥಿಕ ಸಹಾಯವನ್ನು ಕೊಡಲು ಮುಂದಾದರು. ಬಾಡ್ರಿಕೋರ್ಟ್ ಅವಳಿಗೆ ಒಂದು ಖಡ್ಗವನ್ನೂ ಸಂಗಾತಿಗಳನ್ನು ಒದಗಿಸಿದ. ಅವಳು ಷೀನಾನಿಗೆ ಒಬ್ಬ ಚಾಕರನ ವೇಷದಲ್ಲಿ ಹೋದಳು. ಅವಳನ್ನು ಪರೀಕ್ಷಿಸುವುದಕ್ಕಾಗಿ ತನ್ನ ಸರದಾರರೊಡನೆ ಬೆರತು ಕೊಂಡಿದ್ದ, ತಾನು ಹಿಂದೆ ಎಂದೂ ನೋಡಿರದ, ಡಾಫಿನ್ನನನ್ನು ಅವಳು ಸಹಜವಾಗಿ ಕಂಡುಹಿಡಿದು

ಅವನೆದುರಿನಲ್ಲಿ ಹೋಗಿ ಮಂಡಿಯನ್ನೂರಿ ನಿಂತಳು. ತನಗಾಗಿದ್ದ ದೇವ ಸಂದೇಶದ ಬಗೆಗೆ ತಿಳಿಸಿದಳು. ಅವನು ಅವಳಿಗೆ ಅರಮನೆಯಲ್ಲಿರಲು ಎಡೆಮಾಡಿಕೊಟ್ಟ. ಅವಳಿಂದ ಪ್ರಭಾವಿತ ನಾದ ಅಲೆನ್‌ಕಾನಿನ ಡ್ಯೂಕ್ (Duke of Alencon) ಅವಳಿಗೆ ಕುದುರೆ ಸವಾರಿ ಯನ್ನೂ ಖಡ್ಗ, ಭಲ್ಲೆಗಳನ್ನು ಉಪಯೋಗಿಸುವುದನ್ನೂ ಕಲಿಸಿದ. ಡಾಫಿನ್ನನ ಅಪ್ಪಣೆಯ ಮೇರೆಗೆ ಪಾದ್ರಿಗಳು, ವಕೀಲರು ಅವಳನ್ನು ಪ್ರಶ್ನಿಸಿ ಅವಳು ದೇವಪ್ರೇರಿತಳಾದದ್ದು ನಿಜ ವೆಂದು ತೀರ್ಮಾನವಿತ್ತರು. ಕೆಲವು ಸ್ತ್ರೀಯರು ಅವಳ ಗೋಪ್ಯ ಶರೀರಭಾಗಗಳನ್ನು ಪರೀಕ್ಷಿಸಿದ ಅನಂತರ ಡಾಫಿನ್ನನ ಅತ್ತೆ ರಾಣಿ ಯೋಲಂಡೆಯು (Queen Yolande) ಜೋನಳು ಪರಿಶುದ್ಧ ಹಾಗೂ ಪರಿಪೂರ್ಣ (pure and entire) ತರುಣಿಯೆಂದು ಡಾಫಿನ್ನನಿಗೆ ವರದಿಮಾಡಿದಳು. ಈ ಪರೀಕ್ಷೆಯ ಸಮಯದಲ್ಲಿ ಜೋನಳು ಅತ್ತಳೆಂದು ತಿಳಿಯುತ್ತದೆ.

1429ರ ಏಪ್ರಿಲ್ ತಿಂಗಳಲ್ಲಿ ಡಾಫಿನ್ನನ ಆರಿಸಿದ ಸರದಾರರಿದ್ದ, ಹೊಸತಾಗಿ ಕೂಡಿಸ ಲಾದ ಒಂದು ಸೇನೆ ಆರ್ಲಿಯನ್ಸನ್ನು ಮುಕ್ತಗೊಳಿಸಲು ಜೋನಳ ನೇತೃತ್ವದಲ್ಲಿ ಹೊರ ಟಿತು. ಜೋನಳ ಬಿಳಿ ರೇಷ್ಮೆಯ ಬಾವುಟದ ಮೇಲೆ ನೈದಿಲೆಗಳ ಮಧ್ಯದಲ್ಲಿದ್ದ ಇಬ್ಬರು ದೇವದೂತರ ನಡುವೆ ಪ್ರಪಂಚವನ್ನು ತನ್ನ ಕೈಗಳಲ್ಲಿ ಹಿಡಿದಿದ್ದ ಕ್ರಿಸ್ತನ ತೈಲಚಿತ್ರವಿದ್ದಿತು. ಜೋನಳು ತನ್ನ ಕಪ್ಪು ಕುದುರೆಯ ಮೇಲೆ ಕುಳಿತುಕೊಂಡು ಅನುಯಾಯಿಗಳನ್ನು ಹುರಿದುಂಬಿ ಸುತ್ತ ಆರ್ಲಿಯನ್ಸಿನ ಮೇಲೆ ಸಾಗಿಹೋಗಿ ಅದನ್ನು ಆಂಗ್ಲರ ಮುತ್ತಿಗೆಯಿಂದ ಮುಕ್ತಗೊಳಿಸಲು ಸಮರ್ಥಳಾದಳು. ಮುಂದೆ ಜೂನ್ ತಿಂಗಳ ಒಂದೇ ವಾರದೊಳಗೆ ಅವಳು ಜಾರ್ಗೀಯುಂ (Jargeau) ಹಾಗೂ ಬ್ಯೂಜೆನ್ಸಿ (Beugency) ಶಹರುಗಳನ್ನು ಗೆದ್ದು ಪಾತೇಯ (Patay) ಕದನದಲ್ಲಿ ಆಂಗ್ಲರ ದಳಪತಿ ಟಾಲ್ಬಟ್‌ನನ್ನು ಸೆರೆಹಿಡಿದಳು. ಇಷ್ಟರಲ್ಲಿ ಡಾಫಿನ್ ಸಹಿತ ಹನ್ನೆರಡು ಸಾವಿರ ಸೈನಿಕರೊಂದಿಗೆ ಹೊರಟು ಟ್ರಾಯ್ಸ್ (Troyes) ನಗರವನ್ನು ಗೆದ್ದು ಲೊಯರ್ ನದಿಯನ್ನು ದಾಟಿ ರೈಮ್ಸನ್ನು (Reims) ಮುಟ್ಟಿದ. ಜುಲೈ ಹದಿ ನೇಳರಂದು ಅವನು ರೈಮ್ಸ್‌ನಲ್ಲಿ ಪಟ್ಟಾಭಿಷಿಕ್ತನಾದ. ಆ ಸಮಯದಲ್ಲಿ ಜೋನಳು ತನ್ನ ಶ್ವೇತ ಬಾವುಟವನ್ನು ಹಿಡಿದುಕೊಂಡು ಅವನ ಬಲಗಡೆಯಲ್ಲಿ ನಿಂತಿದ್ದಳು.

ಜೋನಳು ಅಶರೀರವಾಣಿಗಳು ತನಗಿತ್ತ ಆಜ್ಞೆಯನ್ನು ಈಡೇರಿಸಿದ್ದಳು. ಅದ ರಿಂದಾಗಿ ಅವಳು ತನ್ನ ತಾಯಿತಂದೆಯರಲ್ಲಿಗೆ ತಿರುಗಿ ಹೋಗುವುದಕ್ಕೆ ತನ್ನನ್ನು ಬಿಡಲು ಈಗ ರಾಜನಾಗಿದ್ದ ಡಾಫಿನ್ನನನ್ನು ಕೇಳಿಕೊಂಡಳು. ಆದರೆ ಅದಕ್ಕೆ ಆತ ಒಪ್ಪದಾದ. ಜೋನಳು ಉಪಾಯವಿಲ್ಲದೆ ಅಲೆನ್‌ಕಾನಿನ ಡ್ಯೂಕ್ ಮತ್ತು ಇತರ ಅನುಯಾಯಿಗಳೊಂದಿಗೆ ಬರ್ಗಂಡಿ ಯನ್ನರ ಪ್ರಬಲ ಸ್ಥಾನವಾಗಿದ್ದ ಪ್ಯಾರಿಸ್ ಶಹರದತ್ತ ಸಾಗಿದಳು. ರಾಜನ ದರಬಾರಿನಲ್ಲಿ ಅವಳನ್ನು ಅಸೂಯೆಯಿಂದ ಕಾಣುತ್ತಿದ್ದ ಒಂದು ಬಣ ತಲೆಯೆತ್ತಿತ್ತು. ಸ್ವಭಾವತಃ ಸೋಮಾರಿಯಾಗಿದ್ದ ರಾಜ ಈ ಬಣದ ಮಾತಿಗೆ ಕಿವಿಗೊಟ್ಟು ಅವಳಿಗೆ ಅವಶ್ಯವಿದ್ದ ಸೈನಿಕ ಸಹಾಯವನ್ನು ನೀಡಲಿಲ್ಲ. ಮುಂದೆ ಒಂಬತ್ತು ತಿಂಗಳ ಕಾಲ ಜೋನಳು ಸಾಕಷ್ಟು ಸೈನಿಕ ಬೆಂಬಲವಿಲ್ಲದೆ, ರಾಜನಿಂದ ಯಾವ ಬಗೆಯ ಮಾರ್ಗದರ್ಶನವೂ ಇಲ್ಲದೆ ಪರಿತಪಿಸಿದಳು. ಆದರೂ ಈ ಸಮಯದಲ್ಲಿ ಅವಳು ಅನೇಕ ಊರುಗಳನ್ನು ವಶಪಡಿಸಿಕೊಂಡಳು. ಅವುಗಳಲ್ಲಿ ಒಂದಾದ ಪ್ಯಾರಿಸಿನ ಹತ್ತಿರವಿರುವ ಮೆಲೂನಿನ (Melun) ವಿಜಯಕ್ಕಾಗಿ 1430ರ ಏಪ್ರಿಲ್

ತಿಂಗಳ ಒಂದು ದಿನ ಸಾಯಂಕಾಲ ಚರ್ಚಿನಲ್ಲಿ ಗಂಟೆಗಳು ಬಾರಿಸತೊಡಗಿದ್ದಾಗ ಸೇಂಟ್ ಕ್ಯಾದರೀನ್ ಮತ್ತು ಸೇಂಟ್ ಮಾರ್ಗರೆಟರ ಅಶರೀರ ವಾಣಿಗಳು ಮೇ ತಿಂಗಳು ಅಂತ್ಯಗೊಳ್ಳುವುದರೊಳಗಾಗಿ ಅವಳನ್ನು ಸೆರೆಹಿಡಿಯಲಾಗುವುದೆಂದು ಅವಳಿಗೆ ತಿಳಿಸಿದವು. ಜೋನಳು ಮೇ ತಿಂಗಳ 23ರಂದು ಬರ್ಗಂಡಿಯನ್ನರು ಮುತ್ತಿಗೆ ಹಾಕಿದ್ದ ಕಾಂಪೇನ್ (Compiegne) ನಗರದ ಮೇಲೆ ದಾಳಿಮಾಡಿದಾಗ ಅವರು ಅವಳನ್ನು ಸೆರೆಹಿಡಿದು ಆಂಗ್ಲರಿಗೆ ಹತ್ತು ಸಾವಿರ ಬಂಗಾರದ ಫ್ರಾಂಕುಗಳಿಗೆ ಮಾರಿದರು. ರಾಜ ಮನಸ್ಸು ಮಾಡಿದ್ದರೆ ಬರ್ಗಂಡಿಯ ಡ್ಯೂಕನೊಡನೆ ಸಂಧಾನ ನಡೆಯಿಸಿ ಅವಳ ಬಿಡುಗಡೆಗೆ ಪ್ರಯತ್ನಿಸಬಹುದಾಗಿತ್ತು. ಆದರೆ ಕೃತಘ್ನನಾದ ಅವನು ಅದನ್ನು ಮಾಡಲಿಲ್ಲ. ಆಂಗ್ಲರು ಅವಳು ಸೈತಾನ ಪ್ರೇರಿತಳೆಂದು ಸಾರಿ ಮಾಯಮಾಟಗಳ ಅಪಾದನೆಯನ್ನು ಆವಳ ಮೇಲೆ ಹೊರೆಸಿದರು. ಫ್ರೆಂಚ್ ಚರ್ಚಿನ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳ ಎದುರಿನಲ್ಲಿ ಐದು ತಿಂಗಳ ಕಾಲ ಅವಳ ವಿಚಾರಣೆ ನಡೆದು ಅವಳು ದೇವರಲ್ಲಿ ನಂಬಿಕೆಯಿಲ್ಲದ ಪತಿತೆಯೆಂದು ನಿರ್ಣಯಿಸಲಾಯಿತು. ಅವಳಿಗೆ ಜೀವಾವಧಿ ಕಾರಾಗೃಹ ವಾಸದ ಶಿಕ್ಷೆಯನ್ನು ವಿಧಿಸಿದ್ದಲ್ಲದೆ ಅವಳು ಮುಂದೆ ಎಂದೂ ಪುರುಷ ಪೋಷಾಕನ್ನು ಧರಿಸಲಾಗದೆಂದು ಕಟ್ಟಪ್ಪಣೆ ಮಾಡಲಾಯಿತು. ಆದರೆ ಅವಳ ಸಾವನ್ನು ಬಯಸುತ್ತಿದ್ದ ಕಾರಾಗೃಹದ ಕ್ರೂರ ಅಧಿಕಾರಿಗಳು ಒಂದು ದಿನ ಅವಳು ಧರಿಸಿದ್ದ ಕೈದಿ ಹೆಂಗಸರ ಸಮವಸ್ತ್ರವನ್ನು ಕಸಿದುಕೊಂಡು ಅವಳು ತನ್ನ ಹಳೆಯ ಚಾರಕನ ಪೋಷಾಕನ್ನು ಧರಿಸುವಂತೆ ಒತ್ತಾಯಿಸಿದರು. ಅದರಿಂದಾಗಿ ಕೋಪಗೊಂಡ ಚರ್ಚಿನ ಅಧಿಕಾರಿಗಳು ಅವಳಿಗೆ ಮರಣದಂಡನೆ ವಿಧಿಸಿ, ಅವಳನ್ನು ಆಂಗ್ಲರಿಗೆ ಒಪ್ಪಿಸಿದರು. ಅವರು 'ಪತಿತೆ, ಮರುಕಳಿಸಿದ ಪಾಷಂಡಿ' (Heretic, relapsed apostate) ಎಂದು ಮೇಲೆ ಬರೆಯಲಾಗಿದ್ದ ಒಂದು ಮಂಕು ಟೋಪಿಯನ್ನು ಅವಳ ತಲೆಗೆ ಹಾಕಿ, ಇನ್ನೂ ಇಪ್ಪತ್ತೊಂದು ತುಂಬಿರದ ಜೋನಳನ್ನು, 1431ರ ಮೇ ತಿಂಗಳ 22ರಂದು, ರೂಯೆನ್ನಿನ ಪೇಟೆ ಸ್ಥಳದಲ್ಲಿ ಜೀವಂತ ಸುಟ್ಟರು. ಸಾಯುವ ಮುನ್ನ ಅವಳು ತನಗೆ ಅಶರೀರ ವಾಣಿಗಳು ಕೇಳಿಬರುತ್ತಿದ್ದುದು ಸತ್ಯವೆಂತಲೂ ಡಾಫಿನ್ನನೇ ಫ್ರಾನ್ಸಿನ ನ್ಯಾಯಸಮ್ಮತ ದೊರೆಯೆಂತಲೂ ಘೋಷಿಸಿದಳು. ಅರ್ಧಮರ್ಧ ಬೆಂದಿದ್ದ ಅವಳ ಪಾರ್ಥಿವ ಶರೀರವನ್ನು ಪ್ರದರ್ಶಿಸಲಾಯಿತು. ಅವಳ ಹೃದಯ ಮತ್ತು ಯಕೃತ್ತುಗಳನ್ನು ಸಿಯೆನ್ ನದಿಯಲ್ಲಿ ಚೆಲ್ಲಲಾಯಿತು. ಹೀಗೆ ಫ್ರಾನ್ಸಿನ ರಾಷ್ಟ್ರಪೇಮಿ ದೇವಪ್ರೇರಿತ ತರುಣಿಯ ಜೀವನ ಅಕಾಲದಲ್ಲಿ ದುರಂತದಲ್ಲಿ ಕೊನೆಗೊಂಡಿತು. ಮುಂದೆ ಪೋಪನಿಂದ ನೇಮಿಸಲ್ಪಟ್ಟ ಆಯೋಗವೊಂದು ಮರುವಿಚಾರಣೆ ನಡೆಯಿಸಿ 1456ರ ಜುಲೈ ತಿಂಗಳ 7ರಂದು ಅವಳು ನಿರಪರಾಧಿನಿಯೆಂದು ತೀರ್ಪನ್ನಿತ್ತಿತು.

ಜೋನಳ ವ್ಯಕ್ತಿತ್ವದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿಲ್ಲದೆ ಹೋಗಿಲ್ಲ. ಅವಳು ದೇವಪ್ರೇರಿತಳಾಗಿದ್ದಳೆಂಬದನ್ನು ಅಲ್ಲಗಳೆದು ಅವಳೊಬ್ಬ ಮುಗ್ಧ ರೈತಕನ್ಯೆಯಾಗಿದ್ದಳೆಂದು ಅನೇಕರು ವಾದಿಸಿದ್ದಾರೆ. ಆದರೆ ಅವಳು ಸಕಾಲದಲ್ಲಿ ಮುಂದೆ ಬಂದು, ಸೋಲುಗಳನ್ನನುಭವಿಸಿ ನಿರಾಶೆಗೊಂಡಿದ್ದ ಫ್ರಾನ್ಸಿನ ಪಡೆಗಳನ್ನು ಹುರಿದುಂಬಿಸಿ, ಉತ್ಸಾಹದಿಂದ ಹೋರಾಡುವಂತೆ ಮಾಡಿ, ಅವುಗಳ ಅನೇಕ ವಿಜಯಗಳಿಗೆ ಕಾರಣಳಾದಳೆಂಬದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಜಿ. ಎಸ್. ಚಕ್ರವರ್ತಿ

ಮಹಾಭಾರತದಲ್ಲಿ ವಿಕಲ್ಪಜಾಲಗಳು

೧

ರಜಸ್ಸತ್ವಗಳ ಮೂರ್ತರೂಪಗಳಾದ ಕೌರವ-ಪಾಂಡವರ ಹೋರಾಟವನ್ನು ನಿಮಿತ್ತವಾಗಿಟ್ಟುಕೊಂಡು ತ್ರೈಗುಣ್ಯೋದ್ಭವವಾದ ಲೋಕಚರಿತವನ್ನೆ ಚಿತ್ರಿಸಿರುವ ವ್ಯಾಸಮಹಾಕವಿಯ ಮಹಾಭಾರತ 'ಇತಿಹಾಸಪ್ರದೀಪ' ಎಂದು ಪ್ರಶಂಸಿತವಾಗಿದೆ. ಇಲ್ಲಿ ವರ್ಣಿತವಾಗಿರುವುದು ರಾಜ್ಯಲಾಭಕ್ಕಾಗಿ ಯಾವುದೊ ಒಂದು ಕಾಲದಲ್ಲಿ ನಡೆದ ಎರಡು ಗುಂಪುಗಳ ಹೋರಾಟ ಮಾತ್ರವಲ್ಲ. ಮಾನವನ ಇತಿಹಾಸದಲ್ಲಿ ಅನಾದಿಯಾಗಿ ಅನುಸ್ಯೂತವಾಗಿ ನಡೆದು, ನಡೆಯುತ್ತಿರುವ ಎರಡು ವಿಭಿನ್ನಪ್ರವೃತ್ತಿಗಳ ಘರ್ಷಣೆಗಳ ಸತ್ಯಸ್ವರೂಪವರ್ಣನ.

'ಇತಿಹಾಸಪ್ರದೀಪ' ಪ್ರಾಚೀನ ಲೇಖನಗಳ ಆಧಾರದ ಮೇಲೆ ತರ್ಕ ಮಾಡಿ ಊಹಿಸಿದ ಸಿದ್ಧಾಂತವಲ್ಲ, ಶುಷ್ಕಕಲ್ಪನೆಯಲ್ಲ. ಮಾನವನ ಇತಿಹಾಸದ ಒಂದು ಕಠೋರಸನ್ನಿವೇಶದಲ್ಲಿದ್ದು ಧರ್ಮಾಧರ್ಮಗಳ ಘರ್ಷಣೆಯನ್ನು ಕವಿ ಪ್ರತ್ಯಕ್ಷವಾಗಿ ಕಂಡು ವಿವರಿಸಿದ್ದಾನೆ. ಈ ಹೋರಾಟಕ್ಕೆ ಅವನು ಹೊರಗಿನವನಲ್ಲ. ತನ್ನ ಮಕ್ಕಳ ಮತ್ತು ಮೊಮ್ಮಕ್ಕಳ ಪರಸ್ಪರ ಹೋರಾಟವನ್ನು ತಪ್ಪಿಸಿ ಶಾಂತಿಸ್ಥಾಪನೆ ಮಾಡಲು ಕೆಲವು ಸಲ ತಾನೂ ಪ್ರವೇಶಿಸಿ ವಿಫಲನಾದ. ಸನ್ನಿವೇಶಗಳ ಪರಿಶೀಲನದಿಂದ ತನ್ನ ವಂಶಕ್ಷಯದ ಭವಿಷ್ಯವನ್ನೂ ತಾನೆ ನುಡಿದು[1] ಅದರ ಸ್ವರೂಪವನ್ನೂ ಮೂಲಕಾರಣವನ್ನೂ ಕವಿ ನಿರುದ್ವಿಗ್ನನಾಗಿ ನಿರ್ಲಿಪ್ತನಾಗಿ ಕಾವ್ಯಾತ್ಮಕವಾಗಿ ವರ್ಣಿಸಿದ್ದಾನೆ.

ಸ್ಥಿತಪ್ರಜ್ಞನಾದ ಕವಿಯ ಸಮಷ್ಟಿದರ್ಶನಕ್ಕೆ ಇತಿಹಾಸ ಜೀವನವೆ ಎರಡು ವಿಧವಾದ ಹೋರಾಟಗಳಿಂದ ಕೂಡಿದ ಸಂಗ್ರಾಮಕ್ಷೇತ್ರವಾಗಿ ಕಂಡಿತು. ಒಂದು ವಿಭಿನ್ನಪ್ರವೃತ್ತಿಯುಳ್ಳ ಮಾನವರ ಪರಸ್ಪರ ಘರ್ಷಣೆ. ಇನ್ನೊಂದು ಅದೃಷ್ಟವಾದ ವಿಧಿಯ ಪ್ರಭಾವಕ್ಕೆ ವಶನಾದ ವ್ಯಕ್ತಿ ತನ್ನ ಉಳಿವಿಗಾಗಿ ಮತ್ತು ಆತ್ಮಶಕ್ತಿಪ್ರಕಾಶನಕ್ಕಾಗಿ ಮಾಡುವ ಸಾಹಸಪ್ರಯಾಸ. ರಾಜಸನು ತನ್ನ ರಜೋಗುಣದ ಪ್ರಕಾಶನದಿಂದ ಜೀವನವನ್ನು ಕುರುಕ್ಷೇತ್ರವನ್ನಾಗಿ ಮಾಡಿದರೆ, ಸಾತ್ವಿಕನು ಇದನ್ನು ಧರ್ಮಕ್ಷೇತ್ರವನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಾನೆ. ಆದರೆ, ಸಾಮರಸ್ಯ ಸಂಪಾದನೆಯ ಇವನ ಪ್ರಯತ್ನಕ್ಕೆ ವಿಧಿ ಪ್ರತಿಬಂಧಕವಾಗುತ್ತದೆ. ಧಾರ್ಮಿಕನ ವಿವೇಕ

---

1 ತ್ರಯೋದಶ ಸಮಾ ರಾಜನ್ನುತ್ಪಾತಾನಾಂ ಫಲಂ ಮಹತ್ ।
ಸರ್ವಕ್ಷತ್ರವಿನಾಶಾಯ ಭವಿಷ್ಯತಿ ವಿಶಾಂ ಪತೇ । ಸ. ಪರ್ವ 46.11
(ಗೋರಖ್‌ಪುರ)

ವನ್ನು ಮುಚ್ಚುತ್ತದೆ. ಪ್ರಾಜ್ಞನ ಮೋಹಾಂಧತ್ವವೂ, ಧಾರ್ಮಿಕನ ಅಧಾರ್ಮಿಕ ವ್ಯವಹಾರವೂ ವಿಧಿಪ್ರಭಾವದಿಂದ ಕುರುಕ್ಷೇತ್ರರಚನೆಗೇ ಸಾಧಕವಾಗುತ್ತದೆಂಬ ಅಂಶ ಕವಿಗೆ ಗಭೀರವಾದ ಸಮಸ್ಯೆಯಾಗಿ ಕಂಡಿತು. ಇತಿಹಾಸದಲ್ಲಿ ಗ್ರಂಥಿಲವಾದ ಸಮಸ್ಯೆಗಳು ದುರವಗಾಹಾತ್ಮಕವಾದುದರಿಂದ ಇತಿಹಾಸದ ಅಂತರಾಳದಲ್ಲಿ ಗುಪ್ತವಾದ ಪ್ರವಾಹವುಳ್ಳ ಮತ್ತು ಮಹಾಮಹಿಮರ ವ್ಯವಹಾರಗಳನ್ನೂ ತನ್ನ ಪ್ರಭಾವದಿಂದ ವ್ಯತ್ಯಸ್ತ ಮಾಡುವ ವಿಧಿಲೀಲೆಯೂ ಅತರ್ಕ್ಯ ಎಂಬುದು ಕವಿಯ ಕಹಿಯಾದ ಅನುಭವ. ಕೌರವಪಾಂಡವರ ಘರ್ಷಣೆಯ ಮತ್ತು ಅದರ ಕಾರಣದ ವರ್ಣನೆಯ ಮೂಲಕ ಇತಿಹಾಸದಲ್ಲಿ ವಿಧಿಯ ಪ್ರಭಾವವನ್ನೂ ಮಾನವನ ದ್ವಿವಿಧವಾದ ಸಾಹಸವನ್ನೂ ಕವಿ ಚಿತ್ರಿಸಿದ್ದಾನೆ.

೨

ಧರ್ಮಾಧರ್ಮಗಳ ಘರ್ಷಣೆಯಲ್ಲಿ ಧರ್ಮಕ್ಕೇ ಜಯ ಲಭಿಸಿದುದರಿಂದ ಈ ಮಹಾಕೃತಿಯನ್ನು 'ಜಯೋ ನಾಮೇತಿಹಾಸೋऽಯಂ' ಎಂದು ಸಾರಿ ಪ್ರಶಂಸಿಸಿದ. ಧರ್ಮಕ್ಕೇನೋ ಜಯ ಲಭಿಸಿತು. ಆದರೆ, ವಿಧಿವಿಹಿತವಾದ ಹದಿನೆಂಟು ಅಕ್ಷೌಹಿಣಿಗಳ ಸೈನ್ಯದ ನಾಶ ಮತ್ತು ವಂಶಕ್ಷಯದ[2] ಮೂಲಕ ಜಯ. ಇವಕ್ಕೆಲ್ಲ ಪ್ರಮುಖ ಕಾರಣರಾದ ಧೃತರಾಷ್ಟ್ರ ಮತ್ತು ಧರ್ಮರಾಜ ಇವರ ತೀವ್ರ ಮನೋವೇದನೆ ಮತ್ತು ಪಶ್ಚಾತ್ತಾಪಗಳೇ ಜಯದ ಫಲ. ಧರ್ಮರಾಜ ಸಾರ್ವಭೌಮನಾದ. ಇವನ ಸಾರ್ವಭೌಮತ್ವ ಶೂನ್ಯವಾದ ಜಗತ್ತಿನಲ್ಲಿ.[3] "ಲೋಭಕ್ಕಾಗಿ ಜ್ಞಾತಿಕುಲಕ್ಷಯಕಾರಕನಾದ ನನ್ನ ದುಃಖ ವರ್ಣನಾತೀತ. ಈ ಜಯವೆ ನನಗೆ ಅಪಜಯವೆಂತಿದೆ", ಇತ್ಯಾದಿಯಾಗಿ ಧರ್ಮರಾಜ ಕೊರಗಿದ.[4] ತನ್ನ ಅವಿವೇಕವನ್ನೂ ವಂಶಕ್ಷಯಕ್ಕೆ ತಾನೇ ಮೂಲಕಾರಣನಾದುದನ್ನೂ ನೆನೆಸಿಕೊಂಡು ಧೃತರಾಷ್ಟ್ರನೂ ದುಃಖಿಸಿದ." ದುರ್ಯೋಧನನ ಅವಿವೇಕವನ್ನು ನಿಗ್ರಹಿಸು ಎಂದು ಭೀಷ್ಮ, ದ್ರೋಣ, ಕೃಷ್ಣ, ವ್ಯಾಸ ಇತ್ಯಾದಿಗಳೆಲ್ಲ ಹೇಳಿದ ಹಿತವಚನವನ್ನು ಲಕ್ಷಿಸಲಿಲ್ಲ. "ಕುಲಕ್ಷಯಕ್ಕೆ ನನ್ನ ಮೋಹಾಂಧತ್ವವೇ ಕಾರಣವಾಯಿತು," ಎಂದು ಧೃತರಾಷ್ಟ್ರನೂ ಪಶ್ಚಾತ್ತಾಪಪಟ್ಟ. ಪ್ರಾಜ್ಞನ ಮತ್ತು ಧರ್ಮಜ್ಞನ ಅವಿವೇಕ ಸರ್ವನಾಶಕ್ಕೂ ದುಃಖಕ್ಕೂ ಮೂಲಕಾರಣವಾಗಿ ಧರ್ಮ ಜಯವನ್ನು ಕಂಡಿತು.

ದುರಂತ ಯುದ್ಧಕ್ಕೆ ದ್ಯೂತವೆ ನಾಂದಿ. ಈ ನಾಂದಿಯನ್ನು ಹಾಡಿದವರು ಧೃತರಾಷ್ಟ್ರ ಮತ್ತು ಧರ್ಮರಾಜ. ಇದನ್ನು ತಪ್ಪಿಸಲು ಇಬ್ಬರಿಗೂ ಸಾಧ್ಯವಿತ್ತು. ಆದರೆ ಇಬ್ಬರಿಗೂ ಮನಃಸ್ಥೈರ್ಯವಿಲ್ಲ. ಧರ್ಮರಾಜ ಯುಧಿಷ್ಠಿರನೇ ವಿನಾ ಮನಃಸ್ಥಿರನಲ್ಲ. ಪ್ರಾಜ್ಞನ ಮೋಹಾಂಧತ್ವ ಮತ್ತು ಧರ್ಮಜ್ಞನ ಅಧಾರ್ಮಿಕ ವ್ಯವಹಾರ ದುರಂತಕ್ಕೆ ಕಾರಣವಾದುದು ಆಶ್ಚರ್ಯಕರ. ಯುಕ್ತಾಯುಕ್ತ ವಿವೇಚನೆಯಲ್ಲಿ ಆಸಕ್ತಿಯುಳ್ಳವನೂ ಮಹಾಪ್ರಾಜ್ಞನೂ ಆದ ಧೃತರಾಷ್ಟ್ರನೂ

---

2 ಅಕ್ಷೌಹಿಣ್ಯೋ ಹತಶ್ಚಾಷ್ಟೌ ದಶ ಜೈವ ವಿಶಾಂಪತೇ ॥ ಸ್ತ್ರೀ ಪರ್ವ 1. 7

3 ನಿರ್ಜಿತೇಯಂ ವಸುಮತೀ ಶೂನ್ಯಾ ಸಂಪ್ರತಿ ಕೇವಲಾ ॥ ಸ್ತ್ರೀ ಪರ್ವ 1.7

4 ಜಯೋऽಯಮಜಯಾಕಾರೋ ಭಗವನ್ ಪ್ರತಿಭಾತಿ ಮೇ ॥ ಶಾ. ಪ. I. 15

ಅನುಕಂಪದ ಮೂರ್ತರೂಪನಾದ ಧರ್ಮರಾಜನೂ ಸೇರಿ ವಂಶಕ್ಷಯಕಾರಕವಾದ ದುರಂತ ಯುದ್ಧಕ್ಕೆ ಕ್ಷೇತ್ರವನ್ನು ಸಿದ್ಧಪಡಿಸಿ ಬೀಜ ಬಿತ್ತಿದರು ಎಂಬುದು ವಿಧಿವಿಲಾಸವಲ್ಲದೆ ಬೇರೆಯಲ್ಲ ಎಂಬುದು ಕವಿಯ ಅವಧಾರಣ.

೩

ವ್ಯಾಸಾದಿಗಳಿಂದಲೂ ಪ್ರಶಂಸಿತನಾದ ಧೃತರಾಷ್ಟ್ರ ಸ್ವತಃ 'ಮಹಾಪ್ರಾಜ್ಞ'ನಾದರೂ ಧರ್ಮಜ್ಞನಾದ ವಿದುರನೊಡನೆ ಆಲೋಚನೆ ಮಾಡದೆ ಯಾವ ನಿಶ್ಚಯಕ್ಕೂ ಬರುತ್ತಿರಲಿಲ್ಲ.[5] ಆದರೆ, ಪುತ್ರವ್ಯಾಮೋಹದ ಅಂಧತ್ವ ವಿದುರನೀತಿಯನ್ನೂ ದೂರಮಾಡಿತು. ಪಾಂಡವರ ದುಃಖಾನುಭವಗಳಿಗೆ ಕಾರಣವಾದ ದುರ್ಯೋಧನನ ರಾಜನ ವರ್ತನೆಗೆ ಧೃತರಾಷ್ಟ್ರನೆ ಪೋಷಕನಾದ ಎಂದು ಗಾಂಧಾರಿಯೆ ಅವನನ್ನು ನಿಂದಿಸಿದಳು.[6]

"ಧರ್ಮರಾಜ ಧರ್ಮಪರಾಯಣ, ಗುಣಶಾಲಿ, ಪಾಂಡುವಿನಂತೆಯೆ ನನ್ನಲ್ಲಿ ಪ್ರೀತಿಯುಳ್ಳವನು, ವಿಧೇಯ. ಅವನಿಗೆ ತೊಂದರೆ ಕೊಡುವುದು ಪಾಪಕಾರ್ಯ,"[7] ಎಂದು ಒಂದು ಕಡೆ ಧರ್ಮರಾಜನ ಗುಣಗಾನ ಮಾಡುತ್ತ ಇನ್ನೊಂದು ಕಡೆ ಪುತ್ರವ್ಯಾಮೋಹಕ್ಕೆ ವಶನಾಗಿ ಧರ್ಮರಾಜನನ್ನು ವಾರಣಾವತಕ್ಕೆ ಕಳುಹಿಸಿದ. ವಿದುರನ ಅನುಗ್ರಹದಿಂದ ಪಾಂಡವರು ಜತುಗೃಹಕ್ಕೆ ಬಲಿಯಾಗಲಿಲ್ಲ.

ದುರ್ಯೋಧನ ದ್ಯೂತಪ್ರಸ್ತಾಪ ಮಾಡಿದಾಗಲೂ ಧೃತರಾಷ್ಟ್ರ ಮಗನ ಇಷ್ಟವನ್ನೂ ಮೀರಿ ಧರ್ಮಜ್ಞನಾದ ವಿದುರನೊಡನೆ ಆಲೋಚಿಸಿದ. ಧರ್ಮಾಧರ್ಮಗಳ ವ್ಯತ್ಯಾಸವನ್ನು ಅವನಿಂದಲೆ ತಿಳಿಯುತ್ತಿದ್ದುದರಿಂದ ದ್ಯೂತದ ಗುಣಾವಗುಣಗಳನ್ನೂ ಅವನಲ್ಲೆ ಚರ್ಚಿಸಿದ. ಮೋಹಾಂಧನಾಗಿ ಪುನಃ ಅವನ ನೀತ್ಯುಪದೇಶವನ್ನು ನಿರಾಕರಿಸಿದ. ದ್ಯೂತ ಅನರ್ಥಕಾರಿ, ವಂಶಕ್ಷಯಕಾರಿ ಎಂಬುದು ಅವನಿಗೆ ಗೊತ್ತು. ಆದರೂ ಪುತ್ರವ್ಯಾಮೋಹ ನಿರ್ದುಷ್ಟರಾದ ಪಾಂಡವರ ಮೇಲಿದ್ದ ಅವನ ಪ್ರೇಮವನ್ನು ಮರೆಮಾಡಿತು. ದ್ಯೂತಕ್ಕೆ ಸಮ್ಮತಿಸಿ ವಂಶಕ್ಷಯಕ್ಕೆ ಕ್ಷೇತ್ರವನ್ನು ಸಿದ್ಧಪಡಿಸಿದ. ಇದಕ್ಕೆ ತಾನೇ ಕಾರಣನೆಂದು ತಿಳಿದಿದ್ದರೂ "ವಿಧಿ ನನ್ನನ್ನು ಎಳೆಯಿತು," ಎಂದು ವ್ಯಾಸನಿಗೆ ವಿಧಿಪ್ರಾಬಲ್ಯವನ್ನು ವಿವರಿಸಿದ. ಕುಲಕ್ಷಯವಾಗುತ್ತದೆಂದು ವಿದುರ ಎಚ್ಚರಿಸಿದ. ಪುನಃ ಅದೇ ವಿಧಿಪ್ರಭಾವದ ವಿವರಣೆ. ತನಗೆ ಸ್ವತಃ ವಿವೇಕವಿದ್ದರೂ ವಿಧಿಯ ಮುಂದೆ ತಾನು ಅಸ್ವತಂತ್ರ ಎಂದು ಆತ್ಮವಂಚನೆ ಮಾಡಿಕೊಂಡ.[8] ಒಂದು ಕಡೆ

---

5 ಕ್ಷತ್ತಾ ಮನ್ತ್ರೀ ಮಹಾಪ್ರಾಜ್ಞಃ ಸ್ಥಿತೋ ಯಸ್ಯಾಸ್ಮಿ ಶಾಸನೇ ।
ತೇನ ಸಂಗಮ್ಯ ವೇತ್ಸ್ಯಾಮಿ ಕಾರ್ಯಸ್ಯಾಸ್ಯ ವಿನಿಶ್ಚಯಂ ॥ ಸ. ಪ. 49.43

6 ತ್ವಂ ಹ್ಯೇವಾತ್ರ ಭೃಶಂ ಗರ್ಹ್ಯೋ ಧೃತರಾಷ್ಟ್ರ ಸುತಪ್ರಿಯಃ ।
ಯೋ ಜಾನನ್ ಪಾಪತಾಮಸ್ಯ ತತ್ಪ್ರಜ್ಞಾಮನುವರ್ತಸೆ ॥ ಉ.ಪ. 129.11-12

7 ನಾಹಂ ಕಿಂಚಿತ್ ಸಂಜಯ ಪಾಂಡವಾನಾಂ
ಮಿಥ್ಯಾವೃತ್ತಿಂ ಕಾಂಚನ ಜಾತ್ವಪಶ್ಯಂ ॥ ಇತ್ಯಾದಿ. ಉ. ಪ. 22. 1-15.

8 ಧಾತ್ರಾ ತು ದಿಷ್ಟಸ್ಯ ವಶೇ ಕಿಲೇದಂ
ಸರ್ವಂ ಜಗಚ್ಚೇಷ್ಟತಿ ನ ಸ್ವತಂತ್ರಂ॥ ಸ. ಪ. 57. 4

ವಿದುರನ ಧರ್ಮಬೋಧನೆಯಿಂದ ಆತ್ಮವಿಕಾಸ; ಇನ್ನೊಂದು ಕಡೆ ಪುತ್ರಮೋಹರೂಪವಾದ ಅಂಧತ್ವ. ಒಂದು ಕಡೆ ಪಾಂಡವರ ಮೇಲಿನ ಪ್ರೇಮ; ಇನ್ನೊಂದು ಕಡೆ ಪುತ್ರನ ಅನ್ಯಾಯಕ್ಕೆ ಉತ್ತೇಜನ. ಹೀಗೆ ಡೋಲಾಯಮಾನವಾಗಿ ಅಂಧತ್ವದ ಸೀಮೆಯಲ್ಲಿ ನಿಂತು ಪಾಂಡವರಿಗೆ ಅನ್ಯಾಯ ಮಾಡಿ ಕುಲಕ್ಷಯಕ್ಕೆ ಪ್ರಮುಖ ಕಾರಣನಾದ.

೪

ಮೋಹಾಂಧನಾದ ಧೃತರಾಷ್ಟ್ರನ ನಿರ್ಬಂಧಕ್ಕೆ ತಲೆ ಬಾಗಿ ವಿದುರ ಧರ್ಮರಾಜನನ್ನು ದ್ಯೂತಕ್ಕೆ ಕರೆಯಲು ಬಂದ. ಧರ್ಮರಾಜ ಆಗಲೆ ಚಿಂತಾಕ್ರಾಂತನಾಗಿದ್ದ. ವಿದುರ ಬರುವುದಕ್ಕೆ ಮೊದಲೆ ವ್ಯಾಸ ಬಂದು, "ಕ್ಷತ್ರಿಯ ಕುಲದ ನಾಶವಾಗುತ್ತದೆ. ಅದಕ್ಕೆಲ್ಲ ನೀನೊಬ್ಬನೆ ಕಾರಣ ಎಂದು ಜನರು ನಿನ್ನ ಮೇಲೇ ಆರೋಪ ಹೊರಿಸುತ್ತಾರೆ. ಅಪ್ರಮತ್ತನಾಗಿರು"[9] ಎಂದು ಎಚ್ಚರಿಸಿದ್ದ. ಧರ್ಮರಾಜನಿಗೆ ಸಿಡಿಲು ಬಡಿದಂತಾಯಿತು. ಧರ್ಮಾತ್ಮನಿಗೆ ಆಶ್ಚರ್ಯದೊಡನೆ ಮನೋವ್ಯಥೆಯೂ ಪೀಡಿಸುತ್ತಿತ್ತು. ಮಹಾಭಾರತ ಯುದ್ಧಕ್ಕೆ ಇಲ್ಲಿ ವಿಧಿ ಮುನ್ನುಡಿ ಬರೆಯಿತು.[10]

ತಮ್ಮಂದಿರನ್ನು ಕರೆದು ವಿಧಿವಿಲಾಸವನ್ನು ವಿವರಿಸಿ, ''ಇನ್ನು ಹದಿಮೂರು ವರ್ಷಗಳ ಕಾಲ ನಾನು ಒಬ್ಬರ ಮನಸ್ಸನ್ನೂ ನೋಯಿಸದೆ ಎಚ್ಚರದಿಂದಿರಬೇಕು,'' ಎಂದು ತಿಳಿಸಿ ಉದ್ವಿಗ್ನನಾಗಿಯೆ ಇದ್ದ. ವಿದುರನ ಆಹ್ವಾನ ಬೊಕ್ಕೆಯ ಮೇಲೆ ಗುಳ್ಳೆ ಎದ್ದಂತಾಯಿತು. ದೊಡ್ಡಪ್ಪನ ಆಜ್ಞೆ ಮೀರುವಂತಿಲ್ಲ. ಮೀರಿದರೆ ಅದೆ ಅನಾಹುತಕ್ಕೆ ಕಾರಣವಾಗಿ ತನ್ನ ಮೇಲೆ ಆರೋಪ ಬರಬಹುದು ಇತ್ಯಾದಿ ಮಾನಸಿಕಯಾತನೆಯೊಡನೆ[11] ಒಪ್ಪಿದ. ದ್ಯೂತ ನಡೆದು ಸರ್ವನಾಶವಾಗಿ ಧೃತರಾಷ್ಟ್ರನ ಔದಾರ್ಯದಿಂದಲೂ ದ್ರೌಪದಿಯ ಪಾತಿವ್ರತ್ಯಪ್ರಭಾವದಿಂದಲೂ ನಷ್ಟವಾದದ್ದೆಲ್ಲ ಪುನಃ ಲಭಿಸಿತು. ಇವನ ಮೊದಲನೆ ತಪ್ಪನ್ನು ವಿಧಿಯೂ ಮನ್ನಿಸಿತು.

ದ್ಯೂತಕ್ಕೆ ಎರಡನೆ ಆಹ್ವಾನ. ಇದನ್ನು ಒಪ್ಪಿಕೊಂಡಿದ್ದು ಧರ್ಮರಾಜನ ಅಕ್ಷಮ್ಯ ಅಪರಾಧ. ಬೇರಾರೂ ಅಲ್ಲದೆ ಕೃಷ್ಣನೇ ಈ ತಪ್ಪನ್ನು ತಿಳಿಸಿದ. "ನಾನು ಆ ಸಮಯದಲ್ಲಿದ್ದಿದ್ದರೆ ಬಲಪ್ರಯೋಗ ಮಾಡಿಯಾದರೂ ದ್ಯೂತವನ್ನು ತಪ್ಪಿಸುತ್ತಿದ್ದೆ,"[12] ಎಂದು ಹೇಳಿ ದ್ಯೂತದ ಅನರ್ಥಗಳನ್ನು ವಿವರಿಸಿದ.[13] ಯುಧಿಷ್ಠಿರನ ಅವಿವೇಕಕ್ಕಾಗಿ ಮರುಗಿದ. ಇದೆ

---

9 ತ್ವಾಮೇಕಂ ಕಾರಣಂ ಕೃತ್ವಾ ಕಾಲೇನ ಭರತರ್ಷಭ |
ಅಪ್ರಮತ್ತಃ ಸ್ಥಿತೋ ದಾನ್ತಃ ಪೃಥಿವೀಂ ಪರಿಪಾಲಯ || ಸ. ಪ. 46.10-17

10 ವಿಧಿಶ್ಚ ಬಲವಾನ್ ರಾಜನ್ ದಿಷ್ಟಸ್ಯಾಸ್ಮಿ ವಶೇ ಸ್ಥಿತಃ || ಸ. ಪ. 59.18

11 ವಾಚ್ಯತಾಂ ನ ಗಮಿಷ್ಯಾಮಿ ಲೋಕೇಷು ಮನುಜರ್ಷಭ || ಸ. ಪ. 46, 29

12 ಆಗಚ್ಛೇಯಮಹಂ ದ್ಯೂತಂ ಅನಾಹೂತೋಽಪಿ ಕೌರವೈಃ |
ವಾರಯೇಯಮಹಂ ದ್ಯೂತಂ ಬಹೂನ್ ದೋಷಾನ್ ಪ್ರದರ್ಶಯನ್|| III. 13.2

13 ಏಕಾಹಾದ್ದ್ರವ್ಯನಾಶೋಽತ್ರ ಧ್ರುವಂ ವ್ಯಸನಮೇವ ಚ |
ಅಭುಕ್ತನಾಶಶ್ಚಾರ್ಥಾನಾಂ ವಾಕ್ಷಾರುಷ್ಯಂ ಚ ಕೇವಲಂ|| III. 13.9,

ಅನುಭವ ಧರ್ಮರಾಜನ ಮನಸ್ಸನ್ನು ತೀವ್ರವಾಗಿ ಘಾಯಗೊಳಿಸಿತ್ತು. ದ್ಯೂತ ಆಡುವಾಗ ಸಭ್ಯರಲ್ಲಿ ಹಿರಿಯರೆಲ್ಲರೂ ಧಿಕ್ಕಾರ ಮಾಡಿದ್ದೂ[14] ಮನಸ್ಸನ್ನು ಕೊರೆಯುತ್ತಿತ್ತು.

ಎರಡನೆ ಸಲದ ಆಹ್ವಾನ ಬಂದಾಗ ದ್ಯೂತ ಲೋಕಕ್ಕೆ ಕ್ಷಯಕಾರಕವಾಗುತ್ತದೆ ಎಂದು ತಾನೆ ಸ್ಪಷ್ಟವಾಗಿ ಹೇಳಿದ.[15] ಆದರೆ ಚಿತ್ತಸ್ಥೈರ್ಯವಿಲ್ಲದೆ ಒಪ್ಪಿದ. ಯಥಾಪ್ರಕಾರ ವಿಧಿಯ ಮೇಲೆ ತಪ್ಪುಹೊರಿಸಿದ. "ಗುಪ್ತಗಾಮಿಯಾದ ವಿಧಿಯೂ ಸಹ ಆಪತ್ಕಾಲ ಒದಗಿದಾಗ ವಿವೇಕಿಗಳ ಮನಸ್ಸನ್ನೂ ಕಲುಷಿತ ಮಾಡುತ್ತದೆ," ಎಂಬುದೂ ಕವಿಯ ಇತಿಹಾಸ ದರ್ಶನ.[16] ಮಹಾಪ್ರಾಜ್ಞನಾದ ಧೃತರಾಷ್ಟ್ರನ ಆದೇಶ, ಕರುಣಾಮೂರ್ತಿಯಾದ ಧರ್ಮರಾಜನ ಆದೇಶಪರಿಪಾಲನೆ ಎರಡೂ ಸೇರಿ ವಂಶಕ್ಷಯಕ್ಕೆ ಕಾರಣವಾದುದು ವಿಧಿವಿಲಾಸ.

ಧುರ್ಯೋಧನನ ದ್ವೇಷಾಗ್ನಿಯಲ್ಲಿ ಬೆಂದ ಧರ್ಮರಾಜ ಪ್ರತಿಕ್ರಿಯಾ ಬುದ್ಧಿಯನ್ನು ಬೆಳೆಸಲಿಲ್ಲ. ಅಲೌಕಿಕವಾದ ಅವನ ಕ್ಷಮೆ ಅವನ ಸಹಜ ಗುಣ. "ಈ ಕ್ಷಮೆ ಕ್ಷತ್ರಿಯನ ಲಕ್ಷಣವಲ್ಲ," ಎಂದು ದ್ರೌಪದಿ ಮತ್ತು ಭೀಮ ಮಾಡಿದ ಆಕ್ಷೇಪಕ್ಕೂ ಕ್ಷಮಾಯುಕ್ತನಾಗಿಯೆ ಸಮಾಧಾನ ಹೇಳಿದ.[17]

ಧರ್ಮರಾಜನಿಗೆ ಅರಣ್ಯವಾಸದ ದುಃಖ ಸಾಲದೆಂದೂ ಅವನ ಸಮೂಹವನ್ನು ಸಂಪೂರ್ಣವಾಗಿ ನಾಶಮಾಡಬೇಕೆಂದೂ ದುರ್ಯೋಧನ ಘೋಷಯಾತ್ರಾ ನೆಪದಲ್ಲಿ ಬಂದು ತಾನೆ ಕಷ್ಟಕ್ಕೆ ಸಿಕ್ಕಿಕೊಂಡ. ದಿವ್ಯಪ್ರೇಮವನ್ನು ತೋರಿ ಅವನನ್ನು ಬಿಡಿಸಿದ ಧರ್ಮರಾಜ ಪ್ರೀತಿಯಿಂದ, "ತಾತ, ಇನ್ನು ಇಂಥ ಅಕೃತ್ಯಕ್ಕೆ ಕೈ ಹಾಕಬೇಡ. ಹಿಂತಿರುಗಿ ಸುಖವಾಗಿ ಬಾಳು. ದ್ವೇಷ ಬೆಳೆಸಬೇಡ,"[18] ಎಂದು ಹೇಳಿ ಕಳುಹಿಸಿದ. ದ್ವೇಷಕ್ಕೆ ಪ್ರತಿಯಾಗಿ ಪ್ರಕಾಶಿತವಾದ ದಿವ್ಯಪ್ರೇಮವೂ ರಜೋಗುಣಗಳ ಮೂರ್ತರೂಪನಾದ ಧುರ್ಯೋಧನನ ಪರಿವರ್ತನೆಗೆ ಸಾಹಾಯ್ಯಕವಾಗಲಿಲ್ಲ. ಅಷ್ಟೆ ಅಲ್ಲದೆ ಕರ್ಣಾದಿಗಳ ಪ್ರಚೋದನೆಯಿಂದ ಅವನ ದ್ವೇಷದ ಉಲ್ಬಣಕ್ಕೂ ಕಾರಣವಾಯಿತು.

೫

ಸ್ವಾರ್ಥತ್ಯಾಗಪೂರ್ವಕವಾದ ಕ್ಷಮೆ, ಅಲೌಕಿಕವಾದ ಔದಾರ್ಯ, ದಿವ್ಯಪ್ರೇಮ ಇತ್ಯಾದಿ ಸಾತ್ವಿಕಗುಣಗಳಿಂದ ಕೂಡಿದ ಆತ್ಮ ಸಂಸ್ಕೃತಿ ಸಂದೇಶವನ್ನು ಸಾರುವ ಉದ್ಯೋಗಪರ್ವ 'ಇತಿ

---

14 ಹಾ ಹಾ ಧಿಗ್ ಧಿಗ್ ಧಿಗಿತ್ಯುಕ್ತ್ವಾ ನೇತ್ರೈರಶ್ರೂಣ್ಯವರ್ತಯನ್॥ II. 79.32

15 ಜಾನನ್ನಪಿ ಕ್ಷಯಕರಂ ನಾತಿಕ್ರಮಿತುಮುತ್ಸಹೇ ॥ II. 76. 4

16 ಅಸಂಭವೇ ಹೇಮಮೃಗಸ್ಯ ಜನ್ಮ
ತಥಾಪಿ ರಾಮೋ ಲುಲುಭೇ ಮೃಗಾಯ ।
ಪ್ರಾಯಃ ಸಮಾಪನ್ನವಿಪತ್ತಿಕಾಲೇ
ದಿಯೋ ವಿಪರ್ಯಸ್ತತರಾ ಭವನ್ತಿ ॥ II 76. 5

17 ವನಪರ್ವ, ಅಧ್ಯಾಯ 31–34

18 ಮಾ ಸ್ಮ ತಾತ ಪುನಃ ಕಾರ್ಷೀರೀದೃಶಂ ಸಾಹಸಂ ಕ್ವಚಿತ್ ।
ಗೃಹಾನ್ ವ್ರಜ ಯಥಾಕಾಮಂ ವೈಮನಸ್ಯಂಚ ಮಾ ಕೃಥಾಃ॥ III 246. 22-23

ಹಾಸಪ್ರದೀಪ'ದ ಅತ್ಯುತ್ತಮ ಪ್ರಕರಣ. ದ್ವೇಷಾಸೂಯೆಗಳಿಂದ ಕೂಡಿ ನಾಶಕಾರಕವಾದ ರಾಜಸವ್ಯಕ್ತಿಗಳ ಸಮೂಹವನ್ನೂ ಸಂರಕ್ಷಿಸಲು ಅಂತರಂಗಶುದ್ಧಿಯಿಂದ ಪ್ರಯತ್ನಿಸಿದ ಸಾತ್ವಿಕ ಪ್ರವೃತ್ತಿಯ ಪರಾಕಾಷ್ಠೆ ಮತ್ತು ಸಂರಕ್ಷಕಪ್ರವೃತ್ತಿಯುಳ್ಳ ಸಾತ್ವಿಕರ ಸಮೂಹವನ್ನೂ ಸಂಪೂರ್ಣವಾಗಿ ನಾಶಮಾಡಬೇಕೆಂಬ ಉದ್ಯಮವುಳ್ಳ ರಾಜಸರ ಕ್ರೂರವಾದ ಆಸುರೀಶಕ್ತಿ ಇವುಗಳ ಸ್ಪರ್ಧೆಯ ನಡುವೆ ವಿಧಿಯ ಪಾತ್ರ, ಇತಿಹಾಸದ ವಿಚಿತ್ರವಿನ್ಯಾಸ ಇವೆಲ್ಲ ಇಲ್ಲಿ ಕಾವ್ಯಾತ್ಮಕವಾಗಿ ಪ್ರತಿಪಾದಿತವಾಗಿವೆ.

ವನವಾಸಪ್ರತಿಜ್ಞೆ ಮುಗಿಯಿತು. ಧರ್ಮರಾಜನಿಗೆ ಪುನಃ ರಾಜ್ಯವನ್ನು ಪಡೆಯುವ ಅಧಿಕಾರ ಪ್ರಾಪ್ತವಾಯಿತು. ದುರ್ಯೋಧನ ರಾಜ್ಯವನ್ನು ಕೊಡುವಂತಿಲ್ಲ. ರಾಜ್ಯವಿಲ್ಲದ ಭಿಕ್ಷಾವೃತ್ತಿ ಪಾಂಡವರ ಕ್ಷಾತ್ರಧರ್ಮವಲ್ಲ. ಅರ್ಥವಿಲ್ಲದೆ ಬದುಕುವಂತಿಲ್ಲ. ಅರ್ಥವಿಲ್ಲದ ಜೀವನ ಮೃತಿಗೆ ಸಮಾನ. "ಧನವೆ ದೊಡ್ಡ ಧರ್ಮ. ಧನದಲ್ಲಿಯೆ ಸರ್ವವೂ ನೆಲೆಗೊಂಡಿರುವುದು. ಧನವಿಲ್ಲದವರು ಸತ್ತವರೇ,"[19] ಎಂಬ ತತ್ತ್ವವನ್ನು ಧರ್ಮರಾಜ ಅನುಭವದಿಂದ ತಿಳಿದವನು. ದನವಿಲ್ಲದವರು ಹುಚ್ಚರಾಗುವರೆಂದೂ ಕೆಲವರು ಆತ್ಮಹತ್ಯೆಯನ್ನೇ ಮಾಡಿಕೊಳ್ಳುವರೆಂದೂ ಅರಿತವನು.[20] ಅವನು ಉದರ ಭರಣಕ್ಕಾಗಿ ಮಾತ್ರ ಧನವನ್ನಪೇಕ್ಷಿಸಿದ. ಐಶ್ವರ್ಯ, ಅಧಿಕಾರ ಯಾವುದಕ್ಕೂ ಆಸೆ ಪಡದೆ ಕೇವಲ ಜೀವಿಕೆಗಾಗಿ ಮಾತ್ರ ಐದು ಗ್ರಾಮಗಳನ್ನು ಕೇಳಿದ.[21] ವಂಶಕ್ಷಯಕಾರಕವಾದ ಯುದ್ಧವನ್ನು ತಪ್ಪಿಸಲು ಪ್ರಯತ್ನವನ್ನೂ ಮಾಡಿದ. ಯುದ್ಧ ನಿರತರನ್ನು ನಾಯಿಗಳ ಗುಂಪಿಗೆ ಹೋಲಿಸಿದ.[22] ಆತ್ಮಗೌರವವನ್ನೂ ದೂರವಿಟ್ಟು ಭರತಕುಲ ಕ್ಷೇಮವನ್ನು ಕೋರಿದ.[23] ಪ್ರಣತಿಪೂರ್ವಕವಾಗಿ ದುರ್ಯೋಧನನಲ್ಲಿ ಸಂಧಿಭಿಕ್ಷೆ ಬೇಡಿದ.[24] ಈ ಪ್ರಯತ್ನದಲ್ಲಿ ಸಾತ್ವಿಕನ ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ, ಭೂತದಯೆ, ಕ್ಷಮಾ, ಧೃತಿ, ಅದ್ರೋಹ, ನಿರಹಂಕಾರ ಇತ್ಯಾದಿ ಸಕಲ ಸದ್ಗುಣಗಳೂ ಪ್ರಕಾಶಿತವಾಗಿವೆ. ದ್ವೇಷಪೂರ್ಣನಾದ ಭೀಮನೂ ಈ ಸತ್ವಪ್ರಭಾವಕ್ಕೆ ವಶನಾದ. ತನ್ನ ದ್ವೇಷವನ್ನು ಮರೆತು ವಂಶಕ್ಷಯವನ್ನು ತಪ್ಪಿಸಲುದ್ಯುಕ್ತನಾದ.[25] ಕೃಷ್ಣನಿಂದ ಅವಹೇಳನಕ್ಕೆ ಪಾತ್ರನಾಗಿ ಅದನ್ನೂ ಲಕ್ಷಿಸದೆ ಭರತಕುಲಕ್ಷೇಮವನ್ನೇ ಅರಿಸಿದ. ಅವನಂತೆಯೆ ಅರ್ಜುನನೂ ಆತ್ಮ

---

19 ಶ್ರೀರ್ಹತಾ ಪುರುಷಂ ಹನ್ತಿ ಪುರುಷಸ್ಯಾಧನಂ ವಧಃ ।
ಜೀವನ್ತಿ ಧನಿನೋ ಲೋಕೇ ಮೃತಾ ಯೇ ತ್ವಧನಾ ನರಾಃ॥ V. 72.19–25

20 ಏತಾಮವಸ್ಥಾಂ ಪ್ರಾಪ್ಯೈಕೇ ಮರಣಂ ವವ್ರಿರೇ ಜನಾಃ॥ V. 72.19–25

21 ಇಂದ್ರಪ್ರಸ್ಥಂ ವೃಕಪ್ರಸ್ಥಂ ಜಯಂತಂ ವಾರಣಾವತಂ ।
ಪ್ರಯಚ್ಛ ಚತುರೋ ಗ್ರಾಮಾನನ್ಯದೇವಾತ್ರ ಪಂಚಮಮ್॥ V. 29.3

22 ತಚ್ಛುನಾಮಿವ ಸಂಪಾತೇ ಪಂಡಿತೈರುಪಲಕ್ಷಿತಂ ।
ಏವಮೇವ ಮನುಷ್ಯೇಷು ವಿಶೇಷೋ ನಾಸ್ತಿ ಕಶ್ಚನ॥ V. 72.70–73

23 ನ ಚ ತ್ಯಕ್ತುಂ ತದಿಚ್ಛಾಮೋ ನ ಚೇಚ್ಛಾಮಃ ಕುಲಕ್ಷಯಂ । V .72.68

24 ಅತ್ರ ಯಾ ಪ್ರಣಿಪಾತೇನ ಶಾನ್ತಿಃ ಸೈವ ಗರೀಯಸೀ V. 72. 68

25 ಉ. ಪರ್ವ. ಅ. 74

ಗೌರವವನ್ನು ದೂರವಿಟ್ಟು ದುರ್ಯೋಧನಾದಿಗಳ ಕ್ಷೇಮವನ್ನೇ ಕೋರಿದ.[26] ನಾಶಕಾರಕರಾದ ದುರ್ಯೋಧನಾದಿಗಳ ರಕ್ಷಣೆಗಾಗಿ ಅವರ ಕ್ಷೇಮವನ್ನು ಕೋರಿ ನೀತಿಶಾಸ್ತ್ರಾರ್ಥಕೋವಿದನೂ ಶುದ್ಧಾತ್ಮನೂ ಆದ ದ್ರುಪದಪುರೋಹಿತನನ್ನು ಸಂಧಿಗಾಗಿ ಕಳುಹಿಸಿದರು. ಅವನು ದುರ್ಯೋಧನನ ಸಭೆಯಲ್ಲಿ ಪಾಂಡವರ ಸದಾಶಯಗಳನ್ನು ವಿವರಿಸಿದ. "ವಿಷಪ್ರಾಶನ, ಜತುಗೃಹ ಪ್ರಕರಣ, ದ್ರೌಪದಿಯ ಮಾನಭಂಗ, ವನವಾಸದುಃಖ ಇವೆಲ್ಲವನ್ನೂ ಮರೆತು ಕೌರವರ ಶ್ರೇಯಸ್ಸಿಗಾಗಿ ಪಾಂಡವರು ಸಂಧಿಯನ್ನಿಚ್ಛಿಸುತ್ತಾರೆ," ಎಂದು ಸ್ಪಷ್ಟಪಡಿಸಿದ.[27] ಆದಾದನಂತರ ಕೃಷ್ಣನ ದೌತ್ಯವೂ ಅನಿವಾರ್ಯವಾಯಿತು. ದುರ್ಯೋಧನ ಯಾವ ಸದುಪದೇಶಕ್ಕೂ ಕಿವಿಕೊಡಲಿಲ್ಲ. ಗಾಂಧಾರಿಯೂ ಮಾತೃಪ್ರೇಮಪೂರ್ವಕವಾಗಿ ದೈನ್ಯದಿಂದಲೂ ಆತಂಕದಿಂದಲೂ ಮಗನ ಪರಿವರ್ತನೆಗೆ ಪ್ರಯತ್ನಿಸಿ ವಿಫಲಳಾದಳು.[28] ಧರ್ಮರಾಜನ ಸಂಧಿಭಿಕ್ಷೆ ತಿರಸ್ಕೃತವಾಯಿತು. ಆದರೂ ಕಲ್ಯಾಣಗುಣಪರಿಪೂರ್ಣನಾದ ಸಾತ್ವಿಕನ ಔದಾರ್ಯ ಮತ್ತು ದಿವ್ಯಪ್ರೇಮ ಜಗತ್ತಿಗೆ ಉತ್ತಮ ಸಂದೇಶ ನೀಡಿತು. ಈ ಸಂದೇಶ ಪ್ರತಿಪಾದನ ಮತ್ತು ಪ್ರಸಾರವೆ ಉದ್ಯೋಗಪರ್ವದಲ್ಲಿ ಮಹಾಕವಿಯ ಆಶಯ.

೬

ಯುದ್ಧ ಎಂದಿಗೂ ನಿಷಿದ್ಧ. ಅದರಲ್ಲೂ ಸ್ವಜನರಲ್ಲಿ ಅದು ವರ್ಜ್ಯ ಎಂದು ವ್ಯಾಸ ಅಹಿಂಸಾತತ್ತ್ವವನ್ನು ಬೋಧಿಸಿದ. ಅದು ಅಪಯಶಸ್ಕರ ಎಂದು ಧೃತರಾಷ್ಟ್ರನಿಗೂ ಸ್ಪಷ್ಟಪಡಿಸಿ ಅದನ್ನು ತಡೆಯುವ ಪ್ರಯತ್ನಮಾಡಬೇಕೆಂದು ಉಪದೇಶಿಸಿದ.[29] ಅಹಿಂಸಾ, ಸತ್ಯ, ಅಕ್ರೋಧ, ಭೂತದಯಾದಿಗಳನ್ನು ಬೋಧಿಸಿದ ಅದೇ ವ್ಯಾಸ ಪಾಂಡವರಿಗೆ ಯುದ್ಧದ ಆವಶ್ಯಕತೆಗಳನ್ನು ತಿಳಿಸಿ ಯುದ್ಧ ಶ್ರೇಯಸ್ಕರವೆಂದೂ ಹೃದಯದೌರ್ಬಲ್ಯವನ್ನು ಬಿಟ್ಟು ಕ್ಷಾತ್ರಧರ್ಮವನ್ನನುಸರಿಸಿ ಯುದ್ಧ ಮಾಡಲೇಬೇಕೆಂದೂ ಆದೇಶವಿತ್ತ.

ಯುದ್ಧ ಕೇವಲ ಪಾಂಡವರ ನೀತಿಯನ್ನು ಮಾತ್ರ ಅವಲಂಬಿಸಲಿಲ್ಲ, ಅದು ಪ್ರಕೃತಿ ನಿಯಮ. ಅದನ್ನು ಪಾಲಿಸಲೇಬೇಕು ಎಂದು ಕವಿ ನಿರೂಪಿಸಿದ.[30] ಪಾಂಡವರು ಇದಕ್ಕೆ ನೆಪ ಮಾತ್ರ, ಅಲ್ಲದೆ ವಿಧಿನಿಯಮಪಾಲಕರು. ನೀತಿಗಳ್ಲಿನ ಅವಲಂಬನದ ಮೇಲೆ ಯುದ್ಧ ಅನಿವಾರ್ಯವಾಯಿತು. ಸನ್ನಿವೇಶ, ಪುರುಷಸಂಕಲ್ಪ ಮತ್ತು ವಿಧಿನಿಯಮ ಎಲ್ಲವೂ ಸೇರಿ ಪ್ರಳಯಕ್ಕೆ ಸಾಧಕವಾದುವು. ವಂಶಕ್ಷಯಕ್ಕೆ ಸಾಧಕವಾದ ಯುದ್ಧದಲ್ಲಿ ಭಾಗವಹಿಸುವುದು ದೋಷವೇ?

---

26 ಉ. ಪ. 78

27 ಸಭಾಯಾಂ ಕ್ಲೇಶಿತೈರ್ವೀರೈಃ ಸಹಭಾರ್ಯೈಃ ತಥಾ ಭೃಶಂ ।
ತೇ ಸರ್ವಂ ಪೃಷ್ಠತಃ ಕೃತ್ವಾ ತತ್ಸರ್ವಂ ಪೂರ್ವಕಿಲ್ಬಿಷಂ ॥
ಸಾಮ್ನೈವ ಕುರುಭಿಃ ಸಾರ್ಧಮಿಚ್ಛಂತಿ ಕುರುಪುಂಗವಾಃ ॥ ಉ. ಪ. 20. 7–12

28 ಉ. ಪರ್ವ. ಅಧ್ಯಾಯ 129

29 ವಿಗ್ರಹೋ ಹಿ ಮಹಾಪ್ರಾಜ್ಞ ಸ್ವಜನೇನ ವಿಗರ್ಹಿತಃ ।
ಅಧರ್ಮ್ಯಮಯಶಸ್ಯಂ ಚ ಮಾ ರಾಜನ್ ಪ್ರತಿಪದ್ಯತಾಮ್ ॥ III. 8.7

30 "ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ" ಭ. ಗೀ.

ಕಾರುಣ್ಯವನ್ನು ತೋರಿ ವಿಶ್ವಾಸಿಯುವನ್ನು ಮೀರಿ ಯುದ್ಧದಲ್ಲಿ ಭಾಗವಹಿಸದಿರುವುದು ದೋಷವೆ? ಎಂಬ ಪ್ರಶ್ನೆ ಸಾತ್ವಿಕರನ್ನು ಕಾಡಿಸಿತು.

ವಿಧಿನಿಯಮವೆಂದು ಯುದ್ಧಕ್ಕೆ ಒಪ್ಪಿ ಕರ್ತವ್ಯ ಪರಿಪಾಲನವಾಯಿತು. ಆದರೆ, ಸಾತ್ವಿಕನ ಧ್ಯೇಯಕ್ಕೂ ಯುದ್ಧ ಪರಿಣಾಮವಾದ ಸರ್ವನಾಶಕ್ಕೂ ಪ್ರಮಾಣವೇ ಇಲ್ಲದಾಯಿತು. ಅಲ್ಲದೆ, 'ಯತೋ ಧರ್ಮಸ್ತತೋ ಜಯಃ' ಎಂಬ ಧರ್ಮ ಪ್ರಶಂಸೆಯೂ ಸಾರ್ಥಕವಾಗಲಿಲ್ಲ. ಜಯಕ್ಕೆ ಅಧರ್ಮ, ಅನ್ಯಾಯ ಅತ್ಯವಶ್ಯವಾಯಿತು. ಯುದ್ಧಕ್ಕೆ ನೀತಿಯೇ ಅಡಿಗಲ್ಲು, ಧರ್ಮವೇ ಅವಲಂಬನ ಎಂಬ ಮಾತು ಸುಳ್ಳಾಯಿತು. ಜಯಕ್ಕೂ ಧರ್ಮಕ್ಕೂ ಕಾರ್ಯಕಾರಣ ಸಂಬಂಧ ಸಮರ್ಥಿತವಾಗಲಿಲ್ಲ.

ಧರ್ಮದಲ್ಲಿ ಶ್ರದ್ಧೆ ಧರ್ಮದ ಆದರ್ಶಗಳನ್ನು ಪ್ರಶಂಸಿಸಿದರೂ ಕಾವ್ಯದಲ್ಲಿ ವರ್ಣಿತ ವಾಗಿರುವ ಘಟನೆಗಳೂ ವ್ಯವಹಾರಗಳೂ ಅನುಭವಗಳೂ ಇದಕ್ಕೆ ವಿರುದ್ಧವಾಗಿವೆ. ಕೇವಲ ಧರ್ಮವನ್ನೆ ನಂಬಿದರೆ ಜಯ ಸಿಕ್ಕಲಾರದು ; ಜಯಲಾಭಕ್ಕೆ ಅನೇಕ ಸಲ ಅನೃತವನ್ನೇ ಆಶ್ರಯಿಸಬೇಕು ಎಂಬ ನಿಃಸಹಾಯಕ ಸನ್ನಿವೇಶಗಳು ಕಾವ್ಯದುದ್ದಕ್ಕೂ ವಿಪುಲವಾಗಿವೆ. "ಧರ್ಮಮಾರ್ಗವನ್ನನುಸರಿಸಿ ಯಾರೂ ತನ್ನನ್ನು ಜಯಿಸಲಾರರು,"[31] ಎಂಬ ದುರ್ಯೋಧನನ ಸಿದ್ಧಾಂತವನ್ನು ಪಾಂಡವರು ತಮ್ಮ ಅಧಾರ್ಮಿಕ ವ್ಯವಹಾರಗಳಿಂದ ಸಮರ್ಥಿಸಿದರು. "ಪ್ರಾಣ ಹೋಗುವ ಸಂದರ್ಭದಲ್ಲೂ ಪ್ರಾಣವನ್ನು ಉಳಿಸಿಕೊಳ್ಳಲು ಧರ್ಮತ್ಯಾಗ ಮಾಡಬಾರದು,"[32] ಎಂಬ ಸಂದೇಶವನ್ನು ಪರಿಪಾಲನ ಮಾಡಲು ಧರ್ಮರಾಜನಿಗೂ ಸಾಧ್ಯವಾಗಲಿಲ್ಲ. "ಧನಕ್ಕಿಂತ ಧರ್ಮ ಉತ್ತಮ;"[33] "ಪ್ರಾಣಕ್ಕಿಂತಲೂ ಧರ್ಮ ದೊಡ್ಡದು;"[34] "ನಾನೇನೋ ನೀತಿಯನ್ನೇ ಅವಲಂಬಿಸಿ ಯುದ್ಧಮಾಡುತ್ತೇನೆ,"[35] ಇತ್ಯಾದಿಯಾದ ಧರ್ಮರಾಜನ ಪ್ರತಿಜ್ಞೆಗಳೂ ಪಾಲಿತ ವಾಗಲಿಲ್ಲ.

ಅಸತ್ಯವನ್ನು ನುಡಿಯದಿದ್ದರೆ ಪಾಂಡವರ ನಾಶ ಸಿದ್ಧ ಎಂದು ಕೃಷ್ಣ ನಿರ್ಬಂಧಿಸಿದ.[36] ತಮ್ಮ ಪ್ರಾಣರಕ್ಷಣೆಗಾಗಿ ಧರ್ಮರಾಜ ಅಸತ್ಯವನ್ನೇ ಹೇಳಬೇಕಾಯಿತು. ಅಕೃತ್ಯವೆಂಬ ಪರಿ ಜ್ಞಾನವಿದ್ದರೂ ಶಲ್ಯನಲ್ಲಿ ಕರ್ಣನ ವಿರುದ್ಧವಾಗಿ ಮಾಡಿದ ಧರ್ಮರಾಜನ ಪ್ರಾರ್ಥನೆ ಕಳಂಕ

---

[31] ನ ಚ ತಂ ಕೃಷ್ಣ ಪಶ್ಯಾಮಿ ಕ್ಷಾತ್ರಧರ್ಮಮನುಷ್ಠಿತಂ ।
ಉತ್ಸಹೇತ ಯುಧಾ ಜೇತುಂ ಯೋ ನಃ ಶತ್ರುನಿಬರ್ಹಣ ॥
ಉ. ಪ. 127.13

[32] ನ ಜಾತು ಕಾಮಾನ್ನಭಯಾನ್ನ ಲೋಭಾದ್ಧರ್ಮಂ ತ್ಯಜೇಜ್ಜೀವಿತಸ್ಯಾಪಿ ಹೇತೋಃ।
ಸ್ವ. ಪ. 5.63

[33] "ಧರ್ಮಃ ಪರೋ ವಿತ್ತಚಯಾನ್ಮತೋಽಸ್ಯ । ಉ. ಪ. 32.12

[34] ಶರೀರಗುಪ್ತ್ಯಭ್ಯಧಿಕಂ ಧರ್ಮಂ ಗೋಪಾಯ ಪಾಂಡವ । ಆದಿಪರ್ವ 154.2

[35] ಬಲಂ ತು ನೀತಿಮಾಧಾಯ ಯುಧ್ಯೇ ಜಯಪರಾಜಯ । ಉ. ಪ. 72.49

[36] ಸತ್ಯಂ ಬ್ರವೀಮಿ ತೇ ಸೇನಾ ವಿನಾಶಂ ಸಮುಪೈಷ್ಯತಿ ।
ಅನೃತಂ ಜೀವಿತಸ್ಯಾರ್ಥೇ ವದನ್ನಸ್ಪೃಶ್ಯತೇಽನೃತೈಃ ॥ ದ್ರೋ. ಪ. 190.46-47

ಪೂರ್ಣವಾದುದು.[37] "ಆತ್ಮರಕ್ಷಣೆಗೆ ಧಕ್ಕೆ ಬಂದಾಗ ಧರ್ಮಶಾಸ್ತ್ರ ಮೌನದಿಂದಿರಬೇಕು"[38] ಎಂದು ಪ್ರಸಿದ್ಧನಾದ ಪಾಶ್ಚಾತ್ಯ ಇತಿಹಾಸತತ್ತ್ವಜ್ಞ ಹೇಳಿರುವುದು ಐತಿಹಾಸಿಕ ಸತ್ಯ ಮತ್ತು ಆವಶ್ಯಕತೆಗಳನ್ನು ತಿಳಿಸುತ್ತದೆ.

ಅಸತ್ಯ ಅಧರ್ಮಗಳನ್ನಾಶ್ರಯಿಸದಿದ್ದರೆ ಭೀಷ್ಮಾದಿಗಳನ್ನೂ ಕೌರವರನ್ನೂ ಜಯಿಸಲು ಯಾರಿಂದಲೂ ಸಾಧ್ಯವಿರಲಿಲ್ಲ ಎಂದು ಧರ್ಮಪರಿಪಾಲಕನಾದ ಕೃಷ್ಣನೆ ಅಧರ್ಮವನ್ನೂ ಸಮರ್ಥಿಸಿದ. ಪಾಂಡವರಿಗೆ ಪ್ರಾಣರಕ್ಷಣೆಯಾಯಿತು. ರಾಜ್ಯಪ್ರಾಪ್ತಿಯೂ ಆಯಿತು. ಆದರೆ, ಯುದ್ಧದ ಕೀರ್ತಿ ಕೌರವರಿಗೆ ಲಭಿಸಿತು. ದುರ್ಯೋಧನ ಕೆಳಕ್ಕೆ ಬಿದ್ದಾಗ ಪಾಂಡವರು ಹರ್ಷದಿಂದ ನಲಿದರು. ಅದನ್ನು ಭೂಮಾತೆ ಸಹಿಸಲಿಲ್ಲ.[39] ತೊಡೆ ಮುರಿದು ಬಿದ್ದಿದ್ದ ದುರ್ಯೋಧನನ ಮೇಲೆ ಅಂತರಿಕ್ಷದಿಂದ ಪುಷ್ಪ ವೃಷ್ಟಿಯಾಯಿತು. ಗಂಧರ್ವಾದಿಗಳು ಆತನನ್ನು ಪ್ರಶಂಸಿಸಿದರು. ಇದನ್ನು ನೋಡಿ ಪಾಂಡವರು ಲಜ್ಜಿತರಾದರು.[40] ಆದರೆ ಅಟ್ಟಹಾಸದಿಂದಲೂ ಅಹಂಕಾರದಿಂದಲೂ ಗರ್ಜಿಸುತ್ತಿದ್ದ ದುರ್ಯೋಧನನೂ ಕೆಳಕ್ಕೆ ಬಿದ್ದು ಪ್ರಶಾಂತನಾದ.[41] ಇದು ಇತಿಹಾಸದ ವೈಚಿತ್ರ್ಯ.

ಕೃಷ್ಣನ ನಿರ್ಬಂಧಕ್ಕೆ ಧರ್ಮರಾಜ ಅಸತ್ಯವನ್ನು ನುಡಿದಿರಬಹುದು. ಆದರೆ, ಅದರಿಂದ ಅವನ ವ್ಯಕ್ತಿತ್ವ ಕುಂದಲಿಲ್ಲ. ಅವನು ಶತ್ರುಗಳಲ್ಲೂ ಅಂತರಂಗಶುದ್ಧಿಯಿಂದ ದಿವ್ಯಪ್ರೇಮ ತೋರಿದವನು. ಲೋಕಕಲ್ಯಾಣದಲ್ಲೇ ಆಸಕ್ತಿಯುಳ್ಳವನು. ಇತಿಹಾಸದಲ್ಲಿ ಮಾನವನ ಅತ್ಯುತ್ತಮ ಸಂಸ್ಕೃತಿಯ ಮೂರ್ತರೂಪ, ಭಾರತಭೂಷಣ.

ದುರ್ಯೋಧನ ಕೆಳಕ್ಕೆ ಬಿದ್ದಾಗ ಭೀಮ ಅವನ ಮೇಲೆ ಪಾದಸ್ಪರ್ಶ ಮಾಡಿದಾಗ ಧರ್ಮರಾಜ ಖಿನ್ನನಾಗಿ ರಾಜಾಧಿರಾಜನ ತಲೆಯ ಮೇಲೆ ಕಾಲಿಟ್ಟದ್ದಕ್ಕಾಗಿ ಭೀಮನನ್ನು ಜರಿದ.[42] ತನ್ನ

---

37 ರಾಜನ್ನಕರ್ತವ್ಯಮಪಿ ಕರ್ತುಮರ್ಹಸಿ ಸತ್ತಮ । ಉ. ಪ. 8.41

38 "........When its essential interests are involved it must be allowed to use any means it consciders necessary to its survival. The Ten Commandments must be silent when self-preservation is at stake". Will Durant: Lessons of History, 1968, p. 38

39 ನೈತಾನ್ ಹರ್ಷಸಮಾವಿಷ್ಟಾನಿಯಂ ಸೇಹೇ ವಸುಂಧರಾ । ಶಲ್ಯ ಪ, 61.4

40 ಅತ್ಯದ್ಭುತಾನಿ ತೇ ದೃಷ್ಟ್ವಾ ವಾಸುದೇವಪುರೋಗಮಾಃ ।
ದುರ್ಯೋಧನಸ್ಯ ಪೂಜಾಂ ತು ದೃಷ್ಟ್ವಾ ವ್ರೀಡಾಮುಪಾಗಮನ್ ॥ ಶಲ್ಯ. ಪ 61.58

41 "After life's fitful fovers, he sleeps well" Macbeth III. 2. 23

42 ಏಕಾದಶಚಮೂನಾಥಂ ಕುರೂಣಾಮಧಿಪಂ ತಥಾ ।
ಮಾ ಸ್ಪ್ರಾಕ್ಷೀರ್ಭೀಮ ಪಾದೇನ ರಾಜಾನಂ ಜ್ಞಾತಿಮೇವ ಚ ॥ ಶಲ್ಯ ಪ. 59.17

ಉದಾತ್ತತ್ವವನ್ನು ಪ್ರಕಾಶಪಡಿಸಿದ. ವಂಶಕ್ಷಯಕ್ಕೆ ಕಾರಣನಾದ ತನ್ನನ್ನು ಜರಿದುಕೊಂಡ.[43]

ವಂಶಕ್ಷಯ ಕಾಲಾಧೀನ. ಇತಿಹಾಸದ ವ್ಯವಹಾರವೆಲ್ಲ ಚಕ್ರಾತ್ಮಕ. ಉಚ್ಛ್ರಾಯಸ್ಥಿತಿಯಲ್ಲಿದ್ದ ಭರತವಂಶದ ಔನ್ನತ್ಯ ಅಧೋಮುಖಿಯಾಗಲೇ ಬೇಕು. ಅದಕ್ಕೆ ರಜೋಗುಣಭೂಯಿಷ್ಠರಾದ ಕೌರವರೂ ಕೊಂಚಮಟ್ಟಿಗೆ ಪಾಂಡವರೂ ಕಾರಣರಾದರು. ಇವರೆಲ್ಲರೂ ಕಾಲಚಕ್ರಕ್ಕೆ ಅಧೀನರು. ಇವರ ಸ್ವಾತಂತ್ರ್ಯ ಪರಿಮಿತ. ಪರಿಮಿತವಾದ ಸ್ವಾತಂತ್ರ್ಯವಿದ್ದರೂ ಮಾನವ ಜೀವನದ ಆದರ್ಶದ ಉಚ್ಚಶಿಖರನ್ನೇರುವುದು ಸುಸಂಸ್ಕೃತಮಾನವನ ವೈಶಿಷ್ಟ್ಯ. ಆದರೆ, ಅದೂ ಶಾಶ್ವತವಲ್ಲ. ಅದಕ್ಕೂ ಅವಸಾನವುಂಟು.[44] ದ್ವಾಪರದ ಅವಸಾನವಾಗಿ ಕಲಿಯುಗ ಆರಂಭವಾಗಬೇಕಾದ್ದು ಕಾಲನಿಯಮನ. ಧರ್ಮರಾಜನ ಸಿಂಹಾಸನವನ್ನು ಹತ್ತಿದ ಪರೀಕ್ಷಿತ್ತು ಶಮೀಕಋಷಿಯ ಕತ್ತಿಗೆ ಸರ್ಪಮಾಲೆಯನ್ನು ಹಾಕಿದಾಗಲೆ ಕಲಿಯುಗದ ಆವಿರ್ಭಾವ ಪ್ರಕಾಶಿತವಾಯಿತು.

ವ್ಯಾಸಮಹಾಕವಿಯ ಸಮಷ್ಟಿದೃಷ್ಟಿಗೆ ಐತಿಹಾಸಿಕಲೋಕದ ಸಕಲ ಸೂಕ್ಷ್ಮಾಂಶಗಳೂ ಗೋಚರವಾಗಿ ವಿವೃತವಾಗಿವೆ.[45] ಈ ಐತಿಹಾಸಿಕಮಹಾಕೃತಿ ಮಹರ್ಷಿಯ ಧ್ಯಾನರೂಪವಾದ ತಪಸ್ಸಿನ ಫಲ.[46] ಪರಮಪೂಜ್ಯವಾದ ಕಾವ್ಯ.[47] ಭಾವಗರ್ಭಿತವಾಗಿರುವುದರಿಂದ ಇದು ಕಾವ್ಯ. ತತ್ತ್ವಗರ್ಭಿತವಾಗಿರುವುದರಿಂದ ಇತಿಹಾಸ.[48] ಮುಂದಿನ ಕವಿಗಳಿಗೂ ಇತಿಹಾಸ ದಾರ್ಶನಿಕರಿಗೂ ಇದು ಶ್ರೇಷ್ಠವಾದ ಆಕರ.[49]

---

43 ಇದಂ ಮಮ ಮಹದ್ದುಃಖಂ ವರ್ತತೇ ಹೃದಿ ನಿತ್ಯದಾ |
ಕೃತ್ವಾ ಜ್ಞಾತಿಕ್ಷಯಮಿಮಂ ಮಹಾನ್ತಂ ಲೋಭಕಾರಿತಂ || ಶಾ. ಪ. 1.14

44 ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ |
ಸಂಯೋಗಾ ವಿಪ್ರಯೋಗಾಂತಾಃ . . . . || ಸ್ತ್ರೀ. ಪ . 2.3

45 ಲೋಕಗರ್ಭಗೃಹಂ ಕೃತ್ಸ್ನಂ ಯಥಾವತ್ಸಂಪ್ರಕಾಶಿತಂ । ಆ.ಪ. I. 87.

46 ಪ್ರವಿಶ್ಯ ಯೋಗಂ ಜ್ಞಾನೇನ ಸೋಽಪಶ್ಯತ್ಸರ್ವಮಂತತಃ | ಆ.ಪ. I. 61

47 ಕೃತಂ ಮಯೇದಂ ಭಗವನ್ ಕಾವ್ಯಂ ಪರಮಪೂಜಿತಂ | ಆ.ಪ.I.61

48 ಇತಿಹಾಸಪ್ರದೀಪೇನ ಮೋಹಾವರಣಘಾತಿನಾ I.1. 103

49 ಸರ್ವೇಷಾಂ ಕವಿಮುಖ್ಯಾನಾಮುಪಜೀವ್ಯೋ ಭವಿಷ್ಯತಿ I.1.92

ಕೆ. ಎಸ್. ದೇಶಪಾಂಡೆ

ಭಾರತೀಯ ಗ್ರಂಥಾಲಯಸಂಪತ್ತು ಮತ್ತು ಅದರ ಗರಿಷ್ಠ ಉಪಯೋಗ

I ಪೀಠಿಕೆ

ಸ್ವಾತಂತ್ರ್ಯೋತ್ತರದ 25 ವರ್ಷಗಳಲ್ಲಿ ಹಾಗೂ ನಾಲ್ಕು ಪಂಚವಾರ್ಷಿಕ ಯೋಜನೆಗಳಲ್ಲಿ ಆಗಿರುವ ಸಾಧನೆಗಳು ದೇಶದ ಎಲ್ಲ ವಿಶ್ವವಿದ್ಯಾನಿಲಯಗಳು, ಸಂಶೋಧನ ಕ್ಷೇತ್ರಗಳು ಮತ್ತು ಸರ್ಕಾರೀ ಗ್ರಂಥಾಲಯಗಳ ಅದ್ಭುತ ಬೆಳವಣಿಗೆಗೆ ಸಾಕ್ಷ್ಯ ನೀಡುತ್ತವೆ. ಕೆಲವು ರಾಜ, ಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಕ್ಷೇತ್ರದಲ್ಲೂ ಗಣನೀಯವಾದ ಬೆಳವಣಿಗೆಗಳಾಗಿವೆ. ಕಲ್ಕತ್ತದಲ್ಲಿರುವ ನ್ಯಾಷನಲ್ ಲೈಬ್ರರಿ (1948), ದೆಹಲಿಯಲ್ಲಿರುವ ಡೆಲ್ಹಿ ಪಬ್ಲಿಕ್ ಲೈಬ್ರರಿ(1951), ಇನ್ಸ್‌ಡಾಕ್ (INSDOC) (1952), ಐ ಸಿ ಎಸ್ ಎಸ್ ಆರ್ (ICSSR), ನ್ಯಾಷನಲ್ ಮೆಡಿಕಲ್ ಲೈಬ್ರರಿ ಮೊದಲಾದವು ಈ ದೇಶದ ಗ್ರಂಥಾಲಯ ಚಳವಳಿಯ ಚರಿತ್ರೆಯಲ್ಲಿ ಬಲು ಮುಖ್ಯವಾದ ಮೈಲಿಗಲ್ಲುಗಳು.

ಈ ಎಲ್ಲ ಸಂಸ್ಥೆಗಳ ಬೆಳವಣಿಗೆಯ ಮೊದಲ ಘಟ್ಟ ಮುಗಿದು, ಐದನೆಯ ಪಂಚವಾರ್ಷಿಕ ಯೋಜನೆ ಕಾಲಿಡುತ್ತಿರುವಾಗ ಇವುಗಳ ಎರಡನೇಯ ಘಟ್ಟವನ್ನು ವೈಜ್ಞಾನಿಕವಾದ ರೀತಿಯಲ್ಲಿ ಯೋಚಿಸಬೇಕು. ಗ್ರಂಥಾಲಯಗಳ, ಅದರಲ್ಲೂ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯ ಹಂತ ರಾಜಾ ರಾಮಮೋಹನರಾಯ್ ಗ್ರಂಥಾಲಯದ ಸ್ಥಾಪನೆಯಿಂದ ಪ್ರಾರಂಭವಾಗಿರುವುದು ಒಂದು ಶುಭಸೂಚನೆ. ಇದು ಸಾರ್ವಜನಿಕ ಗ್ರಂಥಾಲಯ ಚಳವಳಿಗೆ ಉತ್ತೇಜನ ನೀಡುವುದರಲ್ಲಿ ಯಾವ ಸಂಶಯವೂ ಇಲ್ಲ. ಕಳೆದ ನಾಲ್ಕು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಆಗಿರುವ ಗ್ರಂಥಾಲಯಗಳ ಬೆಳವಣಿಗೆ ಸ್ವಲ್ಪಮಟ್ಟಿಗೆ ಅವ್ಯವಸ್ಥಿತವಾದ ರೀತಿಯಲ್ಲಿ ಎಲ್ಲೋ ಒಮ್ಮೊಮ್ಮೆ ಆಗಿದೆ. ಈ ಗ್ರಂಥಾಲಯಗಳೆಲ್ಲದರ ಹೊಂದಾಣಿಕೆಯಲ್ಲಿ ಏನೇನೂ ಬೆಳವಣಿಗೆ ಆಗಿಲ್ಲ. ಮತ್ತೆ ಈ ಸಂಸ್ಥೆಗಳ ನಡುವೆ ಯಾವುದೇ ಬಗೆಯ ಉನ್ನತ ಮಟ್ಟದ ಸಹಕಾರವೂ ಇಲ್ಲ. ವಿದೇಶೀ ಪುಸ್ತಕಗಳನ್ನೂ ಇತರ ವಾಚನ ಸಾಮಗ್ರಿಗಳನ್ನೂ ಕೊಳ್ಳಲು ಬೆಲೆಬಾಳುವ ವಿದೇಶೀ ವಿನಿಮಯವನ್ನು ಹೇರಳವಾಗಿ ವಿನಿಯೋಗಿಸಲಾಗುತ್ತಿದೆ ಎನ್ನುವುದು ವಾಸ್ತವ ಸಂಗತಿ. ಈ ವಿನಿಮಯವನ್ನು ಇನ್ನೂ ಉತ್ತಮವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಏಕಕಾಲದಲ್ಲಿ ಭಾರತೀಯ ಪ್ರಕಟಣವಲಯದಲ್ಲಿ, ಸರ್ಕಾರಿ ಹಾಗೂ ಖಾಸಗಿ ಈ ಎರಡು ವಲಯಗಳಲ್ಲೂ, ಪ್ರಚಂಡವಾದ ಬೆಳವಣಿಗೆ ಆಗಿದೆ. ಈ ಪ್ರಕಟಣೆಯನ್ನು ಕೊಳ್ಳುವುದರಲ್ಲೂ ಗ್ರಂಥಾಲಯಗಳಲ್ಲಿ ಯಾವುದೇ ವ್ಯವಸ್ಥಿತವಾದ ಯೋಜನೆ ಇಲ್ಲ.

ಭಾರತೀಯ ಗ್ರಂಥಪಾಲರು ಸ್ವಾತಂತ್ರ್ಯೋತ್ತರದ 25 ವರ್ಷಗಳಲ್ಲಿ ತಾವು ಏನೇನು ಸಂಗ್ರಹಿಸಿದ್ದಾರೆಂಬುದನ್ನು ಮಾತ್ರವಲ್ಲದೆ, ಅದಕ್ಕೂ ಹಿಂದೆ ಏನೇನು ಸೇರ್ಪಡೆಯಾಗಿದೆ ಎಂಬುದನ್ನೂ ಚೆನ್ನಾಗಿ ಅರಿತುಕೊಳ್ಳಬೇಕು. ಮತ್ತೆ ಅವರು ಎಷ್ಟರಮಟ್ಟಿಗೆ ಈಗಾಗಲೇ ಸಂಗ್ರಹಿಸಿರುವ ಸಾಮಗ್ರಿಗಳ ಪೂರ್ಣಪ್ರಯೋಜನ ಪಡೆಯಬಹುದೆಂಬುದನ್ನು ಗಮನಿಸಬೇಕು. ಜೀವನ ವೆಚ್ಚ ಒಂದೇ ಸಮನೆ ಏರುತ್ತಾ ಹೋಗುತ್ತದೆ. ಇದರ ಪರಿಣಾಮ ಗ್ರಂಥಾಲಯಗಳ ಆರ್ಥಿಕ ಸ್ಥಿತಿಯ ಮೇಲೆ ಆಗಿಯೇ ತೀರುತ್ತದೆ. ಆದ್ದರಿಂದ ಸದ್ಯಕ್ಕಿರುವ ಅಲ್ಪಸ್ವಲ್ಪ ಆರ್ಥಿಕ ಶಕ್ತಿಯಲ್ಲೇ ಪರಮಪ್ರಯೋಜನ ಪಡೆಯುವುದು ಅತ್ಯಗತ್ಯ ಮಾತ್ರವಲ್ಲದೆ ಜರೂರಾಗಿ ಮಾಡಬೇಕಾದ ಕೆಲಸವೂ ಹೌದು. ಇಲ್ಲದಿದ್ದರೆ ಈ ಆರ್ಥಿಕಶಕ್ತಿಯು ಬೆಲೆಗಳ ಏರುವಿಕೆಯಿಂದ ಇನ್ನೂ ಕುಗ್ಗುತ್ತದೆ. ಮುಂದೆ ಪುಸ್ತಕಗಳನ್ನು ಕೊಳ್ಳಲು ನಿಗದಿ ಮಾಡಿದ ಹಣವನ್ನು ವಿವೇಕದಿಂದಲೂ ವಿವೇಚನೆಯಿಂದಲೂ ವಿನಿಯೋಗಿಸಬೇಕು.

II ಪ್ರಕೃತ ಗ್ರಂಥಸಂಪತ್ತು

ಗ್ರಂಥಾಲಯಗಳಲ್ಲಿಯ ಪುಸ್ತಕ ಸಂಪತ್ತನ್ನು ಈ ರೀತಿ ಐದು ಭಾಗಗಳಾಗಿ ವರ್ಗೀಕರಿಸಬಹುದು :

೧ ಭಾರತೀಯ ಪ್ರಕಟಣೆಗಳು–ಸರ್ಕಾರಿ ಹಾಗೂ ವಾಣಿಜ್ಯಕ,

೨ ವಿದೇಶೀ ಪುಸ್ತಕಗಳು,

೩ ನಿಯತಕಾಲಿಕಗಳ ಪೂರ್ವಸಂಚಿಕೆಗಳು ಮತ್ತು ಈಗಿನ ಸಂಚಿಕೆಗಳು,

೪ ಹಸ್ತಪ್ರತಿಗಳು,

೫ ಖಾಸಗಿ ಗ್ರಂಥಾಲಯಗಳು.

ಮೇಲಿನ ಸಾಮಗ್ರಿಗಳೆಲ್ಲ ಮುಂದೆ ಹೇಳಿರುವ ಗ್ರಂಥಾಲಯಗಳಲ್ಲಿ ಕಾಣಸಿಗುತ್ತವೆ : ೧ ನ್ಯಾಷನಲ್ ಲೈಬ್ರರಿ, ೨ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು, ೩ ಸಂಶೋಧನ ಸಂಸ್ಥೆಗಳಿಗೆ ಸೇರಿದ ಗ್ರಂಥಾಲಯಗಳು, ೪ ರಾಷ್ಟ್ರೀಯ ಪ್ರಯೋಗಾಲಯಗಳಿಗೆ ಸೇರಿದ ಗ್ರಂಥಾಲಯಗಳು, ೫ ಸರ್ಕಾರೀ ಇಲಾಖೆಗಳಿಗೆ ಸಂಬಂಧಿಸಿದ ಗ್ರಂಥಾಲಯಗಳು, ೬ ಚಂದಾದಾರಿ ಗ್ರಂಥಾಲಯಗಳೂ ಸೇರಿಕೊಂಡಂತೆ ಸಾರ್ವಜನಿಕ ಗ್ರಂಥಾಲಯಗಳು, ೭ ಶಾಲಾಕಾಲೇಜುಗಳಿಗೆ ಸೇರಿದ ಗ್ರಂಥಾಲಯಗಳು, ೮ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಗ್ರಂಥಾಯಗಳು, ೧೦ ಖಾಸಗಿ ವ್ಯಕ್ತಿಗಳ ಗ್ರಂಥಭಂಡಾರಗಳು, ೧೧ ಹಳೆ ಪುಸ್ತಕದಂಗಡಿಗಳು : ಸ್ಥಳೀಯವಾದ ಪ್ರಾಚೀನ ಪ್ರಕಟಣೆಗಳು ಇನ್ನೊಂದು ಕಡೆ ಸಿಕ್ಕುವ ಸಂಭವವುಂಟು. ಅದೆಂದರೆ ಕೆಲವು ಪುಸ್ತಕದಂಗಡಿಗಳು ಮತ್ತು ಪ್ರೆಸ್ಸುಗಳು. ಇವುಗಳ ಗುದಾಮುಗಳಲ್ಲಿ ಭಾರತೀಯ ಪ್ರಕಟಣೆಗಳ ದೃಷ್ಟಿಯಲ್ಲಿ ಅತ್ಯಮೂಲ್ಯವಾದ ಹಲವೊಂದು ಕೃತಿರತ್ನಗಳು ದೊರಕಬಹುದು. ಯಾರಿಗೂ, ಇವುಗಳ ಮಾಲೀಕರಿಗೂ, ಈ ಸಾಮಗ್ರಿಗಳನ್ನು ಉಪಯೋಗಿಸಿಕೊಳ್ಳಬಹುದೆಂಬ ಮಾತಿರಲಿ, ಈ ಗುದಾಮುಗಳಲ್ಲಿ ಏನಿದೆ ಎಂಬ ಕಲ್ಪನೆಯೂ ಇದ್ದಂತೆ ತೋರುವುದಿಲ್ಲ. ಪುಸ್ತಕಗಳೆಲ್ಲ ಗುದಾಮಿನ ಯಾವುದೋ ಒಂದು ಕೊಳಕು ಮೂಲೆಯಲ್ಲಿ ರಾಶಿಯಾಗಿ ಬಿದ್ದಿರುತ್ತವೆ. ಅಂಥ ಒಂದು ನಿದರ್ಶನ

ಪೆಂದರೆ ಬೆಳಗಾಂವಿಯ ರಾವುತತ್ವ ಬುಕ್ ಡಿಪೋ. ಇತ್ತೀಚೆಗೆ ನಾವು ಈ ಹಳೆಯ ಮುದ್ರಣಾಲಯ ಹಾಗೂ ಪುಸ್ತಕದಂಗಡಿಗೆ ಹೋದಾಗ ಅಲ್ಲಿ ನಮಗೆ ಸುಮಾರು 126 ಪ್ರಾಚೀನ ಕನ್ನಡ ಪ್ರಕಟಣೆಗಳು ದೊರೆತುವು. ಅವುಗಳೆಲ್ಲ ತುಂಬ ಜೀರ್ಣಾವಸ್ಥೆಯಲ್ಲಿದ್ದುವು. ಮೈಸೂರು ವಿಶ್ವವಿದ್ಯಾನಿಲಯ ರಚಿಸುತ್ತಿರುವ ಕನ್ನಡ ಪುಸ್ತಕಗಳ (ಪ್ರಾಚೀನ ಗ್ರಂಥಗಳಿಗೆ ಸಂಬಂಧಿಸಿದ) ಗ್ರಂಥಸೂಚಿಗಾಗಿ ತಯಾರಿಸಿದ ಪಟ್ಟಿಕೆಗಳಲ್ಲಿ ಇವುಗಳೆಲ್ಲ ಸೇರಿವೆಯೆ ಎಂದು ನೋಡಿದಾಗ 50 ಪುಸ್ತಕಗಳನ್ನು ಬಿಟ್ಟು ಉಳಿದ 76 ಶೀರ್ಷಿಕೆಗಳು ಗ್ರಂಥಸೂಚಿಯಲ್ಲಿ ಸೇರ್ಪಡೆಯಾಗಿರಲಿಲ್ಲ. ಇವುಗಳಲ್ಲಿ ಅನೇಕ ಪುಸ್ತಕಗಳಿಗೆ ಅವುಗಳ ತೂಕದಷ್ಟೇ ಚಿನ್ನದ ಬೆಲೆ ಆಗುತ್ತದೆ. ಅವುಗಳನ್ನೇನಾದರೂ ಹಾಳುಮಾಡಿದರೆ ನಾವು ನಮ್ಮ ಭಾಷೆ ಮತ್ತು ಸಾಹಿತ್ಯದ ಇತಿಹಾಸ, ಬೆಳವಣಿಗೆಗಳ ಸರಪಣಿಯಲ್ಲಿ ಅನೇಕ ಅತಿಮುಖ್ಯವಾದ ಕೊಂಡಿಗಳನ್ನು ಕಳೆದುಕೊಳ್ಳುತ್ತೇವೆ. ೧೨. ಭಾರತಕ್ಕೆ ಸಂಬಂಧಿಸಿದ ಪುಸ್ತಕಗಳು, ಹಸ್ತಪ್ರತಿಗಳು ಮತ್ತಿತರ ಪುರಾಲೇಖಗಳ ಸಂಗ್ರಹಗಳು ದೊರಕುವ ಇನ್ನೂ ಒಂದು ಮೂಲವಿದೆ. ಅದೆಂದರೆ ವಿದೇಶೀ ಗ್ರಂಥಾಲಯಗಳು. ಉದಾಹರಣೆಗೆ ಬ್ರಿಟಿಷ್ ಮ್ಯೂಸಿಯಮ್ ಲೈಬ್ರರಿ, ಇಂಡಿಯ ಆಫೀಸ್ ಲೈಬ್ರರಿ (ಎರಡೂ ಲಂಡನ್ನಿನಲ್ಲಿವೆ), ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಗ್ರಂಥಾಲಯಗಳು, ವಾಷಿಂಗ್ಟನ್ನಿನಲ್ಲಿರುವ ಲೈಬ್ರರಿ ಆಫ್ ಕಾಂಗ್ರೆಸ್, ನ್ಯೂ ಯಾರ್ಕ್‌ನಲ್ಲಿರುವ ನ್ಯೂ ಯಾರ್ಕ್ ಪಬ್ಲಿಕ್ ಲೈಬ್ರರಿ, ಪ್ಯಾರಿಸಿನಲ್ಲಿರುವ ನ್ಯಾಷನಲ್ ಲೈಬ್ರರಿ ಆಫ್ ಫ್ರಾನ್ಸ್, ಮತ್ತು ಜರ್ಮನಿಯ ಅಂಥದೇ ಗ್ರಂಥಾಲಯಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಕನಿಷ್ಠಪಕ್ಷ ಈ ಗ್ರಂಥಾಲಯಗಳಲ್ಲಿಯ ಭಾರತೀಯ ಪುಸ್ತಕಗಳ ಸಂಪೂರ್ಣ ವಿವರಣಾತ್ಮಕ ಕ್ಯಾಟಲಾಗುಗಳನ್ನಾದರೂ ಭಾರತೀಯ ವಿದ್ವಾಂಸರಿಗೆ ಕೂಡಲೇ ದೊರಕಿಸಿಕೊಡಬೇಕು. ೧೩. ಮತ್ತೆ, ನಮ್ಮ ದೇಶದಲ್ಲೇ ಸ್ಥಾಪಿತವಾಗಿರುವ ವಿದೇಶೀ ಗ್ರಂಥಾಲಯಗಳೂ ಇವೆ. ಉದಾಹರಣೆಗೆ ಹೈದರಾಬಾದಿನಲ್ಲಿರುವ 'ದಿ ಅಮೆರಿಕನ್ ಸ್ಟಡೀಸ್ ರಿಸರ್ಚ್ ಸೆಂಟರ್', ಬ್ರಿಟಿಷ್ ಕೌನ್ಸಿಲ್ ಲೈಬ್ರರಿಗಳು, ಯು. ಎಸ್. ಐ. ಎಸ್. ಲೈಬ್ರರಿಗಳು ಹಾಗೂ ವಿದೇಶೀ ಅಂತರರಾಷ್ಟ್ರೀಯ ಕೇಂದ್ರಗಳು ಮತ್ತು ಗ್ರಂಥಾಲಯಗಳು. ಈ ಗ್ರಂಥಾಲಯಗಳಿಂದೇನೋ ನಮ್ಮ ಜನತೆಗೆ—ಅದರಲ್ಲೂ ಆಯಾ ನಗರಗಳ ಮತ್ತು ಪಟ್ಟಣಗಳ ವಿದ್ಯಾರ್ಥಿಸಮುದಾಯಗಳಿಗೆ—ಹೆಚ್ಚು ಸಹಾಯವಾಗುತ್ತಿದೆ.

೧,೨,೪ ಮತ್ತು ೫ಕ್ಕೆ ಸಂಬಂಧಿಸಿದಂತೆ ನಮ್ಮ ಸಂಗ್ರಹಗಳು ಎಷ್ಟರಮಟ್ಟಿಗೆ ಸಮಗ್ರ ಹಾಗೂ ಪರಿಪೂರ್ಣವಾಗಿವೆ ಎನ್ನುವುದನ್ನು ನೋಡೋಣ.

ನ್ಯಾಷನಲ್ ಲೈಬ್ರರಿಯಿಂದಲೇ ಆರಂಭಿಸೋಣ ; ನಮಗೆಲ್ಲ ತಿಳಿದಿರುವಂತೆ 'ನ್ಯಾಷನಲ್ ಲೈಬ್ರರಿ'ಯ ಮೂಲ 1836ರಲ್ಲಿ ಸ್ಥಾಪಿತವಾದ ಕಲ್ಕತ್ತ ಪಬ್ಲಿಕ್ ಲೈಬ್ರರಿ. 1903ರಲ್ಲಿ ಭಾರತದ ಆಗಿನ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್ ಅದಕ್ಕೆ 'ಇಂಪೀರಿಯಲ್ ಲೈಬ್ರರಿ ಆಫ್ ಇಂಡಿಯ' ಎಂದು ನಾಮಕರಣ ಮಾಡಿದ. 1947ರಲ್ಲಿ ನಮ್ಮ ದೂರದೃಷ್ಟಿಯುತ ನಾಯಕರು ಅದನ್ನು ಸ್ವತಂತ್ರ ದೇಶದ ಒಂದು ರಾಷ್ಟ್ರೀಯ ಸಂಸ್ಥೆಯಾಗಿ ಪರಿವರ್ತಿಸಿದರು. ನ್ಯಾಷನಲ್ ಲೈಬ್ರರಿ ಅದರ ಸರ್ವೋತ್ಕೃಷ್ಟ ಸ್ಥಾನದ ಬಲದಿಂದಲೂ ಕಲ್ಕತ್ತದಲ್ಲಿ ಸ್ಥಾಪಿತವಾಗಿರುವುದರಿಂದಲೂ ಮುಖ್ಯವಾಗಿ ಬಂಗಾಲಿ ಭಾಷೆಯ ಪ್ರಕಟಣೆಗಳನ್ನೆಲ್ಲ ಸಂಗ್ರಹಿಸಿದೆ. ಅಲ್ಲಿ ಭಾರತೀಯ ಇತಿಹಾಸವನ್ನು ಕುರಿತ ಅತ್ಯುತ್ಕೃಷ್ಟ ಪುಸ್ತಕಗಳನ್ನೂ ಶೇಖರಿಸಲಾಗಿದೆ. ಮತ್ತೆ ಅದರಲ್ಲಿ ಕೇಂದ್ರ

ಹಾಗೂ ರಾಜ್ಯಸರ್ಕಾರಗಳ ಪತ್ರಿಕೆ, ವರದಿಗಳಿವೆ. ಅಲ್ಲಿ ವಿದೇಶಿ ಪ್ರಕಟಣೆಗಳೂ ಇವೆ. ವಿವಿಧ ರಾಜ್ಯಸರ್ಕಾರಗಳಿಂದ ಕೊಡುಗೆಯಾಗಿ ಬಂದ ಪ್ರಕಟಣೆಗಳೂ ಸ್ವತಃ ಖರೀದಿಮಾಡಿದವೂ ಅಲ್ಲಿವೆ; ಇವೆಲ್ಲ ಬಹುಮಟ್ಟಿಗೆ ಸ್ವಾತಂತ್ರ್ಯೋತ್ತರ ಕಾಲದಲ್ಲೇ ಸಂಗ್ರಹವಾದವು. 1956 ರಲ್ಲಿ ತಿದ್ದುಪಡಿಯಾದ 1954ರ ಪುಸ್ತಕಗಳ ಸಲ್ಲಿಕೆ ಅಧಿನಿಯಮದ (Delivery of Books Act) ನಿಬಂಧನೆಗಳ ಪ್ರಕಾರ ದೇಶದಲ್ಲಿ ಪ್ರಕಟವಾದ ಪ್ರತಿಯೊಂದು ಪುಸ್ತಕದ ಒಂದು ಪ್ರತಿಯನ್ನು ನ್ಯಾಷನಲ್ ಲೈಬ್ರರಿ ಸ್ವೀಕರಿಸಬೇಕೆಂಬ ನಿಯಮವಿದೆ. ಇಲ್ಲೂ ದೇಶದಲ್ಲಿ ಪ್ರಕಟವಾದ ಪುಸ್ತಕಗಳೆಲ್ಲವೂ ಪ್ರಕಾಶಕರಿಂದ ನ್ಯಾಷನಲ್ ಲೈಬ್ರರಿಗೆ ಬರುತ್ತ ಇಲ್ಲವೆನ್ನುವುದು ಎಲ್ಲರಿಗೂ ತಿಳಿದ ವಿಷಯ. ನನ್ನ ಅಂದಾಜಿನಲ್ಲಿ ಸೇಕಡ 25ರಷ್ಟು ಪುಸ್ತಕಗಳು ನ್ಯಾಷನಲ್ ಲೈಬ್ರರಿಯನ್ನು ತಲುಪುವುದೇ ಇಲ್ಲ.

ಈ ಸಂದರ್ಭದಲ್ಲಿ ನಾವು ಗಣನೆಗೆ ತೆಗೆದುಕೊಳ್ಳಬೇಕಾದ ಇನ್ನೊಂದು ಅಂಶವಿದೆ. ಭಾರತದಲ್ಲಿ 1556 ರಷ್ಟು ಹಿಂದೆಯೇ ಮುದ್ರಣಕಾರ್ಯ ಆರಂಭವಾಯಿತು. 1556 ರಿಂದ, ಪುಸ್ತಕಗಳ ಸಲ್ಲಿಕೆ ತಿದ್ದುಪಡಿ ವಿಧೇಯಕ ಅಂಗೀಕಾರವಾಗುವ ವರೆಗೆ, ಅಂದರೆ 1956ರ ವರೆಗೆ—ನಾನೂರು ವರ್ಷಗಳ ಅವಧಿಯಲ್ಲಿ—ಪ್ರಕಾಶಕರಾಗಲಿ ದೇಶದ ಗ್ರಂಥಾಲಯಗಳಾಗಲಿ ಈ ದೇಶದ ಯಾವುದೇ ಮುದ್ರಿತ ಪ್ರಕಟಣೆಯನ್ನು ಕಡ್ಡಾಯವಾಗಿ ತೆಗೆದುಕೊಂಡು ಸಂಗ್ರಹಿಸಬೇಕೆಂಬ ಯಾವುದೇ ಅಧಿನಿಯಮವೂ ಇರಲಿಲ್ಲ. ಇಡೀ ರಾಷ್ಟ್ರದ ಗ್ರಂಥಭಂಡಾರ ಎನಿಸಿಕೊಂಡ ನಮ್ಮ ನ್ಯಾಷನಲ್ ಲೈಬ್ರರಿಗೆ ಇಷ್ಟರಮಟ್ಟಿನ ಕೊರತೆ ಇದೆ. ಕನ್ನಡ ಪ್ರಕಟಣೆಗಳ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ನ್ಯಾಷನಲ್ ಲೈಬ್ರರಿಯಲ್ಲಿ 9,000 ಕನ್ನಡ ಪುಸ್ತಕಗಳಿವೆ. ಆದರೆ ಮೊದಲ ಪುಸ್ತಕ ಮುದ್ರಿತವಾದಂದಿನಿಂದ, ಅಂದರೆ 1817ರಿಂದ, 1972 ರ ವರೆಗೆ 40,000 ಪುಸ್ತಕಗಳು ಅಚ್ಚಾಗಿವೆಯೆಂದು ಅಂದಾಜುಮಾಡಲಾಗಿದೆ.

ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ಭಾರತ ಸರ್ಕಾರದ ಪ್ರಕಟಣೆಗಳನ್ನು ನಮ್ಮದೇ ಆದ ನ್ಯಾಷನಲ್ ಲೈಬ್ರರಿಯಲ್ಲಿ ಸಂಗ್ರಹಿಸಿರುವುದಕ್ಕಿಂತ ಹೆಚ್ಚಾಗಿ ಸಂಗ್ರಹಿಸಲಾಗಿದೆ. ಒಟ್ಟಿನಲ್ಲಿ ಐದು ಕೋಟಿ ಪುಸ್ತಕಗಳಿರುವ ವಾಷಿಂಗ್ಟನ್ನಿನ ಲೈಬ್ರರಿ ಆಫ್ ಕಾಂಗ್ರೆಸ್, 90 ಲಕ್ಷ ಪುಸ್ತಕಗಳಿರುವ ಹಾರ್ವರ್ಡ್ ಯೂನಿವರ್ಸಿಟಿ ಲೈಬ್ರರಿ ಮೊದಲಾದವುಗಳಿಗೆ ಹೋಲಿಸಿ ನೋಡಿದರೆ ನ್ಯಾಷನಲ್ ಲೈಬ್ರರಿಯಲ್ಲಿರುವುದು 15 ಲಕ್ಷ ಮಾತ್ರ.

ಭಾರತೀಯ ಪ್ರಕಟಣೆಗಳನ್ನು ಸಂಗ್ರಹಿಸಬಹುದಾಗಿತ್ತೆಂದು ನಿರೀಕ್ಷಿಸಬಹುದಾದ ಇತರ ಗ್ರಂಥಾಲಯಗಳೆಂದರೆ ಸಾರ್ವಜನಿಕ ಗ್ರಂಥಾಲಯಗಳು ಮತ್ತು ವಿಶ್ವವಿದ್ಯಾನಿಲಯದ ಗ್ರಂಥಾಲಯಗಳು. ಸ್ವಾತಂತ್ರ್ಯಪೂರ್ವದಲ್ಲಿ ಸುಮಾರು 25 ವಿಶ್ವವಿದ್ಯಾನಿಲಯಗಳಿದ್ದುವು. ಆದರೆ ಅವು ತಮ್ಮ ಬಹುಪಾಲು ಹಣವನ್ನೆಲ್ಲ ಇಂಗ್ಲಿಷ್ ಭಾಷಾ ಪ್ರಕಟಣೆಗಳನ್ನು ಕೊಳ್ಳಲು ಖರ್ಚು ಮಾಡಿಬಿಟ್ಟುವು 1968ರಲ್ಲಿ 71 ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿದ್ದ ಪುಸ್ತಕ ಸಂಗ್ರಹ 65 ಲಕ್ಷಕ್ಕಿಂತ ಹೆಚ್ಚಾಗಿರಲಿಲ್ಲ. ಹಾರ್ವರ್ಡ್ ವಿಶ್ವವಿದ್ಯಾನಿಲಯ ಒಂದರಲ್ಲೇ ಆ ಸಮಯದಲ್ಲಿ ಇನ್ನೂ ಭಾರಿ ಸಂಗ್ರಹವಿತ್ತು. ಸಾರ್ವಜನಿಕ ಗ್ರಂಥಾಲಯಗಳು ಹಲವೆಡೆ ಚಂದಾದಾರಿ ಗ್ರಂಥಾಲಯಗಳ ರೂಪದಲ್ಲಿದ್ದುವು. ಧನಾಭಾವ ಮತ್ತು ಇಂಗ್ಲಿಷ್ ವ್ಯಾಮೋಹಗಳಿಂದಾಗಿ

ಶೇಖರಿಸಬೇಕಾದಷ್ಟು ಒಳ್ಳೆಯ ಪ್ರಾದೇಶಿಕ ಭಾಷಾ ಪುಸ್ತಕಗಳನ್ನು ಶೇಖರಿಸಲು ಹಿಂದಿನವರಿಗೆ ಆಗಲಿಲ್ಲ.

ನಮ್ಮ ದೇಶದಲ್ಲಿ ಪ್ರಕಟವಾದ ಪುಸ್ತಕ ಶೇಖರಣೆಯ ಮಟ್ಟಿಗೆ ಹೇಳುವುದಾದರೆ ನಮ್ಮ ಗ್ರಂಥಾಲಯ ಸಂಪತ್ತು ಏನೇನೂ ಸಾಲದು ಎಂಬುದನ್ನು ಮೇಲಿನ ವಿವೇಚನೆಯಿಂದ ಗಮನಿಸಬಹುದು. (1968ರಲ್ಲಿ ನಮ್ಮ ಗ್ರಂಥಾಲಯಗಳೆಲ್ಲದರ ಒಟ್ಟು ಗ್ರಂಥಸಂಪತ್ತು ಸುಮಾರು 2 ಕೋಟಿ ಮುಟ್ಟಬೇಕೆಂದು ಉದ್ದೇಶಿಸಲಾಗಿತ್ತು.)

ವಿದೇಶಿ ಪುಸ್ತಕಗಳು : ವಿಶ್ವವಿದ್ಯಾನಿಲಯಗಳು, ಸಂಶೋಧನ ಸಂಸ್ಥೆಗಳು, ಸಾರ್ವಜನಿಕ ಗ್ರಂಥಾಲಯಗಳು ಮೊದಲಾದವುಗಳ ಭವಿಷ್ಯವನ್ನು ರೂಪಿಸುವ ಹೊಣೆ ದೂರದೃಷ್ಟಿಯುಳ್ಳ ಹಿರಿಯ ಅಧಿಕಾರಿಗಳ ಕೈಯಲ್ಲಿತ್ತು. ಅವರ ಪರಿಶ್ರಮದ ಫಲವಾಗಿ ನಮಗೆ ಅಮೂಲ್ಯವಾದ ಇಂಗ್ಲಿಷ್ ಭಾಷಾ ಪುಸ್ತಕಗಳನ್ನೂ, ಇತರ ವಿದೇಶೀ ಭಾಷೆಗಳ ಪುಸ್ತಕಗಳನ್ನೂ ಸಂಗ್ರಹಿಸಲು ಸಾಧ್ಯವಾಗಿದೆ. ಆದರೆ ಇಲ್ಲೂ (ಬೆಲೆಬಾಳುವ ಗ್ರಂಥಗಳ) ಒಂದೇ ಬಗೆಯ ಹಲವಾರು ಪ್ರತಿಗಳನ್ನು ಕೊಂಡುಕೊಳ್ಳಲಾಗಿದೆ. ಇದನ್ನು ನಿವಾರಿಸಬಹುದಾಗಿತ್ತು. ಇದು ಅಧಿಕ ಬೆಲೆಯ ಪರಾಮರ್ಶನ ಗ್ರಂಥಗಳು, ನಿಯತಕಾಲಿಕಗಳ ಪೂರ್ವಸಂಚಿಕೆಗಳು ಮತ್ತು ನಿಯತಕಾಲಿಕಗಳ ಪ್ರಚಲಿತ ಸಂಚಿಕೆಗಳ ವಿಷಯದಲ್ಲೂ ವಿಶೇಷವಾಗಿ ಕಂಡುಬರುತ್ತದೆ. ಸಾರ್ವಜನಿಕ ಗ್ರಂಥಾಲಯಗಳ ಸಂಸ್ಥೆಗಾಗಿ ನಮ್ಮ ರಾಜಧಾನಿಗಳಲ್ಲೊಂದರಲ್ಲಿ ಒಂದು ಸೆಟ್ಟಿಗೆ 18,000ರೂ. ಬೆಲೆ ಬಾಳುವಂತಹ 'ಎನ್‌ಸೈಕ್ಲೋಪೀಡಿಯ ಆಫ್ ಫಿಸಿಕ್ಸ್' ಎಂಬುದರ ಮೂರು ಸೆಟ್ಟುಗಳನ್ನು ಕೊಳ್ಳಲಾಯಿತು. ಇದು ಆ ರಾಜಧಾನಿಯಲ್ಲೇ ಇರುವ ಪ್ರಧಾನ ಗ್ರಂಥಾಲಯ ಹಾಗೂ ಅದರ ಶಾಖೆಗಳ ಪೋಷಕ ಸದಸ್ಯರ ಬಳಕೆಗೆ ಮಾತ್ರ.

ಒಂದು ವಿಶ್ವವಿದ್ಯಾನಿಲಯದ 25 ವಿಭಾಗೀಯ ಗ್ರಂಥಾಲಯಗಳಲ್ಲಿ (departmental libraries) ಸುಮಾರು 3–4 ಸೆಟ್ಟು ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ, 4 ಸೆಟ್ಟು ಎನ್‌ಸೈಕ್ಲೋಪೀಡಿಯ ಆಫ್ ಸೋಷಿಯಲ್ ಸೈನ್ಸಸ್ ಮೊದಲಾದವು ಇದ್ದುದು ಕಂಡು ಬಂತು. ಇದರ ಜೊತೆಗೆ 70–80 ಬಗೆಯ ನಿಯತಕಾಲಿಕಗಳಿಗೆ ಚಂದಾ. ಇವುಗಳಲ್ಲಿ ಒಂದೊಂದು ಬಗೆಯ ನಿಯತಕಾಲಿಕದ ಎರಡೆರಡು, ಮೂರುಮೂರು, ನಾಲ್ಕುನಾಲ್ಕು ಪ್ರತಿಗಳನ್ನು ಕೊಳ್ಳಲಾಗಿದೆ !

ಇಷ್ಟೆಲ್ಲ ಹೇಳಿದ್ದು ವಿದೇಶೀ ಗ್ರಂಥಗಳ ಸೇರ್ಪಡೆಯಲ್ಲಿ ನಮ್ಮ ಪ್ರಯತ್ನಗಳು ಒಂದಕ್ಕೊಂದು ಹೊಂದಿಕೆಯಿಲ್ಲದಂತೆ ಎಡ್ಡಾದಿಡ್ಡಿಯೂ ಗೊಂದಲಮಯವೂ ಆಗಿವೆ ಎಂಬ ಅಂಶವನ್ನು ಎತ್ತಿ ತೋರಿಸುವುದಕ್ಕಾಗಿ. ಸ್ವಲ್ಪಮಟ್ಟಿನ ಸಹಕಾರ ಮತ್ತು ದೂರದೃಷ್ಟಿಗಳಿದ್ದಿದ್ದರೆ ಇನ್ನೂ ಉಪಯುಕ್ತವೂ ವ್ಯಾಪಕವೂ ಆದ ವಿದೇಶೀ ಗ್ರಂಥ ಸಂಪತ್ತನ್ನು ದಾಖಲೆಗಳ ರೂಪದಲ್ಲಿ ಸಂಗ್ರಹಿಸಲು ನಮಗೆ ಸಾಧ್ಯವಾಗುತ್ತಿತ್ತು. ಈಗ ಅತ್ಯಗತ್ಯವಾಗಿ ಬೇಕಾಗಿರುವ ಪ್ರಾದೇಶಿಕ ಸಂಗ್ರಹಗಳು, ವಿಶೇಷ ಅಧ್ಯಯನಕ್ಕೆ ಸಂಬಂಧಿಸಿದ ಸಂಗ್ರಹಗಳು ಮೊದಲಾದವು ಗ್ರಂಥಾಲಯಗಳಲ್ಲಿಲ್ಲದಿರುವುದು ಎದ್ದು ಕಾಣುತ್ತದೆ.

ಹಸ್ತಪ್ರತಿಗಳು : ಖಾಸಗಿ ವ್ಯಕ್ತಿಗಳ ಹಾಗೂ ಧಾರ್ಮಿಕ ಸಂಸ್ಥೆಗಳ ಬಳಿ ಇರುವ ಹಸ್ತಪ್ರತಿಗಳನ್ನೂ ಸೇರಿದಂತೆ ದೇಶದಲ್ಲಿ ಹಲವಾರು ಹಸ್ತಪ್ರತಿಗಳ ಸಂಗ್ರಹಗಳಿವೆ. ಅವುಗಳ ಸಮಾ

ಚಾರವೇನೆಂಬುದೇ ನಮಗೆ ಗೊತ್ತಿಲ್ಲ. ಪಾಟ್ನದಲ್ಲಿರುವ ಖುದಾಬಕ್ಷ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ (Khuda Baksha Oriental Manuscripts Library)ಯನ್ನು ಕೇಂದ್ರಸರ್ಕಾರ 'ನ್ಯಾಷನಲ್ ರಿಪಾಸಿಟರಿ ಫಾರ್ ಪರ್ಷಿಯನ್ ಅಂಡ್ ಅದರ್ ಮುಘಲ್ ಮ್ಯಾನ್ಯುಸ್ಕ್ರಿಪ್ಟ್ಸ್' ಎಂದು ಹೇಗೆ ನಾಮಕರಣ ಮಾಡಿತೋ ಹಾಗೆಯೇ ತಂಜಾವೂರ್ ಸರಸ್ವತಿ ಮಹಲ್ ಲೈಬ್ರರಿಯನ್ನು 'ನ್ಯಾಷನಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಫಾರ್ ಸ್ಯಾನ್‌ಸ್ಕ್ರಿಟ್ ಅಂಡ್ ಅದರ್ ಇಂಡಿಯನ್ ಲಾಂಗ್ವೇಜ್ ಮ್ಯಾನ್ಯುಸ್ಕ್ರಿಪ್ಟ್ಸ್' ಎಂದು ನಾಮಕರಣ ಮಾಡಬೇಕೆಂಬ ಪ್ರಯತ್ನವೇನೋ ನಡೆಯಿತು. ಆದರೆ ಸಂಗ್ರಹಿಸಿರುವ ಹಸ್ತಪ್ರತಿಗಳ ಸಂರಕ್ಷಣೆ, ವ್ಯವಸ್ಥೆ ಮತ್ತು ಪ್ರಚಾರಗಳ ಬಗ್ಗೆ ಗಮನ ಹರಿಸುವ ಯಾವುದೇ ಪ್ರಯತ್ನವೂ ಆದಂತೆ ತೋರುವುದಿಲ್ಲ.

ಹಸ್ತಪ್ರತಿಗಳ ರೂಪದಲ್ಲಿರುವ 19ನೆಯ ಶತಮಾನದ ಮತ್ತು ಈಗಿನ ಲೇಖಕರ ಅಪ್ರಕಟಿತ ಗ್ರಂಥಗಳನ್ನು ರಕ್ಷಿಸುವುದೂ ಅತ್ಯಗತ್ಯ. ಏಕೆಂದರೆ ಅವುಗಳಲ್ಲಿ ಎಂಥ ಕೃತಿರತ್ನವಿದೆಯೆಂಬುದು ಯಾರಿಗೂ ಗೊತ್ತಿಲ್ಲ.

ಖಾಸಗಿ ಸಂಗ್ರಹಗಳು : ಈ ದೇಶದಲ್ಲಿ ಹಲವಾರು ಗ್ರಂಥಾಲಯಗಳಿವೆ. ವಿದ್ವಾಂಸರಾದ ಪ್ರಾಧ್ಯಾಪಕರು, ನ್ಯಾಯಶಾಸ್ತ್ರಜ್ಞರು, ಆಡಳಿತಗಾರರು ಮತ್ತಿತರ ಪುಸ್ತಕ ಪ್ರೇಮಿಗಳ ಹಾಗೂ ಪುಸ್ತಕ ಸಂಗ್ರಹಕಾರರ ಗ್ರಂಥಭಂಡಾರಗಳಿವೆ. ಆದರೆ ಅವುಗಳಲ್ಲೆಲ್ಲ ಏನಿದೆ ಎಂಬುದೇ ನಮಗೆ ಗೊತ್ತಿಲ್ಲ. ಅಂತಹ ಖಾಸಗಿ ಸಂಗ್ರಹಗಳಲ್ಲಿ ಅತಿ ಮುಖ್ಯವಾದವು ಬೃಹತ್ ಗ್ರಂಥಾಲಯಗಳ ಮುಖ್ಯಭಾಗವಾಗಿಬಿಟ್ಟಿರಬಹುದು : ಉದಾಹರಣೆಗೆ ಈಗ ನ್ಯಾಷನಲ್ ಲೈಬ್ರರಿಗೆ ಭೂಷಣವಾಗಿರುವ ಅಶುತೋಷ್ ಮುಖರ್ಜಿ ಸಂಗ್ರಹ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ನೆಲೆಗೊಂಡಿರುವ ಮೋತಿಲಾಲ್ ನೆಹರು ಸಂಗ್ರಹ, ಮರಾಠವಾಡ ವಿಶ್ವವಿದಾಲಯ ಗ್ರಂಥಾಲಯ ಲೈಬ್ರರಿ ಕೊಂಡುಕೊಂಡಿರುವ ರಾಜ ಶ್ಯಾಂ ಬಹಾದೂರ್ ಸಂಗ್ರಹ ಮೊದಲಾದವು.

III ಸದ್ಯದ ಗ್ರಂಥಸಂಪತ್ತನ್ನು ಉಪಯೋಗಿಸಿಕೊಳ್ಳಲು ಇರುವ ತೊಂದರೆಗಳು

ನಮ್ಮಲ್ಲಿ ಗ್ರಂಥಶೇಖರಣೆ ಸಾಕಷ್ಟಿಲ್ಲ, ಅದು ಅಸಮಗ್ರ ಎಂದು ಹೇಳಲು ಮೇಲೆ ಪ್ರಯತ್ನಿಸಲಾಗಿದೆ. ಆದರೆ ಈ ಗ್ರಂಥಸಂಪತ್ತನ್ನು ಕೂಡ ಪೂರ್ಣವಾಗಿ ಉಪಯೋಗಿಸುತ್ತಿಲ್ಲ. ಇವುಗಳ ಪೂರ್ಣಪ್ರಯೋಜನ ಪಡೆಯುವುದರಲ್ಲಿ ಎದುರಾಗುವ ಅಡಚಣೆಗಳೆಂದರೆ :

(೧) ವಿವಿಧ ಗ್ರಂಥಾಲಯಗಳ ನಡುವೆ ಸಮಾಚಾರ ಸಂಪರ್ಕದ ಅಭಾವ : ಗ್ರಂಥಾಲಯಗಳು ತಮ್ಮ ಹಿಂದಿನ ಶೇಖರಣೆಗಳಾವುವು ಎಂಬುದನ್ನು ತಿಳಿಸುವುದಿರಲಿ, ಪ್ರಕೃತ ಸೇರ್ಪಡೆಗಳಾವುವು ಎಂಬುದನ್ನೂ ತಿಳಿಸುತ್ತ ಇಲ್ಲ. ಎಲ್ಲ ಗ್ರಂಥಾಲಯಗಳೂ ತಮ್ಮ ಸೇರ್ಪಡೆಗಳ ಪಟ್ಟಿಯನ್ನು ಪ್ರಕಟಿಸಿ ತಮ್ಮತಮ್ಮಲ್ಲೇ ವಿನಿಮಯ ಮಾಡಿಕೊಳ್ಳುತ್ತಿಲ್ಲ. ಅಂತಹ ಪಟ್ಟಿಗಳನ್ನು ವಿನಿಮಯ ಮಾಡುವುದರಿಂದ ಈಗಿರುವ ಶೇಖರಣೆಗಳನ್ನು ಬಳಸಲು ಬಹುಮಟ್ಟಿಗೆ ಸಹಾಯವಾಗುತ್ತದೆ.

(೨) ಸಂಯೋಜಿತ ಪಟ್ಟಿಗಳ (union lists) ಅಭಾವ : ಗ್ರಂಥಗಳ ಅನುಕ್ರಮ

ಟ್ಟಿಕೆಗಳೇ (serials) ಆಗಲಿ, ಕನಿಷ್ಠಪಕ್ಷ ಅಪರೂಪವಾದ ಪುಸ್ತಕಗಳ ಪಟ್ಟಿಗಳೇ ಆಗಲಿ ಲ್ಲದಿರುವುದರಿಂದ ಸುತ್ತಮುತ್ತಲ ಗ್ರಂಥಾಲಯಗಳಲ್ಲಿ ಏನಿದೆ ಎಂಬುದು ಸ್ವತಃ ಹೋಗಿ ಅಲ್ಲಿರುವ ಂಗ್ರಹಗಳನ್ನು ಪರೀಕ್ಷಿಸಿದ ಹೊರತು ತಿಳಿಯುವುದಿಲ್ಲ. ಈ ಸಾಧನಗಳ ಅಭಾವದಿಂದಾಗಿ ಅಕ್ಕ ಕ್ಕದಲ್ಲೇ ಇರುವ, ಉದಾಹರಣೆಗೆ ದಕ್ಷಿಣ ಭಾರತದ, ಗ್ರಂಥಾಲಯವೊಂದು ತನಗೆ ಬೇಕಾದ ಯಾವುದೇ ವಸ್ತುವನ್ನು ಎರವಲಾಗಿ ಪಡೆಯಲು ದೂರದಲ್ಲಿ, ಉದಾಹರಣೆಗೆ ಶ್ರೀನಗರದಲ್ಲೋ ಲ್ಕತ್ತದಲ್ಲೋ ಇರುವ ಗ್ರಂಥಾಲಯಕ್ಕೆ ಬರೆಯಬೇಕಾಗುತ್ತದೆ. ಈ ಅಡಚಣೆಯನ್ನು ಸಾಧ್ಯ ಾದಷ್ಟು ಬೇಗ ನಿವಾರಿಸಬೇಕು. ವೈಜ್ಞಾನಿಕ ವಿಷಯಗಳನ್ನು ಕುರಿತು ಅನುಕ್ರಮ ಪಟ್ಟಿಗಳ ಂಯೋಜಿತ ಕ್ಯಾಟಲಾಗುಗಳನ್ನು ರಚಿಸಲು ಇನ್ಸ್‌ಡಾಕ್ (INSDOC) ಸಂಸ್ಥೆಯೂ ಸಮಾಜ ಜ್ಞಾನವನ್ನು ಕುರಿತ ನಿಯತಕಾಲಿಕಗಳ ಅನುಕ್ರಮಪಟ್ಟಿಕೆಗಳ ಸಂಯೋಜಿತ ಕ್ಯಾಟಲಾಗು ಗಳನ್ನು ರಚಿಸಲು ಐ. ಸಿ. ಎಸ್. ಎಸ್. ಆರ್. (I.C.S S.R) ಸಂಸ್ಥೆ ಮೊದಲಾದವೂ ಪ್ರಶಂಸಾರ್ಹವಾದ ಪ್ರಯತ್ನಗಳನ್ನು ಮಾಡುತ್ತಿವೆ. ಆದರೆ ಈ ಪ್ರಯತ್ನಗಳೆಲ್ಲ ಮಂದಗತಿಯಲ್ಲಿವೆ. ಇವುಗಳನ್ನು ಬಲಪಡಿಸಿ ತ್ವರೆಗೊಳಿಸುವುದು ಅತ್ಯವಶ್ಯಕವಾದ ಕಾರ್ಯ. ಮಾನವಿಕಗಳ ಗ್ರಂಥಾವಳಿಗಳು ಜ್ಞಾನ ಪ್ರಪಂಚದಲ್ಲಿ ಈಗ ನಿಜಕ್ಕೂ ಮಲಮಗಳಂತೆ ಉಪೇಕ್ಷಿತವಾಗಿವೆ. ಅವುಗಳ ಗ್ರಂಥಾವಳಿಗಳನ್ನು ಒಳಗೊಳ್ಳುವ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕಾಗಿದೆ.

ಪ್ರಾತಿನಿಧಿಕ ಗ್ರಂಥಾಲಯಗಳಲ್ಲಿ (representative libraries) ಮುಖ್ಯ ವಾದ ಪುಸ್ತಕಗಳ ಸಂಯೋಜಿತ ಕ್ಯಾಟಲಾಗಿನ ಅಭಾವ ಒಂದು ದೊಡ್ಡ ತೊಂದರೆಯಾಗಿದೆ. 1960ರ ಆರಂಭದಲ್ಲೇ ವಿಶ್ವವಿದ್ಯಾಲಯ ಅನುದಾನ ಆಯೋಗ ವಲಯಗಳ ಆಧಾರದ ಮೇಲೆ ಪುಸ್ತಕಗಳ ಸಂಯೋಜಿತ ಪಟ್ಟಿಯನ್ನು ರಚಿಸುವ ಯೋಜನೆಯನ್ನು ಆರಂಭಿಸಿತು. ಪೂನಾ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ಪಶ್ಚಿಮವಲಯದ ಕೇಂದ್ರವೆಂದು ಸೂಚಿಸ ಲಾಯಿತು. ಆದರೆ ಈ ಯೋಜನೆಯನ್ನು ಎಷ್ಟು ಬೇಗ ಆರಂಭಿಸಲಾಯಿತೋ ಅಷ್ಟೇ ಬೇಗ ಇದನ್ನು ರದ್ದುಪಡಿಸಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ಕ್ಯಾಟ ಲಾಗೀಕರಣ ವಿಧಾನ, ವರ್ಗೀಕರಣ ಯೋಜನೆಗಳೇ ಮೊದಲಾದವುಗಳಲ್ಲಿ ಏಕರೂಪತೆ ಇಲ್ಲ ದಿರುವುದು–ಇವೇ ಮೊದಲಾದ ತೀವ್ರವಾದ ಕಷ್ಟಗಳಿರಬಹುದು. ಎಲ್ಲ ಮುಖ್ಯ ಪುಸ್ತಕಗಳ ಸಂಯೋಜಿತ ಪಟ್ಟಿಯನ್ನು ತಯಾರಿಸುವುದೇನೋ ಉನ್ನತಮಟ್ಟದ ಕೆಲಸ ; ಅದರೆ ಅಪ ರೂಪದ ಪುಸ್ತಕಗಳ ಸಂಯೋಜಿತ ಕ್ಯಾಟಲಾಗಿನ ತಯಾರಿಕೆಯನ್ನಾದರೂ ಸಾಧಾರಣಮಟ್ಟದಲ್ಲಿ ಆರಂಭಿಸಬಹುದು.

(೩) ಗ್ರಂಥಾಲಯಗಳ ನಡುವಣ ಸಹಕಾರವನ್ನು ಉತ್ತಮಗೊಳಿಸಲು ಸರ್ಕಾರದ ಬೆಂಬಲದ ಕೊರತೆ : ಇಚೀಚಿನ ವರೆಗೂ ಸೋದರ ಗ್ರಂಥಾಲಯಗಳು ಪುಸ್ತಕಗಳನ್ನು ಎರವ ಲಾಗಿ ಕೇಳಿದಾಗ, ಅವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ನಷ್ಟಭರ್ತಿ ಪತ್ರಗಳನ್ನು (Indemnity bonds) ಕೊಡಬೇಕೆಂದು ಕೇಳುವ ಗ್ರಂಥಾಲಯಗಳಿದ್ದುವು. ಅಂತಹ ನಿರ್ಬಂಧಗಳು ಈಗಲೂ ಒಂದಲ್ಲ ಒಂದು ರೂಪದಲ್ಲಿವೆ. ಅಂತರ–ಗ್ರಂಥಾಲಯ–ಎರವಲನ್ನು (Inter-Library loan) ಪ್ರೋತ್ಸಾಹಿಸಲು IASLIC ಸಂಸ್ಥೆ ತೀವ್ರ ಪ್ರಯತ್ನ ಗಳನ್ನು ನಡೆಸುತ್ತಿದೆ, ಮೇಲೆ ಹೇಳಿದ ನಿರ್ಬಂಧಗಳಿಂದಾಗಿ ಈ ಕೆಲಸ ಹಿಂದೆ ಬಿದ್ದಿದೆ.

(೪) ವಿಶೇಷ ಸಂಗ್ರಹಗಳು (special collections) ಹಾಗೂ ಆಗಾರಕೇಂದ್ರಗಳ (Depository Centres) ಬಗೆಗೆ ತಿಳಿವಳಿಕೆ ಇಲ್ಲದಿರುವುದು : ನಮ್ಮ ದೇಶದಲ್ಲಿ ವಿಶ್ವಸಂಸ್ಥೆ ಹಾಗೂ ವಿದೇಶೀ ಸರ್ಕಾರಗಳು ತಮ್ಮ ಪ್ರಕಟಣೆಗಳನ್ನು ಶೇಖರಿಸಲು ಕೆಲವು ನಿರ್ದಿಷ್ಟ ಗ್ರಂಥಾಲಯಗಳನ್ನು ತಮ್ಮ ಆಗಾರಕೇಂದ್ರಗಳಾಗಿ ಗೊತ್ತುಮಾಡಿವೆ. ಉದಾಹರಣೆಗೆ ವಿಶ್ವಸಂಸ್ಥೆಯ ಪ್ರಕಟಣೆಗಳಿಗೆ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ಆಗಾರಕೇಂದ್ರವೆಂದು ಕರೆಯಲಾಗಿದೆ. ಪೂನಾದ ಗೋಖಲೆ ಇನ್‌ಸ್ಟಿಟ್ಯೂಟ್ ಲೈಬ್ರರಿ, ಕಲ್ಕತ್ತದ ನ್ಯಾಷನಲ್ ಲೈಬ್ರರಿ ಮೊದಲಾದವುಗಳನ್ನು ಅಂಥವೇ ಇತರ ವಿದೇಶೀ ಪ್ರಕಟಣೆಗಳ ಆಗಾರಗ್ರಂಥಾಲಯಗಳೆಂದು ಕರೆಯಲಾಗಿದೆ. ಅಂತಹ ಮಾಹಿತಿಯನ್ನು ದೇಶದ ಇತರ ಮುಖ್ಯ ಗ್ರಂಥಾಲಯಗಳಿಗೆ ತಿಳಿಯಪಡಿಸುವುದು ಅವಶ್ಯವಾದುದು.

(೫) ದುಬಾರಿ ಅಂಚೆದರಗಳು : ಹಾಲಿ ಗ್ರಂಥಸಂಪತ್ತಿನ ಪೂರ್ಣಪ್ರಯೋಜನ ಪಡೆಯಲು ದುಬಾರಿ ಅಂಚೆ ದರಗಳದು ಇನ್ನೊಂದು ದೊಡ್ಡ ಅಡ್ಡಿಯಾಗಿದೆ. ಅಂತರ-ಗ್ರಂಥಾಲಯ-ಎರವಲುಗಳ ಮಟ್ಟಿಗಾದರೂ ಅಂಚೆದರಗಳನ್ನು ಇಳಿಸಬೇಕೆಂದು ವಿಶ್ವವಿದ್ಯಾಲಯ ಅನುದಾನ ಆಯೋಗ ಮತ್ತು ಭಾರತ ಸರ್ಕಾರಗಳಿಗೆ ಸೂಚನೆ ನೀಡಲಾಗಿದೆ. ಆಗಿನ ಯು.ಜಿ.ಸಿ ಅಧ್ಯಕ್ಷರಾಗಿದ್ದ ಡಾ। ಸಿ.ಡಿ. ದೇಶಮುಖ್ ಅವರು ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ಆಶಿಸಿದ್ದರು. ಆದರೆ ಆಮೇಲೆ ಅವರು ತಮ್ಮ ಹುದ್ದೆಯನ್ನು ಬಿಟ್ಟದ್ದರಿಂದಾಗಿ ಆ ಯೋಜನೆ ಅಲ್ಲಿಗೇ ನಿಂತುಹೋಯಿತು. ಈಗಲೂ ದುಬಾರಿ ಅಂಚೆದರಗಳಿಂದಾಗಿ ವಿದ್ವಾಂಸರು ತಮ್ಮತಮ್ಮ ಪಟ್ಟಣ ಮತ್ತು ನಗರಗಳಲ್ಲಿ ಅಲ್ಲದೆ ಬೇರೆಡೆಯ ಗ್ರಂಥಾಲಯಗಳಿಂದ ಪುಸ್ತಕಗಳನ್ನು ಎರವಲು ಪಡೆಯಲು ಹೆದರುತ್ತಾರೆ.

(೬) ಅಂತರ ಗ್ರಂಥಾಲಯ ಎರವಲಿನ ಆಧಾರದ ಮೇಲೆ ಒಂದು ಗ್ರಂಥಾಲಯದಿಂದ ಇನ್ನೊಂದಕ್ಕೆ ತಲುಪುವುದು, ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸೇರುವುದು, ಪ್ರಕಾಶಕರಿಂದ ಪುಸ್ತಕವ್ಯಾಪಾರಿಗಳಿಗೂ ಪುಸ್ತಕವ್ಯಾಪಾರಿಗಳಿಂದ ಆ ಪುಸ್ತಕಗಳು ಗ್ರಂಥಾಲಯಗಳಿಗೂ ಸೇರುವುದು ಇವುಗಳಲ್ಲಿ ಉಂಟಾಗುವ ನಿಧಾನ ನಮ್ಮ ದೇಶದಲ್ಲಿ ಪುಸ್ತಕಗಳ ಬಳಕೆಯನ್ನು ಬಹುಮಟ್ಟಿಗೆ ಮಂದಗೊಳಿಸಿವೆ. ವಾಯುಸಾರಿಗೆ, ರಸ್ತೆಸಾರಿಗೆ ಮತ್ತು ಜಲಸಾರಿಗೆ ಸಂಸ್ಥೆಗಳು ಪುಸ್ತಕಗಳ ಸಾಗಣೆಗೆ ಆದ್ಯತೆ ಕೊಡಬೇಕು. ವಸ್ತುಸಾಗಣೆ ಅಧಿಕಾರಿಗಳು ಪುಸ್ತಕದ ಥಾಂಗಿಗಳಿಗೆ ಆದ್ಯತೆ ನೀಡಬೇಕು. ಅಂಚೆ ಅಧಿಕಾರಿಗಳೂ ಪುಸ್ತಕಗಳ ತ್ವರಿತ ಬಟವಾಡೆಗೆ ಗಮನ ಕೊಡಬೇಕು. ತುರ್ತಾಗಿ ಬೇಕಾದ ಪುಸ್ತಕಗಳನ್ನು ಶೀಘ್ರವಾಗಿ ಸಾಗಿಸುವ ವ್ಯವಸ್ಥೆ ಮಾಡಿದರೆ ಮಾತ್ರ ಪುಸ್ತಕಗಳನ್ನು ಬೇಡಿದ ಉದ್ದೇಶ ಸಾರ್ಥಕವಾಗುತ್ತದೆ. ಪುಸ್ತಕಗಳ ಆವಶ್ಯಕತೆ ಇರುವ ಸಂಶೋಧಕರಿಗೆ ವಿದೇಶಗಳಲ್ಲಿ ಪುಸ್ತಕಗಳನ್ನು ಬಹುಬೇಗ ವಿಮಾನದಲ್ಲಿ ಸಾಗಿಸಿ ತಲುಪಿಸುತ್ತಾರೆಂದು ತಿಳಿಯಲಾಗಿದೆ. ಗ್ರಂಥಾಲಯಗಳ ನಡುವೆ ಅಂತಹ ಕ್ಷಿಪ್ರ ಸಂಚಾರ ಇದ್ದರೆ ಮಾತ್ರ ಶ್ರೇಷ್ಠ ಭಂಡಾರಗಳನ್ನು, ವಿಶಿಷ್ಟ ಗ್ರಂಥಾಲಯಗಳನ್ನು, ಕಟ್ಟುವ ಸಾಧ್ಯತೆ ನಿಜವಾಗಿಯೂ ಇದೆ. ಅಂತಹ ಕ್ಷಿಪ್ರ ಸಂಚಾರ ಅಗತ್ಯವಾಗಿರುವುದಕ್ಕೆ ಇನ್ನೂ ಒಂದು ಕಾರಣ ಇದೆ. ಪ್ರತಿಭಾವಂತರಿಗೆ, ಜ್ಞಾನತೃಷೆ ಉಳ್ಳವರಿಗೆ ಭಾವನೆಗಳು ಮಿಂಚಿನಂತೆ ಹೊಳೆಯುತ್ತವೆ. ತತ್‌ಕ್ಷಣವೇ ಅವರಿಗೆ ಬೇಕಾದ ಪುಸ್ತಕ ಸಾಮಗ್ರಿ ಒದಗಿಸಿದರೆ ಆ ಕ್ಷಣಿಕ ಬೆಳಕು ಜ್ಞಾನಧಾರೆಗಳಾಗಿ ಹರಿಯಲು ಸಾಧ್ಯ.

(೭) ನಕಲು ಯಂತ್ರಗಳ (reprographic equipment) ಕೊರತೆ : ಕ್ಸೆರಾಕ್ಸ್ ನಕಲು ಯಂತ್ರಗಳನ್ನು ಕೊಳ್ಳಲು ಸಹಾಯಮಾಡಿದರೆ ಹಾಲಿ ಗ್ರಂಥಸಂಪತ್ತಿನ ಉಪಯುಕ್ತತೆಯನ್ನು ಸುಧಾರಿಸಬಹುದು. ಅದೃಷ್ಟವಶಾತ್ ನಕಲು ಯಂತ್ರಗಳ ತಯಾರಿಕೆಯಲ್ಲಿ ಸ್ವದೇಶೀ ಪ್ರಯತ್ನಗಳು ಯಶಸ್ವಿಯಾಗಿವೆ. ಈಗ ಕ್ಸೆರಾಕ್ಸ್ ನಕಲು ಯಂತ್ರಗಳು 20,000ರೂ.ಗಳಿಂದ 30,000ರೂ.ಗಳ ಶ್ರೇಣಿಯಲ್ಲಿ ದೊರಕುತ್ತವೆ.

(೮) ಟೆಲೆಕ್ಸ್‌ನ (telex) ಕೊರತೆ : ದೇಶದ ಮುಖ್ಯ ಗ್ರಂಥಾಲಯಗಳ ನಡುವೆ ಟೆಲೆಕ್ಸ್ ಸಂಪರ್ಕ ಕಲ್ಪಿಸಬೇಕು. ನ್ಯಾಷನಲ್ ಲೈಬ್ರರಿ 1969ರ ಸುಮಾರಿನಲ್ಲಿ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಟೆಲೆಕ್ಸ್ ಉಪಕರಣಗಳನ್ನು ಸ್ಥಾಪಿಸಬೇಕೆಂದು ಪ್ರೇರಿಸುವ ದಿಟ್ಟ ಪ್ರಯತ್ನ ಮಾಡಿತು. ಆದರೆ ಈ ವಿಚಾರವನ್ನೂ ಕೈಬಿಡಲಾಗಿದೆ.

(೯) ನಮ್ಮ ಕೆಲವು ವಿದ್ಯಾಸಂಸ್ಥೆಗಳ ಗ್ರಂಥಾಲಯಗಳ ಆಡಳಿತವನ್ನು ಗೃಹಕೃತ್ಯದ ಮಟ್ಟದಲ್ಲಿ ನಡೆಸಲಾಗುತ್ತಿರುವುದು ಇನ್ನೊಂದು ನ್ಯೂನತೆ. ಕೆಲವು ಸಂಶೋಧನ ಗ್ರಂಥಾಲಯಗಳ ಆಡಳಿತವೂ ಇದೇ ಕತೆಯೇ ಆಗಿದೆ. ಇಂಥ ಸ್ಥಿತಿಯನ್ನು ಪ್ರಾರಂಭದಲ್ಲೇ ಬದಲಾಯಿಸುವುದು ಅತ್ಯಾವಶ್ಯಕ. ಗ್ರಂಥಾಲಯಗಳನ್ನು ಜನಸಮುದಾಯದ ಪ್ರಯೋಜನಕ್ಕಾಗಿ ಸ್ಥಾಪಿಸುತ್ತಾರೆ. ಆ ಸಮುದಾಯದ ಮೇಲೆ ಅದು ಪರಿಣಾಮ ಬೀರಬೇಕಾಗಿದ್ದ ಪಕ್ಷದಲ್ಲಿ ಅವುಗಳ ಆಡಳಿತವನ್ನು ಶೈಕ್ಷಣಿಕ ಹಾಗೂ ಸಂಶೋಧನ ಮಟ್ಟದಲ್ಲಿ ನಡೆಸಬೇಕು.

(೧೦) ಗ್ರಂಥಾಲಯಗಳಲ್ಲಿ ಬಲ್ಲವರೂ ದಕ್ಷರೂ ಆದಂತಹ ಸಿಬ್ಬಂದಿಗಳ ಕೊರತೆ ಹಾಲಿ ಗ್ರಂಥಾಲಯ ಸಂಪತ್ತಿನ ಬಳಕೆ ಕಡಮೆಯಾಗಲು ಕಾರಣವಾಗಿದೆ. ಯೋಗ್ಯರೂ ಬಲ್ಲವರೂ ಆದವರನ್ನು ನೇಮಿಸಿಕೊಂಡು ಗ್ರಂಥಾಲಯಗಳಲ್ಲಿರುವ ಪರಾಮರ್ಶನ ಗ್ರಂಥಗಳು ಹಾಗೂ ಇತರ ಸಾಮಗ್ರಿಗಳ ಬಳಕೆಯನ್ನು ಹೆಚ್ಚಿಸಬಹುದು. ಅಮೆರಿಕದ ಮಹಾಕವಿಯೂ ಲೈಬ್ರರಿ ಆಫ್ ಕಾಂಗ್ರೆಸ್‌ನ ಮಾಜಿ ಗ್ರಂಥಪಾಲನೂ ಆದ ಆರ್ಚಿಬಾಲ್ಡ್ ಮ್ಯಾಕ್ಲೀಷ್, ಪುಸ್ತಕದಂಗಡಿಗಳಲ್ಲಿ ಬಲ್ಲ ಸಹಾಯಕರಿಲ್ಲದಿರುವುದರಿಂದ ಪುಸ್ತಕ ಮಾರಾಟ ಕಡಮೆಯಾಗಿದೆಯೆಂದು ಒಂದು ಕಡೆ ಹೇಳಿದ್ದಾನೆ. ಹಾಗೆಯೇ, ಸಾರ್ವಜನಿಕ ಸೇವಾಮನೋಭಾವವಿರುವವರ, ಪುಸ್ತಕಗಳು ಮತ್ತು ಗ್ರಂಥಾಲಯಗಳ ವಿಚಾರವಾಗಿ ಆಸ್ಥೆಯಿಂದ ಮಾತನಾಡುವವರ ಅಭಾವವೂ ಪ್ರಕೃತದಲ್ಲಿ ಪುಸ್ತಕಗಳ ಬಳಕೆ ಕಡಮೆಯಾಗಿರುವುದಕ್ಕೆ ಒಂದು ಕಾರಣ.

IV ಅಡಚಣೆಗಳ ನಿವಾರಣೋಪಾಯಗಳು

ದೇಶದ ಎಲ್ಲ ಗ್ರಂಥಾಲಯಗಳ ಪ್ರಕೃತ ಗ್ರಂಥ ಸಂಪತ್ತಿನ ಬಳಕೆಯನ್ನು ಹೆಚ್ಚಿಸಲು ಕೆಳಗೆ ಕೊಟ್ಟಿರುವ ಯೋಜನೆಯನ್ನು ಸೂಚಿಸಲಾಗಿದೆ :

(i) ಗ್ರಂಥಸೂಚಿಗೆ ಸಂಬಂಧಪಟ್ಟ ವಿವರಗಳನ್ನು ಕೂಡಲೇ ಶಿಷ್ಟರೂಪಕ್ಕೆ (Standardize) ತರುವ ಪ್ರಯತ್ನಮಾಡಬೇಕು. ಇದರಿಂದ ಪುಸ್ತಕ ಮೊದಲಾದವುಗಳ ಸಂಯೋಜಿತ ಕ್ಯಾಟಲಾಗಿನ ಕೆಲಸ ತೆಗೆದುಕೊಂಡಾಗಲೆಲ್ಲ ಅವುಗಳ ರಚನಾಕಾರ್ಯ ಸುಲಭವಾಗುತ್ತದೆ. ಈ ದಿಸೆಯಲ್ಲಿ ಮೊದಲ ಹೆಜ್ಜೆಯಾಗಿ ಐ. ಎಸ್. ಬಿ. ಘಟಕ ಕ್ಯಾಟಲಾಗು ಪಟ್ಟಿಗಳನ್ನು ಅಚ್ಚುಮಾಡಿ ಒದಗಿಸಬೇಕು.

(ii) ಇನ್ಸ್‌ಡಾಕ್, ಐ ಸಿ ಎಸ್ ಎಸ್ ಆರ್ ಮೊದಲಾದ ಸಂಸ್ಥೆಗಳ ನಿಯತಕಾಲಿಕಗಳ ಸಂಯೋಜಿತ ಕ್ಯಾಟಲಾಗುಗಳ ರಚನೆಯ ಕಾರ್ಯ ಕದನಬಿರುಸಿನಲ್ಲಿ ಮುಗಿಯಬೇಕು.

ಸದ್ಯಕ್ಕೆ, ತಮ್ಮಲ್ಲಿರುವ ನಿಯತಕಾಲಿಕಗಳ ಕ್ಯಾಟಲಾಗುಗಳನ್ನು ಪ್ರಕಟಿಸದ ಮುಖ್ಯ ವಾದ ಗ್ರಂಥಾಲಯಗಳೆಲ್ಲ ಅವುಗಳನ್ನು ಪ್ರಕಟಿಸಿ ಸೋದರ ಗ್ರಂಥಾಲಯಗಳಿಗೆ ಅವುಗಳನ್ನು ವಿನಿಮಯದ ಆಧಾರದ ಮೇಲೆ ಕಳುಹಿಸಕೊಡಬೇಕೆಂದು ಒತ್ತಾಯಿಸಬೇಕು.

(iii) ದೇಶದ ಪ್ರಾತಿನಿಧಿಕ ಗ್ರಂಥಾಲಯಗಳಲ್ಲಿರುವಂತಹ ಮುಖ್ಯವಾದ ಹಾಗೂ ಅಪರೂಪವಾದ ಪುಸ್ತಕಗಳ ಸಂಯೋಜಿತ ಕ್ಯಾಟಲಾಗನ್ನು ಕೂಡಲೇ ರಚಿಸುವ ಕೆಲಸ ಆರಂಭಿಸ ಬೇಕು ; ಮತ್ತು ಅದನ್ನು ಒಂದು ಕೇಂದ್ರ ಸ್ಥಳದಲ್ಲಿ, ಉದಾಹರಣೆಗೆ ನ್ಯಾಷನಲ್ ಲೈಬ್ರರಿ ಯಲ್ಲಿ, ಇಡಬೇಕು. ಈ ದಿಸೆಯಲ್ಲಿ ಮೊದಲ ಹೆಜ್ಜೆಯಾಗಿ, ಗ್ರಂಥಾಲಯಗಳಲ್ಲಿರುವ ಅಪರೂಪ ವಾದ ಹಾಗೂ ಮುಖ್ಯವಾದ ಪುಸ್ತಕಗಳ ಕ್ಯಾಟಲಾಗುಗಳನ್ನು ರಚಿಸಿ ಅವುಗಳನ್ನು ಪುಸ್ತಕಗಳ ರೂಪದಲ್ಲಿ ಪ್ರಕಟಿಸಬೇಕೆಂದು ಆಯಾ ಗ್ರಂಥಪಾಲರುಗಳನ್ನು ಕೇಳಿಕೊಳ್ಳಬೇಕು.

(iv) 'ಇಂಡಿಯನ್ ಲೈಬ್ರರಿ ಅಸೋಸಿಯೇಷನ್' ಸಂಸ್ಥೆಯೋ ಮತ್ತಾವುದಾದರೂ ಸಂಸ್ಥೆಯೋ ದೇಶದ ಮುಖ್ಯ ಗ್ರಂಥಾಲಯಗಳಲ್ಲಿನ ಪುಸ್ತಕಸಂಗ್ರಹಗಳ ವಿವರಗಳನ್ನು ತಿಳಿಸುವು ದಕ್ಕೇ ವಿೂಸಲಾದ ಒಂದು ನಿಯತಕಾಲಿಕವನ್ನು ತರಬೇಕು. ಈ ಪತ್ರಿಕೆಯಲ್ಲಿ ಪ್ರತಿಯೊಂದು ಗ್ರಂಥಾಲಯದ ವಿಶಿಷ್ಟ ಬಗೆಯ ಪುಸ್ತಕ ಸಂಗ್ರಹಗಳನ್ನು ವಿವರಿಸುವಂತಹ ಲೇಖನಗಳನ್ನು ಪ್ರಕಟಿಸಬೇಕು.

(v) ಕಡಮೆ ಬಳಕೆಯುಳ್ಳ ಎರಡೆರಡು ಪ್ರತಿಗಳಿರುವ ಪುಸ್ತಕಗಳ ಪಟ್ಟಿಗಳನ್ನೂ ಎರಡೆರಡು ಪ್ರತಿಗಳುಳ್ಳ ನಿಯತಕಾಲಿಕಗಳ ಪಟ್ಟಿಗಳನ್ನೂ ತಮ್ಮ ಶೇಖರಣೆಯಲ್ಲಿ ತಪ್ಪಿಹೋಗಿ ರುವ ಸಂಚಿಕೆಗಳ ಪಟ್ಟಿಕೆಗಳನ್ನೂ ತಯಾರಿಸಬೇಕೆಂದು ಗ್ರಂಥಾಲಯಗಳನ್ನು ಬೇಡಿಕೊಳ್ಳಬೇಕು. ಇದರಿಂದ ತಮ್ಮತಮ್ಮಲ್ಲಿರುವ ಸಾಮಗ್ರಿಗಳನ್ನು ವಿನಿಮಯಿಸಿಕೊಳ್ಳಬಹುದು.

(vi) ಗ್ರಂಥಪಾಲರು ಇತರ ಗ್ರಂಥಾಲಯಗಳೊಡನೆ ಸಹಕಾರ ಯೋಜನೆಗಳನ್ನು ಹಾಕಿಕೊಳ್ಳಬೇಕು. ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿ ಗ್ರಂಥಪಾಲರು ಅಂತರ ಗ್ರಂಥಾಲಯ ಎರವಲು ಪದ್ಧತಿಯನ್ನು ಇನ್ನೂ ತೀವ್ರವಾಗಿ ಆರಂಭಿಸಬೇಕು.

(vii) ಕನಿಷ್ಠ ಪಕ್ಷ ಅಂತರಗ್ರಂಥಾಲಯ ಎರವಲಿನ ಬಗ್ಗೆಯಾದರೂ ಅಂಚೆ ದರಗಳನ್ನು ಗಣನೀಯವಾಗಿ ಇಳಿಸಲು ಒತ್ತಾಯ ಮಾಡಬೇಕು.

(viii) ಗ್ರಂಥಾಲಯಗಳೆಲ್ಲ ಕ್ಸೆರಾಕ್ಸ್ ತೆಗೆಯುವುದು, ಫೋಟೊ ನಕಲು ಮಾಡು ವುದು ಮತ್ತು ಸೂಕ್ಷ್ಮಚಿತ್ರಣಯಂತ್ರಗಳಂತಹ (microfilming machine) ನಕಲು ಯಂತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡಬೇಕು.

(xi) ಅಪರೂಪವಾದ ಭಾರತೀಯ ಪುಸ್ತಕಗಳಿಗಾಗಿ, ಅವುಗಳು ದೊರಕುವ ಸ್ಥಳ ಗಳಾದ ಹಳೆಯ ಪಾಠಶಾಲೆಗಳು, ಹಳೆಯ ಚಂದಾದಾರಿಕೆ ಗ್ರಂಥಾಲಯಗಳು, ಹಳೆಯ ವಿಶ್ವ ವಿದ್ಯಾನಿಲಯ ಹಾಗೂ ಇತರ ವಿದ್ಯಾಸಂಸ್ಥೆಗೆ ಸಂಬಂಧಿಸಿದ ಗ್ರಂಥಾಲಯಗಳು, ಹಳೆಯ ಪುಸ್ತಕದಂಗಡಿಗಳೇ ಮೊದಲಾದುವುಗಳನ್ನು ಪರೀಕ್ಷಿಸಬೇಕು, ಮತ್ತು ಅವುಗಳನ್ನು ಸಂರಕ್ಷಿಸುವ ಪ್ರಯತ್ನ ಮಾಡಬೇಕು.

(x) ದೇಶದ ಪ್ರಮುಖ ಗ್ರಂಥಾಲಯಗಳ ನಡುವೆ ಟೆಲೆಕ್ಸ್ ಸಂಪರ್ಕ ಕಲ್ಪಿಸಬೇಕು

(xi) ಕೇಂದ್ರ ಹಾಗೂ ರಾಜ್ಯಸರ್ಕಾರಗಳು ತಮ್ಮ ಪ್ರಕಟಣೆಗಳಿಗಾಗಿ ಕೆಲವು ಗ್ರಂಥಾಲಯಗಳನ್ನು ಆಗಾರ ಕೇಂದ್ರಗಳಾಗಿ ಗೊತ್ತುಪಡಿಸಬೇಕೆಂದು ಅವುಗಳನ್ನು ಒತ್ತಾಯ ಪಡಿಸಬೇಕು.

(xii) ಹಸ್ತಪ್ರತಿಗಳ ಗ್ರಂಥಾಲಯಗಳು : ಖಾಸಗಿ ವ್ಯಕ್ತಿಗಳು ಹಾಗೂ ಧಾರ್ಮಿಕ ಮಠಗಳಲ್ಲಿ ಇರುವ ಹಸ್ತಪ್ರತಿಗಳನ್ನು ಕಾಪಾಡುವ ಒಂದು ಯೋಜನೆಯನ್ನೂ ಈ ಎಲ್ಲ ಹಸ್ತಪ್ರತಿಗಳ ಒಂದು ಕ್ಯಾಟಲಾಗನ್ನೂ ಮಾಡಲು ತತ್‌ಕ್ಷಣ ಆರಂಭಿಸಬೇಕು.

(xiii) ಪ್ರಕೃತ ಗ್ರಂಥಸಂಪತ್ತಿನ ಪೂರ್ಣಪ್ರಯೋಜನ ಪಡೆಯಲು ಎಲ್ಲ ಪಾಠ್ಯ ವಿಷಯಗಳಿಗೆ (disciplines) ಸಂಬಂಧಿಸಿದಂತೆ ಮಾಹಿತಿಗಳನ್ನು ಒದಗಿಸುವ ಪದ್ಧತಿಯನ್ನು ಜಾರಿಗೆ ತರಬೇಕು. ಈ ಸೇವಾಕಾರ್ಯಗಳಲ್ಲಿ ಎಲ್ಲ ಪಾಠ್ಯ ವಿಷಯಗಳಿಗೂ ಸಂಬಂಧಿಸಿದಂತೆ ಗ್ರಂಥಸೂಚಿಗಳು, ಭಾಷಾಂತರಗಳು, ನಕಲುಯಂತ್ರಗಳ ನೆರವು ಸೇರಿರಬೇಕು.

ಈ ದೇಶದಲ್ಲಿ ಸಂಸ್ಥೆಗಳಿಂದಲೂ ವ್ಯಕ್ತಿಗಳಿಂದಲೂ ಪುಸ್ತಕಗಳ ಬಗೆಗೆ ಮಾಹಿತಿ ಒದಗಿಸುವ ಕೆಲವು ಪ್ರಯತ್ನಗಳು ನಡೆದಿವೆ. ಇದು ಸ್ತುತ್ಯರ್ಹವಾದುದು. ಇನ್ಸ್‌ಡಾಕ್ ಮತ್ತು ಐ.ಸಿ.ಎಸ್.ಎಸ್.ಆರ್. ಸಂಸ್ಥೆಗಳ ಸಾಧನೆಗಳು ಈಗಾಗಲೇ ಸುವಿದಿತವಾಗಿವೆ. ಆದರೆ **ಇಂಡೆಕ್ಸ್ ಇಂಡಿಯ, ಇಂಡಿಯನ್ ಪೀರಿಯಾಡಿಕಲ್ ಲಿಟರೇಚರ್, ಪ್ರಾಚಿ ಜ್ಯೋತಿ** (Prachi Jyoti) ಇವೇ ಮೊದಲಾದುವೂ ಸ್ತುತ್ಯರ್ಹವಾದವು. ಪ್ರತ್ಯೇಕವಾದ ಗ್ರಂಥಾಲಯಗಳು ಹಾಗೂ ವಿಶ್ವವಿದ್ಯಾಲಯ ಗ್ರಂಥಾಲಯಗಳು ನಿರ್ದಿಷ್ಟ ವಿಷಯ ಸಮೂಹಗಳನ್ನು ಕುರಿತ ಲೇಖನಗಳ ಸೂಚಿಗಳನ್ನು ತಯಾರಿಸುತ್ತಿವೆ ; ಉದಾಹರಣೆಗೆ ಕರ್ನಾಟಕ ವಿಶ್ವವಿದ್ಯಾಲಯ ಸಮಾಜವಿಜ್ಞಾನಗಳಿಗೆ ಸಂಬಂಧಿಸಿದ ನಿಯತಕಾಲಿಕಗಳ ಸಾಹಿತ್ಯದ ಕೈಪಿಡಿಯನ್ನು ಪ್ರಕಟಿಸುತ್ತಿದೆ ; ಅಂಥದೇ ಒಂದು ಪ್ರಯತ್ನವನ್ನು ಎಸ್.ಎನ್.ಡಿ.ಟಿ ಸ್ತ್ರೀ ವಿಶ್ವವಿದ್ಯಾಲಯವೂ ಆರಂಭಿಸಿದೆ, ಆದರೆ ಇದು ಮಾನವಿಕ ಮೊದಲಾದುವುಗಳಿಗೆ ಮಾತ್ರ ಸೀಮಿತವಾಗಿದೆ. ಭಾರತದಲ್ಲಿ ಹಾಗೆ ಮಾಹಿತಿಗಳನ್ನು ಒದಗಿಸುವ ಸಂಸ್ಥೆಗಳ ಹೆಸರುಗಳನ್ನು ಮುಂದೆ ಕೊಡಲಾಗಿದೆ. ಈ ಪ್ರಯತ್ನಗಳನ್ನೆಲ್ಲ ಏಕೀಕರಿಸಬೇಕು ಮತ್ತು ವೃಥಾ ಪುನರಾವರ್ತನೆಯನ್ನು ತಪ್ಪಿಸಬೇಕು. ಇದರಿಂದ ಸಾರಸ್ವತ ಪ್ರಪಂಚಕ್ಕೆ ತುಂಬ ಸಹಾಯವಾಗುತ್ತದೆ.

(xiv) ಅಂತಿಮವಾಗಿ ಮನುಷ್ಯರೇ ಗ್ರಂಥಾಲಯಗಳ ಉಳಿವಿಗೆ ಇಲ್ಲವೆ ಅಳಿವಿಗೆ ಕಾರಣರಾದ್ದರಿಂದ, ಗ್ರಂಥಪಾಲನ ತರಬೇತಿಗೆ ಸರಿಯಾದ ಜನರನ್ನು ಆರಿಸಿ, ಅಂಥವರನ್ನು ದೇಶದ ಗ್ರಂಥಾಲಯಗಳಿಗೂ ಗ್ರಂಥಾಲಯ ಸಮೂಹಕ್ಕೂ ನೇಮಿಸಬೇಕು.

(xv) ಎಲ್ಲಕ್ಕಿಂತ ಮಿಗಿಲಾಗಿ, ಬೇಡಿದಾಗ ಪ್ರಕೃತ ಪುಸ್ತಕಗಳನ್ನು ದೇಶದ ಯಾವುದೇ ಮೂಲೆಗೂ ತಲುಪಿಸುವಂತಹ ಗ್ರಂಥಾಲಯಗಳ ಒಂದು ವಲಯ ಅತ್ಯಗತ್ಯ.

V ಸಾಕ್ಷರತೆ ಮತ್ತು ಗ್ರಂಥಾಲಯ ಸೇವೆ

ನಮ್ಮಲ್ಲಿ ಬಹುಪಾಲು ಜನ ಅನಕ್ಷರಸ್ಥರಾದ್ದರಿಂದ ನಮ್ಮಲ್ಲಿರುವ ಗ್ರಂಥಸಂಪತ್ತು ಸಾಕು, ಮತ್ತು ಅವುಗಳ ಬಳಕೆಯೂ ತೃಪ್ತಿಕರವಾಗಿದೆ ಅನ್ನುವ ಒಂದು ಸಾಮಾನ್ಯ ಭಾವನೆ

ಇದೆ. ಈ ಭಾವನೆ ನಮ್ಮಲ್ಲಿರುವ ಕುಂದುಕೊರತೆಗಳ ಅರಿವಿಲ್ಲದೆ, ಇದ್ದದ್ದರಲ್ಲೇ ತೃಪ್ತಿಪಟ್ಟು ಕೊಳ್ಳುವ ಮನೋವೃತ್ತಿಯನ್ನು ಸೂಚಿಸುತ್ತದೆ. ಸ್ವಾತಂತ್ರ್ಯೋತ್ತರದ 25 ವರ್ಷಗಳ ಅವಧಿಯಲ್ಲಿ ಸಾಕ್ಷರತೆಯ ಸೇಕಡಾವಾರು ಎರಡರಷ್ಟಾಗಿದೆ: ಸೇಕಡ 30ಕ್ಕೆ ಏರಿದೆ (ನಿಷ್ಕೃಷ್ಟವಾಗಿ ಹೇಳುವುದಾದರೆ 29.5%). ನಮ್ಮ ಸಾಧನೆ ಇಷ್ಟರ ಮಟ್ಟಿಗೆ ಆದರೂ ನಾವು ಇನ್ನೂ ಅನಕ್ಷರತೆಯ ಸಮಸ್ಯೆಯನ್ನು ತೊಡೆದುಹಾಕುವ ಹೋರಾಟದಲ್ಲಿದ್ದೇವೆಂಬ ವಸ್ತುಸ್ಥಿತಿ ಹಾಗೆಯೇ ಉಳಿದಿದೆ.

ಓದುಬರಹಗಳನ್ನು ಸತತವಾಗಿ ಅಭ್ಯಾಸ ಮಾಡುತ್ತಲೇ ಇರಬೇಕು. ಸಂತ ಜಾನ್ ಹೇಳಿದಂತೆ ಅಧ್ಯಾತ್ಮಮಾರ್ಗದಲ್ಲಿ ಹೇಗೋ ಹಾಗೆ ಇಲ್ಲಿಯೂ ನಾವು ಪುರೋಗಾಮಿಗಳಾಗದೆ ಹೋದಲ್ಲಿ ತಿರೋಗಾಮಿಗಳಾಗಬೇಕಾಗುತ್ತದೆ. ಸೇಕಡ 30ರಷ್ಟಿರುವ ಅಕ್ಷರಸ್ಥರ ಪೈಕಿಯೂ ಬಹುಪಾಲು ಜನರಿಗೆ ಓದುಬರಹದ ಅಭ್ಯಾಸ ಇಟ್ಟುಕೊಳ್ಳಲು ಬೇಕಾದ ಸೌಲಭ್ಯಗಳ ಅಭಾವ ದಿಂದಾಗಿ ಆ ಅಭ್ಯಾಸವನ್ನು ಮುಂದುವರಿಸಲು ಕಷ್ಟವಾಗುತ್ತಿದೆ. ನಿರಕ್ಷರತೆ ಮರುಕಳಿಸದಿರು ವಂತೆ ತಡೆಯುವುದಕ್ಕಾಗಿಯೇ ಸಾರ್ವಜನಿಕ ಗ್ರಂಥಾಲಯಗಳಿರುವುದು. ಅಲ್ಪಸ್ವಲ್ಪ ಓದುಬರಹ ಕಲಿತವರಲ್ಲಿ ಕೆಲವರು ಮತ್ತೆ ಅನಕ್ಷರಸ್ಥರಾಗಿಬಿಟ್ಟಿದ್ದಾರೆ. ನವ-ಅಕ್ಷರಸ್ಥರ ಹಾಗೂ ಇತರ ಅಕ್ಷರಸ್ಥರ ಆವಶ್ಯಕತೆಗಳಿಗೆ ಸರಿಹೊಂದುವ ಪುಸ್ತಕಗಳನ್ನು ಪ್ರಕಟಿಸಿ, ಅವು ಸಾಕಷ್ಟು ಪ್ರಮಾಣ ದಲ್ಲಿ ಸಾರ್ವಜನಿಕ ಗ್ರಂಥಾಲಯ ವಲಯದಲ್ಲಿ ದೊರಕುವಂತೆ ಮಾಡಬೇಕು. ಈ ಕೆಲಸ ಕದನ ಬಿರುಸಿನಲ್ಲಿ ಆಗಬೇಕು.

ತಕ್ಕಷ್ಟು ವಿದ್ಯಾವಂತರಾಗಿರುವವರ ಹಾಗೂ ಮನಸ್ಸಿನಲ್ಲಿ ಸಂಶೋಧನ ಪ್ರವೃತ್ತಿ ಈಗ ತಾನೆ ಅಂಕುರಿಸಿರುವವರ ಸಮಸ್ಯೆಯೂ ಗಂಭೀರವಾದುದು. ಅವರಿಗೆ ಪೋಷಣೆ ಮತ್ತು ಸಕಲ ರೀತಿಯ ನೆರವು ಅಗತ್ಯ. ಇದರಿಂದ ಅವರಿಗೆ ಆಯಾ ವಿಷಯದಲ್ಲಿ ಇನ್ನೂ ಹೆಚ್ಚು ಸಂಶೋಧನೆ ಯನ್ನು ನಡೆಸಲು ಹಾಗೂ ಉತ್ತಮ ಮಟ್ಟದ ಸಂಶೋಧನೆ ನಡೆಸಲು ಸಹಾಯವಾಗುತ್ತದೆ. ಅವರ ಮನಸ್ಸು ನಿಜವಾಗಿಯೂ ಮೌಲಿಕ ಚಿಂತನೆಯಲ್ಲಿ ತೊಡಗುತ್ತದೆ. ಪರಿಣಾಮವಾಗಿ ಇಡೀ ಜನಾಂಗ ಸುಸಂಸ್ಕೃತವಾಗುತ್ತದೆ. ಇದಕ್ಕೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ವಿಶಿಷ್ಟ ಬಗೆಯ ಗ್ರಂಥಾಲಯಗಳ ಸ್ಥಾಪನೆ ಮಾತ್ರವಲ್ಲದೆ ಈಗ ಇರುವ ಎಲ್ಲ ಗ್ರಂಥಾಲಯಗಳ ನಡುವೆ ಪರಸ್ಪರ ಸಹಕಾರವೂ ಅತ್ಯಗತ್ಯ. ಅಂತಿಮವಾಗಿ ಒಂದು ರಾಷ್ಟ್ರದ ಹಿರಿಮೆಯು ಎಲ್ಲ ವಿಷಯಗಳ ಮೇಲೆ ಆ ದೇಶದ ಸಂಶೋಧಕರು ಮಾಡುವ ಮೌಲಿಕ ಸಂಶೋಧನೆಯಿಂದ ಪ್ರತಿಬಿಂಬಿತವಾಗು ತ್ತದೆ. ಸಂಪದ್ಭರಿತ ಗ್ರಂಥಾಲಯಗಳು ಹಾಗೂ ಅವುಗಳ ಸಹಕಾರದ ಮೂಲಕ ಮಾತ್ರ ಈ ಸಂಶೋಧಕರಿಗೆ ಅವರ ಶ್ರೇಷ್ಠಕಾರ್ಯದಲ್ಲಿ ನೆರವಾಗಬಹುದು.

ನಮ್ಮ ದೇಶ ವಿದೇಶೀ ವಾಚನ ಸಾಮಗ್ರಿಯನ್ನು ಕೊಳ್ಳಲು ಸುಮಾರು 10 ಕೋಟಿ ರೂ.ಗಳನ್ನು ವಿದೇಶಿ ವಿನಿಮಯದ ರೂಪದಲ್ಲಿ ಖರ್ಚುಮಾಡುತ್ತಿದೆ. ಎಲ್ಲ ಗ್ರಂಥಾಲಯ ಬೇಡಿಕೆಗಳನ್ನೂ ಕ್ರೋಢೀಕರಿಸಿ ಈ ವಿದೇಶೀ ಸಾಮಗ್ರಿ ಸಂಗ್ರಹಣ ಸಮಸ್ಯೆಯನ್ನು ಇನ್ನೂ ಹೆಚ್ಚು ವೈಜ್ಞಾನಿಕವಾಗಿಯೂ ಸಹಕಾರಿತ್ವದಿಂದಲೂ ಎದುರಿಸಿದರೆ ನಾವು ಈ 10 ಕೋಟಿ ರೂ. ಗಳಿಂದ ನಮ್ಮ ಗ್ರಂಥಾಲಯಗಳಿಗೆ ಇನ್ನೂ ಉಪಯುಕ್ತವಾದ ಸಂಗ್ರಹಗಳನ್ನು ಸಂಪಾದಿಸ ಬಹುದು. ಅಂತಹ ಯಾವುದೇ ವ್ಯವಸ್ಥೆಯ ಅಭಾವದಿಂದಾಗಿ ನಮ್ಮ ದೇಶದಲ್ಲಿ ದುಬಾರಿ

ಬೆಲೆಯ ವಾಚನ ಸಾಮಗ್ರಿಗಳನ್ನು ಮತ್ತೆ ಮತ್ತೆ ಎಲ್ಲ ಗ್ರಂಥಾಲಯಗಳಿಗೂ ಕೊಳ್ಳಲಾಗುತ್ತಿದೆ ; ಇದನ್ನು ನಿವಾರಿಸಬಹುದಿತ್ತು. ಪರಿಣಾಮವಾಗಿ ನಮ್ಮಲ್ಲಿರುವ ಸಂಗ್ರಹಗಳ ಗುಣಮಟ್ಟ ಇಳಿದು ಹೋಗಿರುವುದು ಅನಿವಾರ್ಯ.

ಪುಸ್ತಕಗಳೇ ವಿದ್ಯಾವಂತರನ್ನೂ ಸಂಶೋಧಕರನ್ನೂ ಸೃಷ್ಟಿಸುವಂಥವು ಎಂದೂ ಹೇಳಬಹುದು. ಒಳ್ಳೆಯ ಪುಸ್ತಕ ಸಂಗ್ರಹಗಳು—ಚೆನ್ನಾಗಿ ಆಯ್ದ ಪುಸ್ತಕಗಳು, ಪುರಾತನ ಕಾಲದಿಂದ ಈಗಿನವರೆಗೆ ಮಾನವ ಜನಾಂಗಕ್ಕೆ ತಿಳಿದಿರುವಂತಹ ಜ್ಞಾನಲೋಕವನ್ನೆಲ್ಲ ಪ್ರತಿಬಿಂಬಿಸುವಂತಹ ಪುಸ್ತಕಗಳು—ಮಹಾ ವಿದ್ವಾಂಸರ ಹಾಗೂ ಸಂಶೋಧಕರ ಸಮುದಾಯಕ್ಕೇ ಕಾಮಧೇನುವಾಗಬಹುದು. ನಮ್ಮ ದೇಶಕ್ಕೂ ನಮ್ಮ ಸರ್ಕಾರಕ್ಕೂ ಉತ್ತಮ ಪ್ರತಿಭಾವಂತರ ಹಾಗೂ ಉತ್ತಮ ಕಲ್ಪನೆ ಉಳ್ಳವರ ಅಗತ್ಯ ತೀವ್ರವಾಗಿದೆ. ನಮ್ಮಲ್ಲಿ ವ್ಯಾಪಕವೂ ವೈವಿಧ್ಯಮಯವೂ ಆದ ಗ್ರಂಥಸಂಪತ್ತು ಹಾಗೂ ಬೋಧನ ಮತ್ತು ಸಂಶೋಧನೆಗಳಿಗೆ ಅನುರೂಪವಾದ ಗ್ರಂಥಾಲಯ ಸೇವೆ ಇದ್ದಲ್ಲಿ ಇಂಥವರನ್ನು ಸರಾಗವಾಗಿ ಒದಗಿಸಿಕೊಳ್ಳಬಹುದು.

ಅನುವಾದ : ಬಾ. ನೇ. ಶ್ರೀಧರ್

ಗ್ರಂಥಾಲಯದ ಪ್ರತಿ ಪುಸ್ತಕ ಉಪಯೋಗಕ್ಕಾಗಿದೆ. ಯಾವ ಪುಸ್ತಕವೂ ಅಲಂಕಾರಕ್ಕಾಗಿ ಇಟ್ಟಿದ್ದಲ್ಲ. ಹೆಚ್ಚು ಜನ ಅದರ ಉಪಯೋಗ ಪಡೆಯಬೇಕೆಂಬುದು ಈ ಸೂತ್ರದ ಉದ್ದೇಶ. ಪ್ರಾಚೀನ, ಮಧ್ಯಯುಗೀನ ಕಾಲಗಳಲ್ಲಿ ಗ್ರಂಥಗಳ ಉತ್ಪಾದನೆ ಬೆರಳೆಣಿಸುವಷ್ಟಿತ್ತು. ಅದರ ಸ್ವತ್ತು ಮತ್ತು ಉಪಯೋಗ ಸಮಾಜದ ಕೆಲವೇ ಜನ ಪ್ರತಿಷ್ಠಿತ ವ್ಯಕ್ತಿಗಳಿಗೆ ಸೀಮಿತವಾಗಿತ್ತು. ಇದರಿಂದ ಗ್ರಂಥಗಳನ್ನು ಸರಪಣಿಯಿಂದ ಕಟ್ಟಿಡುತ್ತಿದ್ದದ್ದುಂಟು. ಸಾಮಾನ್ಯನಿಗೆ ಗ್ರಂಥಗಳಲ್ಲಿಯ ಜ್ಞಾನ ಲಭ್ಯವಿರಲಿಲ್ಲ. ಗ್ರಂಥಾಲಯ ಇಡೀ ಮಾನವ ಜನಾಂಗದ ಸ್ವತ್ತು ಎಂಬುದನ್ನು ಪ್ರಥಮಸೂತ್ರ ಸ್ಪಷ್ಟಪಡಿಸುತ್ತದೆ. ಜ್ಞಾನ ಒಬ್ಬರ ಸ್ವತ್ತಲ್ಲ. ಅದು ಮಾನವ ಜನಾಂಗಕ್ಕೆಲ್ಲ. ಸರಿಸಮಾನವಾಗಿ ವಿತರಣೆಯಾಗಬೇಕು.[1]

---

[1] ಕನ್ನಡ ವಿಶ್ವಕೋಶ. ಸಂ. 6, ಪು. 676

ಡಾ. ಬಾ. ರಾ. ಗೋಪಾಲ್

ಬೀದರ್ ಜಿಲ್ಲೆಯ ಶಾಸನಗಳು–೮

ಲಂಜವಾಡ ಭಾಲ್ಕಿ ತಾಲ್ಲೂಕಿನ ಒಂದು ಗ್ರಾಮ. ಇಲ್ಲಿಯ ಹನುಮಂತನ ದೇವಾಲಯದ ಮುಂದೆ ಒಂದು ಶಾಸನ ಕಲ್ಲನ್ನು ನಿಲ್ಲಿಸಿದ. ಕಲ್ಲಿನ ಮುಮ್ಮುಖದಲ್ಲಿ 24 ಸಾಲುಗಳನ್ನು ಕೆತ್ತಲಾಗಿದ್ದು, ಉಳಿದ 20 ಸಾಲುಗಳನ್ನು ಕಲ್ಲಿನ ಬಲಪಕ್ಕದಲ್ಲಿ ಬರೆದಿದೆ. ಅಕ್ಷರಗಳು ಸ್ಪಷ್ಟವಾಗಿದ್ದರೂ, ಕಲ್ಲಿನ ಎರಡೂ ತುದಿಗಳನ್ನು ಅಲ್ಲಲ್ಲಿ ಕೆತ್ತಿರುವ ಕಾರಣ ಕೆಲವು ಅಕ್ಷರಗಳು ಮುಕ್ಕಾಗಿವೆ.

ಇದು ಚಾಲುಕ್ಯ ಅರಸ ತ್ರೈಲೋಕ್ಯಮಲ್ಲನೆನಿಸಿದ ಮೊದಲನೆಯ ಸೋಮೇಶ್ವರನ ಕಾಲದ ಶಾಸನ. ಸಕವರ್ಷ 979ನೆಯ ಹೇಮಳಂಬಿ ಸಂವತ್ಸರದ ಪುಷ್ಯ ಬಹುಳ ಏಕಾದಶಿ, ಬುಧವಾರ, ಉತ್ತರಾಯಣ ಸಂಕ್ರಮಣದಂದು ಈ ಶಾಸನ ಹುಟ್ಟಿದೆ. ಈ ತೇದಿಯ ವಿವರಗಳು ಕ್ರಿ. ಶ. 1057ನೆಯ ಡಿಸೆಂಬರ್ 24ಕ್ಕೆ ಸರಿಹೋಗುತ್ತವೆ. ಅಂದು ಅರಸ ಸಂಚಾರದಲ್ಲಿದ್ದು ಬೋಧನದ ಹಲವು ದಿವಸದ ಅಪ್ಪಯಣವೀಡಿನಲ್ಲಿದ್ದ. ಅಪ್ಪಯಣವೀಡು ಎಂಬ ಮಾತು ಪ್ರಯಾಣಕಾಲದಲ್ಲಿ ತಂಗುವ ಸ್ಥಳ ಎಂಬ ಅರ್ಥವನ್ನು ನೀಡುತ್ತದೆ ಎಂದು ಫ್ಲೀಟ್ ತೋರಿಸಿದ್ದಾರೆ. ಬೋಧನ ಎಂಬುದು ಆಂಧ್ರ ಪ್ರದೇಶದ ಅದಿಲಾಬಾದ್ ಜಿಲ್ಲೆಯ ಬೋದನ ಎಂಬ ಗ್ರಾಮ.

ಅರಸ ಇಲ್ಲಿ ತಂಗಿದ್ದಾಗ ಆತನ ಮಹಾಸಾಮಂತನಾದ ಉದಯಗಿರಿಯ ಅಲ್ಲಮರಸ ತನ್ನ ತಂದೆ ಮಹಾಸಾಮಂತ ಬಿಜ್ಜರಸ ಹಾಗೂ ತಾಯಿ ಮಲ್ಲಿಕಬ್ಬರಸಿಯರಿಗೆ ಧರ್ಮವಾಗಲಿ, ಪುಣ್ಯವಾಗಲಿ ಎಂದು ಬರಿಗೆ ನಾಲ್ವತ್ತಱ ಬಳಿಯ ಲಂಜಿವಾಡವನ್ನು ಅಗ್ರಹಾರವನ್ನಾಗಿ ಮಾಡಿದ. ಆ ಗ್ರಾಮದಿಂದ ಬರಬೇಕಾದ ತೆರೆಗಳೆಲ್ಲವನ್ನೂ ಮಾನ್ಯಮಾಡಿ, ಗ್ರಾಮದ ಪ್ರಭುವಾದ ಚಾವುಣ್ಡಮಯ್ಯನಿಗೆ ನೀಡಿದ ಎಂದು ಶಾಸನ ಹೇಳುತ್ತದೆ. ಬರಿಗೆ ನಾಲ್ವತ್ತು ಎಂಬುದೊಂದು ಆಡಳಿತ ವಿಭಾಗ. ಲಂಜವಾಡ ಶಾಸನ ದೊರೆತ ಗ್ರಾಮ. ಇದು ಆ ವಿಭಾಗದೊಳಗಣ ಗ್ರಾಮ. ಉದೆಯಗಿರಿ ಎಂಬುದು ಈ ಮೊದಲು ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ್ದು, ಅನಂತರ ಮಹಾರಾಷ್ಟ್ರಕ್ಕೆ ಸೇರಿಸಲ್ಪಟ್ಟ, ಭಾಲ್ಕಿ ತಾಲ್ಲೂಕಿಗೆ ಹೊಂದಿದಂತಿರುವ ತಾಲ್ಲೂಕಿನ ಮುಖ್ಯ ಸ್ಥಳವಾದ ಉದ್ಗೀರ್ ಎಂದು ಗುರುತಿಸಬಹುದು. ಬರಗಿಯನ್ನು ಗುರುತಿಸುವುದು ಕಷ್ಟ.

ದಾನವನ್ನು ಗೋದಾವರಿಯ ಮಂಜರೆ ಕೂಡಿದ ತೀರ್ಥಸ್ಥಾನದಲ್ಲಿ ಮಾಡಿದುದಾಗಿ ಹೇಳಿದೆ. ಮಂಜರೆ (ಮಂಜಿರಾ) ನದಿ ಬೀದರ್ ಜಿಲ್ಲೆಯ ಮುಖ್ಯ ನದಿ. ಭಾಲ್ಕಿ ತಾಲ್ಲೂಕಿನಲ್ಲೂ ಹರಿಯುತ್ತದೆ. ಆದರೆ ಅದು ಗೋದಾವರಿಯೊಡನೆ ಸೇರುವುದು ಆಂಧ್ರ ಪ್ರದೇಶದ ಅದಿಲಾಬಾದ್ ಜಿಲ್ಲೆಯಲ್ಲಿ–ಬೋಧನದ ಸಮೀಪದಲ್ಲಿ. ಎಂದ ಮೇಲೆ ಬಹುಶಃ ಅರಸ ಅಲ್ಲಿ

ತಂಗಿದ್ದುದು ಸಹ ಅದೊಂದು ತೀರ್ಥಸ್ಥಾನವಾದ ಕಾರಣದಿಂದಲೇ. ಅಲ್ಲಿಗೆ ಹೋಗಿದ್ದ ಸಾಮಂತ ಅಲ್ಲಮರಸ ಧರ್ಮಕಾರ್ಯ ಮಾಡಲೋಸುಗ ಲಂಜವಾಡವನ್ನು ಅಗ್ರಹಾರವಾಗಿ ಪರಿವರ್ತಿಸಿ ಸರ್ವನಮಸ್ಯ ಮಾಡಿದ. ಆದರೆ ಅವರಿಂದ ಬರಿಗೆ ನಾಲ್ವತ್ತರ ಆದಾಯ ಕುಗ್ಗಿತು. ಇವನ್ನು ಆತ ತುಂಬಿಕೊಟ್ಟನೆಂದು (ಭರಣಮಾಡಿದ) ಬಹುಶಃ 24ನೆಯ ಸಾಲನ್ನು ಅರ್ಥೈಸಬಹುದು. ಮಹಾಸಾಮಂತ ಉದೆಯಗಿರಿಯ ಅಲ್ಲಮರಸ ಇದುವರೆಗೂ ನಮಗೆ ತಿಳಿದಿರದಿದ್ದ ಅರಸನ ಸಾಮಂತರಲ್ಲೊಬ್ಬ.

ಶಾಸನ ಪಾಠ

ಮುಂಭಾಗ

1 ಸ್ವಸ್ತಿ ಸಮಸ್ತಭುವನಾಶ್ರಯಂ
2 ಶ್ರೀಪ್ರಿಥ್ವೀವಲ್ಲಭಂ ಮಹಾರಾಜಾ
3 ಧಿರಾಜಂ ಪರಮೇಸ್ವರ[ಂ] ಪರಮ
4 ಭಟ್ಟಾರಕಂ ಸತ್ಯಾಸ್ರಯಕುಳ
5 ತಿಳಕಂ ಚಾಳುಕ್ಯಾಭರಣಂ ಶ್ರೀ
6 ಮತ್ತ್ರೈಳೋಕ್ಯಮಲ್ಲದೇವರ ಬಿಜ
7 ಯರಾಜ್ಯಮುತ್ತರೋತ್ತರಾಭಿವ್ರಿದ್ಧಿ
8 ಪ್ರವರ್ದ್ಧಮಾನಮಾಚನ್ದ್ರಾರ್ಕತಾ
9 ರ[ಂ]ಬರ[ಂ] ಸಲುತ್ತಮಿರೆ ಜೋದನ
10 ದ ಪಲವುದೆವಸದ ಅಪ್ಪ
11 ಯಣವೀಡಿನಲು ಸಕವರ್ಷ
12 ೯೭೯ನೆಯ ಹೇಮಳಂಬಿ ಸಂವ
13 ತ್ಸರದ ಪುಷ್ಯ ಬಹುಳ ೧೧
14 ಬುಧವಾರ [ಉ]ತ್ತರಾಯಣಸಂಕ್ರಾ
15 ನ್ತಿಯ ಪರ್ವ್ವದೊಳು ಶ್ರೀಮನ್ಮಹಾಸಾ
16 ಮನ್ತ ಉದೆಯಗಿರಿಯ ಅಲ್ಲಮರ
17 ಸರು ಗೋದಾವರಿಯ [ಮಂ]' ಜರೆ ಕೂ
18 ಡಿದ ತೀ' [ರ್ತ್ಥಸ್ಥಾ]ನದಲ್ತಮ್ಮಯ್ಯ ಶ್ರೀ
19 ಮನ್ಮಹಾಸಾಮನ್ತ ಬಿಜ್ಜರಸ
20 [ರ್] ತಮ್ಮಬ್ಬೆ ಮಲ್ಲಿಕಬ್ಬರಸಿಯ
21 ಗ್ಗೆ ಧರ್ಮ್ಮಮಕ್ಕೆಂದು ಬರಿಗೆ ನಾಲ್ವ
22 ತ್ತಱ ಬಳಿಯ ಲಂಜಿವಾಡಮಂ ಮನ್ನೆ
23 ಯದ ತೆಱೆಗಳೆಲ್ಲಮಂ ಸರ್ವ್ವನ
24 ಮಸ್ಯ ಮಾಡಿ ನಾಲ್ವ [ತ್ತಱರ] ಭರಣ [ಂ]

ಬಲಪಕ್ಕ

25 ಮಾಡಿ ಪ್ರಭು ಚಾವು
26 ಣ್ಡಮಯ್ಯಗಳ್ಗೆ ಕಾ
27 [ಲಂ]ಕರ್ಚ್ಚಿ ಧಾರಾಪೂರ್ವ್ವ
28 ಕದಿಂದಾಚನ್ದ್ರಾರ್ಕತಾ
29 ರಂಬರಂ ಅಗ್ರಹಾ
30 ರಂ ಮಾಡಿ ಕೊಟ್ಟರ್ ॥
31 ಸಾಮಾನ್ಯೋಯಂ ಧ
32 ರ್ಮ್ಮಸೇತು' ನ್ರಿಪಾ [ಣಾಂ]
33 ಕಾಲೇ ಕಾಲೇ ಪಾಳ [ನೀ]
34 ಯೋ ಭವದ್ಭಿಃ ಸ
35 ರ್ವ್ವಾನೇತಾನ್ಭಾಗಿ
36 ನಃ ಪಾರ್ತ್ಥಿವೇನ್ದ್ರಾ [ನ್ಭೂ]
37 ಯೋ ಭೂಯೋ ಯಾ' [ಚ]
38 ತೇ ರಾಮಚಂದ್ರಃ। ಸ್ವದ
39 ತ್ತ [ಂ] ಪರದತ್ತ [ಂ] ವಾ
40 ಯೋ ಹರೇತಿ ವ
41 ಸುನ್ಧರಾಂ ಷಷ್ಟಿರ್ವ್ವ
42 ರ್ಷಸಹಸ್ರಾಣಿ
43 ವಿಷ್ಟಾಯಾಂ ಜಾಯ
44 ತೇ ಕ್ರಿಮಿ ॥

ಕಂಠೀರಾವ್

ಇಸ್ಲಾಮೀ ನ್ಯಾಯ

ಇಸ್ಲಾಮೀ ನ್ಯಾಯ ಪ್ರಾರಂಭದಲ್ಲಿ ಒಂದು ಸ್ವತಂತ್ರ ಶಾಸ್ತ್ರವಾಗಿರಲಿಲ್ಲ. ಅದು ಇಸ್ಲಾಮ್ ಧರ್ಮದ ಒಂದು ಅಂಗವಾಗಿ ಬೆಳೆದು ಬಂತು. ಪಾಪಭೀರುತ್ವವೇ ಇಸ್ಲಾಮೀ ನ್ಯಾಯದ ಅಡಿಗಲ್ಲು. 'ಅಸಲಮ್', 'ಸಲಮ್' ಇತ್ಯಾದಿ ಶಬ್ದಗಳ ಮೂಲಾರ್ಥ 'ಶಾಂತಿ', 'ಆಜ್ಞಾಧಾರಕತ್ವ' ಎಂದಾಗುವುದು. ಹೀಗೆ ಶಾಂತಿಪಾಲನೆ ಮಾಡುತ್ತ ದೇವದೂತರೂ ಧರ್ಮ ಗುರುಗಳೂ ಹೇಳಿದ್ದನ್ನು ಚಾಚೂ ತಪ್ಪದೆ ನಡೆಸಿಕೊಂಡು ಬರುವುದೇ 'ಇಸ್ಲಾಮ್' ಎಂಬುದರ ಸಾರಾಂಶ.

ಅರಬ್ಬೀ ಭಾಷೆಯಲ್ಲಿ 'ಮುಸ್ಲಿಮ್ ಎಂಬುದು 'ಅಸ್ಲಮಾ' ಎಂಬ ಶಬ್ದದ ಕೃದಂತ ರೂಪ. ಇದು ಶ್ರದ್ಧಾಸೂಚಕ ಶಬ್ದ. ಅಂತಹ ಶ್ರದ್ಧೆಯನ್ನು ಆಚರಣೆಗೆ ತರುವುದನ್ನೇ 'ಇಸ್ಲಾಮ್' ಎಂದು ಕರೆಯಲಾಯಿತು. ಆದರೆ ಮುಸ್ಲಿಮ್ ಎಂಬ ಪ್ರಯೋಗ ಹಾಗೆ ಶ್ರದ್ಧಾಯುಕ್ತರಾದ ಜನರನ್ನು ಮತ್ತು ಅವರಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು, ಅಂದರೆ ಮುಸ್ಲಿಮರಿಗೆ ಸಂಬಂಧಿಸಿದ ನ್ಯಾಯ, ಸಂಸ್ಕೃತಿ, ಕಲೆ ಇತ್ಯಾದಿಗಳನ್ನು ಸೂಚಿಸುವುದರಿಂದ 'ಮುಸ್ಲಿಮ್' ಎಂಬುದು ನಾಮವಾಚಕವೂ ವಿಶೇಷಣವೂ ಆಗಿದೆಯೆಂದು ನ್ಯಾಯಮೂರ್ತಿ ಹಿದಾಯತ್ ಉಲ್ಲಾರವರು ಅಭಿಪ್ರಾಯಪಟ್ಟಿದ್ದಾರೆ.

ಇಸ್ಲಾಮೀ ನ್ಯಾಯ ಎಂಬುದನ್ನು 'ಮುಹಮ್ಮದೀಯ' ನ್ಯಾಯ ಎಂದೂ ಕರೆಯುವುದುಂಟು. ಶ್ರೀ ದಿ.ಎಫ್. ಮುಲ್ಲಾ ಅವರು ತಮ್ಮ ಗ್ರಂಥಗಳಲ್ಲೆಲ್ಲ ಮಹಮಡನ್ ಲಾ[1] ಎಂದೇ ಕರೆದಿದ್ದಾರೆ.

ಇಸ್ಲಾಮೀ ನ್ಯಾಯವೇತ್ತರ ದೃಷ್ಟಿಯಲ್ಲಿ ಇಡೀ ಇಸ್ಲಾಮೀ ನ್ಯಾಯ ಪದ್ಧತಿಗೆ ದೈವೀ ಪ್ರೇರಣೆಯೇ ಮೂಲಾಧಾರವಾಗಿದೆ. ಅದು ಧರ್ಮ ತತ್ವಗಳ ನಿರೂಪಣೆಯೊಂದಿಗೆ ಹಾಸು ಹೊಕ್ಕಾಗಿ ಹೆಣೆದುಕೊಂಡಿದೆ. ಧರ್ಮತತ್ವಗಳಿಂದ ನ್ಯಾಯನಿರೂಪಕ ಭಾಗವನ್ನು ಪ್ರತ್ಯೇಕಿಸುವುದು ಕಷ್ಟಸಾಧ್ಯವೆಂದೇ ವಿದ್ವಾಂಸರ ಅಭಿಪ್ರಾಯ. ನೀತಿಮಾರ್ಗವನ್ನನುಸರಿಸುವುದೇ

---

1 'ಮಹಮಡನ್ ಲಾ' ಎಂಬುದು ಸರಿಯಾದ ಪ್ರಯೋಗವಲ್ಲ. 'ಮುಹಮಡನ್ ಅಥವಾ 'ಮಹಮಡಾನಿಸಮ್' ಎಂದು ಹೇಳುವುದು ಕೂಡ ಸಾಧುವಲ್ಲ. ಅಷ್ಟೇ ಅಲ್ಲದೆ, ಹಾಗೆ ಹೇಳುವುದು ಆಕ್ಷೇಪಣೀಯ. 'ಇಸ್ಲಾಮಿಕ್ ಲಾ' ಅಥವಾ 'ಮುಸ್ಲಿಮ್ ಲಾ' ಎಂಬುದೇ ಸೂಕ್ತವಾದುದು ಮತ್ತು ಶಾಸ್ತ್ರಸಮ್ಮತವಾದುದು. ಈ ವಿಷಯವನ್ನು ಕುರಿತು ಬರೆಯುವವರೆಲ್ಲ ಸಾಮಾನ್ಯವಾಗಿ ಇವೆರಡರಲ್ಲಿ ಒಂದು ಪ್ರಯೋಗವನ್ನು ಆರಿಸಿಕೊಂಡಿದ್ದಾರೆ.

—ಮುಲ್ಲಾ ಅವರ 'ಪ್ರಿನ್ಸಿಪಲ್ಸ್ ಆಫ್ ಮಹಮಡನ್ ಲಾ,' ಹಿದಾಯತ್ ಉಲ್ಲಾರ ಮುನ್ನುಡಿ, ಪು III

ಸರ್ವಾಂಗಸುಂದರ ಜೀವನಕ್ಕೆ ಏಕೈಕ ಮಾರ್ಗ ; ಅನೀತಿಯು ಜೀವನ ಹೇಯವಾದುದು, ಕಾರಣ ಅದು ತ್ಯಾಜ್ಯ. ಅದನ್ನೇ 'ಹರಿಯತ್' ಎಂದು 'ಇಸ್ಲಾಮೀ ನ್ಯಾಯ' ಬೋಧಿಸುತ್ತದೆ. ಮುಸಲ್ಮಾನರು ನಿತ್ಯಜೀವನದಲ್ಲಿ ಹೇಗೆ ವ್ಯವಹರಿಸಬೇಕು; ದಾನ, ಗೇಣಿಗೆಗಳ (ಖೈರಾತ್-ವಕ್ಫ್) ಬಗೆ ಹೇಗೆ, ಪ್ರಾರ್ಥನೆ (ನಮಾಜ್) ಶೌಚ (ಗುಸಲ್) ಇತ್ಯಾದಿಗಳ ಕ್ರಮವೇನು ಎಂಬುದನ್ನು ಇಸ್ಲಾಮೀ ಧರ್ಮಗ್ರಂಥಗಳಲ್ಲಿ ವಿಸ್ತಾರವಾಗಿ ನಿರೂಪಿಸಲಾಗಿದೆ. ಜೊತೆಜೊತೆಗೆ ಸಾಮಾಜಿಕ ಜೀವನದ ಮಹತ್ತ್ವದ ವಿಷಯಗಳಾದ ವಿವಾಹ (ನಿಕಾ), ವಿವಾಹವಿಚ್ಛೇದ (ತಲಾಖ್), ಉತ್ತರಾಧಿಕಾರ (ವಿರಾಸತ್), ಪುನರ್ವಿವಾಹ, ಆಸ್ತಿ, (ಮಿಲ್ಕ್), ಇವುಗಳಿಗೆ ಸಂಬಂಧಿಸಿದ ಅನೇಕ ವ್ಯವಹಾರಗಳಲ್ಲಿ ಅನುಸರಿಸಬೇಕಾದ ತತ್ತ್ವಗಳನ್ನು ಧರ್ಮಗ್ರಂಥಗಳಲ್ಲಿ ವಿವರಿಸಲಾಗಿದೆ. ಈ ಆಚಾರ ವಿಚಾರ ನಡವಳಿಯನ್ನು ಇಸ್ಲಾಮೀ ನ್ಯಾಯದಲ್ಲಿ 'ಫಿರ್' ಅಥವಾ 'ಹರೀಯ' ಎಂದು ಕರೆದಿದ್ದಾರೆ. 'ಫಿರ್' ಅಥವಾ 'ಹರೀಯ' ಎಂದರೆ ಆಚರಿಸಬೇಕಾದುದು ಅಥವಾ ಅನುಸರಿಸಬೇಕಾದುದು ಎಂದು ಅರ್ಥ. ನ್ಯಾಯದ ಕಲ್ಪನೆ ಎಲ್ಲ ಧರ್ಮಗಳಲ್ಲಿಯೂ ಧರ್ಮಪ್ರಜ್ಞೆಯೊಂದಿಗೇ ಬೆಳೆದುಬಂದಿದೆ, ಎಂದು ಹೇಳಬಹುದು. ಹಿಂದೂ ಧರ್ಮಶಾಸ್ತ್ರಗಳಲ್ಲಿ ಆಚಾರ, ಸಮಾಯಾಚಾರ—ವ್ಯವಹಾರ ಇವುಗಳನ್ನು ಸ್ಮೃತಿಕಾರರೂ ಸೂತ್ರಕಾರರೂ ಒಟ್ಟೊಟ್ಟಾಗಿಯೇ ನಿರೂಪಿಸಿಕೊಂಡು ಬಂದಿದ್ದಾರೆ. ನಾಗರಿಕತೆಯ ದೃಷ್ಟಿಯಿಂದ ಮುಂದುವರಿದ ಮತ್ತು ಸಂಸ್ಕೃತಿಯ ಮಹೋನ್ನತ ಮಟ್ಟವನ್ನು ಮುಟ್ಟಿದ ಎಲ್ಲ ಜನಾಂಗಗಳ ನ್ಯಾಯ ವ್ಯವಸ್ಥೆಗಳು ಪ್ರಾಯಶಃ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿಯ ಮಿಶ್ರ ಸಾಹಿತ್ಯದಿಂದ ಮೂಡಿ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ದೃಷ್ಟಿಯಿಂದ ಪ್ರಾಚೀನ ಗ್ರೀಕರ 'ಥೆಮಿಸ್ಟ್ಸ್' ಇದ್ದಂತೆ ಇಸ್ಲಾಮೀ ನ್ಯಾಯ ಕೂಡ 'ದೈವೀ ಪ್ರೇರಣೆಯನ್ನೇ ಆಧರಿಸಿದ್ದಾಗಿದೆ. ಆದುದರಿಂದ ಇಸ್ಲಾಮ್ ಧರ್ಮ ಇನ್ನುಳಿದ ಪ್ರಾಚೀನ ಧರ್ಮಗಳಂತೆ ಮುಸ್ಲಿಮರ ಸಾಮಾಜಿಕ ಸ್ಥಿತಿಗಳ ಮೇಲೂ ಅಂದಂದಿನ ಸಮಾಜ ಜೀವನದ ಮೇಲೂ ಪರಿಣಾಮಕಾರೀ ಪ್ರಭಾವ ಬೀರುವ ಒಂದು ಪ್ರಬಲ ಸಾಧನವಾಗಿತ್ತು ಎಂದು ಎಚ್.ಎ.ಆರ್.ಗಿಬ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಇಸ್ಲಾಮ್ ಪೂರ್ವ ನ್ಯಾಯಿಕ ಹಿನ್ನೆಲೆ

ಪ್ರಸಿದ್ಧವಾದ ನಾಲ್ಕು ಸುನ್ನಿ ಸಂಪ್ರದಾಯಗಳಿಗನುಸಾರವಾಗಿ 'ಮುಹಮ್ಮದೀಯ ನ್ಯಾಯ ದರ್ಶನವನ್ನು' ಕುರಿತು ಅಧ್ಯಯನ ಮಾಡುವವರು 'ಮುಹಮ್ಮದೀಯ ಕಾನೂನುಗಳು ಮತ್ತು ಕಾನೂನು ಶಾಸ್ತ್ರ' ಬೆಳೆದು ಬಂದ ಸಂಕ್ಷಿಪ್ತ ಇತಿಹಾಸವನ್ನು ಅರಿತುಕೊಳ್ಳಬೇಕು. ಇಸ್ಲಾಂ ಧರ್ಮ ಅಸ್ತಿತ್ವಕ್ಕೆ ಬರುವ ಮೊದಲು ಅಂದಿನ ಅರಬ್ಬಿ ಜನಾಂಗದಲ್ಲಿ ಅನೇಕ ರೂಢಿಗಳು, ಆಚರಣೆಗಳು ಪ್ರಚಲಿತವಿದ್ದುವು. ಆ ರೂಢಿ ಸಂಪ್ರದಾಯಗಳು ಇಸ್ಲಾಮೀ ನ್ಯಾಯಪದ್ಧತಿಯ ಇತಿಹಾಸದ ಒಂದು ಅವಿಭಾಜ್ಯ ಅಂಗವಾಗಿವೆ. ಇಸ್ಲಾಮೀ ನ್ಯಾಯಪದ್ಧತಿ ಹುಟ್ಟಿ ಬೆಳೆದುದು ಅರಬ್ಬಿಸ್ತಾನದಲ್ಲಿ ಎಂಬುದು ಸರ್ವವಿದಿತ. ಈ ನ್ಯಾಯಪದ್ಧತಿಯನ್ನು ಬೆಳೆಸಿ ಪೋಷಿಸಿದವರು ಅರಬ್ಬಿ ನ್ಯಾಯವೇತ್ತರೆ. ಆದುದರಿಂದ ಮುಹಮ್ಮದರಿಗೆ ಪೂರ್ವದ ಅರಬ್ಬಿ ಜನಾಂಗದ ಸಾಮಾಜಿಕ ಬೆಳವಣಿಗೆ ಮತ್ತು ವಿಚಾರ ಸರಣಿಗಳು, ನೀತಿ ನಡವಳಿಗಳು ತಮ್ಮ ಪಡಿನೆರಳನ್ನು ಇಸ್ಲಾಮೀ ನ್ಯಾಯಪದ್ಧತಿಯ ಮೇಲೆ ಬಿಚ್ಚೊತ್ತಿರುವುದು ಸಹಜವೇ. ಇಸ್ಲಾಮ್ ಧರ್ಮ

ಜನ್ಮ ತಾಳಿದೊಡನೆಯೇ ಅದು ಆ ಹಿಂದಿನ ಎಲ್ಲ ರೂಢಿ ಸಂಪ್ರದಾಯಗಳನ್ನು ಅಲ್ಲಗಳೆಯಿ ತೆಂದಾಗಲಿ ಅವುಗಳಿಗೆ ಬದಲು ಬೇರೆ ನೀತಿ ನಿಯಮಗಳನ್ನು ಜಾರಿಗೆ ತಂದಿತೆಂದಾಗಲಿ ಸರ್ವಥಾ ಭಾವಿಸಕೂಡದು. ವಿಶ್ವದ ಎಲ್ಲ ನ್ಯಾಯ ಪದ್ಧತಿಗಳಿಗೆ ಅನೇಕ ಧರ್ಮ ನೀತಿ ಶಾಸ್ತ್ರ ಗಳು ಅಡಿಗಲ್ಲಾಗಿರುವಂತೆ ಇಸ್ಲಾಮೀ ನ್ಯಾಯ ಹುಟ್ಟಿ ಬೆಳೆದ ದೇಶದ ಅನೇಕ ರೂಢಿ ಸಂಪ್ರ ದಾಯಗಳು ಈ ನ್ಯಾಯ ಪದ್ಧತಿಯಲ್ಲಿ ಸಮಾವೇಶಗೊಂಡುವೆಂದು ಬೇರೆ ಹೇಳಬೇಕಾಗಿಲ್ಲ.

'ಹಿದಾಯಾ' ಗ್ರಂಥಕರ್ತರಾದ ಬುರಹಾನ್ ಉದ್ದೀನರು ಪಾಲುಗಾರಿಕೆಯ ಸಿಂಧುತ್ವ ವನ್ನು ಸಮರ್ಥಿಸುತ್ತ, "ಪಾಲುಗಾರಿಕೆ ಶಾಸನಬದ್ಧವಾಗಿದೆ, ಏಕೆಂದರೆ ಅದು ಮಹ್ಮದರ ಕಾಲದ ಜನರಲ್ಲಿ ಆಚರಣೆಯಲ್ಲಿತ್ತು. ಅಂತೆಯೇ ಮಹಮ್ಮದರು ಅದಕ್ಕೆ ತಮ್ಮ ಒಪ್ಪಿಗೆ ನೀಡಿ ಅದು ವಿಧಿಸಮ್ಮತವಾಗಿದೆಯೆಂದು ಸಾರಿದರು," ಎಂದು ತಿಳಿಸಿದ್ದಾರೆ.[2] ಹೀಗೆ ಅನೇಕ ಪದ್ಧತಿಗಳು ಮಹಮ್ಮದರಿಗಿಂತ ಮುಂಚೆ ಪ್ರಚಲಿತವಿದ್ದವುಗಳೇ ಎಂದು ಕಂಡುಬರುವುದು. ಅಂಥ ಪದ್ಧತಿಗಳು ಆಚರಣೆಯಲ್ಲಿ ಇರಲು ಅಂದಿನ ಸಮಾಜದ ಒಪ್ಪಿಗೆಯೇ ಕಾರಣ. ಹೀಗೆ ಜೀಸಸ್ ಕ್ರೈಸ್ತನ ಕಾಲದಿಂದ ಮಹಮ್ಮದರ ಕಾಲದ ವರೆಗೆ ಪ್ರಚಲಿತವಿದ್ದ ಅನೇಕ ಸಾಮಾ ಜಿಕ ರೂಢಿ ಸಂಪ್ರದಾಯಗಳಲ್ಲಿ ಕೆಲವನ್ನು ಮಹಮ್ಮದರು ನ್ಯಾಯಕ್ಕೆ ಅಸಮ್ಮತವೆಂದು ಸಾರಿ ದರೂ ಇನ್ನೂ ಕೆಲವು ಹಾಗೆಯೇ ಉಳಿದುಕೊಂಡು ಬಂದುವು. ಒಟ್ಟಿನಲ್ಲಿ ಅಂಥ ಅನೇಕ ಇಸ್ಲಾಮ್ ಪೂರ್ವದ ಆಚಾರವಿಚಾರಗಳು ಇಸ್ಲಾಮೀ ನ್ಯಾಯದ ಭಾಗವೇ ಆಗಿಹೋಗಿವೆ.

ಇಸ್ಲಾಮೀ ನೀತಿ ನಿಯಮಗಳು ಜನ್ಮ ತಾಳಿದ ಸಂಧಿ ಕಾಲದಲ್ಲಿ ಅರಬ್ಬಿಸ್ತಾನದ ಜನರು ಇನ್ನೂ ಅಲೆಮಾರಿ ಜನಾಂಗದ ಲಕ್ಷಣಗಳನ್ನೇ ಹೊಂದಿದ್ದರು. ಅರಬರಲ್ಲಿ ಅನೇಕ ಪಂಗಡಗಳು ಒಳಪಂಗಡಗಳು ಇದ್ದುವು. ಈ ಒಳಪಂಗಡಗಳು ಮತ್ತೆ ಅನೇಕ ಕುಟುಂಬಗಳಾಗಿ ಭಾಗವಾಗಿ ದ್ದುವು.[3] ಈ ಪಂಗಡಗಳಲ್ಲಿ ಅನೇಕ ಸಲ ಒಳಜಗಳಗಳು ತಲೆದೋರುತ್ತಿದ್ದುವು. ನಗರ ವಾಸಿಗಳಲ್ಲಲ್ಲದೆ ಒಳನಾಡಿನ ಮರುಭೂಮಿಯಲ್ಲಿ 'ಬಿಡೊಯಿನ್' ಎಂದು ಕರೆಯಲ್ಪಡುವ ಅಲೆಮಾರಿ ಜನಾಂಗವೂ ವಾಸಿಸುತ್ತಿತ್ತು. ನಗರವಾಸಿ ಮತ್ತು ಒಳನಾಡಿನ ಜನರ ಆಚಾರ ವಿಚಾರಗಳಲ್ಲಿ ಕೆಲವು ಭೇದಗಳು ಕಂಡುಬಂದರೂ, ಸಾಮಾನ್ಯವಾಗಿ ಎಲ್ಲ ಅರಬರೂ ಮೂರ್ತಿ ಪೂಜಕರಾಗಿದ್ದರು. ಅವರಲ್ಲಿ ಕೆಲವರು ಕ್ರೈಸ್ತ ಧರ್ಮವನ್ನು ಸ್ವೀಕರಿಸಿದ್ದರು. ಮದೀನಾ ನಗರದಲ್ಲಿ ಮತ್ತು ದಕ್ಷಿಣ ಅರಬ್ಬಿಸ್ತಾನದಲ್ಲಿ ಯಹೂದಿಗಳು ಅಪಾರ ಸಂಖ್ಯೆಯಲ್ಲಿ ನೆಲಸಿ ದ್ದರು. ಅರಬರ ಈ ಪಂಗಡಗಳು ಮತ್ತು ಕುಟುಂಬಗಳು ಒಬ್ಬ ಮುಖ್ಯಸ್ಥನನ್ನು ಆರಿಸಿ ಕೊಳ್ಳುತ್ತಿದ್ದುವು. ಈ ಮುಖ್ಯಸ್ಥರು ತಮ್ಮತಮ್ಮ ಪಂಗಡದ ಹಿತರಕ್ಷಣ ಮಾಡುವುದಲ್ಲದೆ ಬೇರೆ ಪಂಗಡದವರಿಂದ ವಿಪತ್ತು ಒದಗಿದಾಗ ಹೋರಾಟಕ್ಕೂ ಸಿದ್ಧವಾಗಿರುತ್ತಿದ್ದರು.[4]

---

[2] ಅಬ್ದುಲ್ ರಹೀಮ್, 'ಮಹಮಡನ್ ಜೂರಿಸ್‌ಪ್ರುಡೆನ್ಸ್', ಪುಟ 2

[3] ಇವು ಪ್ರಾಚೀನ ಭಾರತದ ಕುಲ, ಗೋತ್ರ, ಶಾಖೆ ಮತ್ತು ಕುಟುಂಬಗಳನ್ನು ನೆನಪಿಗೆ ತರುತ್ತವೆ.

[4] ಪ್ರಾಚೀನ ಭಾರತದ ಇತಿಹಾಸದಲ್ಲಿ ಗೋವು ಇತ್ಯಾದಿಗಳ ಸಂಬಂಧದಲ್ಲಿ ಅಂದಿನ ಕುಲಗೋತ್ರಗಳ ಯಜಮಾನರಾಗಿದ್ದ ಋಷಿಗಳಲ್ಲಿ ಕಲಹಗಳು ನಡೆಯುತ್ತಿದುದನ್ನು ಇಲ್ಲಿ ಜ್ಞಾಪಿಸಿ ಸಿಕೊಳ್ಳಬಹುದು.

ಕ್ರಮೇಣ ಮಕ್ಕಾ ನಗರದಲ್ಲಿ ಒಂದು ಸುವ್ಯವಸ್ಥಿತ ಸರಕಾರ ರೂಪುಗೊಳ್ಳತೊಡಗಿತು. ಮಕ್ಕಾದಲ್ಲಿ ಕಾಬಾ ಎಂಬುದು ಕೇವಲ ಒಂದು ಪವಿತ್ರ ಯಾತ್ರಾಸ್ಥಳವಷ್ಟೇ ಅಲ್ಲದೆ ಅನೇಕ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಿಗೆ ಕೇಂದ್ರಸ್ಥಾನವಾಗಿತ್ತು. ಸಾಮಾಜಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಹೊಣೆಯನ್ನು ಹನ್ನೆರಡು ಮುಖ್ಯ ಕುಟುಂಬಗಳು ವಹಿಸಿ ಕೊಂಡಿದ್ದುವು. ವಿವಾದಗಳನ್ನು ಇತ್ಯರ್ಥಪಡಿಸಿ, ತಪ್ಪು ಮಾಡಿದ ಪಂಗಡದವರಿಂದ ದಂಡವನ್ನು ವಸೂಲು ಮಾಡಲು ಅಧಿಕಾರವನ್ನು ಒಂದು ಪಂಗಡದ ಮುಖ್ಯಸ್ಥ ವಹಿಸಿಕೊಂಡಿರುತ್ತಿದ್ದ. ಪ್ರಥಮ ಖಲೀಫರಾದ 'ಅಬೂಬಕರ್' ಇಂಥ ಅಧಿಕಾರವನ್ನು ವಹಿಸಿದ್ದರಂತೆ.

ಒಂದು ಪಂಗಡದವನು ಮತ್ತೊಂದು ಪಂಗಡದವನನ್ನು ಕೊಂದಾಗ ಕೊಲೆಪಾತಕಿಯನ್ನು ತಮಗೊಪ್ಪಿಸುವಂತೆ ಕೇಳುತ್ತಿದ್ದರು. ಒಮ್ಮೊಮ್ಮೆ ಒಂದು ಸಲ 100 ಒಂಟೆಗಳನ್ನು ಪರಿಹಾರರೂಪ ವಾಗಿ ಪಡೆದು ರಾಜಿ ಮಾಡಿಕೊಳ್ಳುತ್ತಿದ್ದರು.[5]

ಮುಹಮ್ಮದರಿಗೆ ಪೂರ್ವದಲ್ಲಿದ್ದ 'ನ್ಯಾಯವಿಚಾರಣ' ಪದ್ಧತಿಯೂ ಆಯಾಕಾಲದ ಅನೇಕ ದೇಶಗಳಲ್ಲಿ ಪ್ರಚಲಿತವಿದ್ದುದನ್ನೇ ಬಹುಮಟ್ಟಿಗೆ ಹೋಲುವುದು. ವಾದಿ ತನ್ನ ಹಕ್ಕನ್ನು ಸಾಕ್ಷಿ ಗಳಿಂದ ಸಿದ್ಧಪಡಿಸಬೇಕಾಗಿತ್ತು. ಅಪರಾಧವನ್ನು ಸಿದ್ಧಮಾಡಲು ಪ್ರಮಾಣಮಾಡುವ (ಆಣೆ ಮಾಡುವ) ಪದ್ಧತಿಗಳು ಬಳಕೆಯಲ್ಲಿದ್ದುವು. ಕೆಲವು ಸಲ ಉಭಯಪಕ್ಷಗಳವರು ದೈವಜ್ಞನಲ್ಲಿ ಹೋಗಿ ಅವನ ತೀರ್ಮಾನದಂತೆ ವರ್ತಿಸುತ್ತಿದ್ದರು. ಪರಸ್ಪರ ಮೈತ್ರಿ ಬೆಳೆದ ಪಂಗಡದವರನ್ನು 'ಅಸೆಲಾಫ್' ಎಂದೂ ಎದುರಾಳಿಗಳನ್ನು "ದಹೀಲ್"[6] ಎಂದೂ ಕರೆಯುತ್ತಿದ್ದರು. ಇವರಲ್ಲಿ ಸದಾ ಕಲಹಗಳು ನಡೆಯುತ್ತಿದ್ದುವು.

ವಿವಾದಗಳ ಇತ್ಯರ್ಥದಲ್ಲಿ ಪ್ರಮಾಣ ಮಾಡುವ ಪದ್ಧತಿಗೆ ಮಹತ್ತ್ವವಿದ್ದಿತು. ಸತ್ಯವನ್ನೇ ಹೇಳಬೇಕೆಂದೂ ಅಸತ್ಯ ನುಡಿದರೆ ವಿನಾಶವು ಕಟ್ಟಿಟ್ಟದ್ದೆಂದೂ ನಂಬಿಕೆ ಇತ್ತು. ದೈವದ ಹೆಸರಿನ ಪ್ರಮಾಣ ಮಾಡಿಸುವುದಕ್ಕಾಗಿಯೇ ಕೆಲವು ಸ್ಥಳಗಳು ಏರ್ಪಟ್ಟಿದ್ದುವು. ಮಕ್ಕಾ ನಗರದ ಕಾಬಾ ಪ್ರದೇಶದ ಹೊರಗೆ ಇಂಥ ಒಂದು ಸ್ಥಳವಿತ್ತೆಂದು ಐತಿಹ್ಯ ಉಂಟು. ಆ ಸ್ಥಳವನ್ನು 'ಹಡೀಮ್' ಎಂದು ಕರೆಯುತ್ತಿದ್ದರು. ಪ್ರಮಾಣ ಮಾಡಬೇಕಾದ ಅರಬ್ಬಿಗಳು ತಮ್ಮ ಮುಖ್ಯ ದೇವತೆ 'ಹುಬ್ಬಾಲ್' ಹೆಸರಿನಲ್ಲಿ ಅಥವಾ ತಮ್ಮ ಪೂರ್ವಜರ ಹೆಸರಿನಲ್ಲಿ ಪ್ರಮಾಣವನ್ನು ಸ್ವೀಕರಿಸುತ್ತಿದ್ದರು.[7]

ಪರಸ್ಪರ ದ್ವೇಷ ಇತ್ಯಾದಿ ಸಂದರ್ಭಗಳಲ್ಲಿ ಅಂಗಚ್ಛೇದನ ಮಾಡಿದರೆ ಅಥವಾ ಕೊಂದರೆ ವಿರೋಧಿಯ ಅದೇ ಅಂಗವನ್ನು ಛೇದನ ಮಾಡುವುದು, ಅಥವಾ ಮರಣವನ್ನು ಮರಣದ ಸೇಡಿ

---

[5] ತಪ್ಪಿತಸ್ಥ 50 ಆಕಳು, 100 ಕುದುರೆ ಮೊದಲಾದವುಗಳನ್ನು ಕೊಟ್ಟು ಪಾಪ ಪರಿಮಾರ್ಜನ ಮಾಡಿಕೊಳ್ಳುತ್ತಿದ್ದ ಪದ್ಧತಿ ಭಾರತದಲ್ಲಿಯೂ ಇತ್ತೆಂಬುದು ಮನುಸ್ಮೃತಿ ಯಿಂದ ತಿಳಿದುಬರುವುದು.

[6] ಇದು ಭಾರತದ ಪ್ರಾಚೀನ ಆರ್ಯರ ಮತ್ತು ದಸ್ಯುಗಳ ಹೋರಾಟವನ್ನು ನೆನಪಿಗೆ ತರುವಂತಿದೆ.

[7] ಸಾಕ್ಷಿ ಪ್ರಮಾಣಗಳ ಸಂಬಂಧದಲ್ಲಿ ಪ್ರಾಚೀನ ಭಾರತದಲ್ಲಿ ಪ್ರಚಲಿತವಿದ್ದ 'ದಿವ್ಯ' ಗಳನ್ನು ಇದು ಕೆಲಮಟ್ಟಿಗೆ ಹೋಲುವುದೆಂದು ಹೇಳಬಹುದು.

ಸಿಂದಲೇ ತೀರಿಸಿಕೊಳ್ಳುವುದು, ಕೆಲವು ಸಲ ಪರಿಹಾರ ರೂಪವಾಗಿ ಹಣ ತೆಗೆದುಕೊಂಡು ಕ್ಷಮಿಸುವುದು ಬಳಕೆಯಲ್ಲಿದ್ದವು. ಈ ಪ್ರತೀಕಾರ ದಂಡನ ಪದ್ಧತಿ ವರ್ಗಗಳ ಸ್ಥಾನಮಾನಗಳನ್ನವಲಂಬಿಸುತ್ತಿತ್ತು.[8] ಕಳವು ಮಾಡಿದವನ ಕೈಕಡಿದು ಹಾಕುವುದು, ವ್ಯಭಿಚಾರಿಯನ್ನು ಕಲ್ಲೇಟಿನಿಂದ ಸಾಯಿಸುವುದು ಪ್ರಾಚೀನ ಅರಬ್ಬರ ದಂಡನಕ್ರಮಗಳಾಗಿದ್ದವು. ಕಾಲ ಕಳೆದಂತೆ ಇಂಥ ಅಪರಾಧಿಗಳ ಮುಖಕ್ಕೆ ಕಪ್ಪು ಹಚ್ಚುವುದು ಮತ್ತು ಅವರಿಗೆ ಚಾವಟಿ ಏಟು ಕೊಡುವುದು ಬಳಕೆಗೆ ಬಂದುವು.[9]

ಇಸ್ಲಾಮ್ ಪೂರ್ವದ ಅರಬ್ ದೇಶದಲ್ಲಿ 'ಮದುವೆ' ಎಂಬುದು ಇನ್ನೂ ನಿಶ್ಚಿತ ರೂಪ ತಾಳಿರಲಿಲ್ಲ. ಹೀಗಾಗಿ ಮಕ್ಕಳ ವಂಶವನ್ನು ನಿರ್ಧರಿಸುವುದು, ತಂದೆ ತಾಯಿಗಳ ಕರ್ತವ್ಯಗಳೇನು ಅಧಿಕಾರಗಳೇನು ಎಂಬುದನ್ನು ನಿರ್ಧರಿಸುವುದು ಕಷ್ಟವಾಗುತ್ತಿತ್ತು. ಆದರೂ ಕ್ರಮೇಣ 'ವಿವಾಹ' ಪದ್ಧತಿ ರೂಢಿಗೆ ಬಂತು. ಜೊತೆಜೊತೆಗೆ ವಿವಾಹದ ಹೆಸರಿನಲ್ಲೇ ಲೈಂಗಿಕ ಸಂಬಂಧದ ಕೆಲವು ಪದ್ಧತಿಗಳೂ ಬೆಳೆದು ಬಂದುವು. ಇವುಗಳಿಂದ ಅರಬ್ಬಿ ಜನಾಂಗದ ಪ್ರಾಚೀನ ವಂಶಗಳು ಬೆಳೆದು ಬಂದ ರೀತಿಯನ್ನು ಅರಿತುಕೊಳ್ಳಬಹುದು. ಇಸ್ಲಾಮ್ ಪೂರ್ವದ ಆ ಕಾಲದ ಅರಬರಲ್ಲಿ ನಾಲ್ಕು ಬಗೆಯ ವಿವಾಹ ಪದ್ಧತಿಗಳು ರೂಢಿಯಲ್ಲಿದ್ದುವೆಂದು ಹೇಳುತ್ತಾರೆ. (1) ಮತ್ತೊಬ್ಬನ ಮಗಳನ್ನು ಅಥವಾ ಅವನ ರಕ್ಷಣೆಯಲ್ಲಿರುವ ಕನ್ಯೆಯನ್ನು ತನಗೆ ವಿವಾಹ ಮಾಡಿಕೊಡಬೇಕೆಂದು ಕೇಳುವುದು ಮತ್ತು ಆ ಹುಡುಗಿಗೆ ಹಣ ಕೊಟ್ಟು ಅವಳನ್ನು ಮದುವೆಯಾಗುವುದು.[10] ಈ ಬಗೆಯ ಪದ್ಧತಿಗೆ ಅನಂತರದ ಇಸ್ಲಾಮ್ ಧರ್ಮದಲ್ಲಿಯೂ ಮನ್ನಣೆಯುಂಟು. (2) ಒಬ್ಬ ತನ್ನ ಹೆಂಡತಿಗೆ ಒಬ್ಬ ಪ್ರಸಿದ್ಧ ವ್ಯಕ್ತಿಯ ಹೆಸರನ್ನು ಸೂಚಿಸಿ, ನೀನು ಅವನೊಡನೆ ದಾಂಪತ್ಯ ಸಂಬಂಧ ಬೆಳೆಸು ಎಂದು ಹೇಳುತ್ತಿದ್ದ. ಆ ಪ್ರಕಾರ ತನ್ನ ಹೆಂಡತಿ ಆ ಸೂಚಿತ ವ್ಯಕ್ತಿಯಿಂದ ಗರ್ಭಧಾರಣ ಮಾಡುವ ವರೆಗೆ ಅವನು ಅವಳಿಂದ ದೂರವಿರುತ್ತಿದ್ದ. ಅವಳು ಗರ್ಭಿಣಿಯಾದಳೆಂದು ಖಚಿತವಾಗಿ ತಿಳಿದೊಡನೆಯೇ ಮತ್ತೆ ಅವಳನ್ನು ಕೂಡಿಕೊಳ್ಳುತ್ತಿದ್ದ. ಬಹಳ ಉತ್ಕೃಷ್ಟ ಸಂತತಿಯನ್ನು ಹೊಂದಬೇಕೆಂಬ ಆಸೆಯೇ ಈ ತಾತ್ಕಾಲಿಕ ದಾಂಪತ್ಯಕ್ಕೆ ಮೂಲಾಧಾರವಾಗಿತ್ತು.[11]

---

[8] ಸಾಮಾಜಿಕ ಸ್ಥಾನಮಾನಕ್ಕನುಸಾರವಾಗಿ ಪ್ರಾಚೀನ ಭಾರತದ ದಂಡನೆಯಲ್ಲಿ ಪ್ರಭೇದಗಳಿರುವುದು 'ಮನುಸ್ಮೃತಿ' ಮತ್ತು ಕೌಟಲ್ಯನ ಅರ್ಥಶಾಸ್ತ್ರದಲ್ಲಿಯೂ ಕಂಡುಬರುತ್ತದೆ.

[9] ಇಂಥ ದಂಡನ ಪದ್ಧತಿಗಳು ಪ್ರಾಚೀನ ರೋಮ್, ಭಾರತ, ಮತ್ತು ಇಂಗ್ಲೆಂಡ್‌ಗಳಲ್ಲಿಯೂ ಪ್ರಚಲಿತವಿದ್ದುವು.

[10] ಹೀಗೆ ಕನ್ಯೆಯನ್ನು ಪಡೆದುಕೊಳ್ಳಲು ತೆರವು ಅಥವಾ ಕನ್ಯಾ ಶುಲ್ಕ ಕೊಡುವ ಪದ್ಧತಿ ಪ್ರಾಚೀನ ಭಾರತದಲ್ಲಿಯೂ ರೂಢಿಯಲ್ಲಿತ್ತು ಮತ್ತು ಈಗಲೂ ಕೆಲವುವರ್ಗಗಳಲ್ಲಿ ಈ ರೂಢಿ ಇದೆ. ಆದರೆ ಇಂಥ ತೆರವು ಅಥವಾ ಕನ್ಯಾ ಶುಲ್ಕ ನೇರವಾಗಿ ಆ ಹುಡುಗಿಗೆ ಕೊಡುವ ಬದಲಾಗಿ ಅವಳ ತಂದೆತಾಯಿಗೆ ಕೊಡುವುದು ರೂಢಿ.

[11] ಇಂಥ ಪದ್ಧತಿಗಳು ಬಳಕೆಯಲ್ಲಿದ್ದುದು ಅನೇಕ ದೇಶಗಳ ಪ್ರಾಚೀನ ಇತಿಹಾಸದಲ್ಲಿ ಕಾಣಸಿಕ್ಕುತ್ತದೆ. ಪ್ರಾಚೀನ ಭಾರತದಲ್ಲಿ ನಿಯೋಗ ಪದ್ಧತಿಯಿಂದ ಸಂತಾನ ಪಡೆಯುವುದು ಇದೇ ಮಾದರಿಯ ಒಂದು ವಿಧಾನವಾಗಿತ್ತು ಎಂಬುದನ್ನು ಗಮನಿಸಬೇಕು. ಉದ್ದೇಶ ಬೇರೆಬೇರೆಯಾಗಿರಬಹುದು. ಕುಲಪೋಷಣೆ ಮತ್ತು ಪಿತೃಗಳಿಗೆ ತರ್ಪಣ—ಇದು ಪ್ರಾಚೀನ

(3) ಹತ್ತು ಅಥವಾ ಅದಕ್ಕಿಂತ ಕಡಿಮೆ ಪುರುಷರು ಓರ್ವ ಸ್ತ್ರೀಯೊಡನೆ ಸಂಪರ್ಕ ಬೆಳೆಸುತ್ತಿದ್ದರು. ಅವಳು ಗರ್ಭಿಣಿಯಾಗಿ ಮಗುವನ್ನು ಹೆತ್ತಾಗ ಅವರೆಲ್ಲರನ್ನೂ ಬರಹೇಳುತ್ತಿದ್ದಳು. ಹಾಗೆ ಅವಳಿಂದ ಕರೆ ಬಂದಾಗ ಅವರೆಲ್ಲರೂ ಅವಳಲ್ಲಿಗೆ ಬರಲು ಬದ್ಧರಾಗಿದ್ದರು. ಅವರೆಲ್ಲರೂ ಬಂದು ಸೇರಿದ ಬಳಿಕ, "ನಡೆದುದೆಲ್ಲ ನಿಮಗೆ ಗೊತ್ತೇ ಇದೆ. ನಾನೀಗ ಈ ಮಗುವಿಗೆ ಜನ್ಮವಿತ್ತಿದ್ದೇನೆ. ಈ ಮಗು ನಿಮ್ಮಲ್ಲಿ (ಅವರಲ್ಲಿ ಒಬ್ಬನ ಹೆಸರನ್ನು ಹೇಳಿ) ಇಂಥವನ ಮಗು" ಎಂದು ಹೇಳಿಬಿಡುತ್ತಿದ್ದಳು. ಆ ಬಳಿಕ ಆ ಮಗುವಿಗೆ ಆ ವ್ಯಕ್ತಿಯೇ ತಂದೆಯೆಂದು ನಿರ್ಣಯವಾಗುತ್ತಿತ್ತು. ಅಂಥ ವ್ಯಕ್ತಿ ತನ್ನ ಪಿತೃತನವನ್ನು ನಿರಾಕರಿಸಲು ಬರುತ್ತಿರಲಿಲ್ಲ. ಈ ಪದ್ಧತಿ ಅನೇಕ ಪ್ರಾಚೀನ ಸಂಸ್ಕೃತಿಗಳಲ್ಲಿ ಪ್ರಚಲಿತವಿತ್ತು. ಬಹುಪತಿತ್ವ ಬಳಕೆಯಲ್ಲಿದ್ದ ಸಮಾಜದಲ್ಲಿ ಈ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತೆಂದು ಇತಿಹಾಸದಿಂದ ತಿಳಿದುಬರುವುದು.

(4) ನಾಲ್ಕನೆಯ ಪದ್ಧತಿ ಇನ್ನೂ ಸೋಜಿಗದ್ದಾಗಿದೆ. ಒಬ್ಬ ಸ್ತ್ರೀಯ ಬಳಿ ಅನೇಕ ಪುರುಷರು ಬಂದು ಹೋಗುತ್ತಿದ್ದರು. ಇಂಥ ಸ್ತ್ರೀಯರು ವೇಶ್ಯೆಯರಾಗಿದ್ದು, ತಮ್ಮ ಮನೆ ಬಾಗಿಲಿಗೆ ವೃತ್ತಿಸೂಚಕ ಗುರುತು ಹಾಕಿರುತ್ತಿದ್ದರು. ವೇಶ್ಯಾವರ್ಗಕ್ಕೆ ಸೇರಿದ ಇಂಥ ಸ್ತ್ರೀಗೆ ಮಗುವಾದಾಗ ಅವಳ ಬಳಿ ಹೆಚ್ಚಾಗಿ ಬರುತ್ತಿದ್ದವರೆಲ್ಲರನ್ನೂ ಒಂದೆಡೆ ಸೇರಿಸಿ, ಅವರ ಹೋಲಿಕೆ ಇತ್ಯಾದಿಗಳನ್ನು ಶರೀರಶಾಸ್ತ್ರಜ್ಞರು ಪರೀಕ್ಷಿಸುತ್ತಿದ್ದರು ಮತ್ತು ತಂದೆಯನ್ನು ಗುರುತಿಸುತ್ತಿದ್ದರು.[12]

ಈ ವರ್ಗಗಳಲ್ಲಿ ಮೊದಲನೆಯದು ಕಾಲಕ್ರಮದಲ್ಲಿ ಬೆಳೆದುಬಂದ ಪದ್ಧತಿಯಾಗಿರಬೇಕು. ಉಳಿದ ಮೂರು ವಿವಾಹವೆಂದು ಕರೆಸಿಕೊಳ್ಳಲು ಸರ್ವಥಾ ಯೋಗ್ಯವಲ್ಲ ಎಂದೇ ಅಬ್ದುರ್ ರಹೀಮ್ ಅಭಿಪ್ರಾಯ ಪಡುತ್ತಾರೆ. ಇದಲ್ಲದೆ ಇಸ್ಲಾಮ್ ಪೂರ್ವದ ಅರಬರಲ್ಲಿ 'ಮುತಾ' ಎಂಬ ಒಂದು ಬಗೆಯ ತಾತ್ಕಾಲಿಕ ವಿವಾಹವೂ ಜಾರಿಯಲ್ಲಿತ್ತು. ಒಬ್ಬ ಅರಬ ಮತ್ತೊಂದು ಊರಿಗೆ ಹೋದಾಗ, ಅಲ್ಲಿ ತನ್ನ ವಸ್ತು–ಒಡವೆ ಮತ್ತು ಬೀಡಾರದ ಮೇಲೆ ನಿಗಾ ಇಡಲು ಮತ್ತು ತಾನು ಅಲ್ಲಿರುವ ವರೆಗೆ ತನ್ನ ಸಂಗಾತಿಯಾಗಿರಲು ಒಬ್ಬಳನ್ನು ಮದುವೆಯಾಗುತ್ತಿದ್ದ. ಇಂಥ ತಾತ್ಕಾಲಿಕ ಮದುವೆಯನ್ನು 'ಮುತಾ' ಎನ್ನುತ್ತಿದ್ದರು.[13]

ಭಾರತದಲ್ಲಿ ಮುಖ್ಯ ಉದ್ದೇಶವಾಗಿತ್ತು. "ಅಪುತ್ರಸ್ಯ ಗತಿರ್ನಾಸ್ತಿ" ಎಂಬ ಪ್ರಾಚೀನರ ಉಕ್ತಿ ಇದಕ್ಕೆ ಆಧಾರವಾಗಿತ್ತು.

[12] ಇಂಥ ಮಕ್ಕಳು ವೇಶ್ಯೆಯ ಮಕ್ಕಳಾದುದರಿಂದ ತಾಯಿಯ ಗುರುತೊಂದೇ ಸಾಕು, ತಂದೆಯ ಗುರುತು ಹಚ್ಚುವ ಗೊಡವೆ ಏಕೆ ಎಂದು ಬಿಡುತ್ತಿರಲಿಲ್ಲ. ಪಿತೃತ್ವವನ್ನು ಕಂಡುಹಿಡಿಯಲು ಮಾಡುತ್ತಿದ್ದ ಪ್ರಯತ್ನ ನಾಗರಿಕತೆಯ ಬೆಳವಣಿಗೆಯ ದಾರಿಯಲ್ಲಿ ಒಂದು ಮಹತ್ವದ ಕ್ರಮವೆಂದೇ ಹೇಳಬೇಕು.

[13] ಒಂದು ಸಲ ಸಂಭೋಗ ಸುಖ ಪಡೆದು ಮೂತ್ರವಿಸರ್ಜನೆಮಾಡಿ 'ಮುತಾ' ಮದುವೆಯನ್ನು ಕೊನೆಗೊಳಿಸಬಹುದಾಗಿತ್ತೇನೋ. ಅರ್ಥಾತ್ ಇದು ಅಷ್ಟು ಕ್ಷಿಪ್ರದಾಂಪತ್ಯ ಅಥವಾ ಧಿಡೀರ್ ದಾಂಪತ್ಯ ಎಂದು ನಮ್ಮ ವಿದ್ಯಾರ್ಥಿದೆಸೆಯಲ್ಲಿ ಕಾನೂನು ಪ್ರಾಧ್ಯಾಪಕರೊಬ್ಬರು ತಮಾಷೆಯಾಗಿ ನುಡಿದುದು ನನಗಿನ್ನೂ ಜ್ಞಾಪಕವಿದೆ.—ಲೇಖಕ

ವಿವಾಹ ಕಾಲದಲ್ಲಿ ಕನ್ಯೆಯು ಪ್ರಯೋಜನಾರ್ಥ ಕೊಡುತ್ತಿದ್ದ ಶುಲ್ಕವನ್ನು 'ಮೆಹರ್' ಎಂದು ಕರೆಯುತ್ತಿದ್ದರು. ಇದು ವಿವಾಹದ ಒಂದು ಶರತ್ತೇ ಆಗಿತ್ತು. ಆದರೆ ಈ ಹಣ ಕನ್ಯೆಯ ಕೈ ಸೇರುತ್ತಿತ್ತೋ ಅಥವಾ ಅವಳ ತಂದೆಯ ಅಥವಾ ಪೋಷಕನ ಕೈ ಸೇರುತ್ತಿತ್ತೋ ಎಂಬುದು ನಿಶ್ಚಿತವಾಗಿ ತಿಳಿದುಬಂದಿಲ್ಲ. ಈ ಬಗ್ಗೆ ಅನೇಕ ವಿವಾದಗಳಿವೆ. ಮದುವೆಯಾಗುವ ಹುಡುಗಿಗೇ ನೇರವಾಗಿ ಕನ್ಯಾ ಶುಲ್ಕ ಕೊಡುವ ಪದ್ಧತಿ ಇತ್ತೀಚಿನದೆಂದು ಕೆಲವರ ಅಭಿಪ್ರಾಯ. ಇದಲ್ಲದೆ ಹುಡುಗಿಗೆ ಹುಡುಗಿಯನ್ನು ಪ್ರತಿಯಾಗಿ ಕೊಂಡು ಮದುವೆಗಳು ನಡೆಯುವ ಸಂದರ್ಭದಲ್ಲಿ ಇಂಥ ಶುಲ್ಕ ಕೊಡುವ ಪ್ರಸಂಗ ಬರುತ್ತಿರಲಿಲ್ಲ. ತನ್ನ ಪಾತಿವ್ರತ್ಯಕ್ಕೆ ಭಂಗಬಂದಾಗ ಹೆಂಡತಿ ಇನ್ನೂ ಬರಬೇಕಾಗಿದ್ದ 'ಮೆಹರ್' ಹಣವನ್ನು ಕೇಳುವಂತಿರಲಿಲ್ಲ. ಒಂದು ವೇಳೆ ಆ ಹಣ ವಿವಾಹ ಕಾಲದಲ್ಲಿಯೇ ಬಂದಿದ್ದರೆ ಅದನ್ನು ವಾಪಸು ಕೊಡಬೇಕಾಗುತ್ತಿತ್ತು.

ಇಸ್ಲಾಮ್ ಧರ್ಮದ ಪ್ರಾರಂಭಕ್ಕಿಂತ ಮುಂಚೆ ವಿವಾಹ ವಿಷಯದಲ್ಲಿ ಕನ್ಯೆಗೆ ಸ್ವಾತಂತ್ರ್ಯವಿರಲಿಲ್ಲ. ಅವಳ ತಂದೆ, ಅಣ್ಣತಮ್ಮಂದಿರು, ಚಿಕ್ಕಪ್ಪ, ದೊಡ್ಡಪ್ಪ ಅಥವಾ ಇತರ ಪುರುಷ ಪಾಲಕರು ಆ ವಿವಾಹ ವಿಷಯದಲ್ಲಿ ಮಾತನಾಡುವ ಅಧಿಕಾರ ಹೊಂದಿರುತ್ತಿದ್ದರು. ಹಾಗೆ ವಿವಾಹವಾಗುವವಳು ಹುಡುಗಿಯಾಗಿರಲಿ ಅಥವಾ ಬೆಳೆದವಳಾಗಿರಲಿ, ವಿಧವೆಯಾಗಿರಲಿ ಅಥವಾ ಕುಮಾರಿಯಾಗಿರಲಿ, ಅದರಿಂದ ಅಂಥ ಅಧಿಕಾರಕ್ಕೆ ಚ್ಯುತಿ ಬರುತ್ತಿರಲಿಲ್ಲ. ಅವಳ ಸಮ್ಮತಿಗಂತೂ ಆಸ್ಪದವೇ ಇರಲಿಲ್ಲ. ಹುಡುಗಿಯನ್ನು ಬಲವಂತವಾಗಿ ಮದುವೆ ಮಾಡಿಕೊಡುವ ಪದ್ಧತಿಯೂ ಬಳಕೆಯಲ್ಲಿತ್ತು.[14] ತಂದೆ ತೀರಿಕೊಂಡಾಗ ತನ್ನ ಹೆತ್ತ ತಾಯಿಯೊಬ್ಬಳನ್ನುಳಿದು ತಂದೆಯ ಇನ್ನುಳಿದ ವಿಧವೆಯರನ್ನು ಮಗ ಅಥವಾ ಇತರ ವಾರಸುದಾರ ಬಲವಂತವಾಗಿ ಮದುವೆ ಮಾಡಿಕೊಳ್ಳುವ ರೂಢಿಯೂ ಬಳಕೆಯಲ್ಲಿತ್ತು. ವಿಧವೆಯರನ್ನು ಮೃತನ ಆಸ್ತಿ ಎಂಬಂತೆ ವಾರಸುದಾರರು ಹಂಚಿಕೊಳ್ಳುತ್ತಿದ್ದರು.

ಅರಬರು ಇಂತಿಷ್ಟೇ ಸ್ತ್ರೀಯರನ್ನು ಮದುವೆಯಾಗಬೇಕೆಂಬ ನಿರ್ಬಂಧವಿರಲಿಲ್ಲ. ಬಹುಪತ್ನೀತ್ವ ಸಾಕಷ್ಟು ಪ್ರಚಾರದಲ್ಲಿತ್ತು. ಅಲ್ಲದೆ ಹುಡುಗಿಯರನ್ನು ಗುಲಾಮರನ್ನಾಗಿ ಇಟ್ಟುಕೊಳ್ಳುವ ಪದ್ಧತಿಯೂ ಜಾರಿಯಲ್ಲಿತ್ತು.[15] ವಿವಾಹಕ್ಕೆ ನಿಷಿದ್ಧವಾದ ಸಂಬಂಧಗಳು ಬಹು ಸಂಕುಚಿತವಾಗಿದ್ದುವು. ಉದಾಹರಣೆಗೆ ಒಬ್ಬ ಅರಬ ತನ್ನ ತಾಯಿ, ಅಜ್ಜಿ, ಅಕ್ಕತಂಗಿ, ಮಗಳು ಅಥವಾ ಮೊಮ್ಮಗಳು ಇವರನ್ನು ಮತ್ತು ತನ್ನ ಚಿಕ್ಕಮ್ಮ ದೊಡ್ಡಮ್ಮ ಅಥವಾ ಅವರ ಮಕ್ಕಳನ್ನು ಪ್ರಾಯಶಃ ಮದುವೆಯಾಗಲು ಬರುತ್ತಿರಲಿಲ್ಲವೆಂದು ತಿಳಿಯುವುದು. ಆದರೆ ಅರಬರಲ್ಲಿ 'ಮೆಜಿಯನ್' ಪಂಥೀಯರು ತಮ್ಮ ಪುತ್ರಿಯರನ್ನೇ ಅಥವಾ ಅಕ್ಕತಂಗಿಯರನ್ನೆ ಮದುವೆಯಾಗಬಹುದಿತ್ತು. ಅರಬ ತನ್ನ ಮಲತಾಯಿಯನ್ನು, ದೊಡ್ಡಪ್ಪ ಚಿಕ್ಕಪ್ಪನ ಮಗ

---

14 ಇದು ಬಹುಮಟ್ಟಿಗೆ ಪ್ರಾಚೀನ ಹಿಂದೂ ಪದ್ಧತಿಯನ್ನು ಹೋಲುವುದು. ಪ್ರಾಚೀನ ಹಿಂದೂ ಧರ್ಮಶಾಸ್ತ್ರಗಳು "ನಸ್ತ್ರೀ ಸ್ವಾತಂತ್ರ್ಯಮರ್ಹಸಿ" ಎಂದು ಹೇಳಿರುವುದನ್ನು ಗಮನಿಸಬೇಕು.

15 ವಿವಾಹಿತಳಾದ ಮಗಳೊಂದಿಗೆ ದಾಸಿಯರನ್ನು ಕಳುಹಿಸುವ ಪದ್ಧತಿ ಪ್ರಾಚೀನ ಭಾರತದಲ್ಲಿಯೂ ಪ್ರಚಲಿತವಿತ್ತು.

ಳನ್ನು, ಹೆಂಡತಿಯ ಅಕ್ಕತಂಗಿಯರನ್ನು ಮದುವೆಯಾಗಬಹುದಿತ್ತು. ಆದರೆ ತನಗೆ ಹೆಣ್ಣು ಕೊಟ್ಟ ಅತ್ತೆಯನ್ನಾಗಲಿ ತನ್ನ ಮಲಮಗಳನ್ನಾಗಲಿ ಮದುವೆಯಾಗಲು ಬರುತ್ತಿತ್ತೋ ಎಂಬುದು ಸಂಶಯಾಸ್ಪದವಾಗಿದೆ. ಅನೇಕ ಹೆಂಡತಿಯರನ್ನು ವಿವಾಹವಾಗಲು ಅರಬರು ಹೇಗೆ ಸಮರ್ಥರಾಗಿದ್ದರೋ ಹಾಗೆಯೇ ಹೆಂಡತಿಯನ್ನು ಬಿಡಲೂ ಅವರು ಪೂರ್ಣಾಧಿಕಾರ ಹೊಂದಿದ್ದರು. ಅವರ ಅಧಿಕಾರವನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಬಿಡುವುದಕ್ಕೆ ಯಾವ ಕಾರಣವನ್ನೂ ಹೇಳಬೇಕಾಗಿರಲಿಲ್ಲ. ಯಾವ ಕ್ರಮವನ್ನೂ ಅನುಸರಿಸಬೇಕಾಗಿರಲಿಲ್ಲ. ಇಂಥ ವಿಚ್ಛೇದವನ್ನು 'ತಲ್ಲಾಖ್' ಎಂದು ಕರೆಯುತ್ತಿದ್ದರು. ಹೆಂಡತಿಯನ್ನು ಅನೇಕ ಸಲ ಬಿಡಬಹುದಾಗಿತ್ತು ; ಮತ್ತೆ ಕಟ್ಟಿಕೊಳ್ಳಬಹುದಾಗಿತ್ತು. ತಾತ್ಕಾಲಿಕ ವಿಚ್ಛೇದವನ್ನು 'ಏಲಾ' ಎಂದು ಕರೆಯುತ್ತಿದ್ದರು. ಆದರೆ ಗಂಡ, 'ತನ್ನ ಹೆಂಡತಿ ತನ್ನ ತಾಯಿಯ ಬೆನ್ನು ಇದ್ದಂತೆ,' ಎಂದು ಹೇಳಿ ಬಿಟ್ಟರೆ ಅದು ಪೂರ್ಣ ವಿಚ್ಛೇದವೆಂದೆ ಹೇಳಲ್ಪಡುತ್ತಿತ್ತು. ಮತ್ತೆ ಮದುವೆಗೆ ಆಸ್ಪದವೇ ಇರುತ್ತಿರಲಿಲ್ಲ. ಈ ಬಗೆಯ ವಿಚ್ಛೇದವನ್ನು 'ಜಿಹಾರ್' ಎಂದು ಕರೆಯುತ್ತಿದ್ದರು.

ಹೆಂಡತಿಗೆ ವಿಚ್ಛೇದನ ಕೇಳುವ ಅಧಿಕಾರ ಇರಲಿಲ್ಲ. ಆದರೆ ಅವಳ ತಂದೆ ತಾಯಿಯರು ಸೌಹಾರ್ದಯುತವಾಗಿ ಅವಳ ಗಂಡನ ಮನವೊಲಿಸಿ 'ಮೆಹರ್' ಹಣವನ್ನು ಹಿಂತಿರುಗಿಸಿ ಮಗಳನ್ನು ವಿವಾಹ ಬಂಧನದಿಂದ ಬಿಡಿಸಿಕೊಳ್ಳಬಹುದಾಗಿತ್ತು. ಇದನ್ನು 'ಖುಲಾ' ಎಂದು ಕರೆಯುತ್ತಿದ್ದರು. ಇದರಿಂದ ವಿವಾಹ ಬಂಧನ ಸಂಪೂರ್ಣವಾಗಿ ಕಳಚಿಹೋಗುತ್ತಿತ್ತು.

'ತಲ್ಲಾಕ್', 'ಜಿಹಾರ್', 'ಏಲಾ', 'ಖುಲಾ' ಈ ಪದ್ಧತಿಗಳಿಂದ ಬೇರ್ಪಟ್ಟ ಸ್ತ್ರೀ 'ಇದತ್' ಎಂದು ಕರೆಯಲ್ಪಡುವ ಸ್ವಲ್ಪ ಕಾಲ ಗತಿಸುವ ವರೆಗೆ ಮತ್ತೆ ಮದುವೆಯಾಗುವಂತಿರಲಿಲ್ಲ. ಆಕಸ್ಮಾತ್ ಗರ್ಭಿಣಿ ಇದ್ದರೆ ಮಗುವಿನ ಪಿತೃತ್ವನಿರ್ಣಯದೃಷ್ಟಿಯಿಂದ ಒಂದು ನಿರ್ದಿಷ್ಟ ಕಾಲ ಪುನರ್ವಿವಾಹವನ್ನು ವರ್ಜಿಸುವುದೇ 'ಇದತ್' ಪದ್ಧತಿಯ ಉದ್ದೇಶವಾಗಿದ್ದಿರಬೇಕು.

ದತ್ತಕ ಪದ್ಧತಿಯೂ ಅರಬರಲ್ಲಿ ಬಳಕೆಯಲ್ಲಿತ್ತು. ಆ ಬಗ್ಗೆ ಯಾವುದೇ ವಿಧಿ ವಿಧಾನ ವಿದ್ದುದು ಖಚಿತವಾಗಿ ತಿಳಿದಿಲ್ಲ. ದತ್ತಕಪುತ್ರ ದತ್ತಕತಂದೆಯ ವಂಶಕ್ಕೆ ಸೇರಿದವನಾಗಿ ಅವನ ಔರಸಪುತ್ರನಂತೆಯೇ ಎಲ್ಲ ಹಕ್ಕುಬಾಧ್ಯತೆಗಳಿಗೆ ಪಾತ್ರನಾಗಿರುತ್ತಿದ್ದ.[16] ಹೆಣ್ಣು ಹುಟ್ಟುವುದೆಂದರೆ ಅರಬರಿಗೆ ಅಪಶಕುನ. ಹೆಣ್ಣು ಸಂತತಿಗೆ ಅವರಲ್ಲಿ ಸ್ಥಾನಮಾನವಿರಲಿಲ್ಲ. ಅದೇ ಗೌಣವೆಂದು ಪರಿಗಣಿಸುತ್ತಿದ್ದರು.[17] ಪ್ರವಾದಿ ಮುಹಮ್ಮದರ ಕಾಲದಲ್ಲಿಯೂ ಇಂಥ ಭಾವನೆ ಇದ್ದುದು ತಿಳಿದುಬರುವುದು. ಹೆಣ್ಣು ಹುಟ್ಟಿದೊಡನೆ ಅದನ್ನು ಸಜೀವವಾಗಿ ಹೂಳಿಬಿಟ್ಟ ಅನೇಕ ಪ್ರಸಂಗಗಳೂ ಸಂಭವಿಸಿದ್ದುಂಟು. ಮುಹಮ್ಮದರು ಈ ದುಷ್ಟ ಪದ್ಧತಿಯನ್ನು ತೆಗೆದು ಹಾಕಿದರೆಂದು ಕಂಡುಬರುವುದು.

ಇಸ್ಲಾಮ್ ಪೂರ್ವದ ಅರಬರ ಆಸ್ತಿಪಾಸ್ತಿಗಳು ಹೇಳಿಕೊಳ್ಳುವಂತಹವೇನೂ ಇರಲಿಲ್ಲ. ಒಂಟೆ, ಹಸು, ಡೇರೆ ಹಾಕುವ ಸರಂಜಾಮುಗಳು ಮತ್ತು ಕೆಲವು ಪಾತ್ರೆ ಇವೇ ಅವರ ದೊಡ್ಡ ಆಸ್ತಿ. ಹಣದ ಚಲಾವಣೆ ಅರಬ್ಬರಿಗೆ ತಿಳಿದಿದ್ದಿತು. ಗುಲಾಮರನ್ನು ಸರ್ವೇ ಸಾಧಾರಣವಾಗಿ

---

[16] ಇದು ಸಂಪೂರ್ಣ ಹಿಂದೂ ದತ್ತಕ ಪದ್ಧತಿಯನ್ನೇ ಹೋಲುವುದು.

[17] ಇಂಥ ಭಾವನೆ ಭಾರತೀಯರಲ್ಲೂ ಕೆಲವು ಕಡೆ ಇದ್ದುದು ಕಂಡುಬಂದಿದೆ,

ಅಮೂಲ್ಯ ಆಸ್ತಿ ಎಂದು ಪರಿಗಣಿಸುತ್ತಿದ್ದರು. ನಗರ ಪ್ರದೇಶದಲ್ಲಿ ಮನೆಮಠಗಳೂ ಅಂಗಡಿಗಳೂ ಇದ್ದು ಅವು ಬೆಲೆಯುಳ್ಳ ಆಸ್ತಿಗಳು ಎನಿಸುತ್ತಿದ್ದವು. ಒಡೆತನ ವೈಯಕ್ತಿಕವಾಗಿತ್ತು. ಅವಿಭಕ್ತ ಕುಟುಂಬ ಪದ್ಧತಿಯಿರಲಿಲ್ಲ. ಪಿತ್ರಾರ್ಜಿತ ಅಥವಾ ಸ್ವಾರ್ಜಿತ ಮತ್ತು ಸ್ಥಿರ ಅಥವಾ ಚರ ಎಂಬ ಪ್ರಭೇದಗಳಿರಲಿಲ್ಲ. ಪೂಜಾ ಸ್ಥಳಗಳನ್ನು ಬಿಟ್ಟರೆ ಸಾರ್ವಜನಿಕ ಆಸ್ತಿ ಎಂಬುದೇ ಅವರಿಗೆ ಗೊತ್ತಿರಲಿಲ್ಲ.

ಗುಲಾಮ ತಾನು ಸ್ವತಃ ಮತ್ತೊಬ್ಬನ ಆಸ್ತಿಯಾಗಿದ್ದುದರಿಂದ ಸ್ವಂತ ಆಸ್ತಿಯನ್ನು ಹೊಂದುವ ಅಧಿಕಾರವಿರಲಿಲ್ಲ. ಹೆಣ್ಣುಮಕ್ಕಳಿಗೆ ವಾರಸು ಅಧಿಕಾರವಿರಲಿಲ್ಲ. ಆದರೆ ಹೆಂಗಸರು ಆಸ್ತಿಯನ್ನು ಹೊಂದಿರಬಹುದಾಗಿತ್ತು. ಸ್ತ್ರೀಯರಿಗೆ ತನ್ನ ಗಂಡನಿಂದ 'ಮೆಹರ್' ರೂಪವಾಗಿ ಅಥವಾ ಕೊಡುಗೆಯ ರೂಪವಾಗಿ ಅಥವಾ ತಂದೆತಾಯಿ ಬಂಧುಬಳಗದವರಿಂದ ಕೊಡುಗೆ ರೂಪವಾಗಿ ಬಂದ ಯಾವುದೇ ಸ್ವತ್ತಿನ ಮೇಲೆ ಅವಳಿಗೆ ಸಂಪೂರ್ಣ ಹಕ್ಕು ಇರುತ್ತಿತ್ತು. ಕೆಲವು ಸಲ ಸ್ತ್ರೀಯರು ವ್ಯಾಪಾರೋದ್ಯಮಗಳಿಂದ ಅಪಾರ ಧನಾರ್ಜನೆ ಮಾಡುತ್ತಿದ್ದರು. ಮತ್ತು ಭೂಮಿಗಳನ್ನೂ ಮನೆಮಾರುಗಳನ್ನೂ ಕೊಂಡು ಒಡೆಯರಾಗುತ್ತಿದ್ದರು.[18] ಹೀಗಿದ್ದೂ ಸ್ತ್ರೀ ತನ್ನ ತಂದೆತಾಯಿ, ಬಂಧುಬಳಗ ಅಥವಾ ಗಂಡನ ರಕ್ಷಣೆಯಿಲ್ಲದಾಗ ಅವಳ ಜೀವನಕ್ಕೆ ಮತ್ತು ಆಸ್ತಿಪಾಸ್ತಿಗಳಿಗೆ ಸದಾ ಭಯ ಕಾದಿರುತ್ತಿತ್ತು. ಅವಳ ರಕ್ಷಕನೇ ಅಪ್ರಾಮಾಣಿಕನಾದಲ್ಲಿ ಅವಳು ಅಸಹಾಯಕಳಾಗುತ್ತಿದ್ದಳು. ಹೆಣ್ಣು ಅಬಲೆ ಎಂಬ ಕಲ್ಪನೆ ಅರಬರಲ್ಲಿಯೂ ಇತ್ತೆಂದು ತೋರುವುದು.

ಅಪ್ರಬುದ್ಧ ಮಕ್ಕಳ ಗತಿ ಇನ್ನೂ ಶೋಚನೀಯವಾಗಿತ್ತು. ಪಾಲಕರ ಕೈವಾಡಗಳಿಂದ ಅವರಿಗೆ ಯಾವ ರಕ್ಷಣೆಯೂ ದೊರೆಯುತ್ತಿದ್ದಿಲ್ಲ.[19]

ಒಬ್ಬ ಅರಬ್ ಒಡೆಯ ತನ್ನ ಆಸ್ತಿಪಾಸ್ತಿಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಮಾರಲು ಅಥವಾ ದೇಣಿಗೆಯಾಗಿ ಕೊಡಲು, ಸಾಲರೂಪವಾಗಿ ಕೊಡಲು, ಅಡಮಾನ ಮಾಡಲು ಅಥವಾ ಗುತ್ತಿಗೆ ಕೊಡಲು ಅನನ್ಯಾಧಿಕಾರ ಹೊಂದಿದ್ದ. ಮಾರಾಟದ ಹೆಸರಿನಲ್ಲಿ ಯಾವುದೇ ಬಗೆಯ ಒಪ್ಪಂದ ಮಾಡಿಕೊಳ್ಳಲು ಸ್ವತಂತ್ರನಾಗಿದ್ದ. ಕೆಲವು ವ್ಯವಹಾರಗಳು "ವಾಯಿದಾ" ರೂಪದವಾಗಿರುತ್ತಿದ್ದುವು. ಮತ್ತೆ ಕೆಲವು ಜೂಜಾಟ ಅಥವಾ ಪಣ ಕಟ್ಟುವುದನ್ನು ಹೋಲುತ್ತಿದ್ದುವು. ಇಸ್ಲಾಮ್ ಪೂರ್ವದ ಅರಬ್ಬರ ಕೆಲವು ವಹಿವಾಟುಗಳನ್ನು ಪರಿಶೀಲಿಸಿದಾಗ ಆಸ್ತಿಯ ಹಸ್ತಾಂತರ ಅವರಲ್ಲಿ ಆಗಲೇ ಪ್ರಚಲಿತವಿತ್ತೆಂದು ಕಂಡುಬರುವುದು. ಪದಾರ್ಥಕ್ಕೆ ಪದಾರ್ಥವನ್ನೇ ವಿನಿಮಯ ಮಾಡುವುದನ್ನು 'ಮುವಾಯಿಜಾ' ಎನ್ನುತ್ತಿದ್ದರು. ಹಣಕ್ಕೆ ಪದಾರ್ಥ ಕೊಡುವುದನ್ನು 'ಬೈ'[20] ಎನ್ನುತ್ತಿದ್ದರು. ದುಡ್ಡಿಗೆ ದುಡ್ಡನ್ನು ವಿನಿಮಯ ಮಾಡಿಕೊಳ್ಳುವುದನ್ನು

---

18 'ಖಾದಿಜಾ' ಎಂಬ ಇಂಥ ವಣಿಕ್-ವಿಧವೆಯನ್ನೇ ಪ್ರವಾದಿ ಮುಹಮ್ಮದರು ಮದುವೆಯಾದರೆಂಬುದು ಇತಿಹಾಸದಿಂದ ತಿಳಿದುಬರುವುದು.

19 ಇದಕ್ಕೆ ವ್ಯತಿರಿಕ್ತವಾಗಿ ಪ್ರಾಚೀನ ಹಿಂದೂ ಧರ್ಮಶಾಸ್ತ್ರಗಳ ಪ್ರಕಾರ ಪಾಲಕ ಅಥವಾ ಪೋಷಕ ಬಹಳ ಹೊಣೆಗಾರನಾದ ವ್ಯಕ್ತಿಯಾಗಿದ್ದ.

20 ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಮತ್ತು ಹಳೆಯ ಹೈದರಾಬಾದ್ ಪ್ರದೇಶಗಳಲ್ಲಿ ವಿಕ್ರಯ ಪತ್ರವನ್ನು ಈಗಲೂ 'ಬೈನಾಮಾ' ಎಂದು ಕರೆಯುತ್ತಾರೆ,

'ಸರ್ಫ್' ;[21] ಹಣ ಮುಂಗಡವಾಗಿ ಕೊಟ್ಟು ಪದಾರ್ಥವನ್ನು ಆಮೇಲೆ ಪಡೆಯುವುದನ್ನು 'ಸಲಮ್'[22] ಎನ್ನುತ್ತಿದ್ದರು. ಮಾರಾಟವನ್ನು ರದ್ದುಗೊಳಿಸುವ ಅಥವಾ ಆಖೈರುಗೊಳಿಸುವ ಅಧಿಕಾರವೂ ಇರುತ್ತಿತ್ತು. ಉತ್ಪಾದನ ವೆಚ್ಚವನ್ನಷ್ಟೇ ತೆಗೆದುಕೊಳ್ಳುವುದನ್ನು 'ಅಲ್ ತುವಾರಿಯಾ' ಎನ್ನುತ್ತಿದ್ದರು. ಅದಕ್ಕಿಂತ ಕಡಿಮೆ ಬೆಲೆಯಲ್ಲಿ ಮಾರುವುದನ್ನು 'ವಜೀ' ಎಂದು ಹೇಳುತ್ತಿದ್ದರು. ಚೌಕಾಸಿ ಮಾರಾಟವನ್ನು 'ಮುಸಾವುಮಾ' ಎಂದು ಕರೆಯುತ್ತಿದ್ದರು.

---

[21] ಇಂಥ ಧನವಿನಿಮಯಗಾರನನ್ನು 'ಸರ್‍ರಾಫ್' ಎಂದು ಕರೆಯುವ ರೂಢಿ ಈಗಲೂ ಬಳಕೆಯಲ್ಲಿದೆ.

[22] ಇದನ್ನು ಈಗಲೂ ವಾಯಿದಾ ವ್ಯವಹಾರವೆನ್ನುತ್ತಾರೆ. 'ವಾಯಿದಾ' ಕೂಡ ಅರಬ್ ಶಬ್ದವೇ ಆಗಿದೆ.

ಮು. ಶಿವನಂಜಯ್ಯ

ಸಮಕಾಲೀನ ಗ್ರಾಮಾಂತರ ಸಮಸ್ಯೆಗಳು

ಕೌಟುಂಬಿಕ ಸಮಸ್ಯೆಗಳು

ಭಾರತ ಹಳ್ಳಿಗಳ ದೇಶ ; ಗ್ರಾಮಾಭಿವೃದ್ಧಿಯೇ ಭಾರತದ ಅಭಿವೃದ್ಧಿ ; ಹಳ್ಳಿಗಳು ಭಾರತದ ಬೆನ್ನೆಲುಬು—ಇತ್ಯಾದಿ ಮಾತುಗಳು ಸವಕಲು ನಾಣ್ಯಗಳಾಗಿವೆ. ಈ ಮಾತುಗಳೇನೋ ನಿಜವೆ. ಆದರೆ ನಾವು ಹಳ್ಳಿಗಳ ನವನಿರ್ಮಾಣದಲ್ಲಿ ಮಾತಿಗಿಂತ ಹೆಚ್ಚಾಗಿ ಕೃತಿಯ ಮೂಲಕ ಎಷ್ಟರಮಟ್ಟಿಗೆ ತೊಡಗಿದ್ದೇವೆ ಎಂದು ನೋಡಿದಾಗ ಯಾರಿಗಾದರೂ ನಿರಾಶೆಯಾಗದಿರದು. ಪಟ್ಟಣಗಳಲ್ಲಿನ ಸೌಲಭ್ಯಗಳು ಮತ್ತು ಸಮಸ್ಯೆಗಳನ್ನು ಹಳ್ಳಿಗಳ ಸೌಲಭ್ಯ ಸಮಸ್ಯೆಗಳೊಡನೆ ಹೋಲಿಸಿದಾಗ ನಾವು ಎತ್ತ ಕಡೆ ಹೆಚ್ಚು ಒಲವು ವ್ಯಕ್ತಪಡಿಸುತ್ತೇವೆ ; ಎತ್ತಕಡೆ ಹೆಚ್ಚು ಮಾತನಾಡುತ್ತೇವೆ ಎಂಬುದು ಸ್ಪಷ್ಟವಾಗುತ್ತದೆ. ಗ್ರಾಮಾಂತರ ಪ್ರದೇಶದ ಸಮಸ್ಯೆಗಳು ಒಂದಲ್ಲ, ಹಲವಾರು. ಅಷ್ಟೇ ಜಟಿಲವೂ ಕೂಡ. ಕುಟುಂಬದೊಳಗಿನ ಆಂತರಿಕ ವ್ಯವಹಾರ ಗಳಿಂದ ಹಿಡಿದು ಸಾಮಾಜಿಕ ಸಮಸ್ಯೆಗಳನ್ನೂ ಒಳಗೊಂಡು ಸರ್ಕಾರಕ್ಕೆ ಸಂಬಂಧಿಸಿದ ವ್ಯವಹಾರ ಗಳ ವರೆಗೂ ಇದರ ವ್ಯಾಪ್ತಿ ಚಾಚಿಕೊಳ್ಳುತ್ತದೆ.

ಕೌಟುಂಬಿಕ ಸಮಸ್ಯೆಗಳು ಸಾಮಾನ್ಯವಾಗಿ ಬಂಧುತ್ವದ ಹಿನ್ನೆಲೆಯಲ್ಲಿನ ಘರ್ಷಣೆಗಳಾಗಿ ರುತ್ತವೆ. ಈ ಸಮಸ್ಯೆಗಳ ಹಿನ್ನೆಲೆಯಲ್ಲಿ ಪೂರ್ವಜರು ಹಾಕಿಕೊಟ್ಟ ಸಾಂಪ್ರದಾಯಿಕ ಪದ್ಧತಿ ಗಳೂ ಕೂಡ ಕೆಲಸಮಾಡುತ್ತವೆ. ಈ ಹಿರಿಯರ ದಾಟಬಾರದ ಹಾದಿಗಳು ಕೆಲವೊಮ್ಮೆ ವಿಕೋಪಕ್ಕೆ ಹೋಗಿ ವಿನಾಶಕ್ಕೆ ಕೊಂಡೊಯ್ಯುತ್ತವೆ. ವ್ಯಕ್ತಿವ್ಯಕ್ತಿಯ ಘರ್ಷಣೆಗೆ ಕೆಲಮಟ್ಟಿಗೆ ಮನೋವೈಜ್ಞಾನಿಕ ಕಾರಣಗಳೂ ಇರುತ್ತವೆ. ಸಮಸ್ಯೆಗಳ ಅನಿವಾರ್ಯತೆಯನ್ನುಳಿದು ಮಾನವಕೃತವಾದ, ಬಗೆಹರಿಸಬಹುದಾದ ಸಮಸ್ಯೆಗಳನ್ನು ಚರ್ಚಿಸುವುದು ವಾಸಿ. ಗ್ರಾಮಾಂತರ ಪ್ರದೇಶಗಳ ಕುಟುಂಬಗಳು ಸಾಮಾನ್ಯವಾಗಿ ಮೊದಲು ಅವಿಭಕ್ತ ಕುಟುಂಬಗಳಾಗಿದ್ದು ಅನಂತರ ಒಡೆದು ವಿಭಕ್ತ ಕುಟುಂಬಗಳಾಗುತ್ತವೆ. ಈ ಹಿನ್ನೆಲೆಯಲ್ಲಿಯೇ ಸಾಂಸಾರಿಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಒಂದು ಮನೆಯಲ್ಲಿ ನಾಲ್ಕು ಜನ ಅಣ್ಣತಮ್ಮಂದಿರಿದ್ದಾರೆ ಎಂದು ಕೊಳ್ಳೋಣ. ತಂದೆ ಸಾಮಾನ್ಯವಾಗಿ ಮನೆಯ ಯಜಮಾನನಾಗಿರುತ್ತಾರೆ. ತಂದೆಯ ಯಾಜ್ಯಮಾನ್ಯ ಇರುವ ವರೆಗೂ ಅದು ಅವಿಭಕ್ತ ಕುಟುಂಬವೆ. ಆದರೆ ತಂದೆ ತೀರಿಕೊಂಡ ಅನಂತರವೂ ಮನೆ ಒಟ್ಟಾಗಿರಲು ಸಾಧ್ಯ. ಆಗ ಮನೆಯ ಯಜಮಾನಿಕೆ ಹಿರಿಯ ಮಗನಿಗೆ ದಕ್ಕುತ್ತದೆ. ಮನೆಯ ಹಿರಿಯ ಮಗ ಬುದ್ಧಿವಂತನಾಗಿದ್ದರೆ ಸಮಸ್ಯೆಗಳು ಅಷ್ಟಾಗಿ ಬರುವುದಿಲ್ಲ. ಆದರೆ ಅವನು ಶಕ್ತನಲ್ಲದಿದ್ದರೆ ಇಡೀ ಮನೆ ಅಭಿವೃದ್ಧಿಯ ದಿಸೆಯಲ್ಲಿ ಹಿಂದುಳಿಯಬೇಕಾಗುತ್ತದೆ. ಅಂದರೆ ಒಂದು ಮನೆಯ ಇಡೀ ಹಣೆಯ ಬರಹ ಒಬ್ಬನ ಕೈಯಲ್ಲಿರುತ್ತದೆ. ಅವರಲ್ಲಿ

ಯಾವನಾದರೂ ಒಬ್ಬ ಬುದ್ಧಿವಂತನಿರಬಹುದು ; ವ್ಯವಹಾರಚತುರನಿರಬಹುದು. ಆದರೆ ಆತನಿಗೆ ಯಜಮಾನಿಕೆಯನ್ನು ಒಪ್ಪಿಸಲು ಹಿರಿಯರು ಹಾಕಿಕೊಟ್ಟ ಹಿರಿಯತನ ಅಡ್ಡ ಬರುತ್ತದೆ. ಆಗ ಅಣ್ಣತಮ್ಮಂದಿರಲ್ಲಿ ಇರಿಸುಮುರಿಸು ಉಂಟಾಗುವ ಸಾಧ್ಯತೆ ಹೆಚ್ಚು. ಇದು ಸಾಮಾನ್ಯವಾಗಿ ಕುಟುಂಬದ ವಿಘಟನೆಯಲ್ಲಿ ಪರ್ಯವಸಾನವಾಗುತ್ತದೆ. ಪಾಲುಗಾರಿಕೆಯಲ್ಲಿ ಯಾರಿಗೆ ಎಷ್ಟು ಲಭ್ಯವಾಗುತ್ತದೆ ಎಂಬುದು ಮನೆಯಲ್ಲಿನ ಅವರ ಸ್ಥಾನಮಾನಗಳನ್ನವಲಂಬಿಸಿರುತ್ತದೆ. ಕುಟುಂಬಗಳಲ್ಲಿ ನಡೆಯುವ ಅಧಿಕಾರಕ್ಕಾಗಿ ಹೋರಾಟ ಸಾಮಾನ್ಯವಾಗಿ ಸ್ವಾರ್ಥೈಕಪರವಾಗಿರುತ್ತದೆ, ಇಲ್ಲವೆ ಅಹಂತೃಪ್ತಿಗಾಗಿಯಾಗಿರುತ್ತದೆ. ಮನೆಯ ಗಂಡುಮಕ್ಕಳಲ್ಲಿ ಮಾತ್ರವಲ್ಲ, ಮನೆಯ ಸೊಸೆಯಂದಿರಲ್ಲಿಯೂ ಹಿರಿಯತನ ಕಿರಿಯತನದ ಪ್ರಜ್ಞೆ ಪ್ರಮುಖವಾಗಿ ಕೆಲಸ ಮಾಡುತ್ತದೆ.

ಒಂದು ಸಂಸಾರ ಸುಗಮವಾಗಿ ಕೆಲಸ ಮಾಡಬೇಕಾದರೆ ಮನೆಮಂದಿಯೆಲ್ಲ ಸಮಾನ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಆದರೆ ಮಾನವ ಪ್ರಕೃತಿ ಹಾಗಲ್ಲ, ಜವಾಬ್ದಾರಿ ನೇರವಾಗಿ ತನ್ನ ಹೆಗಲ ಮೇಲೆ ಬೀಳುವವರೆಗೂ ಯಾವುದೇ ಅವಿಭಕ್ತಕುಟುಂಬದ ಸದಸ್ಯ ಎಚ್ಚೆತ್ತುಕೊಳ್ಳುವುದೇ ಇಲ್ಲ. ಒಂದು ಮರದ ದಿಮ್ಮಿಯನ್ನು ನಾಲ್ಕು ಜನ ಸಮಾನವಾಗಿ ಹೊತ್ತಿದ್ದಾರೆ ಎಂದುಕೊಳ್ಳೋಣ. ಅವರು ಸಮಾನ ಭಾರವನ್ನು ಭರಿಸಿದರೆ ಯಾರಿಗೂ ಹೆಚ್ಚು ಹೊರೆಯಾಗುವುದಿಲ್ಲ. ದಿಮ್ಮಿಯೂ ಸುಗಮವಾಗಿ ಸಾಗುತ್ತದೆ. ಆದರೆ ನಾಲ್ವರಲ್ಲಿ ಯಾರಾದರೂ ಒಬ್ಬಿಬ್ಬರು ಹೆಗಲು ತಗ್ಗಿಸಿದಾಗ ಉಳಿದವರಿಗೆ ಅದು ಅಸಾಧ್ಯ ಹೊರೆಯಾಗಿ ನೆಲಕ್ಕಿಳಿಯುತ್ತದೆ. ಅವಿಭಕ್ತ ಕುಟುಂಬ ಒದಗಿಸಿಕೊಡುವ ಯಾದೃಚ್ಛಿಕತೆ, ಸೋಮಾರಿತನ, ಸ್ವತಂತ್ರಪ್ರವೃತ್ತಿ ಇವಿಷ್ಟೂ ಮನೆ ಒಡೆಯಲು ಕಾರಣವಾಗುತ್ತವೆ. ಸಹಕಾರತತ್ತ್ವ ಕುಟುಂಬಗಳನ್ನು ಕೊಂಡಿಯಂತೆ ಬೆಸೆಯುತ್ತದೆ. ಆದರೆ ಅದು ಅಸಫಲವಾದಾಗ ಕುಟುಂಬ ಒಡೆದು ಚೂರಾಗುತ್ತದೆ. ಹರಿದು ಹಂಚಿಹೋದಾಗ ಕುಟುಂಬದ ಪ್ರತಿಸದಸ್ಯನೂ ದನ ದುಡಿಯುವಂತೆ ದುಡಿಯುತ್ತಾನೆ. ಯಾಕೆಂದರೆ ತನ್ನ ಆಗುಹೋಗಿಗೆ ತಾನೇ ಹೊಣೆಗಾರನಾಗಿರುತ್ತಾನೆ.

ಅವಿಭಕ್ತ ಕುಟುಂಬ ಮತ್ತು ವಿಭಕ್ತ ಕುಟುಂಬಗಳಲ್ಲಿ ತಮ್ಮವೇ ಆದ ಪ್ರಯೋಜನಗಳು ಮತ್ತು ಸಮಸ್ಯೆಗಳಿವೆ. ಅವಿಭಕ್ತ ಕುಟುಂಬಗಳಲ್ಲಿ ಮೇಲೆ ವಿವರಿಸಿರುವ ಹಾಗೆ ಜವಾಬ್ದಾರಿಯ ಅಭಾವ ಒಂದಾದರೆ ಅಧಿಕಾರದ ದುರುಪಯೋಗದ ಇನ್ನೊಂದು ಮುಖವಿದೆ. ಅದು ಸಾಂಸಾರಿಕ ಆಯವ್ಯಯಗಳಲ್ಲಿ ವ್ಯಕ್ತವಾಗುವ ಅಸ್ಪಷ್ಟ ಅಂಕಿಅಂಶಗಳು. ಕುಟುಂಬದ ವ್ಯವಹಾರವೆಲ್ಲ ಗಾಜಿನ ಮನೆಯಲ್ಲಿನ ವರ್ತನೆಗಳಂತೆ ಸುಸ್ಪಷ್ಟವಾಗಿದ್ದರೆ ಯಾರಿಗೂ ಸಂದೇಹವಿರುವುದಿಲ್ಲ. ಸಂಸಾರವೂ ಒಡೆದುಹೋಗುವುದಿಲ್ಲ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಮನೆಯ ಯಜಮಾನ ತನ್ನ ಸಮಸ್ಯೆಗಳನ್ನು ಇತರರೊಡನೆ ಚರ್ಚಿಸಿ, ಮನೆಯ ಆಯ-ವ್ಯಯವೇನು ಎಂಬುದನ್ನು ಸುಸ್ಪಷ್ಟವಾಗಿ ಮನೆಯ ಸದಸ್ಯರ ಮುಂದೆ ಮಂಡಿಸುವುದಿಲ್ಲ. ಕೆಲವೊಮ್ಮೆ ಕುಟುಂಬದ ಮೇಲಿನ ಸಾಲದ ಹೊರೆಯೇನು ಎಂಬುದೂ ಮನೆಯ ಮಂದಿಗೆ ತಿಳಿದಿರುವುದಿಲ್ಲ. ಇವೆಲ್ಲವೂ ಬೆಳಕಿಗೆ ಬರುವುದು ಪಾಲು ತೆಗೆದುಕೊಳ್ಳುವಾಗಲೆ. ಹೀಗಾಗಿ ಮನೆಯಲ್ಲಿ ಒಂದು ರೀತಿಯ ಶಂಕಾಸ್ಪದ ವಾತಾವರಣ ಉತ್ಪನ್ನವಾಗುತ್ತದೆ. ಕೆಲವೊಮ್ಮೆ ಮನೆಯ ಹಿರಿಯ ತನ್ನ ಹೆಸರಿನಲ್ಲಿಯೋ ಗುಪ್ತವಾಗಿಯೋ ಹಣ ಮತ್ತು ಆಸ್ತಿಗಳನ್ನು ಅಕ್ರಮವಾಗಿ ವಿನ್ಯಾಸಗೊಳಿಸಿ

ಕೊಳ್ಳುವುದೂ ಉಂಟು. ಇದು ಒಂದು ರೀತಿಯಲ್ಲಿ ಕುಟುಂಬದ ಸದಸ್ಯರ ಭದ್ರತೆಯ ಪ್ರಶ್ನೆಯಾದ್ದರಿಂದ ಕುಟುಂಬಗಳು ಬೇಗ ವಿಘಟಿಸುವುದಕ್ಕೆ ಕಾರಣವಾಗುತ್ತದೆ. ಒಂದು ವಿಧದಲ್ಲಿ ಕುಟುಂಬಗಳಲ್ಲಿ ಹೆಪ್ಪುಗಟ್ಟಿಕೊಳ್ಳುವ ಪಟ್ಟಭದ್ರತೆಯೂ ಇದಾಗಿರುತ್ತದೆ.

ಒಟ್ಟು ಕುಟುಂಬಗಳಲ್ಲಿ ಬರುವ ಮತ್ತೊಂದು ಸಮಸ್ಯೆಯೆಂದರೆ ಮಕ್ಕಳ ಲಾಲನೆ ಪಾಲನೆಗಳಲ್ಲಿ ಕಂಡುಬರುವ ನಿರಾಸಕ್ತಿ. ಮಕ್ಕಳ ಬಗ್ಗೆ ನೇರವಾಗಿ ಯಾವ ತಂದೆತಾಯಿಯೂ ಕಾಳಜಿವಹಿಸುವುದಿಲ್ಲ. ಮನೆಯ ಒಡೆಯನೇ ಸಂಪೂರ್ಣವಾಗಿ ಆವರ ಹೊಣೆಯನ್ನು ಹೊರಬೇಕಾಗುವುದರಿಂದ ಅವನಿಗೆ ತಾಳ್ಮೆಯಾಗಲಿ ಕಾಲವಾಗಲಿ ಇರುವುದಿಲ್ಲ. ಅವಿಭಕ್ತ ಕುಟುಂಬದ ಬದುಕು ಒಂದು ರೀತಿಯ ಪ್ರವಾಹದಂತಿರುವುದರಿಂದ ಅಲ್ಲಿ ಸೂಕ್ಷ್ಮತೆಗಳಿಗೆ ಸ್ಥಾನವಿರುವುದಿಲ್ಲ. ಹೀಗಾಗಿ ಮಕ್ಕಳ ಮಾನಸಿಕ ಬೆಳವಣಿಗೆಯ ಮೇಲೆ ಇದು ಪ್ರಭಾವ ಬೀರುತ್ತದೆ.

ಹಿರಿಯರಿಗೂ ಕಿರಿಯರಿಗೂ ಇರುವ ಮಾನಸಿಕ ಅಂತರವೂ ಮನೋವೈಜ್ಞಾನಿಕವಾದ ಕೌಟುಂಬಿಕ ಸಮಸ್ಯೆಗಳಲ್ಲೊಂದು. ಒಬ್ಬೊಬ್ಬ ಸದಸ್ಯನ ಆಲೋಚನೆಗಳೂ ಧೋರಣೆಗಳೂ ಸಂವೇದನೆಗಳೂ ದೈಹಿಕಮೂಲವಾದ ಪ್ರವೃತ್ತಿ ಭಿನ್ನವೃತ್ತಿಗಳ ವ್ಯತ್ಯಾಸವೂ ಪರಸ್ಪರ ಸಾಮರಸ್ಯಗೊಳ್ಳದಿದ್ದಾಗ ಸದಸ್ಯರಲ್ಲಿ ಘರ್ಷಣೆ ಸಂಭವಿಸುತ್ತದೆ. ಒಬ್ಬೊಬ್ಬರ ಬದುಕಿನ ಗುರಿಗಳಲ್ಲಿನ ವ್ಯತ್ಯಾಸ, ರುಚಿ ವೈವಿಧ್ಯ ಮುಂತಾದ ದೈಹಿಕ ಮಾನಸಿಕ ಕಾರಣಗಳೂ ಪ್ರಬಲವಾಗಿ ಕೆಲಸಮಾಡುತ್ತವೆ.

ಗ್ರಾಮಾಂತರ ಕುಟುಂಬಗಳಲ್ಲಿ ಉಂಟಾಗುವ ಸಮಸ್ಯೆಗಳಲ್ಲಿ ಲೈಂಗಿಕ ಅಂಶವನ್ನೂ ಮರೆಯುವಂತಿಲ್ಲ. ಒಟ್ಟು ಕುಟುಂಬಗಳ ಸದಸ್ಯರಲ್ಲಿ ಉಂಟಾಗುವ ಸಂಶಯಧೋರಣೆಯೂ ಕೆಲವೊಮ್ಮೆ ಮನುಷ್ಯಸಹಜವಾದ ನೀತಿವಿರುದ್ಧವಾದ ಸಂಬಂಧಗಳೂ ವಿಘಟನೆಗೆ ಬೇಗ ಕಾರಣವಾಗುತ್ತವೆ. ಲೈಂಗಿಕ ಮತ್ಸರ ಅವಿಭಕ್ತ ಕುಟುಂಬಗಳಲ್ಲಿ ಬೇಗ ಬೆಳೆಯಲು ಅವಕಾಶವಿದೆ.

ಗ್ರಾಮಾಂತರ ಅವಿಭಕ್ತ ಕುಟುಂಬಗಳಲ್ಲಿ ಹೆಂಗಸರದೇ ಆದ ಸಮಸ್ಯೆಯ ಒಂದು ಮುಖವಿದೆ. ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಇತ್ಯಾದಿಗಳ ವಾಸನೆ ಹಳ್ಳಿಗಳಿಗೆ ಹಬ್ಬದಿದ್ದರೂ ಸಾಮಾಜಿಕವಾದ ವರ್ತನೆಗಳನ್ನುಳಿದು ಕೌಟುಂಬಿಕ ವರ್ತುಲದಲ್ಲಿ ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಸ್ತ್ರೀಗೆ ಇದ್ದ ಸ್ಥಾನಮಾನಗಳಿಂದಾಗಿ ಅನಾಗರಿಕವಾಗಿ ನಡೆಸಿಕೊಳ್ಳುತ್ತಿದ್ದ ಕಾಲವೂ ಇತ್ತು. ಆದರೆ ಹಳ್ಳಿಗಳಲ್ಲಿ ನಾಗರಿಕತೆ ಬೆಳೆದಂತೆ ಪರಿಸ್ಥಿತಿ ಸುಧಾರಿಸಿದೆ. ಏನೇ ಆದರೂ ಕುಟುಂಬದಲ್ಲಿ ಸ್ತ್ರೀಗೆ ಅಧಿಕಾರ ಇಲ್ಲದುದರಿಂದ ಸ್ತ್ರೀಯರ ಸಮಸ್ಯೆಗಳ ವಿಷಯದಲ್ಲಿ ಉದಾಸೀನತೆಯನ್ನು ತೋರಿಸುವ ಸಾಧ್ಯತೆಗಳು ಹೆಚ್ಚು. ಜತೆಗೆ ಅಜ್ಞಾನದ ದೆಸೆಯಿಂದಲೂ ಸಾಮಾನ್ಯವಾಗಿ ಹಳ್ಳಿಗಳಲ್ಲಿರುವ ಸಂಕೋಚದ ವಾತಾವರಣದಿಂದಲೂ ಹೀಗಾಗಲು ಕಾರಣವಾಗಿದೆ. ಕೆಲವೊಮ್ಮೆ ಸ್ತ್ರೀಯರ ಬಚ್ಚಿಟ್ಟ ಬಯಕೆಗಳು, ಆಸೆ ಆಕಾಂಕ್ಷೆಗಳು ಅವರನ್ನು ಅಡ್ಡದಾರಿ ಹಿಡಿಸುವುದೂ ಉಂಟು. ಉದಾಹರಣೆಗೆ ಹಳ್ಳಿಯ ಹೆಂಗಸರು ಮನೆಯ ದವಸ ಧಾನ್ಯಗಳನ್ನು ಕದ್ದು ಕಡಿಮೆ ಬೆಲೆಗೆ ಮಾರಿ ಮನೆಯ ಆದಾಯ ಸೋರಿಹೋಗುವಂತೆ ಮಾಡುವುದೂ ಉಂಟು. ಹಳ್ಳಿಯ ಸ್ತ್ರೀಯ ಸೀಮಿತ ಆವರಣದಿಂದಾಗಿಯೋ ಸ್ತ್ರೀಸಹಜ ಪ್ರವೃತ್ತಿಯಿಂದಾಗಿಯೋ ಮನೆಗಳಲ್ಲಿ ಮಾತು ಹೆಚ್ಚಾಗಿ ಅದು ವಿರಸದಲ್ಲಿ ಪರ್ಯವಸಾನವಾಗುತ್ತದೆ. ಇದು ಇಡೀ ಮನೆಯ ಒಡಕಿಗೆ ಕಾರಣವಾಗಬಹುದು.

ಹಳ್ಳಿಗಳಲ್ಲಿಯ ಒಟ್ಟು ಕುಟುಂಬಗಳಲ್ಲಿ ದಾಂಪತ್ಯಜೀವನ ನಗರ ಜೀವನದಲ್ಲಿಯಷ್ಟು ಸ್ವತಂತ್ರವೂ ಅಲ್ಲ ; ಸ್ವಚ್ಛಂದವೂ ಅಲ್ಲ. ಲೈಂಗಿಕ ಸ್ವಾತಂತ್ರ್ಯ ಪ್ರತಿದಂಪತಿಗಳ ಸಹಜ ಆವಶ್ಯಕತೆಯಾದುದರಿಂದ ಕುಟುಂಬಗಳ ಒಡಕಿಗೆ ಇದೂ ಸಹ ಆಂತರಿಕ ಕಾರಣವಾಗಿರುತ್ತದೆ. ಒಟ್ಟು ಕುಟುಂಬದ ದಂಪತಿಗಳು ಸರಸವಾಡುವುದಿರಲಿ, ಮಾತಾಡಿದರೂ ಸಹ ಸಂಕೋಚದ ಮುಜುಗರದ ವಾತಾವರಣವೇರ್ಪಡುತ್ತದೆ. ಇದು ಕೆಲವುಟ್ಟಿಗೆ ಗಂಡ-ಹೆಂಡತಿಯರ ವೈಯಕ್ತಿಕ ಸಂಬಂಧದ ಮೇಲೆಯೂ ಪರಿಣಾಮ ಬೀರುತ್ತದೆ. ನಾಗರಿಕ ಪರಿಸರದಲ್ಲಿ ಉಂಟಾಗುವ ಒಂಟಿತನ ಅಸಹಾಯಕತೆಯ ಭಾವನೆಗಳು ಇಲ್ಲಿ ಕಡಿಮೆ. ಇದು ಕೆಲವುಟ್ಟಿಗೆ ವ್ಯಕ್ತಿಯ ಮಾನಸಿಕ ಸ್ಥೈರ್ಯ ಹಾಗೂ ಧೈರ್ಯದ ಅಂಶವನ್ನು ರೂಪಿಸುತ್ತದೆ.

ಅವಿಭಕ್ತ ಕುಟುಂಬದಲ್ಲಿ ಸಮಸ್ಯೆಗಳಂತೆಯೆ ಪ್ರಯೋಜನಗಳೂ ಇವೆ. ಇದು ಮುಖ್ಯವಾಗಿ ಮನೆಯ ಆರ್ಥಿಕ ಸಮಸ್ಯೆಯನ್ನು ಕುರಿತದ್ದು. ವ್ಯವಸಾಯವೇ ಮುಖ್ಯ ವೃತ್ತಿಯಾಗಿರುವ ಹಳ್ಳಿಗಳಲ್ಲಿ ಸಹಕಾರ ತತ್ವದ ಮೇಲೆ ಕೆಲಸ ಮಾಡುವುದು ಮನೆಯ ಆದಾಯವನ್ನು ಹೆಚ್ಚಿಸುತ್ತದೆ ಮಾತ್ರವಲ್ಲ; ಯಾರಿಗೂ ಅನಾವಶ್ಯಕ ಹೊರೆಯಾಗುವುದಿಲ್ಲ. ವಿಭಕ್ತ ಕುಟುಂಬದಲ್ಲಿ ಮನೆಯ ಯಜಮಾನನೊಬ್ಬನೇ ಎಲ್ಲ ಸಮಸ್ಯೆಗಳನ್ನು ಹೊರಬೇಕಾಗುತ್ತದೆ. ಇದು ಮುಂದೆ ಬೆಳೆಯಬೇಕಾದ ಮಕ್ಕಳ ಮೇಲೂ ಪರಿಣಾಮ ಬೀರುತ್ತದೆ. ಮನೆಯ ಸಮಸ್ತ ಕೆಲಸಗಳೂ ಒಬ್ಬನ ಮೇಲೆಯೇ ಬೀಳುವುದರಿಂದ ನಿರ್ವಹಣೆ ಕಷ್ಟವಾಗುತ್ತದೆ. ಎಷ್ಟೇ ಆಸ್ತಿ ಅನುಕೂಲಗಳು ಅವನಿಗೆ ಇದ್ದರೂ ಹೊಲ ನೋಡಿದರೆ ಗದ್ದೆ ಕೆಲಸ ಮಾಡುವವರು ಇರುವುದಿಲ್ಲ; ದನ ಮೇಯಿಸಿದರೆ ಹುಲ್ಲು ತರುವವರು ಇರುವುದಿಲ್ಲ. ಒಟ್ಟು ಕುಟುಂಬದಲ್ಲಿ ಮನೆಯ ಪ್ರತಿ ಸದಸ್ಯನೂ ಕೆಲಸವನ್ನು ಹಂಚಿಕೊಂಡು ಮಾಡುವುದರಿಂದ ಕೆಲಸ ಸುಗಮವಾಗುತ್ತದೆ. ಅವಿಭಕ್ತ ಕುಟುಂಬದಲ್ಲಿ ಪ್ರತಿ ಸದಸ್ಯನಿಗೆ ದೊರಕುವ ರಕ್ಷಣೆಯೂ ಗಮನಾರ್ಹ. ಬಂಧುತ್ವಬಲವೇ ಹಳ್ಳಿಗಳ ಮುಖ್ಯ ರಕ್ಷಣೆಯಾದುದರಿಂದ ಯಾವುದೇ ಮನೆಯ ಸದಸ್ಯ ಈ ಬಂಧುತ್ವದ ಬೆಂಬಲವನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಸುಖವಾಗಿರಬಹುದು. ಹಳ್ಳಿಗಳಲ್ಲಿಯ ಒಂಟಿ ಕುಟುಂಬಗಳು ಕೆಲವೊಮ್ಮೆ ಸುರಕ್ಷಿತವಾಗಿ ಬದುಕುವುದು ಕಷ್ಟದ ಕೆಲಸ.

ವ್ಯಕ್ತಿಯ ಮಾನಸಿಕ ಆವರಣವೂ ಮೇಲೆ ಹೇಳಿದಂತೆ ಅನಾಥ ಪ್ರಜ್ಞೆ, ಒಂಟಿತನಗಳಿಂದ ಮುಕ್ತವಾಗಿರುವುದಲ್ಲದೆ ನಾಗರಿಕ ಪರಿಸರದಲ್ಲಿ ಅಥವಾ ವಿಭಕ್ತ ಕುಟುಂಬಗಳಲ್ಲಿ ಮನುಷ್ಯ–ಮನುಷ್ಯರ ನಿಕಟ ಸಂಬಂಧದಿಂದ ಉಂಟಾಗಬಹುದಾದ ಮಾನಸಿಕ ಘರ್ಷಣೆಯೂ ಅವಿಭಕ್ತ ಕುಟುಂಬಗಳಲ್ಲಿ ಬಹಳ ಕಡಿಮೆ. ಅವಿಭಕ್ತ ಕುಟುಂಬಗಳಲ್ಲಿ ಎಷ್ಟೇ ವ್ಯಕ್ತಿಗಳಿದ್ದರೂ ಕಡೆಗೆ ಗಂಡ-ಹೆಂಡತಿಯೂ ಕೂಡ ಮಾನಸಿಕವಾಗಿ ತೀರ ನಿಕಟಸ್ಥಿತಿಯಲ್ಲಿರುವುದಿಲ್ಲ. ಹೀಗಾಗಿ ಸೂಕ್ಷ್ಮ ಘರ್ಷಣೆ ಅತ್ಯಂತ ಕಡಿಮೆ.

ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬದ ಮಾದರಿಯ ಜೀವನ ಅತ್ಯಂತ ಅನಿವಾರ್ಯವಾದುದರಿಂದ ಕೆಲವು ಸುಧಾರಣೆಗಳ ಮೂಲಕ ಮೇಲಿನ ಸಮಸ್ಯೆಗಳನ್ನು ಪರಿಹರಿಸಬಹುದು. ಮನೆಯ ಯಜಮಾನಿಕೆಯನ್ನು ಬುದ್ಧಿವಂತನಾದ ವಿವೇಕಶೀಲನಾದ ಯಾವುದೇ ಸದಸ್ಯ, ಅವನ ವಯಸ್ಸು ಎಷ್ಟೇ ಆಗಿರಲಿ, ಹಿರಿಯನಿರಲಿ ಕಿರಿಯನಿರಲಿ, ವಹಿಸಿಕೊಳ್ಳುವುದು ; ಇಲ್ಲವೆ ಪ್ರತಿ ಮೂರು ವರ್ಷ ಅಥವಾ ಐದು ವರ್ಷಗಳಿಗೊಮ್ಮೆ ಜವಾಬ್ದಾರಿಯ ಹೆಗಲು ಬದಲಾಯಿಸುವುದು. ಈ ಅವಧಿಯಲ್ಲಾದ ಮನೆಯ ಪ್ರಗತಿಯ ಸವಿವರವನ್ನು ಸದಸ್ಯರ ಗಮನಕ್ಕೆ ತರುವುದು. ಹೀಗಾ

ದಾಗ ಅವಿಭಕ್ತ ಕುಟುಂಬದ ಪ್ರತಿ ಸದಸ್ಯನಿಗೂ ಜವಾಬ್ದಾರಿ ಹೆಚ್ಚುವುದಲ್ಲದೆ ವಂಚನೆಗೆ ಅವಕಾಶ ವಿರುವುದಿಲ್ಲ. ಏಕ ಸದಸ್ಯ ಯಜಮಾನ್ಯ ಪದ್ಧತಿಯಿಂದಲೇ ಕೆಲವು ಕುಳಗಳು ಒಂದು ತಲೆಮಾರಿನಲ್ಲಿ ಮುಂದುವರಿದರೆ ಇನ್ನೊಂದು ತಲೆಯಲ್ಲಿ ಹಿಂದುಳಿಯುತ್ತವೆ. ಅಧಿಕಾರದ ವಿಕೇಂದ್ರೀಕರಣ ಅಥವಾ ಪ್ರಜಾಪ್ರಭುತ್ವೀಕರಣ ಕೌಟುಂಬಿಕ ವಲಯದಲ್ಲಿಯೂ ಸಾಧ್ಯ.

ಅವಿಭಕ್ತ ಕುಟುಂಬಗಳು ಕೆಲವೊಮ್ಮೆ ಪಕ್ವಸ್ಥಿತಿಯನ್ನು ಮುಟ್ಟುವ ವರೆಗಾದರೂ ಉಳಿಯಬೇಕಾಗುತ್ತದೆ. ಪಕ್ವಸ್ಥಿತಿಯೆಂದರೆ ಮನೆಯ ಪ್ರತಿಸದಸ್ಯನ ಆರ್ಥಿಕ ಸ್ವಾವಲಂಬನೆ ಏರ್ಪಡುವ ಸ್ಥಿತಿ. ವ್ಯವಸಾಯ ಹಾಗೂ ವ್ಯವಹಾರಗಳನ್ನು ಬೆಸೆಯುವುದು ಕೆಲಮಟ್ಟಿಗೆ ಮನೆಗೆ ಆರ್ಥಿಕ ಸ್ವಾವಲಂಬನೆಯನ್ನು ಒದಗಿಸುತ್ತದೆ. ಅವಿಭಕ್ತ ಕುಟುಂಬದ ಸ್ಥಿತಿಯಲ್ಲಿಯೇ ಆದ ಮದುವೆ ಮುಂತಾದವು ಸದಸ್ಯನ ರಕ್ಷಣೆಗೂ ಸಹಾಯಕವಾಗುತ್ತವೆ. 'ಒಂಟಿ ಬಾಳು ಬಾಳಲ್ಲ', ಎನ್ನುವುದು ಹಳ್ಳಿಗಳಲ್ಲಿ ಪರಮಸತ್ಯ. ಈ ದೃಷ್ಟಿಯಿಂದ ಒಂದು ಅವಿಭಕ್ತ ಕುಟುಂಬ ಒಂದು ಪರಿಪಕ್ವ ಸ್ಥಿತಿ ಮುಟ್ಟುವ ವರೆಗೂ ಒಂದಾಗಿದ್ದು ಆಮೇಲೆ ಒಡೆದರೆ ಅದು ನೈಸರ್ಗಿಕವಾಗಿ ಹಣ್ಣು ಮರದಿಂದ ಬೇರ್ಪಡುವಂತೆ ಯಾವ ಸದಸ್ಯನಿಗೂ ನಷ್ಟವಾಗುವುದಿಲ್ಲ. ಇಲ್ಲದಿದ್ದರೆ ಕಾಯಾಗಿದ್ದಾಗಲೆ ಆಘಾತವಾದರೆ ಮರಕ್ಕೂ ನಂಜು ಬಡಿಯುತ್ತದೆ; ಕಾಯೂ ಅನುಪಯುಕ್ತವಾಗುತ್ತದೆ.

ಸಾಮಾಜಿಕ ಸಮಸ್ಯೆಗಳು

ಕುಟುಂಬದ ಸಮಸ್ಯೆಗಳು ಆಂತರಿಕವಾದವು. ಮನೆಯ ಸದಸ್ಯರ ವೈಯಕ್ತಿಕ ಸಮಸ್ಯೆಗಳೇ ಇವುಗಳಲ್ಲಿ ಹೆಚ್ಚು. ಆದರೆ ಸಾಮಾಜಿಕ ಸಮಸ್ಯೆಗಳು ಕೌಟುಂಬಿಕ ಜೀವನದ ಹೊರಮುಖಗಳು. ಕುಟುಂಬ-ಕುಟುಂಬಗಳ ನಡುವೆ, ಕೆಲವೊಮ್ಮೆ ಗ್ರಾಮ–ಗ್ರಾಮಗಳ ನಡುವೆ ಉಂಟಾಗುವ ಘರ್ಷಣೆಗಳು ಇವು. ಹಳ್ಳಿಗಳು ಬಹುಪಾಲು ಸಹಕಾರ ತತ್ತ್ವದ ಮೇಲೆ ರೂಪುಗೊಂಡಿರುವುದರಿಂದ ಬಂಧುತ್ವಕ್ಕೆ ವಿಶೇಷವಾದ ಸ್ಥಾನವಿದೆ. ಒಂದು ಊರಿನ ಆಂತರಿಕ ಸಂಬಂಧಗಳು ಬಹಳ ಜಟಿಲವಾಗಿರುತ್ತವೆ. ಈ ಸಂಬಂಧಿಕರು ತಮ್ಮಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಬೇರೆಬೇರೆ ಕುಳಗಳೊಂದಿಗೆ ಘರ್ಷಣೆ ಸಂಭವಿಸಿದಾಗ ಅವರು ಒಂದಾಗುತ್ತಾರೆ. ಬಂಧುತ್ವದ ವಲಯದಲ್ಲಿಯೇ ಘರ್ಷಣೆ ಅನಿವಾರ್ಯವಾದರೆ ಸಂಬಂಧದ ನಿಕಟತೆ ಹಾಗೂ ಅವಲಂಬನೆಗಳು ಹೆಚ್ಚು ಕೆಲಸಮಾಡುತ್ತವೆ. ನ್ಯಾಯಾನ್ಯಾಯ ಯಾವುದೇ ಇರಲಿ, ಇಂಥ ಸಂದರ್ಭಗಳಲ್ಲಿ ಬಲ ಹೆಚ್ಚಿದ್ದವನದೇ ಜಯ. ಹೀಗಾದಾಗ ಅನೇಕ ಬಡ ಕುಟುಂಬಗಳಿಗೆ ನ್ಯಾಯ ಹಾಗೂ ರಕ್ಷಣೆ ದೊರಕುವ ಸಾಧ್ಯತೆಗಳು ಕಡಿಮೆ. ಒಂದು ಮನೆಯ ಎಲ್ಲ ಸದಸ್ಯರೂ ಒಗ್ಗಟ್ಟಾಗಿದ್ದುಕೊಂಡು ದುಡಿದು ಕುಳ ಅಭಿವೃದ್ಧಿಶೀಲವಾದಾಗ ಕುಳ-ಕುಳಗಳಲ್ಲಿ ಮಾತ್ಸರ್ಯದ ಹೊಗೆಯಾಡುತ್ತದೆ. ಆಗ ಆ ಮನೆಯನ್ನು ಹಾಳುಮಾಡುವ ಪಿತೂರಿಗಳು, ಚಾಡಿತನದಂಥ ಕ್ಷುದ್ರ ರಾಜಕೀಯಗಳು ನಡೆಯುತ್ತವೆ. ಸ್ಪರ್ಧೆ ಮಾನವನ ಉನ್ನತಿಗೆ ಆವಶ್ಯಕವಾದರೂ ಆರೋಗ್ಯಕರವಾದ ಸ್ಪರ್ಧೆ ಆವಶ್ಯಕವೇ ಹೊರತು ಹಾಳುಗೆಡಹುವುದಲ್ಲ. ಹೀಗಾಗಿ ಕೆಲವು ಹಳ್ಳಿಗಳಲ್ಲಿ ಈ ಸ್ಪರ್ಧೆ ಅಥವಾ ವೈರಕಾರಣದಿಂದಾಗಿ ಮೆದೆಗಳನ್ನು ಸುಡುವುದುಂಟು; ಸಾಮೂಹಿಕ ಕಾರ್ಯಕ್ರಮಗಳಿಗೆ ಅಡ್ಡಿಯನ್ನೊಡ್ಡುವುದೂ ಉಂಟು.

ಕೆಲವೊಮ್ಮೆ ಅನೇಕ ತಲೆಮಾರುಗಳಿಂದ ಬಂದ ವೈರವೂ ಹಳ್ಳಿಗಳಲ್ಲಿ ನಿರಂತರವಾಗಿ ಹರಿಯುವುದನ್ನು ಕಾಣಬಹುದು. ಹೀಗಾಗಿ ಆ ಎರಡು ಕುಟುಂಬಗಳಲ್ಲಿ ಶಾಂತಿ ಸಮನ್ವಯ

ಸಾಧ್ಯವೇ ಇಲ್ಲ. ಹಿರಿಯರು ಹಿಂದೆ ಮಾಡಿದ ಕೃತ್ಯಗಳನ್ನು ನೆನಪಿಸುತ್ತಾ ದ್ವೇಷ ಅಚಲವಾಗಿ ಉಳಿಯುವಂತೆ ನೋಡಿಕೊಳ್ಳುತ್ತಾರೆ.

ಮಾನವ ದುಡಿಮೆಗೆ ನಾವು ಕೊಡುತ್ತಿರುವ ಸ್ಥಾನಮಾನ ಶೋಚನೀಯ. ಜ್ಞಾನಕ್ಕೆ ಹಿಂದಿನಿಂದಲೂ ಗೌರವವಿದೆ ನಿಜ. ಅದು ಸಹಜವೂ ಹೌದು. ಆದರೆ ಕರ್ಮದ ಸಮನ್ವಯವಿಲ್ಲದ ಜ್ಞಾನ ಕೇವಲ ನಿರುದ್ದೇಶಪೂರಿತ : ನಿರರ್ಥಕ. ಅರಿವಿನ ಸ್ಪರ್ಶವಿಲ್ಲದ ಕರ್ಮವೂ ಅಷ್ಟೇ ವ್ಯರ್ಥ. ಇವೆರಡರ ಬೆಸುಗೆಯನ್ನು ನಾವು ನಗರಕ್ಕಿಂತಲೂ ಹೆಚ್ಚಾಗಿ ಗ್ರಾಮಾಂತರ ಪ್ರದೇಶದಲ್ಲಿ ಸಮರ್ಥವಾಗಿ ಮಾಡಬಹುದು. ಆದರೆ ನಮ್ಮಲ್ಲಿ ನಗರಕ್ಕೂ ಹಳ್ಳಿಗೂ ಯಾವ ಸಂಪರ್ಕವೂ ಇಲ್ಲ. ಇದ್ದರೂ ಕೇವಲ ಘೋಷಣೆಗಳಲ್ಲಿ. ಹೀಗಾಗಿ ಹಳ್ಳಿಗಳು ದುಡಿಯುವ ದಡ್ಡರ ಆವಾಸಗಳಾಗಿದ್ದರೆ ನಗರಗಳು ಬುದ್ಧಿವಂತರ ಸಿದ್ಧಾಂತ ಸ್ಥಾನಗಳಾಗಿವೆ.

ದುಡಿಮೆಗೆ ದೊರೆಯುತ್ತಿರುವ ಈ ಅಗೌರವದಿಂದಾಗಿಯೆ ಹಳ್ಳಿಗಳಲ್ಲಿ ಮತ್ತೊಂದು ಅಪಾಯಕಾರಿಯಾದ ವರ್ಗ ಸೃಷ್ಟಿಯಾಗಿದೆ. ವೃತ್ತಿಮೂಲವಾದ ವಿದ್ಯಾಭ್ಯಾಸ ಭಾರತದಲ್ಲಿ ರೂಢಿಯಲ್ಲಿರದಿರುವುದರಿಂದ, ಜೊತೆಗೆ ಭಾರತ ಎದುರಿಸುತ್ತಿರುವ ಪ್ರಖರವಾದ ನಿರುದ್ಯೋಗದ ಸಮಸ್ಯೆಯಿಂದ ರೂಪುಗೊಂಡ ಅಪಾಯಕಾರಿಯಾದ ವರ್ಗ ಇದು. ಹಳ್ಳಿಯಲ್ಲಿ ಹುಟ್ಟಿದ ಬಹುಪಾಲು ಹುಡುಗರು ನಗರಗಳಿಗೆ ಓದಲು ಬರುತ್ತಾರೆ. ಅವರಿಗೆ ತಕ್ಕ ನೌಕರಿ ದೊರಕದಿದ್ದಾಗ ಅವರು ತಮ್ಮ ಆಧಾರಕೇಂದ್ರವಾದ ಹಳ್ಳಿಗಳಿಗೆ ಹಿಂತಿರುಗುತ್ತಾರೆ. ಇವರು ಹಳ್ಳಿಗಳಲ್ಲಿ ಸುಧಾರಣೆ ಮಾಡುವುದರ ಬದಲು ಓದಿದ ವಿದ್ಯಾಭ್ಯಾಸಕ್ರಮದಿಂದಾಗಿ ಶೋಷಿಸಲು ತೊಡಗುತ್ತಾರೆ. ಇವರು ಕರ್ಮಯೋಗಿಯೂ ಅಲ್ಲದ, ಜ್ಞಾನಪಿಪಾಸುವೂ ಅಲ್ಲದ, ಒಂದು ರೀತಿಯ ಸಮನ್ವಯವರ್ಗವೂ ಅಲ್ಲದ ಪರಕೀಯ ಸಮೂಹ. ಹೀಗಾಗಿ ಇವರು ಹಳ್ಳಿಗರಿಗೆ ಆಧುನಿಕ ಹೊರೆಯಾಗಿ ಮಾರ್ಪಡುತ್ತಾರೆ. ಈಗ ಅನೈತಿಕವಾದ ರಾಜಕೀಯ ಹಾಗೂ ಸಹಕಾರ ಸಂಘಗಳ ಲೂಟಿಯಲ್ಲಿ ತೊಡಗಿರುವರೆಂದರೆ ಇಂಥ ವಿದ್ಯಾವಂತರೆ. ಇವರು ಸಾಮಾನ್ಯವಾಗಿ ಓದು ಮುಗಿದ ಮೇಲೆ ಹಳ್ಳಿಗಳಿಗೆ ಹಿಂದಿರುಗಿದ ನಂತರ ಗ್ರಾಮದ ಆಗುಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಆಗ ಊರಿನ ಪಟ್ಟಭದ್ರ ಹಿತಗಳ ವಿರುದ್ಧ ಇವರು ಹೋರಾಟ ಪ್ರಾರಂಭಿಸುತ್ತಾರೆ. ಅಧಿಕಾರ ದೊರಕುತ್ತಲೆಯೆ ಅನುಭವವಾಗುತ್ತ ಬಂದಂತೆ ಇವರೇ ಇನ್ನೂ ಅಪಾಯಕಾರಿಯಾದ ಪಟ್ಟಭದ್ರರಾಗುತ್ತಾರೆ. ಇದು ಈ ದೇಶದ ದೊಡ್ಡ ದುರಂತ.

ಗ್ರಾಮಾಂತರ ಪ್ರದೇಶದ ಇನ್ನೊಂದು ಮುಖ ಕೆಲವು ಸಾಮಾಜಿಕ ಸಮಸ್ಯೆಗಳು. ವರದಕ್ಷಿಣೆಯ ವೈಪರೀತ್ಯ ಇಂದು ನಗರಗಳಿಗಿಂತಲೂ ಹೆಚ್ಚಾಗಿ ಹಳ್ಳಿಗಳಲ್ಲಿ ತಾಂಡವವಾಡುತ್ತಿರುವುದಕ್ಕೆ ಇಂದು ಬಹುಮಟ್ಟಿಗೆ ಕಾರಣ ವಿದ್ಯಾವಂತ ಜನಾಂಗ. ವಿದ್ಯಾವಂತರೊಬ್ಬರೇ ಈ ಕರ್ಮರಂಗಕ್ಕೆ ಇಳಿದಿದ್ದರೆ ಸುಲಭವಾಗಿ ಪರಿಹರಿಸಬಹುದಿತ್ತೇನೊ. ಇದರಲ್ಲಿ ಪೋಷಕರದೂ ಸಹ ಪಾಲಿದೆ. ಒಬ್ಬ ತಂದೆ ಅಥವಾ ತಾಯಿ ವರದಕ್ಷಿಣೆಯ ಬಗ್ಗೆ ತಾಳುವ ಧೋರಣೆ ಇಬ್ಬಗೆಯದಾಗಿರುತ್ತದೆ. ಒಬ್ಬ ತಂದೆಯೇ, ಮಗಳ ವರದಕ್ಷಿಣೆಯ ವಿರುದ್ಧ ಬಿಡಿಗಟ್ಟಲೆ ಮಾತಾಡಬಲ್ಲವ, ವಿದ್ಯಾವಂತ ಮಗನ ವಿಷಯ ಬಂದಾಗ ಸೊಲ್ಲೇ ಎತ್ತುವುದಿಲ್ಲ. ಈ ಇಬ್ಬಗೆಯ ನೀತಿ ಒಂದು ಕಡೆಯಾದರೆ, ವಿದ್ಯಾವಂತ ಯುವಕರ ಬಗ್ಗೆ ತಾಳುವ ಪಕ್ಷಪಾತವು ಇನ್ನೊಂದು ಕಡೆಯದು. ತನ್ನ ಮಗಳನ್ನು ವಿದ್ಯಾವಂತನಿಗೆ ಅದರಲ್ಲೂ ಉದ್ಯೋಗಸ್ಥನಿಗೆ

ಕೊಡಬೇಕೆನ್ನುವ ಹಠವೂ ಇದಕ್ಕೆ ಕಾರಣ. ತಿಂಗಳಿಗೆ ಸಾವಿರ ರೂಪಾಯಿ ಸಂಪಾದಿಸುವ ವ್ಯವಹಾರಸ್ಥ ಹುಡುಗ ಅಥವಾ ಹತ್ತಾರು ಎಕರೆ ಆಸ್ತಿಯಿದ್ದುಕೊಂಡು ವ್ಯವಸಾಯ ಮಾಡುತ್ತಿರುವ ಯುವಕನಿಗಿಂತ ತಿಂಗಳಿಗೆ ನಾನೂರು ಐದುನೂರು ಸಂಪಾದಿಸುವ ಉದ್ಯೋಗಿ ಹೆಚ್ಚಿನವನಾಗುತ್ತಾನೆ. ಬಡವನೂ ವ್ಯವಹಾರಚತುರನೂ ಬುದ್ಧಿವಂತನೂ ಆದವನಿಗೆ ಹಣ ಹೆಚ್ಚಿದ್ದವರು ಅದೇ ಪರವಕ್ಷಿನೆಯೋ ಸಹಾಯವೋ ಮಾಡಿದರೆ, ಆಕಸ್ಮಿಕವಾಗಿ ನಾಲ್ಕು ಜನ ಬಂದು ನಾಲ್ಕು ದಿನ ರಘೊಂದಾ ಊರಿದರೆ ದಂಡ ಹೊಡೆದುಹೋಗುವ ನೌಕರಿದಾರನಿಗಿಂತ ಸುಖವಾಗಿ ಬದುಕಬಲ್ಲ ; ತನ್ನ ಮಗಳೂ ಸುಖವಾಗಿ ಬದುಕಬಲ್ಲಳು ಎಂಬುದನ್ನು ಇವರು ಅರಿತುಕೊಳ್ಳುವುದಿಲ್ಲ. ಸುಖವಾಗಿರಬೇಕು ಎಂದರೆ ಇವರ ಪ್ರಕಾರ ಸೋಮಾರಿಯಾಗಿರಬೇಕು ; ಮೈ ಕೈ ಮಸಿಯಾಗಬಾರದು ; ಕೈಕಾಲು ಕೆಸರಾಗಬಾರದು. ಇದು ಕೂಡ ದುಡಿಮೆಯ ಬಗೆಗಿನ ಅಗೌರವದಿಂದಲೇ ಉಂಟಾದದ್ದು. ಕೆಲವೊಮ್ಮೆ ಈ ವಿದ್ಯಾವಂತ ನೌಕರನ ಆಗುಹೋಗುಗಳನ್ನೆಲ್ಲ ಮಾವನೇ ನೋಡಿಕೊಳ್ಳಬೇಕಾದ ಸಂದರ್ಭಗಳೂ ಉಂಟು. ಅದು ಅವಿಭಕ್ತ ಕುಟುಂಬಗಳಲ್ಲಿ ವಿರಸಕ್ಕೆ ಕಾರಣವಾಗಿ ವಿಘಟನೆಗೆ ಕಾರಣವಾಗುವುದೂ ಉಂಟು.

ಮೂಢನಂಬಿಕೆಗಳೂ ಹಳ್ಳಿಗಳ ಸಮಸ್ಯೆಗಳಲ್ಲಿ ಪ್ರಾಧಾನ್ಯ ವಹಿಸುತ್ತವೆ. ದೇವರು, ದೆವ್ವಗಳು, ಭವಿಷ್ಯ, ಶಕುನ, ಮುಹೂರ್ತ, ಇತ್ಯಾದಿ ಅನಭಿಷಿಕ್ತ ಅನಭಿವ್ಯಕ್ತ ಶಕ್ತಿಗಳು ಹಳ್ಳಿಗರನ್ನು ಆಳುತ್ತಿರುತ್ತವೆ. ಇವುಗಳ ಗುಲಾಮರಾಗಿ ಕೆಲವೊಮ್ಮೆ ಗ್ರಾಮಾಂತರವಾಸಿಗಳು ತಮ್ಮ ಪೌರುಷದ ಅಸೀಮ ಸೀಮೆಯನ್ನೇ ಮರೆತು ಬದುಕಿಕೊಂಡು ಮಿತಿಯನ್ನು ಹಾಕಿಕೊಳ್ಳುತ್ತಾರೆ. ಹಳ್ಳಿಗರು ಸ್ವತಃ ವೈಜ್ಞಾನಿಕ ಧೋರಣೆಯನ್ನು ರೂಪಿಸಿಕೊಳ್ಳದಿದ್ದರೂ ಸರ್ಕಾರ ಹಾಗೂ ಸಂಪರ್ಕ ಮತ್ತು ವಿದ್ಯಾವಂತ ಯುವಕರು ಬಲವಂತವಾಗಿ ಹೇರುತ್ತಿರುವ ಆಧುನಿಕತೆ ಈ ಮೂಢನಂಬಿಕೆಗಳನ್ನು ಸಂಪೂರ್ಣವಾಗಿ ಅಳಿಸದಿದ್ದರೂ ಮಂಕುಮಾಡುತ್ತಿವೆ. ಉದಾಹರಣೆಗೆ ಹಳ್ಳಿಗಳಲ್ಲಿ ಪ್ಲೇಗು, ಕಾಲರ, ಸಿಡುಬು ಮುಂತಾದ ರೋಗಗಳು ನಿರ್ಮೂಲವಾಗಿರುವುದು ಈ ರೋಗಗಳ ಹಿನ್ನೆಲೆಯಲ್ಲಿ ಆಚರಿಸಲಾಗುತ್ತಿದ್ದ ಹಬ್ಬಗಳ ಮೇಲೆಯೂ ಪ್ರಭಾವ ಬೀರಿದೆ. ಈ ಹಬ್ಬಗಳು ಈಗ ಕೆಲವೊಮ್ಮೆ ಸತ್ತ ಸಂಪ್ರದಾಯಗಳ ಅವಶೇಷವೆಂಬಂತೆ ಮನೋರಂಜನೆಗಾಗಿಯೆಂಬಂತೆ ಆಚರಣೆಯಾಗುತ್ತಿವೆ. ದೆವ್ವ, ಪೀಡೆ, ಪಿಶಾಚಿಗಳ ಬಗೆಗೂ ಗ್ರಾಮಾಂತರ ಸಂಪರ್ಕ ಮಾರ್ಗಗಳು ಹೆಚ್ಚಿದಂತೆ ವಿದ್ಯುದೀಕರಣವಾದಂತೆ ನಂಬಿಕೆ ಕಡಿಮೆಯಾಗುತ್ತಿದೆ.

ಹಳ್ಳಿಗಳ ಮತ್ತೊಂದು ಸಮಸ್ಯೆಯೆಂದರೆ ಅನುಕರಣಶೀಲತೆ. ಅರಿವಿನ ಅಭಾವವಿರುವ ಎಲ್ಲೇ ಆಗಲಿ, ಈ ಅನುಕರಣಶೀಲತೆ ಅನಿವಾರ್ಯ. ಮಕ್ಕಳು ದೊಡ್ಡವರ ವರ್ತನೆಗಳನ್ನು ಹೇಗೆ ಅನುಕರಿಸುತ್ತವೆಯೋ ಹಾಗೆಯೆ ಹಳ್ಳಿಯ ಬಡವರು ಶ್ರೀಮಂತರ ನಡೆನುಡಿಗಳನ್ನು, ಆಚಾರ ವ್ಯವಹಾರಗಳನ್ನು ಅನುಕರಿಸಲು ಯತ್ನಿಸುತ್ತಾರೆ. ಯಾವನೋ ಒಬ್ಬ ಶ್ರೀಮಂತ ವೈಭವದಿಂದ ಮದುವೆಮಾಡಿದ ; ಮತ್ತೊಬ್ಬ ತನ್ನ ತಂದೆಯ ಶ್ರಾದ್ಧದಲ್ಲಿ ಸಾವಿರಾರು ಜನಕ್ಕೆ ಅನ್ನ ಹಾಕಿದ ; ಮಗುದೊಬ್ಬ ದೊಡ್ಡದೊಂದು ಮನೆ ಕಟ್ಟಿಸಿದ. ಅದನ್ನು ನೋಡಿ. ತನ್ನ ಶಕ್ತಿಗೆ ಸಾಲದಾದರೂ, ತನ್ನ ಅಭಿವೃದ್ಧಿಗೆ ಮಾರಕವಾದರೂ, ಕೊನೆಗೆ ತನ್ನ ಅನ್ನ ಬಟ್ಟೆಗೆ ಸೊನ್ನೆಯಾಗಬಹುದಾದರೂ, ಊರಿನ ಇತರರು ಮಾಡಿದಂತೆ ತಾನೂ ಮಾಡಬೇಕು ಎನ್ನುವುದು ಹಳ್ಳಿಗ

ರಲ್ಲಿ ಲುಪ್ತವಾದ ಆರ್ಥಿಕಜ್ಞಾನವನ್ನು ಸ್ಪಷ್ಟಪಡಿಸುತ್ತದೆ. ಈ ಸಮಸ್ಯೆಯ ವ್ಯಾಪ್ತಿಯಲ್ಲೇ ವರದಕ್ಷಿಣೆಯ ವ್ಯಾಧಿಯೂ ಬರುತ್ತದೆ.

ಹಳ್ಳಿಗಳಲ್ಲಿ ಎದ್ದುಕಾಣುವ ವರ್ಗಭೇದಗಳೆಂದರೆ ಬಡವರು ಶ್ರೀಮಂತರು. ನಮ್ಮ ಸಾಮಾನ್ಯ ತಿಳಿವಳಿಕೆ ಮತ್ತು ಕೆಲವೊಮ್ಮೆ ತನ್ನ ಒಳಿತಿಗೆ ಆರೋಗ್ಯಕರವಾಗಬಹುದಾದ ರಾಜಕೀಯ ದೃಷ್ಟಿ ಬಡವರ ಪಕ್ಷ ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಬಡವರನ್ನು ತೃಪ್ತಿಪಡಿಸಿ ಅವರನ್ನು ವಂಚಿಸಲು 'ಶ್ರೀಮಂತರ ತಲೆಯೊಡೆಯುವ' ಘೋಷಣೆಗಳನ್ನು ಕೂಗುತ್ತೇವೆ. ಆದರೆ ವಾಸ್ತವವಾಗಿ ಹಳ್ಳಿಗಳಲ್ಲಿ ಆಗಿರುವ ಸಂಗತಿ ಏನು ? ಸಮಾನ ಜನಶಕ್ತಿ ಹಾಗೂ ಆಸ್ತಿಯುಳ್ಳ ಸಾಧಾರಣ ಕುಳಗಳು ಐದಾರು ಇವೆ ಎಂದು ಇಟ್ಟುಕೊಳ್ಳೋಣ. ಇನ್ನೂ ನಿರ್ದಿಷ್ಟವಾಗಿ ಹೇಳಬಹುದಾದರೆ ಒಂದೇ ಮನೆಯ ಆರು ಜನ ಅಣ್ಣತಮ್ಮಂದಿರು ಸಮಾನವಾಗಿ ಆಸ್ತಿ ವಿಭಜನೆಮಾಡಿಕೊಳ್ಳುತ್ತಾರೆ. ಆರು ಜನರಲ್ಲಿ ಒಬ್ಬಿಬ್ಬರಿಗೆ ಮಾತ್ರ ವ್ಯವಹಾರ ಜ್ಞಾನವಿರುತ್ತದೆ, ಮಾತ್ರವಲ್ಲ, ಬುದ್ಧಿವಂತರಾಗಿ ದುಡಿಯುವ ಮತ್ತು ಸಂಪಾದಿಸುವ ಕಾಳಜಿಯನ್ನು ವಹಿಸುತ್ತಾರೆ. ಈ ಒಬ್ಬಿಬ್ಬರು ಬೆವರು ಇಳಿಸಿ ದುಡಿದು ಸಂಪಾದಿಸುವಾಗ, ಇನ್ನುಳಿದವರು ಹೊಟ್ಟೆಗೆ ಬಟ್ಟೆಗೆ ಎಷ್ಟು ಬೇಕೋ ಅಷ್ಟನ್ನೇ ಸಂಪಾದಿಸಿಕೊಂಡೋ, ಇಲ್ಲವೆ ಪರಾವಲಂಬಿ ಜೀವಿಗಳಾಗುತ್ತಲೋ ಹೋಟೆಲಿನಲ್ಲಿ ಕಾಲು ಚಾಚಿ ಮೋಟು ಬೀಡಿ ಕುಡಿಯುತ್ತಲೋ ಜೂಜಿನ ಕಟ್ಟೆಯಲ್ಲಿ ಇಸ್ಪೀಟು ಎಸೆಯುತ್ತಲೋ, ಹೆಂಡದಂಗಡಿಯಲ್ಲಿ ಕಳ್ಳು ಗಂಟಲಿಗಿಳಿಸುತ್ತಲೋ, ಕೊನೆಯ ಪಕ್ಷ ಚಾವಡಿಯ ಅಂಗಳದಲ್ಲಿ ಹರಟೆ ಕೊಚ್ಚುತ್ತಲೋ ಸೋಮಾರಿಗಳಾಗಿ ಕಾಲಹರಣಮಾಡುತ್ತಿರುತ್ತಾರೆ. ಮುಂದೆ ಹೆಣ್ಣುಮಕ್ಕಳು ಮದುವೆಗೆ ಬಂದಾಗಲೋ ಆಕಸ್ಮಿಕವಾಗಿ ಆರೋಗ್ಯ ಕೆಟ್ಟಾಗಲೋ, ಯಾರಾದರೂ ತೀರಿಕೊಂಡಾಗಲೋ ಇವರ ಆಸ್ತಿಗಳು ಇನ್ನುಳಿದವರ ಹಣಕ್ಕೆ ಆಧಾರವಾಗಿರುತ್ತವೆ. ಮೊದಮೊದಲು ಶ್ರೀಮಂತರು ಬಡವರಿಗೆ ಕೊಡುವ ಸಾಲದಲ್ಲಿ ನಿಸ್ವಾರ್ಥವೇ ಇರುತ್ತದೆ ; ಸಹಾಯ ದೃಷ್ಟಿಯೇ ಇರುತ್ತದೆ. ಆದರೆ ಹಣದಾಸೆ ಮಿತಿಮೀರಿದಂತೆ, ಸಂಪಾದನೆಯ ದಾಹ ಹೆಚ್ಚಿದಂತೆ, ಹೆಚ್ಚು ಹೆಚ್ಚು ಬಡವರು ಸುಲಭವಾಗಿ ಆಹುತಿಯಾಗತೊಡಗಿದಂತೆ ಹಣವಂತರು ಅಡ್ಡದಾರಿ ಹಿಡಿಯುತ್ತಾರೆ. ಸಂಪತ್ತು ಸಮಾಜದ ಕೆಲವೇ ಶ್ರೀಮಂತರ ಬಳಿ ಶೇಖರವಾಗುತ್ತದೆ. ಸಾಮಾಜಿಕ ಅಸಮಾನತೆ ಹೆಚ್ಚುತ್ತದೆ. ಇದರಲ್ಲಿ ಶ್ರೀಮಂತರ ತಪ್ಪಿರುವಂತೆ ಮೂಲಭೂತವಾಗಿ ಬಡವರ ಸೋಮಾರಿತನವೂ ಛಲ, ಉದ್ಧಾರಾಕಾಂಕ್ಷೆಗಳ ಅಭಾವವೂ ಇವೆಯೆಂಬುದನ್ನು ನಿರ್ಲಕ್ಷಿಸುವಂತಿಲ್ಲ. ಈ ದೃಷ್ಟಿಯಿಂದಲೆ ಇಂದಿನ ಭೂಸುಧಾರಣೆಗಳ ಕಾನೂನುಗಳ ಇತಿಮಿತಿಗಳನ್ನು, ಸಂಪತ್ತಿನ ವಿತರಣೆಯ ಹಲವು ಕಾರ್ಯಕ್ರಮಗಳನ್ನು ಪರಿಶೀಲಿಸಬೇಕಾಗುತ್ತದೆ. ಐವತ್ತು ವರ್ಷ ಅಥವಾ ನೂರು ವರ್ಷಗಳಿಗೊಮ್ಮೆ ಏರ್ಪಡುವ ಸಮಾಜದ ಆರ್ಥಿಕ ಅಸಮಾನತೆಯನ್ನು ಸರಿಪಡಿಸಲು ಆ ಅವಧಿಯಲ್ಲಿ ಸಂಪಾದಿಸಿದ ಶ್ರೀಮಂತನ ಬಳಿ ಇರುವ ಸಂಪತ್ತನ್ನು ತೆಗೆದು ಸೋಮಾರಿಯಾಗಿ ಬಡವನಾದವನಿಗೆ ಹಂಚಿಕೊಡುವ ಯಾಂತ್ರಿಕ ಕೆಲಸಕ್ಕಿಂತಲೂ,ಹಂಚಿಕೊಟ್ಟ ಸಂಪತ್ತಿನ ಸದುಪಯೋಗ ಹಾಗೂ ಉದ್ಧಾರಾಕಾಂಕ್ಷೆಯ ಅರಿವು ಎಲ್ಲರಿಗೂ ಮೂಡುವಂತೆ ಮಾಡುವ ಕೆಲಸವನ್ನು ಮೊದಲು ಮಾಡಬೇಕು. ಇಲ್ಲವೇ ದುಡಿಮೆ ಅಥವಾ ಸಾಧನೆಯ ಸಾರ್ಥಕ್ಯದ ಬಗೆಗೇ ಸಂಶಯಬರುವ ಸಾಧ್ಯತೆಗಳೂ ಇಲ್ಲದಿಲ್ಲ. ಎಲ್ಲರಿಗೂ ಸ್ವಾವಲಂಬನೆ ಮತ್ತು ದುಡಿಯಲು ಸುಗಮವಾದ ದಾರಿ ಇವೆಲ್ಲಕ್ಕೂ ಮಿಗಿಲಾಗಿ

ಮಧಿವೇ ಬದುಕಬೇಕೆನ್ನುವ ಮೂಲಭೂತ ಅರಿವು ಉಂಟಾಗುವಂತೆ ಮಾಡಬೇಕು. ಇವಿಲ್ಲದ ಸುಧಾರಣೆ ರೋಗಕ್ಕೆ ಮೂಲಕಾರಣವನ್ನು ಹುಡುಕಲಾರದ ವೈದ್ಯ ಕೊಡುವ ಅಂದಾಜಿನ ಮೂರ ಮದ್ದಿನಂತೆ ವಿಫಲವಾಗುತ್ತದೆ; ಅಷ್ಟೇ ಅಲ್ಲ, ರಾಷ್ಟ್ರೋದ್ಧಾರದ ಹಾದಿಗೆ ಪರೋಕ್ಷವಾಗಿ ಕಂಟಕವಾಗುತ್ತದೆ. ಬಡವ ಶ್ರೀಮಂತರ ಸಮಸ್ಯೆ ರಾಜಕೀಯ ಘೋಷಣೆಗಳಷ್ಟು ಸರಳವಲ್ಲ. ಇವರಲ್ಲಿ ಇಬ್ಬರದೂ ತಪ್ಪಿದೆ. ಇದನ್ನು ಹಳ್ಳಿಗಳ ನೈಜಬದುಕಿನ ವಾಸ್ತವ ಅನುಭವವುಳ್ಳ ಯಾರೇ ಆದರೂ ಮನಗಾಣಬಹುದು. ಸತ್ಯ ಹಾಗೂ ನ್ಯಾಯಗಳು ಎಂದೂ ವೈಪರೀತ್ಯಗಳಲ್ಲಿ ರುವುದಿಲ್ಲ ; ಸಾಮರಸ್ಯ ಹಾಗೂ ಸಾವಧಾನದ ವಿವೇಚನೆಯಲ್ಲಿರುತ್ತವೆ.

ಹಳ್ಳಿಗರ ಸಮಸ್ಯೆಗಳಲ್ಲಿ ದಾರಿದ್ರ್ಯವೂ ಅತಿಮುಖ್ಯವಾದದ್ದು. ಈ ದಾರಿದ್ರ್ಯ ಕಾರಣದಿಂದಲೆ ಹಳ್ಳಿಗಳಲ್ಲಿ ಜೀತಪದ್ಧತಿ ರೂಢಿಯಲ್ಲಿತ್ತು. ಜೀತಪದ್ಧತಿಗೆ ಪ್ರಾರಂಭದಲ್ಲಿ ಬಡತನಕ್ಕಿಂತಲೂ ಹೆಚ್ಚಾಗಿ ಜಾತಿಮತಗಳ ವ್ಯವಸ್ಥೆ ಕಾರಣವಾಗಿತ್ತು. ಹರಿಜನನಾಗಿ ಹುಟ್ಟಿದರೆ ಅಥವಾ ಯಾವುದೇ ಕೀಳು ಜಾತಿಯಲ್ಲಿ ಹುಟ್ಟಿದರೆ ಮೇಲು ಜಾತಿಯವರ ಮನೆಯಲ್ಲಿ ಜೀತಕ್ಕೆ ಗೆಯ್ಯುವುದು ವಂಶಪಾರಂಪರ್ಯವಾದ ಪದ್ಧತಿಯಾಗಿತ್ತು. ಆದರೆ ಈಗ ಹಳ್ಳಿಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಸಮಾನ ಜಾತಿಯವರೇ ಜೀತಪದ್ಧತಿಯಲ್ಲಿ ಭಾಗಿಗಳಾಗುತ್ತಿದ್ದರು. ಇದಕ್ಕೆ ಮುಖ್ಯಕಾರಣ ದಾರಿದ್ರ್ಯ ಮತ್ತು ಸ್ವತಂತ್ರವಾಗಿ ಜೀವನ ನಡೆಸಬೇಕೆನ್ನುವ ಮನೋಧರ್ಮದ ಅಭಾವ. ಒಬ್ಬ ತಂದೆ ಸ್ವತಂತ್ರ ಜೀವನದ ಅರಿವೇ ಇಲ್ಲದ ಮಗನನ್ನು ಜೀತಕ್ಕೇರಿಸುವುದರಿಂದ ಅವನಲ್ಲಿ ಬೆಳೆಯಬಹುದಾದ ಸ್ವತಂತ್ರ ಮನೋವೃತ್ತಿಯನ್ನು ಮೊಳೆಯಲ್ಲಿ ಚಿವುಟಿದಂತೆಯೇ ಸರಿ. ಈ ದಾರಿದ್ರ್ಯ ಹಳ್ಳಿಗರನ್ನು ಎಷ್ಟರಮಟ್ಟಿಗೆ ಕಿತ್ತು ತಿನ್ನುತ್ತದೆಯೆಂದರೆ ಬಾವಿಗಾಗಿಯೋ ಇನ್ನಿತರ ವ್ಯವಸಾಯಾಭಿವೃದ್ಧಿಗಾಗಿಯೋ ಬ್ಯಾಂಕಿನಲ್ಲಿ ಮಾಡುವ ಸಾಲವನ್ನು ರೈತ ಅನ್ಯಕಾರಣಗಳಿಗಾಗಿ ಬಳಸಿ ಕೊನೆಯವರೆಗೂ ಅದೇ ಮಟ್ಟದಲ್ಲಿಯೇ ಉಳಿಯುವುದೂ ಉಂಟು. ತೀರ ಹಿಂದುಳಿದ ಹಳ್ಳಿಗಳಲ್ಲಿ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸಿ ಆಧುನಿಕ ಪರಿಸ್ಥಿತಿಯನು. ಉತ್ತಮಪಡಿಸಿದರೆ ಕೆಲವು ಸಮಸ್ಯೆಗಳು ತಾವಾಗಿಯೇ ಪರಿಹಾರವಾಗುತ್ತವೆ.

ಆಡಳಿತ ಸಮಸ್ಯೆಗಳು

ಇನ್ನು ಸರ್ಕಾರಕ್ಕೂ ಹಳ್ಳಿಗರಿಗೂ ಇರುವ ಸಂಬಂಧವನ್ನು ಕುರಿತಂತೆ ಕೆಲವು ವಿಷಯ ಗಳನ್ನು ಪ್ರಸ್ತಾಪಿಸಬಹುದು. ಹಳ್ಳಿಗರಿಗೂ ಆಡಳಿತಕ್ಕೂ ನೇರಕೊಂಡಿಯನ್ನು ಬಿಗಿಯುವ ಮೊದಲ ಹಂತವೆಂದರೆ ಗ್ರಾಮಪಂಚಾಯಿತಿಗಳು. ನಮ್ಮ ಗ್ರಾಮಪಂಚಾಯಿತಿಗಳು ಗ್ರಾಮಾಡಳಿತ ವನ್ನು ನಡೆಸುವುದರಲ್ಲಿ ಎಷ್ಟರಮಟ್ಟಿಗೆ ಸಫಲವಾಗಿವೆ ? ಗ್ರಾಮಪಂಚಾಯಿತಿ ರೂಪು ಗೊಳ್ಳುವ ರೀತಿಯಾದರೂ ಹೇಗೆ ? ಒಂದು ಸಂಸ್ಥೆ ಅಥವಾ ಸರ್ಕಾರ ರೂಪುಗೊಳ್ಳುವ ರೀತಿಯನ್ನು ಪರಿಶೀಲಿಸಿದರೆ ಅದು ಮಾಡುವ ಕಾರ್ಯಗಳ ಮುನ್ಸೂಚನೆಯೂ ದೊರೆ ತಂತೆಯೇ ಸರಿ. ಹಳ್ಳಿಗಳು ಹಿಂದೆ ಹೇಳಿದಂತೆ ಬಂಧುತ್ವಪ್ರಧಾನವಾದವುಗಳು. ಮತ್ತು ಹಳ್ಳಿ ಗರಲ್ಲಿ ಎದ್ದುಕಾಣುವ ಸಾಹುಕಾರನೇ ಅವರ ಮುಂದಾಳು. ಹಣ ಮತ್ತು ಬಂಧುತ್ವ ಇವೆರಡೂ ಯಾರಿಗೆ ಪ್ರಧಾನವಾಗಿ ಇದೆಯೋ ಅವನು ಅರ್ಹನಿರಲಿ ಅಲ್ಲದಿರಲಿ; ವಿದ್ಯೆ ಇರಲಿ ಇಲ್ಲದಿರಲಿ ಅಸ್ತ್ಯಿಯಾಗಿ ಬರುವುದಂತೂ ಖಂಡಿತ. ಹೀಗಾದಾಗ ಅವನಿಗೆ ಹಳ್ಳಿಗಳನ್ನು ಹೇಗೆ ಮುಂದು

ವರಿಸಬಹುದೆಂದೂ ಕಲ್ಪನೆಯೇ ಇರುವುದಿಲ್ಲ. ಬದಲಿಗೆ ಅವನು ಸ್ವಾರ್ಥವನ್ನೋ ವರ್ಗಹಿತ ವನ್ನೋ ಸಾಧಿಸಿಕೊಳ್ಳಬಹುದು. ಅಧಿಕಾರದ ವಿಕೇಂದ್ರೀಕರಣ ಈಗ ಎಲ್ಲೆಲ್ಲಿಯೂ ಕೇಳಿ ಬರುತ್ತಿರುವ ಘೋಷಣೆಯಾಗಿದೆ. ಆದರೆ ಬರಗಾಲದಲ್ಲಿ ವಿತರಣೆಯಾದ ಪರಿಹಾರಧನ ಎಷ್ಟರ ಮಟ್ಟಿಗೆ ಹಳ್ಳಿಗನ ಅವರಲ್ಲೂ ಅನ್ನ ಇಲ್ಲದೇ ಸತ್ತವನ ಕೈಸೇರಿದೆ ಎಂಬುದು ಶೋಚನೀಯ. ವಿಕೇಂದ್ರೀಕರಣದ ಬಗ್ಗೆ ಸರಿಯಾಗಿ ತರಪೇತು ಇಲ್ಲದಾಗ ಸಿಕ್ಕಸಿಕ್ಕವರ ಪಾಲಾಗಿ ಬಡವ ಇನ್ನೂ ದುಃಸ್ಥಿತಿಗಿಳಿಯುವ ಸಂಭವಗಳು ಹೆಚ್ಚು.

ಗ್ರಾಮಾಂತರ ಪ್ರದೇಶಗಳ ನ್ಯಾಯವಿತರಣೆಯಲ್ಲಿ ಆಗುವ ಅನ್ಯಾಯಗಳು ಕಂಡವರಿಗೆ ತೀರ ಸ್ವಾರಸ್ಯಕರ. ತಮ್ಮ ಹೃದಯಶ್ರೀಯನ್ನೇ ಕಾನೂನು ಪುಸ್ತಕವನ್ನಾಗಿ ಉಳ್ಳ ಊರಿನ ಶ್ರೀಮಂತ ಯಜಮಾನರು ನೀಡುವ ನ್ಯಾಯ ಬಲವಂತನಿಗೊಂದು, ಬಡವನಿಗೊಂದು. ಅಧಿ ಕಾರಶಾಹಿಯ ನಿರಂಕುಶವರ್ತನೆಯನ್ನು ನಾವು ಹಳ್ಳಿಗಳಲ್ಲಿ ಗಮನಿಸಬಹುದು. ರಕ್ಷಣಾರಹಿತ ನಾದ ಬಡವ ಸ್ವಲ್ಪ ಕೋಪ ಮಾಡಿದರೆ ದಂಡವೇ ಅಂತಿಮ ತೀರ್ಪು. ಸಾಲಗಳ ಮೂಲಕ, ಸಂಪತ್ತಿನ ಮೂಲಕ, ಅಧಿಕಾರದ ಮೂಲಕ, ಬಂಧುತ್ವದ ಮೂಲಕ ಇಡೀ ಊರಿನ ಜನರ ಜುಟ್ಟು ಹಿಡಿದಿರುವ ಇವರು ಊರಿನಲ್ಲಿ ಮಾಡುವ ಯಾವುದೇ ಕಾರ್ಯಗಳ ಹಿಂದೆಯೂ ಸ್ವಾರ್ಥ ಇದ್ದೇ ಇರುತ್ತದೆ.

ಇನ್ನು ಗ್ರಾಮಾಂತರ ಪ್ರದೇಶಗಳಿಂದ ಆಯ್ಕೆಯಾಗಿ ಹೋದ ಪ್ರಜಾಪ್ರತಿನಿಧಿಗಳ ಪಾತ್ರವೇನು ಎಂಬುದನ್ನು ನೋಡಿದಾಗ ಹಳ್ಳಿಗರ ಅಜ್ಞಾನವನ್ನು ಈ ಜನ ಹೇಗೆ ದುರು ಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬುದೂ ಇವರು ಹೇಗೆ ಹಳ್ಳಿಗರ ಸುಲಿಗೆಯಲ್ಲಿ ತೊಡಗು ತ್ತಾರೆ ಎಂಬುದೂ ವಿದಿತವಾಗುತ್ತದೆ. ಜನತೆ ಮತ್ತು ಸರ್ಕಾರದ ನಡುವೆ ಇರುವ ಅಂತರ, ಪ್ರಜಾಪ್ರತಿನಿಧಿಯ ಆಯ್ಕೆಯಲ್ಲಿಯೇ ಪ್ರಕಟವಾಗುತ್ತದೆ. ಹಣ, ಹೆಂಡ, ಬಟ್ಟೆ, ಸವಿಮಾತು ಇಲ್ಲವೆ ಬಲಾತ್ಕಾರ ಇವುಗಳೇ ನಿಜವಾದ ಓಟರುಗಳಾದಾಗ ಇವುಗಳಿಂದ ಗೆದ್ದು ಬಂದವರು ಹೇಗೆ ನಿಜವಾದ ಪ್ರಜಾಪ್ರತಿನಿಧಿಗಳಾದಾರು! 'ಮತ' ಎನ್ನುವುದರ ನಿಜವಾದ ಕಲ್ಪನೆಯೇ ಹಳ್ಳಿಗನಿಗೆ ಬಂದಿಲ್ಲ. 'ವೋಟು' ಕ್ರಯದ ಸಾಮಾನು ಇದ್ದಂತೆ. ವರ್ಷಕ್ಕೊಮ್ಮೆ ಜಾತ್ರೆಗಳು ಬರುವಂತೆ ಇದು ಐದು ವರ್ಷಕ್ಕೊಮ್ಮೆ ಬರುವ ಚುನಾವಣೆ. ಗ್ರಾಮಾಂತರ ಜನತೆಯ ಅಂತಸ್ಸಾಕ್ಷಿಯನ್ನು ಹೊಡೆದೆಬ್ಬಿಸಿ ಅವನು ಸರಿಯಾದ ವ್ಯಕ್ತಿಯನ್ನು ಆರಿಸುವ ದಿವ್ಯಚಕ್ಷುವನ್ನು ಕೊಡುವ ಪ್ರಯತ್ನವನ್ನು ಇನ್ನೂ ಯಾರೂ ಮಾಡಿಲ್ಲ. ತಾವು ಆರಿಸಿದ ಪ್ರತಿನಿಧಿಯಿಂದ ಏನನ್ನು ನಿರೀಕ್ಷಿಸಬಹುದು; ತಾವು ಆರಿಸಿದ್ದಕ್ಕಾಗಿ ಅವನು ತೀರಿಸಬೇಕಾದ ಋಣ ಏನು ಎಂಬುದರ ಅರಿವೂ ಹಳ್ಳಿಗರಿಗೆ ಇಲ್ಲ.

ಹಳ್ಳಿಗ ವ್ಯವಹರಿಸುವ ಆಡಳಿತ ಕಚೇರಿಗಳು ಕಟುಕನ ಕಸಾಯಿಖಾನೆಗಳಾಗಿವೆ. ಹಳ್ಳಿಗನ ಅಜ್ಞಾನವನ್ನು ದುರುಪಯೋಗಿಸಿಕೊಂಡು ತಿಂಗಳುಗಟ್ಟಲೆ ಅವನನ್ನು ಕಚೇರಿಯ ಬಾಗಿಲಿಗೆ ಅಲೆಸಿ ಸಾಕಷ್ಟು ಹಣ ಸಂದಾಯವಾಗುತ್ತಲೇ ಕೆಲಸಮಾಡಿಕೊಡುವ ಪರಿಪಾಠವನ್ನು ನಮ್ಮ ತಾಲ್ಲೂಕು ಕಚೇರಿಗಳೂ ಜಿಲ್ಲಾ ಕಚೇರಿಗಳೂ ತಪ್ಪದೆ ಪರಿಪಾಲಿಸುತ್ತಿವೆ. ಈ ವಿಳಂಬ ನೀತಿಯಿಂದಾಗಿ ರೈತ ಕಷ್ಟಪಟ್ಟು ದುಡಿದ ಹಣ ಅಪವ್ಯಯವಾಗುತ್ತಿದೆ. ನಿತ್ಯ ಕಚೇರಿ ಮೆಟ್ಟುವವರ ಸಂಖ್ಯೆ ಅಧಿಕವಾಗಿ ಕಾಲ, ಹಣ ಹಾಗೂ ದುಡಿಮೆಗಳ ಅಪವ್ಯಯವಾಗುತ್ತಿದೆ.

ನ್ಯಾಯ ವಿತರಣೆಯಲ್ಲಿಯೂ ಅನಾವಶ್ಯಕ ವಿಳಂಬದಿಂದಾಗಿ ಹಳ್ಳಿಯ ರೈತ ಬಡವಾಗುತ್ತಿದ್ದಾನೆ. ಆದ್ದರಿಂದಲೇ ಕೋರ್ಟಿನ ಬಾಗಿಲು ಹತ್ತಿದವನು ಕೆಟ್ಟನೆಂಬ ನಂಬಿಕೆ ಹಳ್ಳಿಗರಲ್ಲಿ ಪ್ರಬಲವಾಗಿ ಬೇರೂರಿದೆ. ಹತ್ತು ಸಾವಿರ ರೂಪಾಯಿಯ ನ್ಯಾಯ ತೀರ್ಮಾನಕ್ಕೆ ಒಬ್ಬ ಕಕ್ಷಿ ಹದಿನೈದು ಸಾವಿರ ರೂಪಾಯಿ ವೆಚ್ಚಮಾಡುವ ಸಾಧ್ಯತೆಗಳೂ ಇಲ್ಲದಿಲ್ಲ. ಆದ್ದರಿಂದ ಕೋರ್ಟಿನಲ್ಲಿ 'ಗೆದ್ದವನು ಸೋತ ; ಸೋತವನು ಸತ್ತ' ಎಂಬ ಗಾದೆ ಹುಟ್ಟಿಕೊಂಡಿರುವುದು. ಆದ್ದರಿಂದಲೇ ಪ್ರಜಾಪ್ರಭುತ್ವದ ಹೃದಯವಾದ ನ್ಯಾಯಾಂಗದ ಕಾರ್ಯಾಚರಣೆ ಬಡವನಿಗೆ ಮುಟ್ಟುವಷ್ಟು ಸುಲಭಲಭ್ಯವಾಗಿಲ್ಲ.

ಸಮಾಜದ ಎಲ್ಲ ಏರುಪೇರುಗಳಿಗೂ ಹಳ್ಳಿಯ ರೈತನೇ ಹೊಣೆಗಾರನಾಗಬೇಕಾಗಿರುವುದು ಭಾರತದ ಮತ್ತೊಂದು ದುರಂತ. ಅಧಿಕಾರಿಗಳ ಸಂಬಳ ಹೆಚ್ಚಲಿ, ಮಾರುಕಟ್ಟೆಯಲ್ಲಿ ಬೆಲೆಗಳು ಇಳಿಯಲಿ, ಹೊಲದ ಫಸಲು ಕೈ ಹತ್ತದಿರಲಿ ರೈತನೇ ನೇರವಾಗಿ ಹೊಣೆ. ನಾಗರಿಕ ಪರಿಸರದ ಜನ ತಮ್ಮ ಕಷ್ಟ ನಷ್ಟಗಳಿಗೆ, ಬೇಡಿಕೆಗಳಿಗೆ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿರುತ್ತಾರೆ. ಆ ಮೂಲಕ ಅವರು ಹೋರಾಡುತ್ತಾರೆ. ಆದರೆ ರೈತ ಹಾಗಲ್ಲ. ನಗರಗಳಲ್ಲಿ ವ್ಯಕ್ತಿಗಳಿಂದ ಹಿಡಿದು ವಾಹನಗಳವರೆಗೆ ವಿಮೆಮಾಡಿಸಿರುತ್ತಾರೆ. ಆದರೆ ರೈತ ಬೆಳೆಯುವ ಬೆಳೆಗಳ ಆದಾಯ ನಷ್ಟಕ್ಕೆ ಯಾವ ವಿಮೆ ಇದೆ? ಮಾರುಕಟ್ಟೆಯಲ್ಲಿ ಬೆಲೆಗಳು ಅಸ್ತವ್ಯಸ್ತವಾಗಿ ಇಳಿದರೆ ದಿನಸಿ ಬೆಲೆಗಳು ಮಾತ್ರ ಪಾತಾಳಕ್ಕಿಳಿದು ರಸಗೊಬ್ಬರ ಮತ್ತು ರೈತನ ದಿನನಿತ್ಯದ ಆವಶ್ಯಕತೆಗಳಾದ ಬಟ್ಟೆ, ವಿದ್ಯುಚ್ಛಕ್ತಿ ಮುಂತಾದುವುಗಳ ದರ ಗಗನಕ್ಕೇರಿದರೆ ಕೇಳುವವರು ಯಾರೂ ಇರರು. ಇಪ್ಪತ್ತು ಸಾವಿರ ರೂಪಾಯಿ ಬಂಡವಾಳ ಹಾಕಿಕೊಂಡು ವ್ಯವಹಾರ ಮಾಡುವವನಷ್ಟು ಇಪ್ಪತ್ತು ಸಾವಿರ ರೂಪಾಯಿಯ ಆಸ್ತಿಯಲ್ಲಿ ಬೆವರು ಸುರಿಸಿ ದುಡಿಯುವ ರೈತ ಸುಖವಾಗಿರಲಾರ. ವರ್ಷಗಟ್ಟಲೆ ದುಡಿದು ಬೆಳೆದ ವಸ್ತುಗಳನ್ನು ಕೊಂಡ ವ್ಯಾಪಾರಿ ರೈತನ ಮುಂದೆಯೇ ಮಾರಿ ಅವನಿಗಿಂತ ಹೆಚ್ಚು ಲಾಭ ಪಡೆದರೆ ರೈತನ ಅನಿಸಿಕೆಯೇನಿದ್ದೀತೆಂಬುದನ್ನು ಊಹಿಸಿಕೊಳ್ಳಬಹುದು. ದುಡಿಮೆಯ ಬಗೆಗೆ ಅವನಿಗೆ ಗೌರವ ಮೂಡದು. ಇಂಥ ಸಮಸ್ಯೆಗಳು ಹಳ್ಳಿಗಳಲ್ಲಿ ನೂರಾರಿವೆ. ನಗರಗಳಲ್ಲಿ ಒದಗಿಸುವ ವಿದ್ಯಾ ಸೌಲಭ್ಯ, ಆಸ್ಪತ್ರೆಗಳು, ನೀರಿನ ವ್ಯವಸ್ಥೆ, ಟಪಾಲು ಸೌಲಭ್ಯ, ರಸ್ತೆಗಳು, ವಿದ್ಯುಚ್ಛಕ್ತಿ ಹಳ್ಳಿಗರಿಗೆ ಅದೇ ಪ್ರಮಾಣದಲ್ಲಿ ಲಭ್ಯವಾಗಿಲ್ಲ. ಸರ್ಕಾರಿ ನೌಕರನಿಗೆ ಒದಗುತ್ತಿರುವ ಸೌಲಭ್ಯಗಳಲ್ಲಿ ಸ್ವಲ್ಪವಾದರೂ ದೇಶದ ಮೂಲಭೂತ ಉತ್ಪನ್ನಗಳ ದಾತಾರನಿಗೆ ದಕ್ಕುತ್ತಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿಯ ಸೌಲಭ್ಯಗಳು ಯಾವ ನಗರಕ್ಕಿಂತಲೂ ಕಡಿಮೆ ಇರುವುದಿಲ್ಲ. ಅಷ್ಟೇ ಏಕೆ, ಅಲ್ಲಿಯ ನಗರವಾಸಿಗಳು ಹಳ್ಳಿಗಳ ಬದುಕನ್ನು ಅಪೇಕ್ಷಿಸುತ್ತಾರೆ. ಆದರೆ ಇಲ್ಲಿ ಹಳ್ಳಿಗಳೆಂದರೆ ಅಸಹ್ಯ, ವಾಕರಿಕೆ. ಯಾವ ದೇಶಕ್ಕೂ ಕಡಿಮೆ ಇಲ್ಲದ ಅರಣ್ಯ ಸಂಪತ್ತು, ಖನಿಜ ಸಂಪತ್ತು, ಸಮುದ್ರ ಸಂಪತ್ತು, ಜಲ ಸಂಪತ್ತನ್ನುಳ್ಳ ನಮ್ಮ ದೇಶ, ಅತ್ಯಂತ ಆರೋಗ್ಯಕರವಾದ ಹಾಗೂ ಸಹನೀಯವಾದ ಹವಾಗುಣವುಳ್ಳ ಈ ದೇಶ ಹಿಂದೆ ಬೀಳಲು, ಕಾರಣ ನಮ್ಮಲ್ಲಿ ಲುಪ್ತವಾಗಿರುವ ವಾಸ್ತವಿಕ ದೃಷ್ಟಿ. ದೇಶದ ಮೂಲ ಉತ್ಪನ್ನಗಳು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲ. ಕೈಗಾರಿಕೆಗಳು ನಗರಗಳಲ್ಲಿ ಕೇಂದ್ರೀಕೃತವಾಗುತ್ತಿರುವುದರಿಂದ ರೈತನಿಗೆ ತನ್ನ ಉತ್ಪನ್ನದ ಮೇಲೆ ಬರುವ ಆದಾಯವನ್ನು ಕಡಿಮೆ ಮಾಡುತ್ತಿದೆ. ಹೀಗಾಗಿ ನಗರ ಹಾಗೂ ಗ್ರಾಮ ಪ್ರದೇಶಗಳಿಗೆ ಇರುವ ಅಂತರ

ತೀರ ಹೆಚ್ಚಾಗಿದೆ. ರೈತ ಎಲ್ಲಿಯ ವರೆಗೆ ಸಂಘಟಿತನಾಗುವುದಿಲ್ಲವೋ ಅಲ್ಲಿಯವರೆಗೆ ಉದ್ಧಾರವಾಗುವುದಿಲ್ಲ. ತನಗೆ ಯಾವ ರೀತಿಯಲ್ಲಿ ನಷ್ಟವಾಗುತ್ತಿದೆ ಎಂಬುದು ಅವನಿಗೆ ಎಲ್ಲಿಯ ವರೆಗೆ ಗೊತ್ತಾಗುವುದಿಲ್ಲವೋ ಅಲ್ಲಿಯವರೆಗೆ ಸಂಘಟಿತನಾಗುವುದಿಲ್ಲ. ಇಂದು ಹಳ್ಳಿಗ ಈ ಸಮಸ್ಯೆಯ ಸುಳಿಯಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ. ಇದಕ್ಕೆಲ್ಲ ಮೂಲ ಚಿಕಿತ್ಸೆಯೆಂದರೆ ಅವನಲ್ಲಿ ಇದರ ಅರಿವು ಮೂಡಿಸುವುದು. ವ್ಯವಸಾಯ ಹಾಗೂ ವ್ಯವಹಾರ ಅವನಲ್ಲಿ ಬೆರೆಯುವಂತೆ ಮಾಡುವುದು. ಹಾಗಾದಾಗಲೆ ಹಳ್ಳಿಗಳ ಉದ್ಧಾರ ಸಾಧ್ಯ.

ಎಚ್. ಆರ್. ರಘುನಾಥ ಭಟ್

ಕದಂಬ ರವಿವರ್ಮನ ಗುಡ್ನಾಪುರ ಸ್ತಂಭ ಶಾಸನದಲ್ಲಿಯ ಸ್ಥಳನಾಮಗಳು

ಇತ್ತೀಚಿನ ಐದಾರು ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಸಿದ ಭೂಶೋಧನೆಗಳಿಂದಾಗಿ ಆ ಪ್ರದೇಶದ ಹಾಗೂ ಕರ್ನಾಟಕದ ಪ್ರಾಚೀನ ಇತಿಹಾಸದ ಬಗ್ಗೆ ಹಲವಾರು ಪ್ರಮುಖ ಸಂಗತಿಗಳು ಮೊದಲ ಬಾರಿಗೆ ಬೆಳಕಿಗೆ ಬಂದಿವೆ.[1] ಈ ದಿಸೆಯಲ್ಲಿ ಕದಂಬ ರವಿವರ್ಮನ ಗುಡ್ನಾಪುರ ಸ್ತಂಭಶಾಸನದ ಸಂಶೋಧನೆ ನಾಡಿನ ಶಾಸನವ್ಯಾಸಂಗಕ್ಕೆ ನೀಡಿದ ಉಪಯುಕ್ತ ಕೊಡುಗೆಯಾಗಿದೆ. ಆ ಶಾಸನದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ತ್ವ ನಿಜಕ್ಕೂ ಅಪಾರವಾದ್ದು. ಕರ್ನಾಟಕದ ಪ್ರಪ್ರಥಮ ಸಾಮ್ರಾಜ್ಯಸ್ಥಾಪಕನೂ ವೇದಾಂಗ ವಿದ್ಯಾವಿಶಾರದನೂ ಆದ ಕದಂಬ ಮಯೂರಶರ್ಮನ ಪೂರ್ವಜರ ಬಗ್ಗೆ ವಿಶೇಷ ಮಾಹಿತಿ ಈ ಶಾಸನದಿಂದ ಲಭ್ಯವಾಗಿದೆ. ಆತನ ತಂದೆಯಾದ ಬಂಧುಷೇಣ (ಪ್ರಿಯಾತ್ಮಜ, ಕ್ಷತ್ರವೃತ್ತಿಲತಾಮೂಲ ಗುಣಾಂಬು ಎಂದು ಈತನನ್ನು ವರ್ಣಿಸಲಾಗಿದೆ)[2], ಅಜ್ಜನಾದ ವೀರಶರ್ಮ (ಇವನನ್ನು ವೇದ ಕುಳಮತಿ, ವೇಶ್ಮಾಕರೋತ್ತ ದ್ವಿಜೋತ್ತಮಃ, ಕುಲಮಭೂತ್ಕದಂಬ ಎಂದು ಮುಂತಾಗಿ ವರ್ಣಿಸಲಾಗಿದೆ).[3] ಇವರನ್ನು ಸ್ಪಷ್ಟವಾಗಿ ಹೆಸರಿಸಲಾಗಿದೆ. ಮೃಗೇಶಪುತ್ರನಾದ ರವಿವರ್ಮಮಹಾ

---

[1] ಈ ದಿಸೆಯಲ್ಲಿ ೧೯೬೯–೭೦ ರಿಂದ ೧೯೭೨ ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಇಲಾಖೆಯವರು ಬನವಾಸಿಯಲ್ಲಿ ನಡೆಸಿದ ಉತ್ಖನನ, ೧೯೭೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದವರು ಕೈಕೊಂಡ ಸಂಶೋಧನ ಕಾರ್ಯ ಹಾಗೂ ಭಾರತದ ಪುರಾತತ್ವ ಸರ್ವೇಕ್ಷಣ ಇಲಾಖೆಯ ದಕ್ಷಿಣಮಧ್ಯ ವಿಭಾಗದವರು ನಡೆಸುತ್ತಿರುವ ಜೀರ್ಣೋದ್ಧಾರ ಕಾರ್ಯಗಳು ಸ್ತುತ್ಯಾರ್ಹವಾಗಿವೆ.

[2] *Srikanthika*, Dr. S. Srikantha Sastri Felicitation Volume, Mysore, 1973 : ಪು. ೬೯, ಸಾಲು ೩ : ಯೋಥ ವೀರಶರ್ಮ್ಮಣೊ ಜ್ಯೇಷ್ಠಃ ಶ್ರೀ ಬಂಧುಷೇಣಃ ಪ್ರಿಯಾತ್ಮಜಃ ಸಹಿ ಬಭೂವ ಕ್ಷತ್ರವೃತ್ತಿಲತಾಮೂಲಗುಣಾಮ್ಬು ಪ್ರಸೇಚಿ[ತಃ]

[3] ಅದೇ ಸಾಲು : ೨ : ಅಥ ಬಭೂವ ಹಾರಿತೀಪುತ್ರೊ ಮಾನವ್ಯಗೋತ್ರೋದ್ಭವೊ ದ್ವಿಜಃ ವೀರಶರ್ಮ್ಮೇತಿ ವೇದ ಕುಳಮತಿಃ . . . . . ಸಾಸವೇಶ್ಮಾಕರೋತ್ತ ದ್ವಿಜೋತ್ತಮಃ ಕುಲಮಭೂತ್ಕದಮ್ಬ ನಾಮಾತತಸ್ತಸ್ಯಾರ್ಕ್ಕಬಿಂಬದ್ಯುತಿ ಕ್ಷಿತೌ



ಶಾಸನೋಕ್ತ ಸ್ಥಳನಾಮಗಳಿರುವ ಪ್ರದೇಶದ ಭೂಪಟ

ರಾಜ ಕಾಮಜಿನಾಲಯವನ್ನು[4] ನಿರ್ಮಿಸಿದ್ದು ಪ್ರಸ್ತುತ ಶಾಸನದಿಂದ ಪ್ರಪ್ರಥಮವಾಗಿ ಬೆಳಕಿಗೆ ಬಂತು. ಅಲ್ಲದೆ ಇವರ ಪೂಜಾಸಂಸ್ಕಾರಾರ್ಥವಾಗಿ ಬಿಟ್ಟ ದಾನದತ್ತಿಗಳನ್ನು ವಿವರಿಸಲಾಗಿದೆ. ಈ ದತ್ತಿಗಳಿಗೆ ಸಂಬಂಧಿಸಿದ ಸ್ಥಳನಾಮಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸ್ಥಳನಾಮಗಳ ಬಗೆಗೆ ಒಂದು ಮಾತು : ಒಂದು ಸ್ಥಳದ ಹೆಸರು ಸಾಮಾನ್ಯವಾಗಿ ಆ ಪ್ರದೇಶದ ಭವ್ಯವಾದ ಗತಕಾಲದ ಫಾಸಿಲ್ ಪ್ರತೀಕವಿದ್ದಂತೆ. ಕಾಲಾನುಕ್ರಮದಲ್ಲಿ ಈ ಮೂಲ ಸ್ಥಳನಾಮಗಳು ಸ್ಥಿತ್ಯಂತರಗೊಳ್ಳುವುದುಂಟು. ಇದಕ್ಕೆ ಸ್ಥಳೀಯ ಜನಪದದ ಆಡು ಮಾತೂ ಮುಖ್ಯ ಕಾರಣವಾಗಿರಬಹುದು. ಅಂತೆಯೇ ಒಂದು ಸ್ಥಳದ ಹೆಸರು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರೂಪ ಪಡೆದದ್ದುಂಟು. ಉದಾಹರಣೆಗೆ ಗುಡ್ನಾಪುರದ ಶಾಸನದಲ್ಲಿ ಉಲ್ಲೇಖಿಸಿರುವ 'ಕಾಂತಾರಾಯ್ಯರ್ಪಾ [ಟಿ]' ಎಂಬ ಸ್ಥಳನಾಮ ಕ್ರಿ.ಶ. ೧೦ನೆಯ ಶತಮಾನದ ಶಾಸನದಲ್ಲಿ 'ಕಂತರೋಜೆ' ಎಂದೂ, ಈಗ 'ಕಂತ್ರಾಜಿ'ಯೆಂದೂ ರೂಪಾಂತರ ಹೊಂದಿದೆ. ಪ್ರಾಚೀನ 'ವನವಸಕ', 'ವೈಜಯಂತಿ' ಎಂಬುದು ಬನವಸೆಯಾಗಿ, ಈಗ ಬನವಾಸಿ ಅಥವಾ ಬನವಾಸೆಯೆಂದು ಕರೆಯಲ್ಪಡುತ್ತಿದೆ. ಇಷ್ಟಾದರೂ ಒಂದು ಸ್ಥಳದ ಹೆಸರೆಂದರೆ ಅದನ್ನು ನಿರ್ದಿಷ್ಟವಾಗಿ ಗುರುತಿಸುವ ಸೂಚಿಕೆಯಿದ್ದಂತೆ ಎಂಬುದನ್ನು ಮರೆಯುವಂತಿಲ್ಲ.[5]

ಗುಡ್ಡತಟಾಕ (ಸಾಲು ೧೭) : ಡಾ. ಬಿ. ಆರ್. ಗೋಪಾಲ್‌ರವರು ಸೂಚಿಸಿದಂತೆ ಈಗಿನ 'ಗುಡ್ನಾಪುರ' ಎಂಬುದು ಶಾಸನದ 'ಗುಡ್ಡತಟಾಕ' ಎಂಬುದರಿಂದ ರೂಪಾಂತರ ಹೊಂದಿರಬೇಕು. ಅದರೆ ಗುಡ್ಡತಟಾಕ ಎಂಬ ಹೆಸರೇ ಗುಡ್ಡದ ಬಳಿ ತಟಾಕವಿರುವುದರಿಂದ ಬಂದಿರಲೂ ಸಾಕು. ಅದೇನಿದ್ದರೂ ಈ ಗುಡ್ನಾಪುರ (ಗುಡ್ಡನಪುರ) ಎಂಬ ಊರು ಉತ್ತರ ಕನ್ನಡ ಜಿಲ್ಲೆಯ ಪೂರ್ವಗಡಿಯಂಚಿನಲ್ಲಿದೆ (ಉ. ಅ. ೧೪°-೩೨' ಪೂ.ರೇ. ೭೫°). ಬನವಾಸಿಯಿಂದ ವಾಯುವ್ಯಕ್ಕೆ ಕೇವಲ ಮೂರು ಮೈಲಿ ದೂರದಲ್ಲಿ ಬನವಾಸಿ-ಶಿರಸಿಯ ಹೆದ್ದಾರಿಯ ಬಲಭಾಗದಲ್ಲಿದೆ. ಇಲ್ಲಿರುವ ಕೆರೆ ಉತ್ತರಕನ್ನಡ ಜಿಲ್ಲೆಯಲ್ಲೆ ಬಹುಶಃ ಅತಿದೊಡ್ಡದು. ಶಾಸನದಲ್ಲಿ ಇದನ್ನೆ ಗುಡ್ಡತಟಾಕ ಎಂದು ಹೆಸರಿಸಲಾಗಿದೆ. ಇದರ ಸಮೀಪದಲ್ಲೆ ವೀರಭದ್ರ ಗುಡಿಯೆಂದು ಹೇಳಲಾದ ಜೈನಮಂದಿರವೂ, ಅದರ ಹೊರವಲಯದಲ್ಲಿ ಜೈನಪ್ರತಿಮೆಗಳೂ, ಪ್ರಸ್ತುತ ಸ್ತಂಭಶಾಸನವೂ ಕಂಡುಬಂದಿವೆ.[6] ಈ ಊರಿನಲ್ಲಿ ಅಲ್ಲಲ್ಲಿ ಪ್ರಾಚೀನಶಿಲ್ಪಗಳು

---

4 ಇದು ವಾಸ್ತವವಾಗಿ ಕಾಮಜಿನಾಲಯವೇ, ಕಾಮದೇವಾಲಯವೇ ಎಂಬುದರ ಬಗೆಗೆ ಜಿಜ್ಞಾಸೆ ಇಲ್ಲದಿಲ್ಲ ; ನೋಡಿ : *JIH* Vol LI. pt. II (Aug 1973), S. No. 152, pp. 301-2 and *Facsimile*

5 ನೋಡಿ : K. Nachimuthu, folkloristics and Place-name studies, *Seminar on Folkloristics*, Mysore, 1973

6 ಇಂದು ವೀರಭದ್ರದೇವರನ್ನು ಪ್ರತಿಷ್ಠಾಪಿಸಿರುವ ಈ ಗುಡಿಯೆ ಕದಂಬ ರವಿವರ್ಮ ನಿರ್ಮಿಸಿದ ಕಾಮಜಿನಾಲಯವಿದ್ದರೂ ಇರಬಹುದು. ಇತ್ತೀಚೆಗೆ ಸಂಶೋಧನಾರ್ಥವಾಗಿ ಗುಡ್ನಾಪುರಕ್ಕೆ ನಾನು ಹೋದಾಗ ದೇವಾಲಯವನ್ನು ಅಭ್ಯಸಿಸಿದೆ. ಗರ್ಭಗುಡಿಯ ಬಾಗಿಲು

ಬಿದ್ದಿರುವುದನ್ನು ಗಮನಿಸಬಹುದು. ಇಂದು ಗುಡ್ನಾಪುರ ಒಂದು ತೀರ್ಥಕ್ಷೇತ್ರವಾಗಿದೆ. ಪ್ರತಿವರ್ಷ ಶಿವರಾತ್ರಿಯಂದು (ಫೆಬ್ರುವರಿ) ಅಲ್ಲಿ ಜಾತ್ರೆ ಜರುಗುತ್ತದೆ. ಸಾವಿರಾರು ಜನ ಸೇರಿ ವಿಜೃಂಭಣೆಯಿಂದ ನಡೆಸುವ ಈ ಜಾತ್ರೆ ಶಾಸನದಲ್ಲಿ ವರ್ಣಿಸಿರುವ ವಸಂತೋತ್ಸವವನ್ನು ನೆನಪಿಗೆ ತರುವಂತಿದೆ.

ಇಡಿಯಊರ (ಸಾಲು ೧೭) : ಗುಡ್ನಾಪುರದ ನೈಋತ್ಯಕ್ಕೆ ಸುಮಾರು ಒಂದೂವರೆ ಮೈಲಿ ದೂರದಲ್ಲಿರುವ ಇಂದಿನ ಇಡೂರು ಇರಬೇಕು [ಜನಸಂಖ್ಯೆ ೧೦೦ (೧೯೭೧)]. ಸೊರಬ ತಾಲ್ಲೂಕು ಚಂದ್ರಗುತ್ತಿ ಹೋಬಳಿಯಲ್ಲಿರುವ ಈ ಇಡೂರು ಸೊರಬ ತಾಲ್ಲೂಕು ಉತ್ತರ ಗಡಿಯಂಚಿನಲ್ಲಿ, ಉತ್ತರಕನ್ನಡ ಜಿಲ್ಲೆಯ ದಕ್ಷಿಣದ ಗಡಿಯಿಂದ ಕೇವಲ ಅರ್ಧ ಮೈಲಿ ದೂರದಲ್ಲಿದೆ. ಈ ಗ್ರಾಮಕ್ಕೆ ಸಂಬಂಧಿಸಿದಂತೆ ಸುಮಾರು ೧,೫೪೬ ಎಕರೆ ಫಲವತ್ತಾದ ಭೂಮಿಯಿದೆ (ಬ್ರಹ್ಮಚಾರಿಕ್ಷೇತ್ರ ?).

ಕಾನ್ತಾರಾರ್ಯ್ಯಪಾ [ಟಿ] (ಸಾಲು ೧೭) : ಗುಡ್ನಾಪುರದ ದಕ್ಷಿಣಕ್ಕೆ ಸುಮಾರು ಒಂದೂವರೆ ಮೈಲಿ ಅಂತರದಲ್ಲಿರುವ ಇಂದಿನ ಕಂತ್ರಾಜಿಯೆ ಶಾಸನದ ಕಾನ್ತಾರಾರ್ಯ್ಯಪಾ[ಟಿ] ಯಾಗಿದ್ದಿರಬಹುದು. [ಜನಸಂಖ್ಯೆ ४೧४]. ಸೊರಬತಾಲ್ಲೂಕಿನ ಮಂಗಳೂರ ಶಾಸನವೊಂದರಲ್ಲಿ (ಕ್ರಿ. ಶ. ೧೦ನೆಯ ಶತಮಾನ) ಇದನ್ನು ಕುಂತರೋಜೆಯೆಂದು ಹೆಸರಿಸಲಾಗಿದೆ.[7] ಆದರಿಂದ ಕದಂಬ ಚಟ್ಟಿಗದೇವನ ಕಾಲದಲ್ಲಿ ಕುಂತರೋಜೆ ಒಂದು ಅಗ್ರಹಾರವಾಗಿತ್ತೆಂದೂ ತಿಳಿದುಬರುತ್ತದೆ.

ಕಲ್ಲಜಿಗ್ಗೋಡ (ಸಾಲುಗಳು ೧೭ ಮತ್ತು ೧೮) : ಇದು ಇಂದಿನ ಕಲಗೋಡು ಎಂಬ ಹಳ್ಳಿಯಾಗಿರಬೇಕು. ಇಂದು ಕಲಗೋಡು ಎರಡು ಊರಾಗಿದ್ದು, ಹಿರೇಕಲಗೋಡು [ಜನಸಂಖ್ಯೆ ೯೭] ಮತ್ತು ಚಿಕ್ಕಲಗೋಡು [ಜನಸಂಖ್ಯೆ ೧೭೧] ಎಂಬುದಾಗಿ ಹೆಸರಿಸಲಾಗಿದೆ. ಪುರಾತನ ದೇವಾಲಯ, ಶಾಸನ, ಶಿಲ್ಪಗಳನ್ನೊಳಗೊಂಡಿರುವ ಹಿರೇಕಲಗೋಡು ಶಾಸನೋಕ್ತ ಕಲ್ಲಜಿಗ್ಗೋಡ ಗ್ರಾಮವಾಗಿರಬೇಕು. ಇದು ಗುಡ್ನಾಪುರದ ನೈಋತ್ಯಕ್ಕೆ ಮೂರೂವರೆ ಮೈ. ದೂರದಲ್ಲಿದೆ. (ಚಿಕ್ಕಲಗೊಡು ನಾಲ್ಕೂವರೆ ಮೈ ಅಂತರದಲ್ಲಿದೆ.

ವಾಡದ ಲಲಾಟಬಿಂಬದ ಮೇಲೆ ಮತ್ತು ನವರಂಗದ ಸ್ತಂಭಗಳ ಮೇಲೆ ಜಿನಪ್ರತಿಮೆಗಳನ್ನು ಕೆತ್ತಿರುವುದನ್ನು ಗಮನಿಸಿದೆ. ಈ ಗುಡಿಯಲ್ಲಿ ರತಿಮನ್ಮಥ ಶಿಲ್ಪವೂ ಗಮನಾರ್ಹ. ಅಲ್ಲದೆ ಈ ಗುಡಿಯ ಹೊರವಲಯದಲ್ಲಿ ಬಿದ್ದಿರುವ ಕೆಲವು ಕಂಡುಬರುವ ಜೈನಪ್ರತಿಮೆಗಳನ್ನೂ, ಕೆರೆಯಲ್ಲಿ ಬಿದ್ದಿದ್ದು ಬೇಸಗೆಯಲ್ಲಿ ಮಾತ್ರ ಕಾಣಸಿಗುವ ಸುಂದರ ಶಿಲ್ಪಗಳನ್ನೂ ಸಮಗ್ರವಾಗಿ ಅಧ್ಯಯನ ಮಾಡುವುದು ಮತ್ತು ಈ ಭಾಗದ ದಿಣ್ಣೆಗಳಲ್ಲಿ ವ್ಯಾಪಕವಾದ ಭೂಅಗೆತಮಾಡುವುದು ಅತ್ಯಾವಶ್ಯಕ. ಇತ್ತೀಚೆಗೆ ಗುಡ್ನಾಪುರವನ್ನು ರಾಷ್ಟ್ರೀಯ ಸ್ಮಾರಕ ಸ್ಥಳವೆಂದು ಸಾರಿದ್ದಲ್ಲದೆ ಆ ಭಾಗದಲ್ಲಿ ಹೆಚ್ಚಿನ ಸಂಶೋಧನ ಕಾರ್ಯಕ್ರಮವನ್ನು ಕೈಕೊಂಡಿರುವವರು ದಕ್ಷಿಣ–ಮಧ್ಯ ವಲಯದ ಸೂಪರಿಂಟೆಂಡಿಂಗ್ ಆರ್ಕಿಯಾಲಜಿಸ್ಟ್ ಶ್ರೀ ಎಸ್. ಆರ್. ರಾವ್‌ರವರು.

[7] *EC VIII*. Sb 465 (ಕ್ರಿ. ಶ. 968), ಸಾಲು ೧೪

ಮೊಗೂರು (ಸಾಲು ೧೭) : ಇದು ಇಂದಿನ ಮೊಗವಳ್ಳಿಯೆಂಬ ಹಳ್ಳಿಯನ್ನು ಬಹುಶಃ ಸೂಚಿಸುತ್ತದೆ. ಮೊಗವಳ್ಳಿ ಗುಡ್ನಾಪುರದ ಆಗ್ನೇಯಕ್ಕೆ ಸುಮಾರು 5ಮೈ. ದೂರದಲ್ಲಿದೆ. [ಜನಸಂಖ್ಯೆ ೪೨೭]. ವಾಸ್ತವವಾಗಿ ಉತ್ತರ ಕನ್ನಡ ಜಿಲ್ಲೆಯ ದಕ್ಷಿಣದ ಗಡಿಯಂಚಿನಲ್ಲಿದೆ.

ಕರ್ನಾಟಕದ ಅನೇಕ ಗ್ರಾಮಗಳ ಹೆಸರುಗಳಅಂತ್ಯದಲ್ಲಿ 'ಊರು', ಹಳ್ಳಿ', 'ಕೇರಿ', ಪಲ್ಲಿ', ಮುಂತಾದವು ಸೇರಿಕೊಂಡಿರುವುದುಂಟು ; ಇವು ಪರಸ್ಪರ ಅದಲುಬದಲಾಗುವುದುಂಟು. ಶಾಸನದಲ್ಲಿ ಉಕ್ತವಾದ ಮೊಗೂರು (ಮೊಗ+ಊರು) ಕಾಲಕ್ರಮದಲ್ಲಿ ಮೊಗವಳ್ಳಿ (ಮೊಗ+ಹಳ್ಳಿ) ಎಂದಾಗಿರಬಹುದು.

ಮಹಾವೆಜ್ಜುಗಲಿ (ಸಾಲು ೧೮) : ಇದು ಇಂದಿನ (ದೊಡ್ಡ) ಬೆಂಗಳಿಯಾಗಿರಬಹುದು. ಇದೊಂದು ದೊಡ್ಡ ಊರು [ಜನಸಂಖ್ಯೆ ೯೪೮]. ಗುಡ್ನಾಪುರದಿಂದ ವಾಯವ್ಯಕ್ಕೆ ಕೇವಲ 1½ ಮೈ. ದೂರದಲ್ಲಿದೆ. ಬೆಂಗಳಿ, ಬೆಂಗಳೆ, ಬೆಂಗ್ಳಿ ಎಂದು ಮುಂತಾಗಿ ನಿರ್ದೇಶಿಸಲಾಗುವ ಈ ಊರಿನ ಹೆಸರಿನ ಹಿಂದೆ 'ದೊಡ್ಡ' ಎಂಬ ವಿಶೇಷಣ ಈಗ ಅಧಿಕೃತವಾಗಿ ಕಂಡುಬರುವುದಿಲ್ಲ.

ದಹ್ರಕವೆಜ್ಜುಗಲಿ (ಸಾಲು ೧೯) : ಇದು ಇಂದಿನ ಚಿಕ್ಕ ಬೆಂಗಳಿ ಅಥವಾ ಚಿಕ್ಬೆಂಗಳೆ ಎಂದು ಕರೆಯುವ ಒಂದು ಹಳ್ಳಿ. ಗುಡ್ನಾಪುರದ ವಾಯುವ್ಯಕ್ಕೆ ಕೇವಲ ಒಂದು ಮೈ. ಅಂತರದಲ್ಲಿದೆ. ವಾಸ್ತವವಾಗಿ ಗುಡ್ಡತಟಾಕದ ವಾಯವ್ಯ ಮೂಲೆಯಿಂದಲೇ ಈ ಊರಿನ ಗಡಿ ಆರಂಭವಾಗುತ್ತದೆ. ಅಂತೆಯೆ ಚಿಕ್ಕ ಬೆಂಗಳಿಯಿಂದ ಗುಡ್ನಾಪುರ ಕಾಣುತ್ತದೆ.

ನವನದಿ (ಸಾಲು ೧೯) : ಗುಡ್ನಾಪುರದಿಂದ ವಾಯುವ್ಯಕ್ಕೆ ಸುಮಾರು ೨ ಮೈ. ಅಂತರದಲ್ಲಿರುವ ನವನಗಿರಿ, ನವನಗೇರಿ, ನ್ಯಾವಣಗೆರೆ ಎಂಬ ಊರಿರಬಹುದು. [(ಜನಸಂಖ್ಯೆ ೨೨೨]. ಈ ಊರಿನ ನೈಋತ್ಯಕ್ಕಿರುವ ರಸ್ತೆಯೇ ಶಾಸನೋಕ್ತ ಮಹಾಪಥವಿರಬಹುದು. ಅದೇನಿದ್ದರೂ ಈ ರಸ್ತೆಯೇ ಇಂದಿಗೆ ಶಿರಸಿ–ಬನವಾಸಿ (ಗುಡ್ನಾಪುರ ಹಾಯ್ದು) ಹೆದ್ದಾರಿಯಾಗಿದೆ. ಈ ಊರಿನ ಹೊರವಲಯದಲ್ಲಿ ಕೆರೆಯಿದೆ. ಅದರ ದಂಡೆಯ ಮೇಲೆಲ್ಲ ಕೇತಕಿ ಗಿಡಗಳಿವೆ.

ಎಸಟಾ (ಸಾಲು ೧೯) : ಇಂದಿನ ಎಸಳೆಯೆಂಬ ಊರಾಗಿರಬೇಕು. ಗುಡ್ನಾ ಪುರದ ವಾಯುವ್ಯಕ್ಕೆ ಸುಮಾರು ೧೦ ಮೈ. ದೂರದಲ್ಲಿರುವ ಈ ಹಳ್ಳಿ ಶಿರಸಿಯ ಸಮೀಪ ದಲ್ಲಿದೆ. ಶಿರಸಿಯಿಂದ ಈಶಾನ್ಯಕ್ಕೆ ಕೇವಲ ೧ ಮೈ. ಅಂತರದಲ್ಲಿದೆ ಈ ಊರಿನ ಸಮೀಪದಲ್ಲೆ ಎಸಳೆ ಹೊಳೆ ಹರಿಯುತ್ತದೆ. ಇಲ್ಲಿ ಪ್ರಾಚೀನ ಶಿಲ್ಪ-ಶಾಸನಗಳಿವೆ.[8]

ಎಡಕಡೆ (ಸಾಲು ೨೦) : ಗುಡ್ನಾಪುರದ ಆಗ್ನೇಯಕ್ಕೆ ಸುಮಾರು ೬ ಮೈ. ದೂರದ ಲ್ಲಿರುವ ಎಡೆಕೊಪ್ಪ ಅಥವಾ ಎಡರಬೈಲು ಆಗಿರಬಹುದೆ ?

ಸತ್ತೂರ (ಸಾಲು ೨೦) : ಇದು ಇಂದಿನ 'ಸಂತೊಳ್ಳಿ' ಎಂಬ ಊರನ್ನು

---

8 ನೋಡಿ : *ARSE* (1939-40—42-43) App. Bk No. 84, 87, 89, 91.

ನಿರ್ದೇಶಿಸಬಹುದು. ಬನವಾಸಿ ಹೋಬಳಿಯಲ್ಲಿರುವ ಈ ಹಳ್ಳಿ ಗುಡ್ನಾಪುರದಿಂದ ಈಶಾನ್ಯಕ್ಕೆ ಸುಮಾರು ೭ ಮೈ. ಅಂತರದಲ್ಲಿದೆ. ಸತ್ತೂರು (ಊರು) ಕಾಲಕ್ರಮದಲ್ಲಿ ಸತ್ತಳ್ಳಿ(ಹಳ್ಳಿ) ಯಾಗಿ ಈಗ ಸಂತೊಳ್ಳಿ ಎಂಬ ರೂಪವನ್ನು ಪಡೆದಿರಬಹುದು.

ಅಂಬಿಲಕುಣ್ಡಿ (ಸಾಲು ೨೧) : ಇದು ಬಹುಶಃ ಇಂದಿನ ಅಂಬಲಿ ಹೊಂಡವನ್ನು ನಿರ್ದೇಶಿಸಬಹುದು. ಈ ಹಳ್ಳಿ ಗುಡ್ನಾಪುರದಿಂದ ವಾಯುವ್ಯಕ್ಕೆ ಸುಮಾರು ೧೪ ಮೈ. ದೂರದಲ್ಲಿದೆ. ಅಲ್ಲದೆ ಗುಡ್ನಾಪುರದ ನೈಋತ್ಯಕ್ಕೆ ಸುಮಾರು ೮೧ ಮೈ. ದೂರದಲ್ಲಿ ಅಂಬವಳ್ಳಿ ಎಂಬ ಊರಿದೆ. ಇದರ ಸಮೀಪ ಗುಡ್ಡಗಳ ಸಾಲು, ಕೆರೆ ಅಡಿಕೆ ತೋಟಗಳಿವೆ. ಅಂತೆಯೇ ಇದು ಶಾಸನೋಕ್ತ ಅಂಬಿಲಕುಣ್ಡಿಗೆ ಅನುಸಾರವಾಗಿದೆಯೆಂಬುದನ್ನು ಗಮನಿಸಬೇಕು.

ಕಮ್ಮಕೂರ (ಸಾಲು ೨೦) : ಇದು ಇಂದಿನ ಕಮರೂರು ಎಂಬುದಾಗಿ ಗುರುತಿಸಬಹುದು. ಇದೊಂದು ದೊಡ್ಡ ಗ್ರಾಮ. ಇದು ಗುಡ್ನಾಪುರದ ದಕ್ಷಿಣಕ್ಕೆ ೪ ಮೈ. ಅಂತರದಲ್ಲಿದೆ [ಜನಸಂಖ್ಯೆ ೭೭೦]. ಈಗ ಚಂದ್ರಗುತ್ತಿ ಹೋಬಳಿಯಲ್ಲಿ ಅಂತರ್ಗತವಾಗಿರುವ ಕಮರೂರಿನ ಉಲ್ಲೇಖ ನಡಳ್ಳಿ ಶಾಸನ (ಕ್ರಿ. ಶ. ೧೨ನೆಯ ಶತಮಾನ)ವೊಂದರಲ್ಲಿ ಕಂಡುಬರುತ್ತದೆ.[9]

ವನವಾಸಕೆ (ಸಾಲು ೨೩) : ಇದು ಇಂದಿನ ಬನವಾಸಿ. ಪುರಾತನ ಕಾಲದಲ್ಲಿ ಇದನ್ನು ವನವಾಸಕ, ವನವಸಕ, ವೈಜಯಂತಿ, ಬನವಸೆ, ಬನವಾಸಿ ಎಂದು ಮುಂತಾಗಿ ಕರೆಯುತ್ತಿದ್ದರು. ಕರ್ನಾಟಕದ ಇತಿಹಾಸಪ್ರಸಿದ್ಧ ಸ್ಥಳವಾದ (ಪಂಪ ಪ್ರಶಂಸಿತ) ಬನವಾಸಿ ಕದಂಬರ ರಾಜಧಾನಿಯಾಗಿ ಮೆರೆದಿತ್ತು.[10] ಗುಡ್ನಾಪುರದ ಆಗ್ನೇಯಕ್ಕೆ ಕೇವಲ ೩ ಮೈ. ದೂರದಲ್ಲಿರುವ ಬನವಾಸಿಯನ್ನು (ಉ. ಅಂ.-೩೩' ೧೪° ಪೂ. ರೇ ೭೫°-೫') ಟಾಲೆಮಿ[11], ಅಲ್ಬೆರೂನಿ[12] ಮುಂತಾದ ವಿದೇಶಿಯರು ಬಣ್ಣಿಸಿದ್ದಾರೆ. ಮಹಾವಂಶ,[13] ಪ್ರಭುಲಿಂಗಲೀಲೆ[14] ಪಂಪಭಾರತ[15] ಮುಂತಾದ ಕೃತಿಗಳಲ್ಲೂ ಇದರ ಉಲ್ಲೇಖವಿದೆ. ಬಹುಶಃ ನೂರಾರು ಶಾಸನ

---

9 *EC* VIII 54, (ಸು. ೧೧೫೪ ಕ್ರಿ. ಶ.), ಸಾಲು ೪

10 ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಇಲಾಖೆಯವರು ಬನವಾಸಿಯಲ್ಲಿ ಸಂಶೋಧಿಸಿದ ಕದಂಬ ಮೃಗೇಶವರ್ಮನ ಶಿಲಾ ಶಾಸನ ಈ ಮಾತನ್ನು ಸ್ಪಷ್ಟಪಡಿಸಿದೆ. ಕೋಟೆಯ ಒಳಭಾಗದಲ್ಲಿ ದೊರೆತ ಈ ಶಾಸನವೂ ಆದರ ಸುಂದರ ಪೇಟಿಕಾಶಿರದ ಅಕ್ಷರಗಳೂ ವೈಶಿಷ್ಟ್ಯಪೂರ್ಣವಾಗಿದೆ.

11 *IA* Vol. III ಪು. ೩೭೩

12 Dr. Edward E. Sachau : *Alberuni's India*, Bombay, 1964 ಪು. ೨೦೨

13 94 XIII, ಪು. ೩೨೯

14 (ಸಂ) ಪ್ರೊ. ಶಿ. ಶಿ. ಬಸವನಾಳ : ಚಾಮರಸಕೃತ ಪ್ರಭುಲಿಂಗಲೀಲೆ, ಧಾರವಾಡ, ೧೯೫೬, ಪು. ೧೯-೨೦, ಪದ್ಯ ೨-೪

15 ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಬೆಂಗಳೂರು, ೧೯೩೧, ಪು.೯೯ ಪದ್ಯ ೨೮-೩೦

ಗಳು ಬನವಾಸಿನಾಡನ್ನೂ, ಬನವಾಸಿ ಊರನ್ನೂ ವರ್ಣಿಸಿದ್ದುಂಟು. ಕದಂಬರ ಕಾಲದಲ್ಲಿ ಬನವಾಸಿ ರಾಜಧಾನಿಯಲ್ಲಿ ಗುಡ್ನಾಪುರವೂ ಬಹುಶಃ ಅಂತರ್ಗತವಾಗಿತ್ತು. ಶಾಸನದಲ್ಲಿ ವರ್ಣಿಸಿರುವ ಗುಡ್ನಾಪುರದ ಅರಮನೆ, ಅಂತಃಪುರ, ನೃತ್ಯಶಾಲೆಗಳನ್ನು ಗಮನಿಸಿದರೆ ಅದೊಂದು ಉಪ ರಾಜಧಾನಿಯಾಗಿ ಮೆರೆದಿರಲೂ ಸಾಕೆಂದು ಊಹಿಸಬಹುದು.

ಶಾಸನಸ್ತಂಭದ ಅಷ್ಟಕೋನಾಕಾರ ಭಾಗದಲ್ಲಿ (shaft) ಕಲ್ಲಿನ ಹೊಪ್ಪಳಿಕೆಗಳು ಎದ್ದಿರುವುದರಿಂದ ಕೆಲವು ಅಕ್ಷರಗಳು ಅದೃಶ್ಯವಾಗಿವೆ. ಅಲ್ಲಿ ಉಲ್ಲೇಖಿಸಿರುವ ಸ್ಥಳನಾಮಗಳಲ್ಲಿ ಕೆಲವು ಅಕ್ಷರಗಳು ಸ್ಪಷ್ಟವಾಗಿಲ್ಲ. ಅದರೂ ತಾತ್ಕಾಲಿಕವಾಗಿ ಅವನ್ನು ಓದಲು ಪ್ರಯತ್ನಿಸ ಲಾಗಿದೆ

ಮುಕುಣ್ಡಿ (ಸಾಲು ೨೬) : ಇದು ಇಂದಿನ ಮರಗುಂಡಿಯಾಗಿರಬಹುದೆ? ಮರಗುಂಡಿ ಎಂಬ ಹಳ್ಳಿ ಗುಡ್ನಾಪುರದ ನೈಋತ್ಯಕ್ಕೆ ಸುಮಾರು 3 ಮೈ ದೂರದಲ್ಲಿದೆ.

ಕಲ್ಲೀ[ಲಿ] (ಸಾಲು-೨೬) : ಇಂದಿನ ಕಲ್ಲಿ ಅಥವಾ ಕಲ್ಲೆ ಎಂಬ ಊರನ್ನು ಇದು ನಿರ್ದೇಶಿಸಬಹುದು. ಇದು ಗುಡ್ನಾಪುರದ ನೈಋತ್ಯಕ್ಕೆ ಸುಮಾರು $4\frac{1}{2}$ ಮೈ. ದೂರ ದಲ್ಲಿದೆ [ಜನಸಂಖ್ಯೆ ೧೮೨] ಬನವಾಸಿ ಹೋಬಳಿಯಲ್ಲಿರುವ ಈ ಊರಿನಲ್ಲಿ ಜೈನ ಶಾಸನಸ್ತಂಭ ವೊಂದಿದೆ. ಇದರ ಮೇಲ್ಭಾಗದಲ್ಲಿ ನಾಲ್ಕು ಕಡೆ ನಾಲ್ಕು ಜೈನಬಿಂಬಗಳನ್ನು ಕೆತ್ತಲಾಗಿದೆ. ಅಲ್ಲದೆ ಸುಂದರವಾದ ಕನ್ನಡಶಾಸನವೊಂದಿದೆ. ಸ್ಥಳೀಯ ಜನರ ವದಂತಿಯ ಪ್ರಕಾರ ಈ ಪ್ರದೇಶವೆಲ್ಲ ಈ ಹಿಂದೆ ಜೈನರ ವಾಸಸ್ಥಾನವಾಗಿತ್ತು. ಗುಡ್ನಾಪುರ ಸ್ತಂಭಶಾಸನ ದಲ್ಲಿ ವರ್ಣಿಸಿರುವ ಪದ್ಮಾವತಿ ದೇವಾಲಯ ಕಲ್ಲಿಯಲ್ಲಿದ್ದರೂ ಇರಬಹುದು. ಈ ದಿಸೆಯಲ್ಲಿ ವ್ಯಾಪಕವಾದ ಸಂಶೋಧನೆ ಮಾಡುವುದು ಅವಶ್ಯ.

ಹಾಕಿ[ನಿ]ಪಲ್ಲಿ[16] (ಸಾಲು ೨೬) : ಈ ಸ್ಥಳನಾಮದ ಅಕ್ಷರಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಇದು ಬಹುಶಃ ಹಕ್ಕಲಗೇರಿಯನ್ನು ನಿರ್ದೇಶಿಸುತ್ತದೆ. ಈ ಹಳ್ಳಿ ಗುಡ್ನಾ ಪುರದ ಪಶ್ಚಿಮಕ್ಕೆ ಸುಮಾರು ೫ ಮೈ. ದೂರದಲ್ಲಿದೆ. ಇಲ್ಲಿರುವ ದಿನ್ನೆ ಪ್ರದೇಶವನ್ನು ಸ್ಥಳಿಕರು ಜೈನರ ಕಟ್ಟೆಯೆಂದು ವರ್ಣಿಸುತ್ತಾರೆ. ಈ ಹಿನ್ನೆಲೆಯಲ್ಲಿ, ಶಾಸನೋಕ್ತ ಕಾಮ ದೇವಾಲಯ ಈ ದಿನ್ನೆಯಡಿಯಲ್ಲಿದ್ದರೂ ಇರಬಹುದು. ಅದೇನಿದ್ದರೂ, ಈ ಪ್ರದೇಶದಲ್ಲಿ ಸಮಗ್ರವಾಗಿ ಉತ್ಖನನ ಮಾಡುವುದು ಆವಶ್ಯಕ.

ಒಟ್ಟಿನಲ್ಲಿ ಗುಡ್ನಾಪುರ ಸ್ತಂಭಶಾಸನದಲ್ಲಿ ಉಲ್ಲೇಖಿಸಿದ ಪದಿನಾರು ಊರುಗಳನ್ನು

---

16 'ಹಾಕಿ[ನಿ]ಪಲ್ಲಿ' ಎಂಬ ಸ್ಥಳನಾಮದಲ್ಲಿ ಚೌಕಕಂಸದಲ್ಲಿ ಸೂಚಿಸಿರುವ 'ನಿ' ಅಕ್ಷರ 'ಲಿ' ಅಕ್ಷರದಂತೆ ತೋರುತ್ತದೆಯಾದ್ದರಿಂದ ಅದನ್ನು ಹಾಕಿ[ಲಿ]ಪಲ್ಲಿ ಎಂದು ಓದಲೂ ಬಹುದು. ಹೀಗೆ ಶಾಸನದ ಹಾಕಿಲಿಪಲ್ಲಿ, ಹಕ್ಕಲಗೇರಿಯಾಗಿರಬಹುದು ; 'ಪಲ್ಲಿ' (ಹಳ್ಳಿ) ಕೇರಿ ಆಗುವುದು ಸಹಜ,

ಗುಡ್ನಾಪುರದ ಸುತ್ತಮುತ್ತ ಗುರುತಿಸುವುದು ಇದೀಗ ಸಾಧ್ಯವಾಗಿದೆ.[17] ಈ ಊರುಗಳ ಹೆಸರುಗಳೆಲ್ಲ, ಅಲ್ಪಸ್ವಲ್ಪ ಬದಲಾವಣೆ ಸ್ಥಿತ್ಯಂತರಗಳನ್ನು ಬಿಟ್ಟರೆ ಇಂದಿಗೂ ಹಾಗೇ ಉಳಿದು ಕೊಂಡು ಬಂದಿವೆ. ಅಲ್ಲಿ ಕಂಡುಬರುವ ಪ್ರಾಚೀನ ಅವಶೇಷಗಳು ಅವುಗಳ ಪ್ರಾಚೀನತೆಯನ್ನು ಸೂಚಿಸಬಹುದು. ಶಾಸನೋಕ್ತ ಕಾಮಜಿನಾಲಯ, ಕಾಮದೇವಾಲಯ ಮತ್ತು ಪದ್ಮಾವತ್ಯಾಲಯಗಳ ಪೂಜಾಸಂಸ್ಕಾರಾರ್ಥವಾಗಿ ಬಿಟ್ಟದಾನಗಳ ವಿವರಪೂರ್ಣ ಅಧ್ಯಯನಕ್ಕೆ ಇದೀಗ ಗುರುತಿಸಲಾದ ಸ್ಥಳನಾಮಗಳು ಸಹಾಯಕವಾಗಬಹುದು.[18] ಅಲ್ಲದೆ ಕಾಮದೇವಾಲಯವನ್ನೂ ಪದ್ಮಾವತಿ ಆಲಯವನ್ನೂ ನಿರ್ದಿಷ್ಟವಾಗಿ ಗುರುತಿಸಲು ಇದು ಪೂರಕವಾಗಬಹುದು.

---

[17] ಇವುಗಳಲ್ಲಿ ಸುಮಾರು ಏಳು ಹೆಸರುಗಳನ್ನು ಡಾ. ಬಿ. ಆರ್. ಗೋಪಾಲ್‌ರವರು ಪ್ರೊ. ಎಲ್. ಟಿ. ಶರ್ಮಾರವರ ಸಹಭಾಗಿತ್ವದಲ್ಲಿ ಗುರುತಿಸಿದ್ದಾರೆ. ಉಳಿದ ಸ್ಥಳನಾಮಗಳನ್ನು ಗುರುತಿಸಲು "ನನಗೆ ಸಾಧ್ಯವಾಗಿಲ್ಲ" ಎಂದು ತಿಳಿಸಿದ್ದಾರೆ. ನೋಡಿ : *Srikanthika*, **Dr. S. Srikantha Sastri Felicitation Volume, Mysore, 1973,** ಪು ೬೪

[18] ಈ ದಿಸೆಯಲ್ಲಿ ಸಹಾಯಮಾಡಿದ ಪ್ರೊ. ಎ. ವಿ. ನರಸಿಂಹಮೂರ್ತಿಯವರಿಗೂ ಡಾ. ಕೆ. ವಿ. ರಮೇಶ್‌ರವರಿಗೂ ಕೃತಜ್ಞತೆಗಳು. ಉತ್ತರ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಯ ನಕಾಸೆಗಳನ್ನೊದಗಿಸಿಕೊಟ್ಟ ಮಾನಸಗಂಗೋತ್ರಿಯ ಭೂಗೋಳಶಾಸ್ತ್ರ ವಿಭಾಗದವರಿಗೆ ಕೃತಜ್ಞತೆಗಳು.

ಡಾ. ಕೆ. ಎನ್. ವೆಂಕಟರಾಯಪ್ಪ
ಕೆ. ಲಕ್ಷ್ಮೀನಾರಾಯಣ

ದಾವಣಗೆರೆ ನಗರದ ಇತಿಹಾಸ

ಹೆಸರಿನ ಉಗಮ ಮತ್ತು ಪ್ರಾರಂಭಿಕ ಇತಿಹಾಸ

ಒಂದು ಐತಿಹ್ಯದ ಪ್ರಕಾರ ದಾವಣಗೆರೆ ಎಂಬ ಹೆಸರು ಊರಿನ ಹತ್ತಿರದಲ್ಲಿಯೇ ಇದ್ದ ದಾವಣಿಕೆರೆ ಎಂಬ ಕೆರೆಯ ಹೆಸರಿನಿಂದ ಬಂದದ್ದು. ಆ ಕೆರೆಯ ಹತ್ತಿರದಲ್ಲಿಯೇ ಇದ್ದ ಹಳ್ಳಿಗೆ ಈ ಹೆಸರು ಬಂತು. ಅನಂತರ ದಾವಣಿಕೆರೆ ಎಂಬ ಹೆಸರು ದಾವಣಗೆರೆಯಾಯಿತು; ದಾವಣಿಕೆರೆ ಒಂದು ಕಾಲದಲ್ಲಿ ದನಕರುಗಳ ಮಾರಾಟದ ಸ್ಥಳವಾಗಿತ್ತು. ಇಂದಿಗೂ ಆ ಸ್ಥಳದಲ್ಲಿ ದನಕರುಗಳ ಸಂತೆಯಾಗುತ್ತದೆ.

ದಾವಣಗೆರೆಯ ಬಗ್ಗೆ ಅತಿಮೊದಲಿನ ಉಲ್ಲೇಖ 1121ರ ಶಾಸನವೊಂದರಲ್ಲಿ ಸಿಗುತ್ತದೆ. ಆಗ ಅದು ಅಜ್ಞಾತ ಗ್ರಾಮವಾಗಿತ್ತು; ಚಾಲುಕ್ಯ ರಾಜ್ಯದ ನೊಳಂಬವಾಡಿ 32000 ಪ್ರಾಂತದ ಭಾಗವಾಗಿತ್ತು. ದಾವಣಗೆರೆಯಿಂದ ಆರು ಮೈಲಿ ದೂರದಲ್ಲಿರುವ ಉಚ್ಚಂಗಿದುರ್ಗ ಸರಕಾರದ ಕೇಂದ್ರ ಕಾರ್ಯಸ್ಥಾನವಾಗಿತ್ತು. 1173–1210ರಲ್ಲಿ ಅದು ಹೊಯ್ಸಳ ರಾಜ್ಯದ ಭಾಗವಾಗಿತ್ತು.[2] ಈಗ ದಾವಣಗೆರೆ ನಗರದ ಭಾಗವಾಗಿರುವ ಆನೆಕೊಂಡ ಗ್ರಾಮ ಆಗ ಒಂದು ಮಹತ್ತ್ವದ ಸ್ಥಳವಾಗಿದ್ದಿರಬಹುದು. ಆನೆಕೊಂಡ ಗ್ರಾಮದಲ್ಲಿ ಒಂದು ಸಣ್ಣ, ಸುಂದರ, ಹೊಯ್ಸಳ ಮಾದರಿಯ ಈಶ್ವರ ದೇವಸ್ಥಾನವಿದೆ. ಇದು ಹನ್ನೆರಡನೆಯ ಶತಮಾನದ ಮೊದಲಭಾಗದಲ್ಲಿ ನಿರ್ಮಿತವಾಗಿದ್ದಿರಬಹುದು. ಇಲ್ಲಿಯವರೆಗೆ ಈ ಗ್ರಾಮದಲ್ಲಿ ಬಹಳಷ್ಟು ಸುವರ್ಣನಾಣ್ಯಗಳು ಸಿಕ್ಕಿವೆ. ಅವು ಉಚ್ಚಂಗಿದುರ್ಗದ ಪಾಂಡ್ಯರಿಗೆ ಸೇರಿದವು ಎಂದು ತಿಳಿದುಬಂದಿದೆ.[3] 1210–1310ರ ಅವಧಿಯಲ್ಲಿ ದಾವಣಗೆರೆ ದೇವಗಿರಿಯ ಯಾದವರ ರಾಜ್ಯದ

---


[1] B. Lewis Rice (ed), *Epigraphia Carnatica*, Vol. XI, Chitradurga District, Davangere Taluk (Bangalore : Mysore Government Cenral Press, 1902), p. 39

[2] B. Lewis Rice (ed), Mysore : *A Gazetteer* compiled for Government, II (West-minster : Archibald Constable and Company) , p. 512

[3] Sri Satyan (ed), *Mysore State Gazetteer*, Chitradurga District (Bangalore Government Press, 1967), pp. 388.89

ದಾವಣಗೆರೆ

ಬೆಳವಣಿಗೆಯ ವಿವಿಧ ಹಂತಗಳು



ಭಾಗವಾಗಿತ್ತು. ದಾವಣಗೆರೆ ನಗರದ ಹೊರಭಾಗದಲ್ಲಿರುವ ಬೇತೂರು ಅಥವಾ ಬೆತ್ತೂರು ಅವರ ಆಡಳಿತದ ಕೇಂದ್ರವಾಗಿತ್ತು. 1310ರಲ್ಲಿ ಈ ಪ್ರದೇಶ ಮಹಮ್ಮದೀಯರ ಆಕ್ರಮಣಕ್ಕೆ ತುತ್ತಾಯಿತು. 1342ರಲ್ಲಿ ದಾವಣಗೆರೆ ವಿಜಯನಗರ ರಾಜ್ಯದ ಭಾಗವಾಯಿತು. 1562ರಲ್ಲಿ ಈ ಭಾಗವನ್ನು ಪಾಳೆಯಗಾರರು ವಶಪಡಿಸಿಕೊಂಡರು. 1749ರಲ್ಲಿ ಹೈದರ್‌ಅಲಿ ಮತ್ತು ಚಿತ್ರದುರ್ಗದ ಪಾಳೆಯಗಾರರ ನಡುವೆ ನಡೆದ ಯುದ್ಧದ ಅನಂತರ ಈ ಭಾಗ ಹೈದರ್ ಅಲಿಯ ರಾಜ್ಯದ ಭಾಗವಾಯಿತು.[4] ಹೈದರ್ ಅಲಿ ಇದನ್ನು ಅಪ್ಪೋಜಿರಾವ್ ಎಂಬ ಮರಾಠಾ ಸರದಾರನಿಗೆ ಜಹಗೀರಾಗಿ ಕೊಟ್ಟ. ಅಪ್ಪೋಜಿರಾವ್ ಈ ಊರಿನಲ್ಲಿ ವ್ಯಾಪಾರಿಗಳು ನೆಲೆಸಲು ಪ್ರೋತ್ಸಾಹಿಸಿದ. ಅವನು ಉತ್ತರಾಧಿಕಾರಿಗಳಿಲ್ಲದೆ ಸತ್ತ. ಆದರೆ ಈ ಊರು ಟೀಪು ಸುಲ್ತಾನನ ನೆರವಿನಿಂದ ಅಭಿವೃದ್ಧಿ ಹೊಂದಿತು.[5] 1799ರಲ್ಲಿ ದಾವಣಗೆರೆ ಮೈಸೂರು ಸಂಸ್ಥಾನದ ಭಾಗವಾಯಿತು. ಅನಂತರ ಅದು ದಾವಣಗೆರೆ ತಾಲ್ಲೂಕು ಮತ್ತು ಕಂದಾಯ ಉಪವಿಭಾಗದ ಕೇಂದ್ರ ಕಾರ್ಯಸ್ಥಾನವಾಯಿತು. ದಾವಣಗೆರೆ ಉಪವಿಭಾಗ ಹೊಳಲಕೆರೆ, ಹೊಸದುರ್ಗ, ದಾವಣಗೆರೆ ಮತ್ತು ಜಗಳೂರು ತಾಲ್ಲೂಕುಗಳನ್ನು ಮತ್ತು ಹರಿಹರ ಉಪ ತಾಲ್ಲೂಕನ್ನು ಒಳಗೊಂಡಿತ್ತು.[6]

ರೈಲುಮಾರ್ಗವಾಗುವುದಕ್ಕಿಂತ ಮೊದಲು ದಾವಣಗೆರೆಯಲ್ಲಿ ನಡೆಯುತ್ತಿದ್ದ ವಾಣಿಜ್ಯದ ಬಗ್ಗೆ ವಿವರಗಳು ಸಿಗುವುದಿಲ್ಲ. ಮೊದಲಿನಿಂದಲೂ ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ಧಾರವಾಡ ಮತ್ತು ತುಮಕೂರು ಜಿಲ್ಲೆಗಳೊಡನೆ ಇದು ವಾಣಿಜ್ಯ ಸಂಬಂಧವನ್ನಿಟ್ಟುಕೊಂಡಿತ್ತು. ಆದರೆ ಅನಂತರ ನಿರ್ಮಿಸಿದ ರಸ್ತೆಗಳ ಜಾಲಬಂಧ ವಾಣಿಜ್ಯದ ತೀವ್ರ ಬೆಳವಣಿಗೆಗೆ ಕಾರಣವಾಯಿತು. ಒಂದು ಗಮನಾರ್ಹ ಅಂಶವೆಂದರೆ ಇತ್ತೀಚಿಗೆ ನಿರ್ಮಿಸಿದ ರಸ್ತೆಗಳ ಜಾಲಬಂಧ. ಇದರಿಂದಾಗಿ ದಾವಣಗೆರೆ ದೇಶದ ಉಳಿದ ಭಾಗಗಳೊಂದಿಗೆ ವಾಣಿಜ್ಯ ಸಂಬಂಧವನ್ನು ಹೆಚ್ಚಿಸಲು ಸಾಧ್ಯವಾಯಿತು.

ಹಿಂದಿನ ಕಾಲದಲ್ಲಿ ಬಹಳ ಸಂಗತಿಗಳು ವ್ಯಾಪಾರದ ಬೆಳವಣಿಗೆಗೆ ಅಡ್ಡಿಯಾಗಿದ್ದುವು ಎಂದು ತೋರುತ್ತದೆ. ರಾಜಮನೆತನಗಳ ನಡುವೆ ಪದೇ ಪದೇ ನಡೆಯುತ್ತಿದ್ದ ಘೋರ ಕಲಹಗಳು ಮತ್ತು ಹೊಯ್ಸಳ ಮತ್ತು ವಿಜಯನಗರ ರಾಜ್ಯಗಳ ನಡುವೆ ಮೇಲಿಂದ ಮೇಲೆ ನಡೆಯುತ್ತಿದ್ದ ಸೈನಿಕ ಧಾಳಿಗಳು ವಾಣಿಜ್ಯ ಸುಗಮಗತಿಯಲ್ಲಿ ಸಾಗುವುದಕ್ಕೆ ಸಹಕಾರಿಯಾಗಿರಲಿಲ್ಲ. ಈ ಭಾಗದಲ್ಲಿ ನೌಕಾಸಂಚಾರಕ್ಕೆ ಯೋಗ್ಯವಾದ ನದಿಗಳಿಲ್ಲದಿದ್ದುದು ರಫ್ತು ವ್ಯಾಪಾರಕ್ಕೆ ಅಡ್ಡಿಯಾಗಿತ್ತು. ಅಂದಿನ ದಿನಗಳಲ್ಲಿ ಜನರು ಅಗತ್ಯ ವಸ್ತುಗಳ ಬಗ್ಗೆ ಸ್ವಾವಲಂಬಿಗಳಾಗಿದ್ದರು. ಅವರು ತಮಗೆ ಬೇಕಾದಷ್ಟನ್ನು ಉತ್ಪಾದಿಸುತ್ತಿದ್ದರು ಮತ್ತು ಹೆಚ್ಚೇನಾದರೂ ಸ್ವಲ್ಪ ಉಳಿದರೆ ಹತ್ತಿರದ ಸ್ಥಳ

---

4 Rice, Mysore : *A Gazetter*, pp. 518–19

5 Ibid., p. 521

6 Hayavadana Rao (ed), *Mysore Gazetteer: Compiled for Government*, Vol V (Bangalore ; Government Printing Press, 1930). pp. 1403–04

ಗಳಿಗೆ ಕಳುಹಿಸುತ್ತಿದ್ದರು. ವಾಣಿಜ್ಯ ಮಾರ್ಗಗಳು ಸಂಘಟಿತವಾಗಿರಲಿಲ್ಲ. ಸರಿಯಾದ ಕಾಲಕ್ಕೆ ಮಳೆಯಾಗದಿದ್ದರೆ ತೊಂದರೆಯಾಗುತ್ತಿತ್ತು. ಆಹಾರ ಧಾನ್ಯಗಳನ್ನು ಶೀಘ್ರವಾಗಿ ಸಾಗಿಸುವುದು ಸಾಧ್ಯವಾಗುತ್ತಿರಲಿಲ್ಲ. ದಾವಣಗೆರೆಯಲ್ಲಿ ಸಹ ಇತರ ನೆರೆಯ ಪ್ರದೇಶಗಳಂತೆ ಸರಕು ಸಾಗಾಣಿಕೆಯ ಸಮಸ್ಯೆಯಿಂದಾಗಿ ವಾಣಿಜ್ಯದ ಬೆಳವಣಿಗೆಗೆ ಪ್ರತಿಕೂಲ ಪರಿಸ್ಥಿತಿಯುಂಟಾಯಿತು. ಚಿಕ್ಕ ಹೊರೆ ಸಾಗಿಸುವ ಎತ್ತಿನ ಚಕ್ಕಡಿಗಳನ್ನು ಬಿಟ್ಟು ಬೇರಾವುದೇ ಶೀಘ್ರ ಸಾಗಾಣಿಕೆಯ ಸಾಧನಗಳಿರಲಿಲ್ಲ. ಮತ್ತು ಹೆದ್ದಾರಿಗಳೆನಿಸಿಕೊಳ್ಳುತ್ತಿದ್ದವು ವಾಹನಗಳ ಸಾಗಾಣಿಕೆಗೆ ತಕ್ಕುವಾಗಿರಲಿಲ್ಲ. ಚಕ್ಕಡಿಯ ರಸ್ತೆಗಳು ಮಳೆಗಾಲದಲ್ಲಿ ಅನುಪಯುಕ್ತವಾಗುತ್ತಿದ್ದುವು.

ಈ ಪ್ರದೇಶವನ್ನು ಕೆಲವೇ ರಾಜಮನೆತನಗಳು ಬಹಳ ಕಾಲ ಆಳಿದರೂ ಆಮದು ಮತ್ತು ರಫ್ತುಗಳ ಮೇಲೆ ಹಾಕಿದ್ದ ಕಟ್ಟಳೆಗಳಿಂದಾಗಿ ಮತ್ತು ಸುಂಕದ ದರದಲ್ಲಿ ಹಾಗೂ ವ್ಯಾಪಾರ ಮಾಡುವುದಕ್ಕೆ ಕೊಡುತ್ತಿದ್ದ ಅನುಮತಿಯಲ್ಲಿ ವ್ಯತ್ಯಾಸಗಳಿಂದಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ ಸರಕುಗಳ ಸಾಗಾಣಿಕೆ ಕಷ್ಟವಾಗುತ್ತಿತ್ತು. ಒಂದು ರಾಜಮನೆತನದ ಆಳ್ವಿಕೆಯ ಕೊನೆಯ ಮತ್ತು ಮತ್ತೊಂದು ರಾಜಮನೆತನದ ಆಳ್ವಿಕೆಯ ಪ್ರಾರಂಭದ ಮಧ್ಯದ ಕಾಲಾವಧಿಯಲ್ಲಿ ಸರಕಾರದ ಅಸ್ಥಿರತೆಯಿಂದಾಗಿ ಚಲಾವಣೆಯಲ್ಲಿದ್ದ ನಾಣ್ಯಗಳು ಮತ್ತು ತೂಕ ಅಳತೆಗಳು ಬದಲಾಗುತ್ತಿದ್ದುವು. ಇವೆಲ್ಲ ಸಂಗತಿಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಸ್ಥಾಪಿತವಾದ ಸರಕಾರ ಅಸ್ತಿತ್ವಕ್ಕೆ ಬರುವುದಕ್ಕಿಂದ ಮೊದಲು ವಾಣಿಜ್ಯದ ಬೆಳವಣಿಗೆಗೆ ಅಡ್ಡಿಯಾಗಿದ್ದುವು.

ಆಗಿನ ಕಾಲದ ಪ್ರವಾಸಿಗಳು, ಅವರಲ್ಲೂ ಅಬ್ಬೆ ದುಬೊಯಿಸ್ ಎಂಬ ಕ್ರಿಶ್ಚಿಯನ್ ಪಾದ್ರಿ, ಗಮನಿಸಿದಂತೆ ಈ ಪ್ರದೇಶದಲ್ಲಿ ರಸ್ತೆಗಳು ಮತ್ತು ರೈಲುಮಾರ್ಗವಾಗುವುದಕ್ಕಿಂತ ಮೊದಲು ವಾಣಿಜ್ಯ ದೇಶೀಯ ಚಕ್ಕಡಿಗಳನ್ನೆ ಅವಲಂಬಿಸಿತ್ತು. ಹೊರೆ ಹೇರುವ ಪ್ರಾಣಿಗಳನ್ನು ಸಹ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಮಾನುಗಳನ್ನು ಸಾಗಿಸಲು ಉಪಯೋಗಿಸುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಹೆಚ್ಚು ಪ್ರಮಾಣದ ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಬರುತ್ತಿರಲಿಲ್ಲ. ಇದರ ಪರಿಣಾಮವಾಗಿ ರಫ್ತು ಮತ್ತು ಆಮದು ಹೆಚ್ಚು ಬೆಲೆಯ ಪದಾರ್ಥಗಳಿಗಷ್ಟೇ ಸೀಮಿತವಾಗಿತ್ತು.

ವಿಜಯನಗರದ ಅರಸರು ವಿದೇಶಿ ವ್ಯಾಪಾರಸ್ಥರು ತಮ್ಮ ರಾಜ್ಯಕ್ಕೆ ಬಂದು ಮಾರಾಟಕ್ಕಾಗಿ ತಯಾರಿಸಿದ ವಸ್ತುಗಳನ್ನು ಮಾರಲು ಪ್ರೋತ್ಸಾಹಿಸಿದರು. ಈ ಅವಕಾಶದ ಲಾಭವನ್ನು ಪಡೆದುಕೊಂಡು ವ್ಯಾಪಾರಸ್ಥರು ರಾಜ್ಯದ ವಿವಿಧ ಭಾಗಗಳಲ್ಲಿ ಬಂದು ನೆಲಸಿದರು. ಈ ವ್ಯಾಪಾರಸ್ಥರಿಗೆ ತಮ್ಮದೇ ಆದ ಕೇಂದ್ರ ಕಾರ್ಯಸ್ಥಾನಗಳಿದ್ದು ಅವರು ರಾಜ್ಯದ ಬೇರೆಬೇರೆ ಭಾಗಗಳಲ್ಲಿ ತಮ್ಮ ಶಾಖೆಗಳನ್ನು ಪ್ರಾರಂಭಿಸಿದರು. ಮತ್ತು ವ್ಯಾಪಾರವನ್ನು ತಮ್ಮ ನಿಯೋಜಿತ ಪ್ರತಿನಿಧಿಗಳ ಮೂಲಕ ಮಾಡುತ್ತಿದ್ದರು. ಇವರ ವ್ಯಾಪಾರ ಬರೀ ಆಮದಿಗಷ್ಟೇ ಸೀಮಿತವಾಗಿರಲಿಲ್ಲ. ಇವರು ರಫ್ತು ವ್ಯಾಪಾರಕ್ಕೂ ನೆರವಾದರು.

ಹೈದರ್ ಅಲಿ ಮತ್ತು ಟೀಪು ಸುಲ್ತಾನರ ಕಾಲದಲ್ಲಿ ವಾಣಿಜ್ಯನಿಯಂತ್ರಣದಿಂದಾಗಿ ಸ್ಥಾಪಿತವಾದ ಹೊಸ ವ್ಯವಸ್ಥೆ ಪ್ರದೇಶದ ಎಲ್ಲ ವಾಣಿಜ್ಯ ಸಂಬಂಧಗಳ ಮೇಲೆ ಹತೋಟಿಯನ್ನಿಟ್ಟು ಕೊಂಡಿತು. ಆಂತರಿಕ ಭದ್ರತೆಯ ದೃಷ್ಟಿಯಿಂದ ಯುರೋಪಿಯನರೊಂದಿಗೆ ವ್ಯಾಪಾರವನ್ನು

ನಿರ್ಬಂಧಿಸಲಾಯಿತು. ರಫ್ತನ್ನು ನಿರ್ಬಂಧಿಸಲಾಯಿತು. ಏಕೆಂದರೆ ಅದರಿಂದ ವಸ್ತುಗಳ ಸ್ಥಳೀಯ ಬೆಲೆ ಹೆಚ್ಚಾಗುತ್ತಿತ್ತು ಮತ್ತು ಆಮದನ್ನು ಪ್ರೋತ್ಸಾಹಿಸಲಿಲ್ಲ, ಏಕೆಂದರೆ ಅದರಿಂದಾಗಿ ಉತ್ಪಾದಕರಿಗೆ ನಷ್ಟವಾಗುತ್ತಿತ್ತು. ಒಂಬತ್ತು ಜನ ನಿಯೋಗಿಗಳುಳ್ಳ ವಾಣಿಜ್ಯ ಸಮಿತಿಯನ್ನು ಆಮದು ಮತ್ತು ರಫ್ತು ನಿಯಂತ್ರಣಕ್ಕಾಗಿ ನಿಯಮಿಸಲಾಯಿತು. ಕೆಲವು ಪದಾರ್ಥಗಳ ವ್ಯಾಪಾರವನ್ನು ಸಂಪೂರ್ಣವಾಗಿ ಸರಕಾರ ತೆಗೆದುಕೊಂಡಿತು. ದೊರೆ ವಾಣಿಜ್ಯವನ್ನು ನಿಯಂತ್ರಿಸುವ ಪ್ರಧಾನ ವ್ಯಾಪಾರಿಯಾಗಿದ್ದ. ಲಾಭ ಪಡೆದುಕೊಳ್ಳಲು ಹೆಚ್ಚು ಅವಕಾಶವಿರದಿದ್ದುದರಿಂದ ಖಾಸಗಿ ಉದ್ಯಮ ಗುರುತರವಾದ ಹಿನ್ನಡೆಯನ್ನು ಎದುರಿಸಬೇಕಾಯಿತು.

ವಾಣಿಜ್ಯದ ಗತಿ ಟೀಪ್ಪು ಸುಲ್ತಾನನ ಆಳ್ವಿಕೆಯ ಅನಂತರ ಉತ್ತಮವಾಗಲಿಲ್ಲ. ಕಾರಣ ಆಗ ಅಸ್ತಿತ್ವದಲ್ಲಿದ್ದ ಸುಂಕದ ವ್ಯವಸ್ಥೆ ರಾಜ್ಯದ ಇತರ ಭಾಗಗಳಲ್ಲಿಯಂತೆ ನಿರ್ದಯಕಾರಿಯಾಗಿತ್ತು. ರಾಜ್ಯದ ಇತರ ಭಾಗಗಳಲ್ಲಿದ್ದಂತೆ ಈ ಪ್ರದೇಶದಲ್ಲಿ ಸಹ ಎಷ್ಟೋ ಸುಂಕದ ಕಟ್ಟೆಗಳಿದ್ದುವು ಮತ್ತು ಅವುಗಳ ಮೂಲಕ ಹಾದು ಹೋಗುತ್ತಿದ್ದ ವಸ್ತುಗಳ ಮೇಲೆ ಸ್ಥಳಾದಾಯ, ಮಾರ್ಗಾದಾಯ ಮತ್ತು ಮಾಮೂಲಾದಾಯ ಮುಂತಾದ ಎಷ್ಟೋ ಸುಂಕಗಳನ್ನು ಹಾಕಲಾಗುತ್ತಿತ್ತು. ಸುಂಕದ ಕಟ್ಟೆಗಳನ್ನು ರೈತರು ವಹಿಸಿಕೊಂಡಿದ್ದರು. ಅವರು ಸರಕಾರಕ್ಕೆ ಸ್ವಲ್ಪ ಬಾಡಿಗೆ ಕೊಟ್ಟು ಎಲ್ಲ ಕಂದಾಯವನ್ನು ಪಡೆಯುವ ಪೂರ್ಣ ಹಕ್ಕನ್ನು ಪಡೆದುಕೊಂಡಿದ್ದರು. ಕೆಲವು ಗಣ್ಯರಿಗೆ ಸುಂಕದಿಂದ ರಿಯಾಯಿತಿ ದೊರೆತಿತ್ತು ಮತ್ತು ಅಂದಿನ ಸರಕಾರದ ವಿಚಿತ್ರ ವರ್ತನೆ ಮತ್ತು ಮನಬಂದಂತೆ ನಡೆಯುವ ಹುಚ್ಚಿನಿಂದ ಅಳತೆಮಾನಗಳಲ್ಲಿ ಅಸ್ತವ್ಯಸ್ತತೆ ಉಂಟಾಗಿತ್ತು. ವಾಣಿಜ್ಯದ ಏಕಸ್ವಾಮ್ಯವನ್ನು ಸುಂಕದ ಕಟ್ಟೆಗಳ ಗುತ್ತಿಗೆದಾರರು ಅಥವಾ ಅವರ ಅಧೀನದಲ್ಲಿದ್ದ ವ್ಯಕ್ತಿಗಳು ಪಡೆದಿದ್ದರು. ಅವರು ವಾಣಿಜ್ಯದ ಸುಗಮನಡೆಗೆ ಅಡ್ಡಿಯಾಗಿದ್ದರು. ರಾಜನಿಗೆ ಬೇಕಾದ ಕೆಲವು ಪ್ರಭಾವಶಾಲಿ ವ್ಯಕ್ತಿಗಳು ವಾಣಿಜ್ಯದ ಏಕಸ್ವಾಮ್ಯವನ್ನು ಪಡೆದಿದ್ದರು ಮತ್ತು ಇದು ಹಾನಿಕಾರಕವಾಗಿ ಪರಿಣಮಿಸಿತ್ತು. ಇದೇ ವ್ಯವಸ್ಥೆ 1831ರಲ್ಲಿ ಬ್ರಿಟಿಷ್ ಮಂಡಳಿಯನ್ನು ನಿಯಮಿಸುವವರೆಗೆ ಮುಂದುವರಿಯಿತು. ಆ ವರ್ಷದಿಂದ ಅವ್ಯವಸ್ಥೆ ಕೊನೆಗೊಂಡು ವಾಣಿಜ್ಯದಲ್ಲಿ ಹೊಸ ಮಜಲು ಪ್ರಾರಂಭವಾಯಿತು. ಸಂಸ್ಥಾನದಲ್ಲಿ ವಾಣಿಜ್ಯದ ಬೆಳವಣಿಗೆಗಾಗಿ ಸಲಹೆ ಕೊಡಲು ಮಂಡಳಿಯೊಂದನ್ನು ನಿಯಮಿಸಲಾಯಿತು. ಕುಸಿದುಬಿದ್ದಿದ್ದ ವಾಣಿಜ್ಯ ಪುನರುಜ್ಜೀವನಕ್ಕಾಗಿ ಮತ್ತು ಹಳೆಯ ವ್ಯವಸ್ಥೆಯಲ್ಲಿದ್ದ ತಪ್ಪುಗಳನ್ನು ಸರಿಪಡಿಸುವುದಕ್ಕಾಗಿ ಮಂಡಳಿ ಕೂಡಲೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಆಲೋಚಿಸಿತು. ಅನಂತರ ತಂದ ಶೀಘ್ರ ಸುಧಾರಣೆಗಳಿಂದಾಗಿ ಎಲ್ಲ ಅನಾವಶ್ಯಕ ವಸ್ತುಗಳ ಆಮದನ್ನು ನಿಲ್ಲಿಸಲಾಯಿತು ಮತ್ತು ಸಂಸ್ಥಾನದ ಮತ್ತು ನೆರೆಯ ಸಂಸ್ಥಾನಗಳ ನಡುವೆ ವಾಣಿಜ್ಯವನ್ನು ನಿಯಂತ್ರಿಸಲು ಆಕ್ಟ್ರಾಯ್ ಸುಂಕವನ್ನು ಜಾರಿಗೆ ತರಲಾಯಿತು. ಅದೇ ವೇಳೆಯಲ್ಲಿ ಸಂಪರ್ಕ ವ್ಯವಸ್ಥೆಯನ್ನು ದೊಡ್ಡ ಪ್ರಮಾಣದಲ್ಲಿ ಉತ್ತಮಪಡಿಸಲಾಯಿತು. ಚಿತ್ರದುರ್ಗದಿಂದ ಬೆಂಗಳೂರಿನ ವರೆಗೆ ಜಲ್ಲಿ ರಸ್ತೆಯನ್ನು ನಿರ್ಮಿಸಲಾಯಿತು ಮತ್ತು ರಸ್ತೆಗಳನ್ನು ರಾಜ್ಯದ ಗಡಿಗಳ ವರೆಗೆ ವಿಸ್ತರಿಸಿ ಹೊರರಾಜ್ಯದ ರಸ್ತೆಗಳೊಂದಿಗೆ ಕೂಡಿಸಿ ಸಂಪರ್ಕವ್ಯವಸ್ಥೆಯನ್ನು ಸುಗಮಗೊಳಿಸಲಾಯಿತು. ತುಂಗಭದ್ರಾ ನದಿಯಮೇಲಿನ ಸೇತುವೆ 1868 ರಲ್ಲಿ ಪೂರ್ಣವಾಗಿ, ಕರ್ನಾಟಕದ ಉತ್ತರಭಾಗದೊಂದಿಗೆ ನೇರವಾದ ಸಂಪರ್ಕವುಂಟಾಯಿತು. ಬ್ರಿಟಿಷ್ ನಾಣ್ಯಗಳು ಚಲಾವಣೆಗೆ ಬಂದು ಅದರಿಂದ

ವಾಣಿಜ್ಯದ ಬೆಳವಣಿಗೆಗೆ ಸಹಾಯವಾಯಿತು. ಈ ಸುಧಾರಣೆಗಳಿಂದಾಗಿ ದಾವಣಗೆರೆ ಬಹು ಬೇಗನೆ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿ ಮಾರ್ಪಟ್ಟಿತು.[7]

19ನೆಯ ಶತಮಾನದ ಉತ್ತರಾರ್ಧ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ದಾವಣಗೆರೆ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಯಿತು. ಅದು ಉತ್ತರ ಆರ್ಕಾಟ್ ಜಿಲ್ಲೆಯ ವಲ್ಲಾಜಪೇಟೆಯೊಂದಿಗೂ ನಗರ ಮತ್ತು ಸಾಗರಗಳೊಂದಿಗೂ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿತ್ತು. ನಗರ ಮತ್ತು ಸಾಗರಗಳಲ್ಲಿ ಬೆಳೆದ ಅಡಿಕೆ ಮತ್ತು ಮೆಣಸಿನ ಕಾಳುಗಳನ್ನು ವಲ್ಲಾಜಪೇಟೆಗೆ ಕಳುಹಿಸಲಾಗುತ್ತಿತ್ತು. ಯುರೋಪ್, ಚೀನ, ಬಂಗಾಲ ಮತ್ತು ಪೂರ್ವದ್ವೀಪಗಳಿಂದ ಬಂದ ವಸ್ತುಗಳನ್ನು ಮತ್ತು ಉಪ್ಪನ್ನು ಮದ್ರಾಸ್ ಬಂದರದ ಮುಖಾಂತರ ತರಿಸಿಕೊಂಡು, ಅವುಗಳೊಂದಿಗೆ ದಾವಣಗೆರೆ ಮತ್ತು ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೇಯ್ದ ಕಂಬಳಿಗಳನ್ನು ನಗರ ಮತ್ತು ಸಾಗರಗಳಿಗೆ ಕಳುಹಿಸಲಾಗುತ್ತಿತ್ತು. ಆಗ ದಾವಣಗೆರೆ ಹತ್ತಿಯ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಮದ್ರಾಸಿನ ಜನ್ನಿ ಕಂಪನಿ ಹತ್ತಿಯ ಬೀಜ ತೆಗೆದು ಚಪ್ಪಟೆಮಾಡುವ ಕಾರ್ಖಾನೆಯನ್ನು ಸ್ಥಾಪಿಸಿತು. ಮುಂಬಯಿಯ ವ್ಯಾಪಾರ ಸಂಸ್ಥೆಗಳು ಇಲ್ಲಿ ತಮ್ಮ ಕಾರ್ಯಭಾರಿಗಳನ್ನು ಎಣ್ಣೆಬೀಜದ ಖರೀದಿಗಾಗಿ ಇಟ್ಟಿದ್ದರು.[8] ಆಗಿನ ದಿನಗಳಲ್ಲಿ ದಾವಣಗೆರೆಯಲ್ಲಿ ಕಂಬಳಿಗಳು, ಒರಟು ಬಟ್ಟೆ ಮತ್ತು ಇತರ ನೇಯ್ದ ಬಟ್ಟೆಗಳು ತಯಾರಾಗುತ್ತಿದ್ದುವು.[9]

1889ರಲ್ಲಿ ಹರಿಹರ-ಬೆಂಗಳೂರುಗಳ ನಡುವೆ ರೈಲುಸಂಚಾರ ಪ್ರಾರಂಭವಾಯಿತು. ಇದರಿಂದ ಸಾರಿಗೆ ವ್ಯವಸ್ಥೆಯಲ್ಲಿ ಮಹತ್ತರ ಸುಧಾರಣೆಯಾಯಿತು. ಸಾರಿಗೆ ವ್ಯವಸ್ಥೆಯಲ್ಲಿ ಆದ ಶೀಘ್ರ ಅಭಿವೃದ್ಧಿಯಿಂದಾಗಿ ಹೆಚ್ಚು ಪ್ರಮಾಣದಲ್ಲಿ ಹತ್ತಿ ದಾವಣಗೆರೆಗೆ ಬೀಜ ತೆಗೆದು ಚಪ್ಪಟೆ ಮಾಡಿಸಲು ಬರತೊಡಗಿತು. ಆಮದು ಮತ್ತು ರಫ್ತು ವ್ಯವಹಾರದಲ್ಲಿ ಹೆಚ್ಚು ಚಟುವಟಿಕೆ ಕಾಣತೊಡಗಿತು.[10]

ವಾಣಿಜ್ಯದ ಬೆಳವಣಿಗೆಯೊಂದಿಗೆ ನಗರದ ಜನಸಂಖ್ಯೆಯೂ ಹೆಚ್ಚಾಯಿತು. ನಗರದ ಜನಸಂಖ್ಯೆಯ ಬಗ್ಗೆ ಲಭ್ಯವಿರುವ ಮೊಟ್ಟಮೊದಲನೆಯ ದಾಖಲೆ 1891ರ ಜನಗಣತಿಯದು. ಆ ವರ್ಷ ದಾವಣಗೆರೆಯ ಜನಸಂಖ್ಯೆ 6,362 ಇತ್ತು, 1901ರಲ್ಲಿ ಅದರ ಜನಸಂಖ್ಯೆ 10,402 ಆಯಿತು.[11]

ಜನಸಂಖ್ಯೆಯ ಬೆಳವಣಿಗೆಯೊಂದಿಗೆ ಪಟ್ಟಣದ ಬೆಳವಣಿಗೆಯೂ ತೀವ್ರಗತಿಯಲ್ಲಾಯಿತು.

---

[7] Sri Satyan, *op. cit.*, pp. 193-96

[8] Rice, Mysore : *A Gazetteer*, p. 521

[9] *Ibid*, p. 509

[10] Sri Satyan, *op. cit.*, p. 196

[11] V. N. Narasmiyengar (ed.), *Census of India*, 1891, Vol. XXX, II Mysore, Imperial. Tables I to XVI (Bangalore: Government Central Press 1893), p. 10

1864 ರಲ್ಲಿ ಪಟ್ಟಣದ ಅಭಿವೃದ್ಧಿ ಹೊಂದಿದ ಪ್ರದೇಶದ ವಿಸ್ತೀರ್ಣ 47.84 ಹೆಕ್ಟೇರುಗಳಿದ್ದದ್ದು 1901ರಲ್ಲಿ 111.69 ಹೆಕ್ಟೇರುಗಳಷ್ಟಾಯಿತು 1864 ರಲ್ಲಿ ಪಟ್ಟಣದ ಅಭಿವೃದ್ಧಿ ಹೊಂದಿದ ಪ್ರದೇಶ ಈಗಿನ ನಾಲ್ಕನೆಯ, ಐದನೆಯ ಮತ್ತು ಆರನೆಯ ವಾರ್ಡುಗಳ ಪಶ್ಚಿಮ ಭಾಗ ಹಾಗೂ ಒಂದನೆಯ ಮತ್ತು ಎರಡನೆಯ ವಾರ್ಡುಗಳ ಪೂರ್ವಭಾಗವನ್ನೊಳಗೊಂಡಿತ್ತು. ಈಗಿನ ಚಾಮರಾಜಪೇಟೆ, ಹಳೆಯ ಬೇತೂರು ರಸ್ತೆ, ಬಿನ್ನಿ ಕಂಪನಿ ರಸ್ತೆ, ಕಾಯಿಪೇಟೆ ಮತ್ತು ಹೊಂಡ ಇವು ಪಟ್ಟಣದ ಎಲ್ಲೆಗಳಾಗಿದ್ದುವು. ಪಟ್ಟಣದ ಮುಖ್ಯ ವ್ಯಾಪಾರಕೇಂದ್ರ, ಚೌಕಿಪೇಟೆ, ದೊಡ್ಡಪೇಟೆ ಮತ್ತು ವಿಜಯಲಕ್ಷ್ಮಿ ರಸ್ತೆಗಳನ್ನೊಳಗೊಂಡಿತ್ತು. 1864ರ ಅನಂತರ ಪಟ್ಟಣದ ಬೆಳವಣಿಗೆ ಮುಖ್ಯವಾಗಿ ದಕ್ಷಿಣ, ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಾಯಿತು. 1901ರಲ್ಲಿ ಇದರ ಎಲ್ಲೆ ಆಜಾದ್‌ನಗರ ರಸ್ತೆ, ಹಳೆಯ ಬೇತೂರು ರಸ್ತೆ ಕೃಷ್ಣರಾಜೇಂದ್ರ ರಸ್ತೆ, ರೈಲ್ವೆ ನಿಲ್ದಾಣ ಮತ್ತು ಹೊಂಡಕ್ಕೆ ವಿಸ್ತರಿಸಿತು.

1890–1915ರ ಕಾಲಾವಧಿಯಲ್ಲಿ ದಾವಣಗೆರೆ ಪಟ್ಟಣ ಸಮಿತಿಯ ಆಡಳಿತಕ್ಕೊಳಪಟ್ಟಿತ್ತು. 1892-93ರಲ್ಲಿ ಅದರ ಆದಾಯ ಮತ್ತು ಖರ್ಚು ಅನುಕ್ರಮವಾಗಿ ರೂ. 3,890 ಮತ್ತು ರೂ. 3,651 ಇದ್ದುವು.[13]

1871ರಲ್ಲಿ ಸರ್ಕಾರದಿಂದ ಪ್ರಥಮವಾಗಿ ಪ್ರಾಥಮಿಕ ಶಾಲೆಗಳು ತೆರೆಯಲ್ಪಟ್ಟುವು.[14]

ಬದಲಾವಣೆಯ ಕಾಲ : 1901–35

1901–35ರ ಅವಧಿಯನ್ನು ಬದಲಾವಣೆಯ ಕಾಲವೆಂದು ಪರಿಗಣಿಸಬಹುದು. ಕೈಗಾರಿಕಾಕರಣ, ನಿಜವಾದ ಅರ್ಥದಲ್ಲಿ, ಪ್ರಾರಂಭವಾದದ್ದು ಈ ಶತಮಾನದ ಪ್ರಥಮ ದಶಕದಲ್ಲಿ. ಈ ಅವಧಿಯಲ್ಲಿ ಇಪ್ಪತ್ತೊಂದು ಕೈಗಾರಿಕೆಗಳ ಸ್ಥಾಪನೆಯಾಯಿತು. ಅವು ಮುಖ್ಯವಾಗಿ ಹತ್ತಿಯ ಕಾಳು ತೆಗೆದು ಚಪ್ಪಟೆಮಾಡುವ, ಎಣ್ಣೆ ತೆಗೆಯುವ, ಯಂತ್ರೋಪಕರಣಗಳ, ಕಾಫಿ ಮತ್ತು ಇತರ ಕೈಗಾರಿಕೆಗಳಾಗಿದ್ದುವು.[15] 1925ರಲ್ಲಿ 560 ಜನರು ಹದಿನಾಲ್ಕು ಹತ್ತಿಯ ಕಾಳು ತೆಗೆದು ಚಪ್ಪಟೆಮಾಡುವ ಮತ್ತು ಉಣ್ಣೆ ತೆಗೆಯುವ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದರು.[16] ಮೈಸೂರು ಸಂಸ್ಥಾನದಲ್ಲಿ ದೊಡ್ಡಪ್ರಮಾಣದಲ್ಲಿ ಯಂತ್ರದ ಸಹಾಯದಿಂದ ಹತ್ತಿಯ ಕಾಳನ್ನು ಬೇರ್ಪಡಿಸಿ ಚಪ್ಪಟೆಗೊಳಿಸುವ ಏಕೈಕ ಸ್ಥಳ ದಾವಣಗೆರೆಯಾಗಿತ್ತು. ದಾವಣಗೆರೆ ಮತ್ತು ಅದರ ಸುತ್ತಮುತ್ತಲಿನ ಸ್ಥಳಗಳಲ್ಲಿ ತಯಾರಿಸುತ್ತಿದ್ದ ಕಂಬಳಿಗಳು ಶ್ರೇಷ್ಠಮಟ್ಟವಾಗಿದ್ದುವು;

---

12 ನಗರದ ವಿಸ್ತೀರ್ಣವನ್ನು ತೋರಿಸುವ ಸಂಖ್ಯೆಗಳು 1864 ಮತ್ತು 1901ರಲ್ಲಿ ರಚಿಸಿದ ಕಂದಾಯ ನಕ್ಷೆಗಳನ್ನು ಆಧರಿಸಿವೆ.

13 Rice, Mysore : *A Gazetteer*, p. 521

14 Sri Satyan; *op. cit.*, p. 332

15 Department of Industries and commerce, Government of Mysore, *Mysore Industrial Directory* (Bangalore : Government Printing Press, 1970), pp. 604-6

16 Hayavadana Rao, *op. cit.*, p. 1396

ಮತ್ತು ಹೊರಗಡೆ ಸಹ ಹೆಸರುವಾಸಿಯಾಗಿದ್ದುವು.[17]

ದಾವಣಗೆರೆ ಚಿತ್ರದುರ್ಗ ಜಿಲ್ಲೆಯ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ದೊಡ್ಡ ಗಾತ್ರದಲ್ಲಿ ಹತ್ತಿಯ, ಎಣ್ಣೆಕಾಳಿನ, ಉಣ್ಣೆಯ, ಬಟ್ಟೆಯ ಮತ್ತು ಆಹಾರಧಾನ್ಯಗಳ ವ್ಯಾಪಾರ ಇಲ್ಲಿ ಆಗುತ್ತಿತ್ತು. ಹೊರಗಡೆಗೆ ಕಳುಹಿಸುತ್ತಿದ್ದ ಪ್ರಮುಖ ಸರಕುಗಳು ರಾಗಿ, ಹತ್ತಿ, ಎಣ್ಣೆಕಾಳು ಮತ್ತು ಸಕ್ಕರೆ. 1925ರಲ್ಲಿ ದಾವಣಗೆರೆ ರೈಲು ನಿಲ್ದಾಣದಿಂದ ರಫ್ತಾದ ರಾಗಿ, ಹತ್ತಿ, ಎಣ್ಣೆಬೀಜ ಮತ್ತು ಸಕ್ಕರೆಯ ತೂಕ ಅನುಕ್ರಮವಾಗಿ 19,800, 2,10,257, 55,504 ಮತ್ತು 13,298 ಮಣಗಳು. ಆಮದಾಗುತ್ತಿದ್ದ ಪ್ರಮುಖ ಸರಕುಗಳು ಸಕ್ಕರೆ, ಹತ್ತಿ, ಎಣ್ಣೆಬೀಜ ಮತ್ತು ರಾಗಿ. 1925ರಲ್ಲಿ ದಾವಣಗೆರೆಗೆ ರೈಲಿನ ಮೂಲಕ ಆಮದಾದ ಸಕ್ಕರೆ, ಹತ್ತಿ, ಎಣ್ಣೆ ಬೀಜ ಮತ್ತು ರಾಗಿಗಳ ಆಮದು ಅನುಕ್ರಮವಾಗಿ 27,902, 23,000, 10,911 ಮತ್ತು 2,402 ಮಣಗಳು.[18]

1913 ರಲ್ಲಿ ಮೈಸೂರು ಬ್ಯಾಂಕಿನ ಶಾಖೆ ದಾವಣಗೆರೆಯಲ್ಲಿ ಪ್ರಾರಂಭವಾಯಿತು. ಅದು ಮೊತ್ತಮೊದಲು ಸ್ಥಾಪಿತವಾದ ಬ್ಯಾಂಕು.[19]

ಚಿತ್ರದುರ್ಗ ಜಿಲ್ಲೆಯಲ್ಲಿ ಬೇಸಾಯದ, ಕೈಗಾರಿಕೆಗಳ ಮತ್ತು ವಾಣಿಜ್ಯದ ಚಟುವಟಿಕೆಗಳು ಹೆಚ್ಚಾದಂತೆ ಉತ್ಪಾದನೆಯ ಮತ್ತು ವಿತರಣೆಯ ಕೇಂದ್ರಗಳಾದ ದಾವಣಗೆರೆ, ಹರಿಹರ, ಚಿತ್ರದುರ್ಗ, ಮೊಳಕಾಲ್ಮೂರು ಹಾಗೂ ಇತರ ಸ್ಥಳಗಳನ್ನು ರಸ್ತೆಗಳ ಮೂಲಕ ಒಂದುಗೂಡಿಸುವ ಅವಶ್ಯಕತೆಯುಂಟಾಯಿತು. ಅಂತೆಯೇ ಈ ಶತಮಾನದ ಮೊದಲ ಇಪ್ಪತ್ತೈದು ವರ್ಷಗಳಲ್ಲಿ ಎಷ್ಟೋ ರಸ್ತೆಗಳನ್ನು ನಿರ್ಮಿಸಲಾಯಿತು. ರೈಲುಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ಮಾಣದ ಬಗ್ಗೆ ಅಧಿಕಾರಿಗಳು ಯೋಚಿಸಿ ಕೂಡಲೆ ಅಂಥ ರಸ್ತೆಗಳ ನಿರ್ಮಾಣಕಾರ್ಯವನ್ನು ಪೂರ್ತಿಗೊಳಿಸಿದರು. ಪ್ರಥಮ ಮತ್ತು ದ್ವಿತೀಯ ಮಹಾಯುದ್ಧಗಳ ಕಾಲಾವಧಿಯಲ್ಲಿ ಮತ್ತು ಅನಂತರ ವಾಹನ ಸಂಚಾರ ವ್ಯವಸ್ಥೆಯಲ್ಲಿ ಆದ ತೀವ್ರ ಬೆಳವಣಿಗೆಯಿಂದಾಗಿ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ತೀವ್ರಗೊಳಿಸಲಾಯಿತು.[20]

ಔದ್ಯೋಗೀಕರಣ ಮತ್ತು ನಗರೀಕರಣಗಳಿಗೆ ಅತಿ ಹತ್ತಿರದ ಸಂಬಂಧವಿದೆ. ಮಮ್‌ಫರ್ಡ್ ಹೇಳುವಂತೆ, "ಗತಕಾಲದಲ್ಲಿ ನಗರೀಕರಣ ಕೈಗಾರಿಕಾಕರಣಕ್ಕೆ ನೇರವಾದ ಪ್ರಮಾಣವಲ್ಲಾಗಿದೆ.'[21] ಬೇರೆ ಮಾತುಗಳಲ್ಲಿ ಹೇಳುವುದಾದರೆ, ಈಗಿನ ಕಾಲದಲ್ಲಿ ಬೆಳೆದ ನಗರಗಳ ಹುಟ್ಟು ಕೈಗಾರಿಕಾ ಕ್ರಾಂತಿಯಿಂದಾಗಿದೆ. ಆದಕಾರಣ ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಬೆಳೆದ ನಗರಗಳ ಬೆಳವಣಿಗೆಗೆ ಕೈಗಾರಿಕಾ ಕ್ರಾಂತಿಯೇ ಕಾರಣವೆಂಬುದನ್ನು ಒಪ್ಪಿ

---

17 *Ibid.*

18 *Ibid*, pp. 1431–34

19 Sri Satyan, *op. cit.*, p. 186

20 Ibid., p. 206–7

21 Lewis Mumford, *City Developmen'* (London : Sacker & Wardburg, 1945). p, 146

ಹೇಳಬೇಕು.[22] ದಾವಣಗೆರೆಯಲ್ಲಿ ಈ ಶತಮಾನದಲ್ಲಿ ತ್ವರಿತಗತಿಯಲ್ಲಿ ಬೆಳೆದ ಜನಸಂಖ್ಯೆಗೆ ಕೈಗಾರಿಕೀಕರಣ ಮುಖ್ಯ ಕಾರಣವೆಂದೆನ್ನಬಹುದು. ಪಟ್ಟಣದ ಜನಸಂಖ್ಯೆ ಮೊದಲನೆಯ ದಶಕದಲ್ಲಿ ಕಡಿಮೆಯಾಯಿತು. 1901ರಲ್ಲಿ 10,402 ಇದ್ದುದು 1911ರಲ್ಲಿ 10,074ಕ್ಕೆ ಇಳಿಯಿತು. ಆದರೆ ಮುಂದಿನ ಎರಡು ದಶಕಗಳಲ್ಲಿ ಜನಸಂಖ್ಯೆ ತೀವ್ರಗತಿಯಲ್ಲಿ ಹೆಚ್ಚಾಯಿತು. 1931ರಲ್ಲಿ ಅದರ ಜನಸಂಖ್ಯೆ 23,155 ಆಯಿತು.[23]

1915-48ರ ಕಾಲಾವಧಿಯಲ್ಲಿ ದಾವಣಗೆರೆ ಪುರಸಭೆಯು ಅಡಳಿತಕ್ಕೊಳಪಟ್ಟಿತ್ತು. ಈ ಕಾಲಾವಧಿಯಲ್ಲಿ ಪುರಸಭೆಯ ಆದಾಯ ಮತ್ತು ಖರ್ಚು ಹೆಚ್ಚಿದುವು. 1917-18ರಲ್ಲಿ ಪುರಸಭೆಯ ಆದಾಯ ಮತ್ತು ಖರ್ಚು ಅನುಕ್ರಮವಾಗಿ ರೂ. 55,326 ಮತ್ತು ರೂ. 50,605 ಇದ್ದದ್ದು 1935-36ರಲ್ಲಿ ಅನುಕ್ರಮವಾಗಿ ರೂ. 1,14,976 ಮತ್ತು ರೂ. 1,06,275ಕ್ಕೆ ಏರಿತು.[24]

1917ರಲ್ಲಿ ದಾವಣಗೆರೆಗೆ ತುಂಗಭದ್ರಾ ನದಿಯಿಂದ ಶುದ್ಧೀಕರಿಸಿದ ನೀರಿನ ಪೂರೈಕೆ ಪ್ರಾರಂಭವಾಯಿತು. ಈ ಯೋಜನೆಯಿಂದ ಪಟ್ಟಣದ 15,000 ಜನರಿಗೆ ಅನುಕೂಲವಾಯಿತು. 1932ರಲ್ಲಿ 30,000 ಜನರಿಗೆ ನೀರಿನ ಪೂರೈಕೆ ಮಾಡುವ ಉದ್ದೇಶದಿಂದ ನೀರಿನ ಪೂರೈಕೆಯ ವ್ಯವಸ್ಥೆಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಲಾಯಿತು.[25] 1928ರಲ್ಲಿ ಪ್ರಾರಂಭವಾದ ಲೋಕಲ್ ಫಂಡ್ ಡಿಸ್ಪೆನ್ಸರಿ ದಾವಣಗೆರೆಯ ಪ್ರಥಮ ಉಚಿತ ಔಷಧಾಲಯ.

1922ರಲ್ಲಿ ಸರಕಾರಿ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಲಾಯಿತು. ಇದು ನಗರದಲ್ಲಿ ಪ್ರಾರಂಭವಾದ ಮೊದಲ ಮಾಧ್ಯಮಿಕಶಾಲೆ.

1901-35ರಲ್ಲಿ ದಾವಣಗೆರೆಯ ಬೆಳವಣಿಗೆ ಮುಖ್ಯವಾಗಿ ದಕ್ಷಿಣ ಮತ್ತು ಪೂರ್ವ ದಿಕ್ಕುಗಳಲ್ಲಾಯಿತು. ಎರಡನೆಯ ದಶಕದಲ್ಲಿ ಚಾಮರಾಜಪೇಟೆ ಮುಖ್ಯ ವ್ಯಾಪಾರಕೇಂದ್ರದ ಭಾಗವಾಯಿತು. ನಗರದ ಮೂರು ಮುಖ್ಯ ಬಡಾವಣೆಗಳಾದ ಪಿ.ಜೆ. ಬಡಾವಣೆ, ಕಸ್ತೂರ ಬಾ ಬಡಾವಣೆ ಮತ್ತು ಹದಡಿ ಬಡಾವಣೆ ಅಸ್ತಿತ್ವಕ್ಕೆ ಬಂದದ್ದು 1928-31ರಲ್ಲಿ.

---

22 N. P. Gist and L. A. Halbert, *Urban Society* (New York : Thomas Y. Crowell Company, 1941), p. 49

23 P. Padmanabha (ed.), *Census of India*, 1971, *Mysore*, II-A (Bangalore : Office of the Director of Census Operations, Mysore, 1973), p. 167

24 *Administration Reports* of Davangere Municipality (Office of the Commissioner, Davavangere City Municipality, Davangere, 1918 & 1936)

25 *A Report of the Comprehensive Water Supply Scheme to Davangere City*

1936ರ ಅನಂತರ

1936ರ ಅನಂತರದ ಕಾಲವನ್ನು ತೀವ್ರ ಕೈಗಾರಿಕಾಕರಣದ ಕಾಲವೆಂದು ಪರಿಗಣಿಸಬಹುದು. ತೀವ್ರ ಕೈಗಾರಿಕಾಕರಣದ ನಾಂದಿ 1936ರಲ್ಲಿ ದಾವಣಗೆರೆ ಕಾಟನ್ ಮಿಲ್ಸ್‌ನ ಸ್ಥಾಪನೆಯಿಂದ ಆಯಿತು. ಅನಂತರದ ಕಾಲಾವಧಿಯಲ್ಲಿ ದೊಡ್ಡ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ತೀವ್ರ ಬೆಳವಣಿಗೆ ಆಯಿತು. ಆ ಕಾಲಾವಧಿಯಲ್ಲಿ ಶ್ರೀ ಶಂಕರ್ ಟೆಕ್ಸ್‌ಟೈಲ್ ಮಿಲ್ಸ್ (1945), ಬಿ.ಟಿ. ಆಯಿಲ್ ಮಿಲ್ಸ್ (1946), ಶ್ರೀ ಗಣೇಶರ್ ಟೆಕ್ಸ್‌ಟೈಲ್ಸ್ (1947), ರವಿ ವೆಜಿಟೆಬಲ್ ಆಯಿಲ್ ಮಿಲ್ಸ್ (1956), ಶ್ರೀ ಚಂದ್ರೋದಯ ಟೆಕ್ಸ್‌ಟೈಲ್ ಮಿಲ್ಸ್ (1957), ಶ್ರೀ ಸಿದ್ಧೇಶ್ವರ ಹೊಸ್ಯೆರಿಸ್ (1957), ಶ್ರೀ ಸಿದ್ಧೇಶ್ವರ ಟೆಕ್ಸ್‌ಟೈಲ್ ಮಿಲ್ಸ್ (1959), ಶ್ರೀ ಜಿಗಜೇರಿ ಟೆಕ್ಸ್‌ಟೈಲ್ ಮಿಲ್ಸ್ (1964), ಟಿ. ಚಂದ್ರಣ್ಣ ಮತ್ತು ಕಂಪನಿ(1965) ಸ್ಥಾಪಿತವಾದುವು. ಇವುಗಳಲ್ಲದೆ ಇನ್ನೂ 119 ಸಣ್ಣ ಗಾತ್ರದ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟುವು. ಅವು ಮುಖ್ಯವಾಗಿ ಆಹಾರ, ಪಾನೀಯ, ತಂಬಾಕು, ಬಟ್ಟೆ ಮತ್ತು ನೂಲು, ಯಂತ್ರೋಪಕರಣಗಳು ಮತ್ತು ಮರಕೊಯ್ಯುವ ಕಾರ್ಖಾನೆಗಳು. 1970ರಲ್ಲಿ ಎಲ್ಲ ಹತ್ತಿ ಗಿರಣಿಗಳಲ್ಲಿ ಒಟ್ಟು 7,079 ಜನರು ಕೆಲಸಮಾಡುತ್ತಿದ್ದರು. ಆ ವರ್ಷ ಎಲ್ಲ ಗಿರಣಿಗಳಲ್ಲಿ ಒಟ್ಟು 2,61,45,624 ಕೆ ಜಿ. ಹತ್ತಿಯ ನೂಲು ಮತ್ತು ಬಟ್ಟೆ ತಯಾರಿಸಲಾಯಿತು. ಉತ್ಪಾದಿಸಿದ ವಸ್ತುಗಳ ಒಟ್ಟು ಬೆಲೆ ರೂ. 40,09,27,386. ಎಲ್ಲ ಎಣ್ಣೆಯ ಮಿಲ್ಲುಗಳಲ್ಲಿ ಒಟ್ಟು 175 ಕೆಲಸಗಾರರಿದ್ದರು. ಆ ವರ್ಷ 2,54,000 ಕೆಜಿ. ಸಾಬೂನು, 50,14,556 ಕೆಜಿ. ನೆಲಗಡಲೆಯ ಹಿಂಡಿ, 57,91,200 ಕೆಜಿ. ನೆಲಗಡಲೆಯ ಎಣ್ಣೆ, ಮತ್ತು 1,00,60,320 ಕೆಜಿ. ಶುದ್ಧೀಕರಿಸಿದ ನೆಲಗಡಲೆಯ ಎಣ್ಣೆಯನ್ನು ಉತ್ಪಾದಿಸಲಾಯಿತು. ಹತ್ತಿಯ ಬೀಜ ತೆಗೆದು ಚಪ್ಪಟೆಮಾಡುವ ಮತ್ತು ಎಣ್ಣೆಯ ಮಿಲ್ಲುಗಳಲ್ಲಿ 779 ಜನರು ಕೆಲಸ ಮಾಡುತ್ತಿದ್ದರು ಮತ್ತು ಆ ವರ್ಷ 63,79,095 ಕೆಜಿ. ಹತ್ತಿಯನ್ನು ಶುದ್ಧೀಕರಿಸಿ ಚಪ್ಪಟೆಮಾಡಲಾಯಿತು. ಎಂಜಿನಿಯರಿಂಗ್ ಕೈಗಾರಿಕೆಗಳಲ್ಲಿ 148 ಜನರು ಕೆಲಸಮಾಡುತ್ತಿದ್ದರು ಮತ್ತು ಆ ವರ್ಷ ರೂ. 20,00,000 ಮೌಲ್ಯದ ಸರಕುಗಳನ್ನು ಉತ್ಪಾದಿಸಿದರು. ಆ ವರ್ಷ ಅಕ್ಕಿಯ ಗಿರಣಿಗಳಲ್ಲಿ 175 ಜನರು ಕೆಲಸಕ್ಕಿದ್ದರು ಮತ್ತು 3,83,900 ಕ್ವಿಂಟಲ್ ಅಕ್ಕಿಯನ್ನು ಉತ್ಪಾದಿಸಿದರು. ಅದರ ಮೌಲ್ಯ ರೂ. 2,57,49,000. ಮರಕೊಯ್ಯುವ ಕೈಗಾರಿಕೆಗಳಲ್ಲಿ 64 ಜನರಿದ್ದು 3,27,500 ಘನ ಅಡಿ ಮರದ ತುಂಡುಗಳನ್ನು ಮತ್ತು ಮರದ ಪುಡಿಯನ್ನು ಉತ್ಪಾದಿಸಲಾಯಿತು. ಅವುಗಳ ಒಟ್ಟು ಮೌಲ್ಯ ರೂ. 5,48,300[26]

1948ರಲ್ಲಿ ವ್ಯವಸಾಯೋತ್ಪನ್ನ ನಿಯಂತ್ರಿತ ಮಾರುಕಟ್ಟೆ ಸ್ಥಾಪನೆಯಾಯಿತು. 1952ರಲ್ಲಿ ಪುಣೆ-ಬೆಂಗಳೂರು ಹೆದ್ದಾರಿಯ ಪಕ್ಕದಲ್ಲಿರುವ ಈಗಿರುವ ಸ್ಥಳಕ್ಕೆ ಮಾರುಕಟ್ಟೆಯು ಸ್ಥಳಾಂತರವಾಯಿತು. ಮಾರುಕಟ್ಟೆಯ ಸಂಘದ ಅಧಿಕಾರ ವ್ಯಾಪ್ತಿಯುಳ್ಳ ಪ್ರದೇಶ ದಾವಣ

---

[26] *A Report of the Industrial Establishments in Davangere City* (Office of the Assistant Director of Town Planning, Davangere, 1972)

ಗೆರೆ ಮತ್ತು ಜಗಳೂರು ತಾಲ್ಲೂಕುಗಳನ್ನೊಳಗೊಂಡಿದೆ. ಇದು ಸುತ್ತಮುತ್ತಲಿನ ಎಲ್ಲ ತಾಲ್ಲೂಕುಗಳಿಂದ ರೈತರನ್ನು ಆಕರ್ಷಿಸುತ್ತಿದೆ. ಇಂದು ಇದು ರಾಜ್ಯದಲ್ಲಿಯೇ ದೊಡ್ಡ ನಿಯಂತ್ರಿತ ಮಾರುಕಟ್ಟೆಗಳಲ್ಲೊಂದಾಗಿದೆ. ಇಲ್ಲಿ ಮುಖ್ಯವಾಗಿ ನೆಲಗಡಲೆ, ಹತ್ತಿ, ಜೋಳ, ಒಡಲಕಾಯಿ, ರಾಗಿ, ಮೆಣಸು, ಬತ್ತ, ನವಣೆ ಮತ್ತು ಬೇಳೆಕಾಳುಗಳ ವ್ಯಾಪಾರ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. 1973-74ರಲ್ಲಿ ಇಲ್ಲಿ ಬಿಕರಿಯಾದ ನೆಲಗಡಲೆ, ಹತ್ತಿ, ಬತ್ತ, ರಾಗಿ, ಜೋಳ, ನವಣೆ ಮತ್ತು ಮೆಣಸು ಇವುಗಳ ತೂಕ ಅನುಕ್ರಮವಾಗಿ 3,51,493, 75,258, 2,74,666, 42,559, 2,86,98, 5,391 ಮತ್ತು 2,672 ಕ್ವಿಂಟಲ್‌ಗಳು.[27] ಅವುಗಳ ಒಟ್ಟು ಬೆಲೆ ರೂ 35,80,22,855.

ದಾವಣಗೆರೆ ಇಂದು ರಾಜ್ಯದಲ್ಲಿ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ದಾವಣಗೆರೆಯಿಂದ ಆಹಾರ ಧಾನ್ಯಗಳು, ಮೈದಾ, ಹೊಟ್ಟು, ಸಾಬೂನು, ಬೆಲ್ಲ, ದನಗಳ ಆಹಾರ, ಸಾಮಾನ್ಯ ಸರಕುಗಳು ಮತ್ತು ತವರದ ಡಬ್ಬಿಗಳನ್ನು ರಫ್ತುಮಾಡಲಾಗುತ್ತಿದೆ. ಮತ್ತು ಕಲ್ಲಿದ್ದಲು, ಎಣ್ಣೆ ತೆಗೆದ ಹಿಂಡಿ, ಸಿಮೆಂಟ್, ರಾಸಾಯನಿಕ ವಸ್ತುಗಳು ಮತ್ತು ಸಾಮಾನ್ಯ ಸರಕುಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಆಮದು ಮತ್ತು ರಫ್ತಿನ ಬಗ್ಗೆ ನಿಖರ ವಿವರಗಳು ಸಿಗುವುದಿಲ್ಲ. ಏಕೆಂದರೆ ಸರಕುಗಳ ಸಾಗಾಣಿಕೆ ಹೆಚ್ಚಾಗಿ ಲಾರಿಗಳಿಂದಾಗುತ್ತದೆ. ರೈಲಿನ ಮೂಲಕ ಆಗುವ ಆಮದು ಮತ್ತು ರಫ್ತಿನ ಬಗ್ಗೆ ವಿವರಗಳು ಸಿಗುತ್ತವೆ. 1974ರಲ್ಲಿ ದಾವಣಗೆರೆ ರೈಲುನಿಲ್ದಾಣದಿಂದ ಕಳುಹಿಸಲ್ಪಟ್ಟ ಮತ್ತು ಬೇರೆ ಕಡೆಗಳಿಂದ ಇಲ್ಲಿಗೆ ಬಂದ ವಸ್ತುಗಳ ಒಟ್ಟು ತೂಕ ಅನುಕ್ರಮವಾಗಿ 4,92,730 ಮತ್ತು 10,10,859 ಕ್ವಿಂಟಲ್‌ಗಳು.[28]

ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆಯೊಂದಿಗೆ ಬ್ಯಾಂಕುಗಳ ಬೆಳವಣಿಗೆ ಸಹ ಅಗಾಧ ಪ್ರಮಾಣದಲ್ಲಾಯಿತು. ಈಗಿರುವ ಹೆಚ್ಚಿನ ಬ್ಯಾಂಕುಗಳು ಈ ಅವಧಿಯಲ್ಲಿಯೇ ಪ್ರಾರಂಭಿಸಲ್ಪಟ್ಟುವು. 1968ರಲ್ಲಿ ನಗರದಲ್ಲಿ ಹದಿಮೂರು ಬ್ಯಾಂಕುಗಳಿದ್ದುವು. ಆ ವರ್ಷ ಅವುಗಳಲ್ಲಿಟ್ಟಿದ್ದ ಒಟ್ಟು ಠೇವಣಿ ಮತ್ತು ಅವುಗಳು ಕೊಟ್ಟ ಸಾಲ ಅನುಕ್ರಮವಾಗಿ ರೂ 1,99,00,000 ಮತ್ತು ರೂ. 3,69,000.

ಈ ಅವಧಿಯಲ್ಲಿ ಜನಸಂಖ್ಯೆಯ ಬೆಳವಣಿಗೆ ಅಗಾಧ ಪ್ರಮಾಣದಲ್ಲಾಯಿತು. 1931ರಲ್ಲಿ 23,155 ಇದ್ದ ಜನಸಂಖ್ಯೆ 1971ರಲ್ಲಿ 1,21,110 ಆಯಿತು.[29]

1948ರಲ್ಲಿ ದಾವಣಗೆರೆ ನಗರಸಭೆಯ ಅಡಳಿತಕ್ಕೊಳಪಟ್ಟಿತು. 1971-72ರಲ್ಲಿಯ ನಗರಸಭೆಯ ಆದಾಯ ಮತ್ತು ಖರ್ಚು ಅನುಕ್ರಮವಾಗಿ ರೂ. 99,70,980 ಮತ್ತು

---

[27] *A Brief Note on the Working of the Agricultural Produce Market Committee*, (Office of the Secretary of Regulated Market, Davangere, 1971)

[28] *Annual Report of Davangere Railway Station* (Office of the Station Master, Davangere City Railway Station, Davangere, 1975)

[29] Padmanabha, *op. cit,*, p. 167

ರೂ. 97,43,496.[30]

1942, 1957 ಮತ್ತು 1968ರಲ್ಲಿ ನೀರು ಸರಬರಾಜಿನ ಯೋಜನೆಯನ್ನು ಅಭಿವೃದ್ಧಿ ಗೊಳಿಸಿ ನಗರದ ಬೆಳೆಯುತ್ತಿದ್ದ ಜನಸಂಖ್ಯೆಯ ಅವಶ್ಯಕತೆಯನ್ನು ಪೂರೈಸಲಾಯಿತು. ಈಗ ಲೋಕೋಪಯೋಗಿ ಇಲಾಖೆ ನಗರಕ್ಕೆ ನೀರಿನ ಪೂರೈಕೆಗಾಗಿ ಹೊಸ ಯೋಜನೆಯೊಂದನ್ನು ತಯಾರಿಸಿದೆ. ಈ ಯೋಜನೆಯಿಂದ ನಗರಕ್ಕೆ ತುಂಗಭದ್ರಾನದಿ ಮತ್ತು ಭದ್ರಾನಾಲೆಗಳಿಂದ ನೀರಿನ ಪೂರೈಕೆಯಾಗುತ್ತದೆ. ಇದರಿಂದ ಪ್ರತಿದಿನ 45 ಲಕ್ಷ ಗ್ಯಾಲನ್‌ಗಳಷ್ಟು ನೀರಿನ ಪೂರೈಕೆ ಯಾಗುತ್ತದೆ[31].

ಆರನೆಯ ದಶಕದಲ್ಲಿ ಲೋಕೋಪಯೋಗಿ ಇಲಾಖೆ ನಗರಕ್ಕೆ ಒಳಚರಂಡಿಯನ್ನು ಒದಗಿಸುವ ಯೋಜನೆಯೊಂದನ್ನು ತಯಾರಿಸಿತು. ಅದರಂತೆ ಮೊದಲನೆಯ ಹಂತದಲ್ಲಿ ಹಳೆಯ ನಗರದ ಎಲ್ಲ ಭಾಗಗಳಲ್ಲಿ ಒಳಚರಂಡಿಗಳನ್ನು ಕೂಡಿಸಲಾಯಿತು. ಈಗ ನಗರದ ಉಳಿದ ಭಾಗ ಗಳಲ್ಲಿ ಒಳಚರಂಡಿಗಳನ್ನು ಒದಗಿಸುವ ಕಾರ್ಯವನ್ನು ಅದು ತೆಗೆದುಕೊಂಡಿದೆ.[32]

ಸ್ವಾತಂತ್ರ್ಯಾನಂತರ ದಾವಣಗೆರೆ ಅದೇ ಹೆಸರಿನ ತಾಲ್ಲೂಕಿನ ಮತ್ತು ಕಂದಾಯ ಉಪ ವಿಭಾಗದ ಆಡಳಿತ ಕೇಂದ್ರವಾಗಿ ಮುಂದುವರಿಯಿತು. ನಗರದಲ್ಲಿ ಈಗಿರುವ ಹೆಚ್ಚಿನ ಸಾರ್ವಜನಿಕ ಕಚೇರಿಗಳು ಸ್ವಾತಂತ್ರ್ಯಾನಂತರ ತೆರೆಯಲ್ಪಟ್ಟವು. ಸ್ವಾತಂತ್ರ್ಯಪೂರ್ವದಲ್ಲಿ ನಗರದಲ್ಲಿ ಸುಮಾರು ಹತ್ತು ಸಾರ್ವಜನಿಕ ಕಚೇರಿಗಳಿದ್ದುವು. 1947-70ರ ಅವಧಿಯಲ್ಲಿ 123 ಸಾರ್ವಜನಿಕ ಕಚೇರಿ ಗಳು ತೆರೆಯಲ್ಪಟ್ಟವು. ಈ ಕಚೇರಿಗಳು ವ್ಯವಸಾಯ, ಸಮುದಾಯ ಅಭಿವೃದ್ಧಿ ಯೋಜನೆ, ಕಂದಾಯ, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳು, ಕಂದಾಯ, ಲೋಕೋಪಯೋಗಿ, ಕೇಂದ್ರ ಉತ್ಪಾದನ ಶುಲ್ಕ, ವರಮಾನ ತೆರಿಗೆ, ವಾಣಿಜ್ಯ ತೆರಿಗೆ, ತೂಕ ಮತ್ತು ಅಳತೆ, ಅಗ್ನಿಶಾಮಕ, ಪೋಲೀಸ್, ಶಿಕ್ಷಣ, ನ್ಯಾಷನಲ್ ಕೆಡೆಟ್ ಕೋರ್, ಮಾರುಕಟ್ಟೆ, ತೋಟಗಾರಿಕೆ, ನ್ಯಾಯಾಂಗ, ಅಂಚೆ ಮತ್ತು ತಂತಿ, ರೈಲ್ವೆ, ಸಹಕಾರ, ನಗರಾಳಿತ, ಕಾರ್ಮಿಕ, ಪಶು ಸಂಗೋಪನ ಮತ್ತು ಚಿಕಿತ್ಸೆ, ನೋಂದಣಿ ಮತ್ತು ಸ್ಟಾಂಪು, ನಗರ ಯೋಜನೆ, ಕಾರ್ಮಿಕ, ಆರೋಗ್ಯ ಮತ್ತು ಕುಟುಂಬ ಯೋಜನೆ, ಸಾರ್ವಜನಿಕ ಶಿಕ್ಷಣ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗಳಿಗೆ ಸೇರಿದವುಗಳು. ಇವಲ್ಲದೆ ಕರ್ನಾಟಕ ವಿದ್ಯುಚ್ಛಕ್ತಿ ಬೋರ್ಡ್

---

[30] *Administration Report of Davangere City Municipality for the year 1972-73* (Office of the Municipal Commissioner, Davangere City Municipality, Davangere, 1973)

[31] *A Report of the Comperehensive Water Supply Scheme to Davanagere City* (Office of the Assistant Engineer, P. H. E. Sub-Division, Davangere, 1972)

[32] *A Report of the Underground Drainage Scheme to Davanagere City* (Office of the Assistant Engineer, U. G. D. Sub-Division, Davangere, 1974)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಕಾರ್ಪೊರೇಷನ್ ಮತ್ತು ಭಾರತ ಜೀವವಿಮಾ ಕಾರ್ಪೊರೇಷನ್‌ಗಳಿಗೆ ಸೇರಿದ ಕಚೇರಿಗಳು ಸಹ ಇದ್ದುವು.[38]

1953ರಲ್ಲಿ ದಾವಣಗೆರೆಯಲ್ಲಿ ದೂರವಾಣಿ ಕೇಂದ್ರ ತೆರೆಯಲ್ಪಟ್ಟಿತು. ಆಗ ನಗರದಲ್ಲಿ 44 ದೂರವಾಣಿಗಳಿದ್ದುವು. 1976ರಲ್ಲಿ 1317 ದೂರವಾಣಿಗಳಿವೆ. ಇಂದು ನಗರದಲ್ಲಿ ಒಂದು ಪ್ರಧಾನ ಮತ್ತು ಹತ್ತು ಉಪ ಅಂಚೆಕಚೇರಿಗಳು ಮತ್ತು ಎಂಟು ತಂತಿ ಕಚೇರಿಗಳಿವೆ.

ಈ ಅವಧಿಯಲ್ಲಿ ನಗರದಲ್ಲಿ ಶೈಕ್ಷಣಿಕ ಸಂಸ್ಥೆಗಳ ತೀವ್ರ ಬೆಳವಣಿಗೆ ಆಯಿತು. ಹೆಚ್ಚಿನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಈ ಅವಧಿಯಲ್ಲಿಯೇ ಪ್ರಾರಂಭವಾದುವು. 1973ರಲ್ಲಿ ನಗರದಲ್ಲಿ ಐವತ್ತೇಳು ಪ್ರಾಥಮಿಕ ಮತ್ತು ಹತ್ತು ಮಾಧ್ಯಮಿಕ ಶಾಲೆಗಳಿದ್ದುವು. 1973–74ರಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಅಭ್ಯಾಸಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಗಳು ಅನುಕ್ರಮವಾಗಿ 18,806 ಮತ್ತು 3,962 ಇದ್ದುವು. 1947ರಲ್ಲಿ ಡಿ.ಆರ್.ಎಮ್. ಕಾಲೇಜು ಪ್ರಾರಂಭವಾಯಿತು. ಇದು ನಗರದಲ್ಲಿ ಪ್ರಾರಂಭವಾದ ಪ್ರಥಮ ಕಾಲೇಜು. ಅನಂತರ ಡಿ.ಆರ್.ಆರ್. ಪಾಲಿಟೆಕ್ನಿಕ್ (1949), ಬಿ.ಡಿ.ಟಿ. ಎಂಜನಿಯರಿಂಗ್ ಕಾಲೇಜು (1951), ಇಂಡಸ್ಟ್ರಿಯಲ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್ (1957), ಬೇಸಿಕ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್ (1960), ಕಲೆ ಮತ್ತು ಕರಕೌಶಲ ಶಾಲೆ (ಸ್ಕೂಲ್ ಆಫ್ ಆರ್ಟ್ಸ್ ಆಂಡ್ ಕ್ರಾಫ್ಟ್ಸ್) (1964), ಜೆ.ಜೆ. ಎಮ್. ವೈದ್ಯಕೀಯ ಕಾಲೇಜು (1965), ಎ.ವಿ.ಕೆ. ಮಹಿಳಾ ಕಾಲೇಜು (1978), ಆರ್.ಎಲ್. ನ್ಯಾಯಶಾಸ್ತ್ರ ಕಾಲೇಜು (1968), ಎಮ್. ಎಸ್.ಬಿ. ಸಂಜೆ ಕಾಲೇಜು (1970), ಎಮ್.ಎಮ್ ಶಿಕ್ಷಣ ಕಾಲೇಜು (1970), ಮೋತಿ ವೀರಪ್ಪ ಜೂನಿಯರ್ ಕಾಲೇಜು (1972), ಮುನಿಸಿಪಲ್ ಜೂನಿಯರ್ ಕಾಲೇಜು (1972) ಮತ್ತು ಎ.ಆರ್.ಜಿ. ವಾಣಿಜ್ಯ ಕಾಲೇಜು (1973) ಪ್ರಾರಂಭವಾದುವು. 1973–74ರಲ್ಲಿ ಈ ಎಲ್ಲ ಉನ್ನತ ವಿದ್ಯಾಸಂಸ್ಥೆಗಳಲ್ಲಿ ಒಟ್ಟು 6,581 ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದರು.

ಈ ಅವಧಿಯಲ್ಲಿ ವೈದ್ಯಕೀಯ ವ್ಯವಸ್ಥೆಯಲ್ಲಿ ಗಮನಾರ್ಹ ಬೆಳವಣಿಗೆ ಆಯಿತು. ಚಿಟಗೇರಿ ಸಾರ್ವಜನಿಕ ಆಸ್ಪತ್ರೆ 1962ರಲ್ಲಿ ಪ್ರಾರಂಭವಾಯಿತು. ಆಗ ಅದು ಎಂಬತ್ತು ಹಾಸಿಗೆಗಳನ್ನೊಳಗೊಂಡಿತ್ತು. ಇಂದು ಅದು 425 ಹಾಸಿಗೆಗಳುಳ್ಳ ಸುಸಜ್ಜಿತ ಆಸ್ಪತ್ರೆಯಾಗಿದೆ. ಇಷ್ಟರಲ್ಲಿಯೇ ಒಟ್ಟು ಹಾಸಿಗೆಗಳನ್ನು 960ಕ್ಕೆ ಏರಿಸುವ ಪ್ರಯತ್ನ ನಡೆದಿದೆ. ಈ ಅವಧಿಯಲ್ಲಿ ಲೋಕಲ್ ಫಂಡ್ ಡಿಸ್ಪೆನ್ಸರಿ (1960), ಡಿ.ಸಿ.ಎಮ್. ಆಸ್ಪತ್ರೆ (1960), ಇ.ಎಸ್.ಐ. ಆಸ್ಪತ್ರೆ, ಚಾಮರಾಜಪೇಟೆ (1960), ಹೆರಿಗೆ ಆಸ್ಪತ್ರೆ (1965), ಜೆ.ಜೆ.ಎಮ್. ಮೆಡಿಕಲ್ ಕಾಲೇಜ್ ಆಸ್ಪತ್ರೆ (1970), ಲೋಕಲ್ ಫಂಡ್ ಡಿಸ್ಪೆನ್ಸರಿ (1972), ಇ.ಎಸ್.ಐ. ಡಿಸ್ಪೆನ್ಸರಿ, ಬಂದೂರ್ ಕ್ಯಾಂಪ್ (1974) ತೆರೆಯಲ್ಪಟ್ಟುವು. 1971ರಲ್ಲಿ

---

[38] *A Report of the Public offices in Davangere City* (Office of the Assistant Director of Town Planning, Davangere. 1971)

ನಗರದಲ್ಲಿ ಚಿಗಟೇರಿ ಆಸ್ಪತ್ರೆಯನ್ನು ಬಿಟ್ಟು ಮೂವತ್ತೈದು ಔಷಧಾಲಯಗಳು ಮತ್ತು ಆಸ್ಪತ್ರೆಗಳಿದ್ದುವು. ಅವುಗಳಲ್ಲಿ ಒಟ್ಟು 335 ಹಾಸಿಗೆಗಳಿದ್ದುವು. ಎಲ್ಲ ಆಸ್ಪತ್ರೆ ಮತ್ತು ಔಷಧಾಲಯಗಳಲ್ಲಿ ಆ ವರ್ಷ ಚಿಕಿತ್ಸೆ ಪಡೆದ ಒಳ ಮತ್ತು ಹೊರರೋಗಿಗಳ ಒಟ್ಟು ಸಂಖ್ಯೆ ಅನುಕ್ರಮವಾಗಿ 24,565 ಮತ್ತು 9,02,392.

ಈ ಅವಧಿಯಲ್ಲಿ ಕೈಗಾರಿಕೆಗಳ ಪ್ರದೇಶಗಳಾದ ದಾವಣಗೆರೆ ಕಾಟನ್‌ಮಿಲ್ಸ್ ಪ್ರದೇಶ (1936), ಶಂಕರ್ ಟೆಕ್ಸ್‌ಟೈಲ್ ಮಿಲ್ಸ್ ಪ್ರದೇಶ (1945), ಬಿ.ಟಿ. ಆಯಿಲ್‌ಮಿಲ್ಸ್ ಪ್ರದೇಶ (1946), ಗಣೇಶರ್ ಟೆಕ್ಸ್‌ಟೈಲ್ ಮಿಲ್ಸ್ ಪ್ರದೇಶ (1947), ರವಿ ಆಯಿಲ್ ಮಿಲ್ಸ್ ಪ್ರದೇಶ (1956), ಚಂದ್ರೋದಯ ಟೆಕ್ಸ್‌ಟೈಲ್ ಮಿಲ್ಸ್ ಪ್ರದೇಶ (1957), ಸಿದ್ಧೇಶ್ವರ ಟೆಕ್ಸ್‌ಟೈಲ್ ಮಿಲ್ಸ್ ಪ್ರದೇಶ (1959), ಚಿಗಟೇರಿ ಟೆಕ್ಸ್‌ಟೈಲ್ ಮಿಲ್ಸ್ ಪ್ರದೇಶ (1964) ಅಸ್ತಿತ್ವಕ್ಕೆ ಬಂದವು. ವಿದ್ಯಾನಗರ ಪ್ರದೇಶ ಐದನೆಯ ಮತ್ತು ಆರನೆಯ ದಶಕಗಳಲ್ಲಿ ಬೆಳೆಯಿತು. ಮಂಡಿಪೇಟೆ, ಪೂನೆ-ಬೆಂಗಳೂರು ಹೆದ್ದಾರಿ ಮತ್ತು ಅಶೋಕ ರಸ್ತೆಗಳು ನಗರದ ಮುಖ್ಯ ವ್ಯಾಪಾರಕೇಂದ್ರದ ಭಾಗವಾದವು. ವಾಸದ ಬಡಾವಣೆಗಳಾದ ಅಹ್ಮದ್ ನಗರ (1942), ಆಜಾದ್ ನಗರ (1949), ವಿನೋಬಾ ನಗರ (1949) ಮತ್ತು ಬೊಂಬೂ ಬಜಾರ್ (1950) ಸಹ ಈ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದುವು. ಕೊಳೆಗೇರಿ ಪ್ರದೇಶಗಳಾದ ಜಾಲಿನಗರ್, ಅನ್ನೂರಪ್ಪೈಯ್ಯ ತೋಟ, ಭಾರತಿ ಕಾಲೊನಿ, ಕಿರುವಾಡಿ ಫ್ಯಾಕ್ಟರಿ ಪ್ರದೇಶ, ನಿಕ್ಕಿಯಲ್ ತೋಟ, ಸಿಟ್ಟುವಳ್ಳಿ ಟ್ಯಾಂಕ್ ಬೆಡ್ ಪ್ರದೇಶ ಮತ್ತು ದನಗಳ ಆಸ್ಪತ್ರೆಯ ಪ್ರದೇಶ ಆರನೆಯ ದಶಕದಲ್ಲಿ ಬೆಳೆದುವು.

1974ರಲ್ಲಿ ನಗರದ ಒಟ್ಟು ವಿಸ್ತೀರ್ಣ 1,770.81 ಹೆಕ್ಟೇರ್‌ಗಳಷ್ಟಿತ್ತು. ಅದರಲ್ಲಿ ಬೆಳೆದ ಪ್ರದೇಶ 885.39 ಹೆಕ್ಟೇರ್‌ಗಳಷ್ಟಿತ್ತು.[34]

---

[34] *Outline Development Plan of Davanagere City* (Office of the Assistant Director of Town Planning, Davangere, 1974)

ಎಸ್. ನಾರಾಯಣಮೂರ್ತಿ

ಸಹಕಾರ ಸಂಘದ ಸದಸ್ಯನ ಸ್ಥಾನಮಾನ

ಕೆಲವಾರು ಜನರು ಸೇರಿ, ಒಮ್ಮನಸ್ಸಿನಿಂದ ಕೂಡಿ, ತಮ್ಮ ಉದ್ದೇಶ ಪೂರ್ತಿಗಾಗಿ ಒಟ್ಟಿಗೆ ಶ್ರಮಿಸುವ ಅಭಿಪ್ರಾಯವನ್ನು ತಾಳಿ, ಸ್ವಯಿಚ್ಛೆಯಿಂದ ಕೂಟವೊಂದನ್ನು ರಚಿಸಿಕೊಂಡರೆ, ಒಂದು ಸಹಕಾರ ಸಂಘ ಅಸ್ತಿತ್ವಕ್ಕೆ ಬಂದಂತೆ. ಮಿತವ್ಯಯ, ಸ್ವಪ್ರಯತ್ನ, ಪರಸ್ಪರ ಸಹಾಯ ಇಂಥ ಧ್ಯೇಯಗಳನ್ನು ಉತ್ತೇಜನಗೊಳಿಸಲು ಸಂಘವೊಂದನ್ನು ರಚಿಸಿಕೊಂಡರೆ ಸಹಕಾರ ಸಂಘವೊಂದು ಜನನಕ್ಕೆ ಬಂದಂತೆ. 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಅಂಥ ಸಂಘಗಳ ನೋಂದಣಿ ಮತ್ತಿತರ ವಿಚಾರಗಳ ಬಗ್ಗೆ ಹಲವಾರು ಕಟ್ಟುಪಾಡುಗಳನ್ನು ಹೊಂದಿರುತ್ತದೆ.

'ಸದಸ್ಯ' ಎಂದರೆ ಯಾರು ?

ಒಂದು ಸಹಕಾರ ಸಂಘಕ್ಕೆ ಯಾರುಯಾರು ಸದಸ್ಯರಾಗಬಹುದು, ಅವರ ಸ್ಥಾನಮಾನಗಳೇನು ಮತ್ತು ಹಕ್ಕುಬಾಧ್ಯತೆಗಳೇನು ಎಂಬುದನ್ನು ವಿವೇಚಿಸುವುದು ಈಗ ಸೂಕ್ತ. ಈ ಅಧಿನಿಯಮದ 2 (ಎಫ್) ಪ್ರಕರಣ 'ಸದಸ್ಯ' ಎಂಬ ಪದದ ವ್ಯಾಖ್ಯೆಯನ್ನು ಕೊಡುತ್ತದೆ. ಅದರಂತೆ, ಒಂದು ಸಹಕಾರ ಸಂಘದ ನೋಂದಣಿಯಾಗಬೇಕೆಂದು ಅರ್ಜಿಯೊಂದನ್ನು ಸಲ್ಲಿಸಿದ ಯಾರಾದರೂ ಒಬ್ಬ ವ್ಯಕ್ತಿ ಅದರ ಸದಸ್ಯನೆಂದಾಗುತ್ತಾನೆ. ಅದಲ್ಲದೆ, ಸಹಕಾರ ಸಂಘದ ನೋಂದಣಿಯಾದಮೇಲೆಯೂ ಯಾರಾದರೂ ಒಬ್ಬ ವ್ಯಕ್ತಿ ಸದಸ್ಯನಾಗಿ ಅಂಗೀಕೃತನಾದರೆ ಅಂಥವನೂ ಅದರ ಸದಸ್ಯನೆಂದು ಪರಿಗಣಿಸಲ್ಪಡುತ್ತಾನೆ.

ಸದಸ್ಯನಾಗಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸದಿದ್ದ ಯಾವ ವ್ಯಕ್ತಿಯನ್ನೂ ಸದಸ್ಯನೆಂದು ಸ್ವೀಕರಿಸಲು ಬರುವುದಿಲ್ಲವೆಂಬುದು ನಿರ್ವಿವಾದ. ಅದರಂತೆ, ಯಾವುದಾದರೂ ಒಂದು ಸಂಘ ಒಬ್ಬ ವ್ಯಕ್ತಿಯನ್ನು ಅವನ ಅನುಮತಿಯಿಲ್ಲದೆ ಸದಸ್ಯನಾಗಿ ತೆಗೆದುಕೊಳ್ಳಲು ಬರುವುದಿಲ್ಲ. ಸಂಘದ ಸದಸ್ಯನಾಗಬಯಸುವ ವ್ಯಕ್ತಿ ಸದಸ್ಯತನವನ್ನು ಕೋರಿ ಆ ಬಗ್ಗೆ ಒಂದು ಅರ್ಜಿಯನ್ನು ಸಲ್ಲಿಸಿರಬೇಕು ; ಆ ಸಂಘದ ಕಾರ್ಯಕಾರಿ ಸಮಿತಿ ಅಂಥ ವ್ಯಕ್ತಿಯನ್ನು ಸದಸ್ಯನಾಗಿ ಸ್ವೀಕರಿಸಲು ಉದ್ದೇಶಪಟ್ಟಿರಬೇಕು. ಇಷ್ಟಾದರೆ ಮಾತ್ರ ಒಬ್ಬ ವ್ಯಕ್ತಿ ಸಂಘದ ಸದಸ್ಯನಾಗಬಲ್ಲ. ಯಾರಾದರೂ ಒಬ್ಬ ವ್ಯಕ್ತಿ ಸದಸ್ಯತನದ ಶುಲ್ಕವನ್ನಷ್ಟೇ ಕೊಟ್ಟಿದ್ದಲ್ಲಿ ಅವನು ಆ ಸಂಘದ ಸದಸ್ಯನಾದನೆಂದು ಹೇಳಲು ಬರುವಂತಿಲ್ಲ. ಒಬ್ಬನನ್ನು ಸದಸ್ಯನಾಗಿ ತೆಗೆದುಕೊಳ್ಳಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿದ್ದಂತೆ ಸರ್ವಸದಸ್ಯರ ಸಭೆಗೂ ಅಧಿಕಾರವಿದೆ.

'ವ್ಯಕ್ತಿ' ಎಂದರೆ ಯಾರು ?

ಸದಸ್ಯನಾಗಬೇಕೆಂದು ಬಯಸುವ 'ವ್ಯಕ್ತಿ' ಸಾಮಾನ್ಯವಾಗಿ ತಿಳಿದುಕೊಂಡಂತೆ ಗಂಡಸು, ಹೆಂಗಸು ಅಥವಾ ಮಗುವಾಗಿರಬಹುದು. ಆದರೆ 1897ರ ಸಾಮಾನ್ಯ ಖಂಡಗಳ ಅಧಿನಿಯಮದ 3 (42)ನೆಯ ಪ್ರಕರಣದ ಮೇರೆ 'ವ್ಯಕ್ತಿ' ಎಂಬ ಪದಕ್ಕೆ ಒಂದು ಕಂಪೆನಿ, ಸಂಘ, ವ್ಯಕ್ತಿನಿಕಾಯ, ಅಥವಾ ನಿಗಮಿತ ನಿಕಾಯ ಎಂಬವೂ ಸೇರುತ್ತವೆ. ಹಾಗಿರುವಾಗ 'ವ್ಯಕ್ತಿ' ಎಂಬ ಪದವನ್ನು ಎರಡು ವಿಧಗಳಾಗಿ ವರ್ಗೀಕರಣ ಮಾಡಬಹುದು ; ಒಂದು, ಸ್ವಾಭಾವಿಕ ವ್ಯಕ್ತಿ ; ಎರಡು, ಕೃತಕ ವ್ಯಕ್ತಿ. ಸ್ವಾಭಾವಿಕ ವ್ಯಕ್ತಿ ಎಂದರೆ ಒಬ್ಬ ಮನುಷ್ಯ ಎಂದು ಅರ್ಥ ವಿಸಿದರೆ ಕೃತಕ ವ್ಯಕ್ತಿ ಎಂಬ ಪದಗಳಿಗೆ ಯಾವುದಾದರೂ ಕಾನೂನಿನ ಆಧಾರದ ಮೇಲೆ ರೂಪಿಸಿಕೊಂಡ ವ್ಯಕ್ತಿ, ಎಂದರೆ ಯಾವುದಾದರೂ ಒಂದು ಕಂಪೆನಿ, ಸಂಘ, ವ್ಯಕ್ತಿನಿಕಾಯ ಎಂದು ಅರ್ಥವಿಸಿಕೊಳ್ಳಬೇಕಾಗುತ್ತದೆ. ಒಂದು ಸಹಕಾರ ಸಂಘಕ್ಕೆ ಅಂಥ ಕೆಲವು ವ್ಯಕ್ತಿಗಳು ಸದಸ್ಯರಾಗಿ ಸೇರಿಕೊಳ್ಳಲು ಅವಕಾಶವಿರುತ್ತದೆ.

ಅಷ್ಟು ಮಾತ್ರವೇ ಅಲ್ಲ ; ಅಧಿನಿಯಮದ 18ನೆಯ ಪ್ರಕರಣ ಯಾವುದಾದರೂ ಸಹಕಾರ ಸಂಘ ಯಾರನ್ನಾದರೂ (1) ನಾಮ ಮಾತ್ರದ ಸದಸ್ಯ ; ಮತ್ತು (2) ಸಹವರ್ತಿ ಸದಸ್ಯ ; ಎಂದು ಸದ ತೆಗೆದುಕೊಳ್ಳಬಹುದೆಂದು ಹೇಳುತ್ತದೆ. ಆದರೆ, ಗಮನಿಸಬೇಕಾದ ವಿಷಯ ವೆಂದರೆ : ಯಾರನ್ನಾದರೂ ನಾಮಮಾತ್ರದ ಸದಸ್ಯನಾಗಿ ತೆಗೆದುಕೊಂಡರೆ ಅವನಿಗೆ ಸಂಘದ ಆಸ್ತಿಯಲ್ಲಿ ಅಥವಾ ಲಾಭದಲ್ಲಿ ಪಾಲು ಕೇಳಲು ಹಕ್ಕಿರಲಾರದು ; ಅಲ್ಲದೆ ಅಂಥವನು ಸಂಘದ ಅಧಿಕಾರಿಯಾಗಿ ಕೆಲಸ ನಿರ್ವಹಿಸಲೂ ಅಶಕ್ತನಾಗುತ್ತಾನೆ. ಒಬ್ಬ ಸಹವರ್ತಿ ಸದಸ್ಯನಾದಲ್ಲಿ ಅವನು ಸಂಘದಲ್ಲಿ ಷೇರು ಬಂಡವಾಳವನ್ನು ಹೊಂದಿರಲು ಶಕ್ಯವಿದೆ ; ಆದರೆ ಅಂಥವನು ಅಧಿಕಾರಿಯಾಗಿ ಕೆಲಸಮಾಡಲು ಶಕ್ತನಾಗುವುದಿಲ್ಲ. ಹೀಗೆ ಸಹಕಾರ ಸಂಘಕ್ಕೆ ಮೇಲೆ ಹೇಳಿದಂತೆ ಬೇರೆ ಬೇರೆ ರೀತಿಯಲ್ಲಿ ವ್ಯಕ್ತಿಗಳು ಸದಸ್ಯರಾಗಿ ಸೇರಿಕೊಳ್ಳಲು ಅವಕಾಶವಿದೆ ಒಂದು ಸಹಕಾರ ಸಂಘದ ಸದಸ್ಯತ್ವ ಹೊಂದಲು ಅವಕಾಶ ಇರುವ ವ್ಯಕ್ತಿ–ಸಂಘಗಳೆಂದರೆ:

(1) 1872ರ ಭಾರತೀಯ ಕರಾರು ಅಧಿನಿಯಮದ 11ನೆಯ ಪ್ರಕರಣದ ಮೇರೆ ಕರಾರು ಮಾಡಿಕೊಳ್ಳಲು ಅರ್ಹನಾದ ವ್ಯಕ್ತಿ ;

(2) ಇತರ ಯಾವುದಾದರೂ ಸಹಕಾರ ಸಂಘ

(3) ರಾಜ್ಯ ಸರ್ಕಾರ.

ಕರಾರಿಗೆ ಅರ್ಹನಾದ ವ್ಯಕ್ತಿ

1872ರ ಭಾರತೀಯ ಕರಾರು ಅಧಿನಿಯಮದ 11ನೆಯ ಪ್ರಕರಣ ಕರಾರು ಮಾಡಿಕೊಳ್ಳಲು ಅರ್ಹ ವ್ಯಕ್ತಿ ಯಾರು ಎಂದು ವಿಶದೀಕರಿಸಿದೆ. ಯಾರಾದರೂ ಒಬ್ಬ ವ್ಯಕ್ತಿ ಕಾನೂನಿನನುಸಾರ ಪ್ರಾಪ್ತವಯಸ್ಕನಾಗಿದ್ದು, ಚಿತ್ತ ಸ್ವಾಸ್ಥ್ಯವುಳ್ಳವನಾಗಿದ್ದು, ಯಾವುದಾರೂ ಕಾನೂನಿನ ಮೇರೆ ಅನರ್ಹತೆಯಿಂದ ಕೂಡಿಲ್ಲವಾದರೆ ಅಂಥ ವ್ಯಕ್ತಿ ಯಾವುದಾದರೂ ಕರಾರು ಮಾಡಿಕೊಳ್ಳಲು ಅರ್ಹ ವ್ಯಕ್ತಿ ಎಂದೆನಿಸುವನು. ಯಾರಾದರೂ ವ್ಯಕ್ತಿ ಪ್ರಾಪ್ತವಯಸ್ಕನಾಗಿರಬೇಕಾದರೆ ಏನಾಗಿರಬೇಕು ಎಂಬುದು ಮತ್ತಿನ ಪ್ರಶ್ನೆ. ಪ್ರತಿಯೊಬ್ಬನೂ ಪ್ರಾಪ್ತವಯಸ್ಕನೆಂದು ಪರಿಗಣಿತ

ವಾಗಬೇಕಾದರೆ ಅವನು ತನ್ನ 18ನೆಯ ವಯಸ್ಸನ್ನು ದಾಟಿರಬೇಕೆಂಬುದು 1875ರ ಭಾರತೀಯ ಪ್ರಾಪ್ತವಯಸ್ಕತಾ ಅಧಿನಿಯಮದ 3ನೆಯ ಪ್ರಕರಣದ ನಿಯಮ. ಅದರಂತೆ, ಪ್ರತಿಯೊಬ್ಬ ವ್ಯಕ್ತಿ ತನ್ನ 18ನೆಯ ವರ್ಷ ತುಂಬಿದ ಕೂಡಲೇ ಪ್ರಾಪ್ತವಯಸ್ಕನೆಂದು ಪರಿಗಣಿಸಲ್ಪಡುತ್ತಾನೆ ಮತ್ತು ಅಂಥವನು ಮತ್ತೊಬ್ಬನೊಡನೆ ಕಾನೂನು ರೀತ್ಯ ಕರಾರು ಮಾಡಿಕೊಳ್ಳಲು ಅರ್ಹತೆಯನ್ನು ಪಡೆಯುತ್ತಾನೆ ; ತನ್ನ 18 ವರ್ಷ ಪ್ರಾಯ ತುಂಬುವವರೆಗೆ ಅವನು ಅಪ್ರಾಯಸ್ಥ. ಅಂಥವನು ತಾನೇ ಯಾವ ಕರಾರನ್ನೂ ಮಾಡಿಕೊಳ್ಳಲು ಸಲ್ಲದು. ಅಪ್ರಾಯಸ್ಥನೊಡನೆ ಮಾಡಿಕೊಂಡ ಒಪ್ಪಂದ ಕಾನೂನಿನ ಮಾನ್ಯತೆಯನ್ನು ಪಡೆಯದೆಂಬುದರಲ್ಲಿ ಮಾತೆರಡಿಲ್ಲ. ಆದ್ದರಿಂದಲೇ ಸಹಕಾರ ಸಂಘಕ್ಕೆ ಸದಸ್ಯನಾಗಲು ಬಯಸುವ ಪ್ರತಿಯೊಬ್ಬನೂ ಪ್ರಾಪ್ತವಯಸ್ಕನಾಗಿರಲೇಬೇಕೆಂಬುದನ್ನು ಅಧಿನಿಯಮ ಸ್ಪಷ್ಟವಾಗಿ ಸಾರಿದೆ.

ಒಬ್ಬ ಪ್ರಾಪ್ತ ವಯಸ್ಕನಾದ ಮಾತ್ರಕ್ಕೆ ಸದಸ್ಯನಾಗುವ ಅಧಿಕಾರ ಪ್ರಾಪ್ತವಾಗುವುದಿಲ್ಲ ; ಅವನಿಗೆ ಚಿತ್ತ ಸ್ವಾಸ್ಥ್ಯವೂ ಇರಬೇಕು. ಹುಚ್ಚರು, ಬುದ್ಧಿಮಾಂದ್ಯರು, ಕುಡುಕರು ಚಿತ್ತಸ್ವಾಸ್ಥ್ಯವಿಲ್ಲದವರಂತೆಯೇ ಸರಿ. ಅಂಥವರು ಒಪ್ಪಂದ ಮಾಡಿಕೊಳ್ಳಲು ಅರ್ಹವ್ಯಕ್ತಿಗಳಾಗಲಾರರು. ಯಾವುದಾದರೂ ಒಂದು ಕರಾರು ಆಗಬೇಕಾಗಿದ್ದರೆ ಎರಡೂ ಪಕ್ಷಗಳವರು ಚಿತ್ತಸ್ವಾಸ್ಥ್ಯದಿಂದ ಕೂಡಿದವರಾಗಿರಬೇಕು ; ಒಪ್ಪಂದದ ಷರತ್ತುಗಳನ್ನು ಮನೋರಾಜಿಯಿಂದ ಮಾಡಿಕೊಳ್ಳಬೇಕು ಎಂಬುದು ಸುಸ್ಪಷ್ಟ. ಆದ್ದರಿಂದಲೇ ಅಂಥವರು ಎಂದರೆ ಹುಚ್ಚರು, ಬುದ್ಧಿಭ್ರಮಣೆಯಿಂದ ಕೂಡಿದವರು ಮತ್ತು ಕುಡುಕರು ವಗೈರೆ ಜನರು ಸಹಕಾರ ಸಂಘಕ್ಕೆ ಸದಸ್ಯರಾಗಲು ಅಪೇಕ್ಷಿಪಟ್ಟಲ್ಲಿ ಅವರು ಸದಸ್ಯರಾಗಲು ಅನರ್ಹರಾಗುತ್ತಾರೆ. ಅಂಥವರ ಅರ್ಜಿಗೆ ಮಾನ್ಯತೆ ಕೊಡಲು ಎಷ್ಟು ಮಾತ್ರಕ್ಕೂ ಸಾಧ್ಯವಾಗಲಾರದು.

ಕೆಲವೊಮ್ಮೆ ಸಂದರ್ಭ ಹೀಗೆ ಒದಗಿ ಬರಬಹುದು. ಒಬ್ಬಾತ ಪ್ರಾಪ್ತವಸಯ್ಕನಾಗಿರಬಹುದು ಮತ್ತು ಚಿತ್ತಸ್ವಾಸ್ಥ್ಯದಿಂದ ಕೂಡಿದವನೂ ಆಗಿರಬಹುದು ; ಹಾಗಿದ್ದೂ ಸಂಘದ ಸದಸ್ಯನಾಗಲು ಯೋಗ್ಯ ಪುರುಷ ಎನಿಸದೆ ಇರಬಹುದು. ಅದು ಹೇಗೆಂದರೆ : ಯಾವುದಾದರೂ ಪ್ರಚಲಿತ ಕಾನೂನಿನ ಮೇರೆ ಕೆಲವೊಂದು ಜನರೊಡನೆ ಕರಾರು ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲವೆಂದಾದರೆ ಅಂಥವನು ಸಂಘದ ಸದಸ್ಯನಾಗುವಂತಿಲ್ಲ. ಉದಾಹರಣೆಗೆ ಭಾರತೀಯನಲ್ಲದ ಒಬ್ಬ ವ್ಯಕ್ತಿಯೊಡನೆ ಒಬ್ಬ ಭಾರತೀಯ ಕರಾರು ಮಾಡಿಕೊಳ್ಳಲು ಬರುವುದಿಲ್ಲ ; ಅಂಥವನನ್ನು ಪರಕೀಯನೆಂದು ತಿಳಿಯಬೇಕಾಗುತ್ತದೆ. ಪರಕೀಯನೊಡನೆ ಒಪ್ಪಂದ ಮಾಡಿಕೊಳ್ಳಲು ಕಾನೂನಿನ ತಡೆಯಿದೆ. ಅದರಲ್ಲಂತೂ, ಯುದ್ಧದ ಕಾಲವಾಗಿದ್ದರೆ ಪರಕೀಯನೊಡನೆ ಯಾವ ವ್ಯವಹಾರವೂ ಸಲ್ಲದು. ಆದ್ದರಿಂದ ಪರಕೀಯನಾದ ವ್ಯಕ್ತಿ ಭಾರತೀಯನೊಡನೆ ಕಾನೂನು ರೀತ್ಯ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ. ಅಂತೆಯೇ ಅಂಥವನು ಸಂಘದ ಸದಸ್ಯನೂ ಆಗಲಾರ. ಆದ್ದರಿಂದ ಸಹಕಾರ ಸಂಘಕ್ಕೆ ಸದಸ್ಯನಾಗುವ ವ್ಯಕ್ತಿ ಪ್ರಾಪ್ತ ವಯಸ್ಕನಾಗಿದ್ದು, ಚಿತ್ತಸ್ವಾಸ್ಥ್ಯದಿಂದ ಕೂಡಿದ್ದು, ಕಾನೂನಿನ ಪ್ರತಿಬಂಧಕವಿಲ್ಲದವನಾಗಿರಬೇಕು.

ಯಾವುದಾದರೂ ಒಂದು ಸಹಕಾರ ಸಂಘ ಮತ್ತೊಂದರೊಡನೆ ಸದಸ್ಯತ್ವವನ್ನು ಹೊಂದಲು ಏನೇನೂ ಅಡ್ಡಿಯಿರುವುದಿಲ್ಲ. ಸಾಧಾರಣವಾಗಿ, ಸಂಘದ ಉಪವಿಧಿ ಇಂಥ ಸದಸ್ಯತ್ವದ ಬಗ್ಗೆ ಸಾಕಷ್ಟು ಸ್ಪಷ್ಟ ರೀತಿಯಲ್ಲಿ ಅವಕಾಶ ಮಾಡಿಕೊಡುತ್ತದೆ. ಆದ್ದರಿಂದ

ನೋಂದಣಿಯಾದ ಸಹಕಾರ ಸಂಘ ಮತ್ತೊಂದರೊಡನೆ ಸದಸ್ಯತ್ವವನ್ನು ಆಶಿಸಬಹುದು ; ಅದರ ಕೋರಿಕೆ ಏನೇನೂ ಶ್ರಮವಿಲ್ಲದೆ ಫಲರೂಪಕ್ಕೆ ಬರುತ್ತದೆ

ರಾಜ್ಯ ಸರ್ಕಾರವೂ ಇದೇ ರೀತಿಯಲ್ಲಿ ಸಹಕಾರ ಸಂಘದ ಸದಸ್ಯತ್ವವನ್ನು ಹೊಂದಲು ಅವಕಾಶವಿದೆ. ರಾಜ್ಯಸರ್ಕಾರ ಸಹಕಾರ ಸಂಘದ ಏಳಿಗೆಯನ್ನು ಸದಾ ಬಯಸುತ್ತಿರುತ್ತದೆ ; ಅದಕ್ಕೆ ಬೇಕಾಗುವ ಕಾನೂನುಗಳನ್ನು ರಚಿಸುತ್ತದೆ ; ಸಾಕಷ್ಟು ಭದ್ರತೆಯನ್ನು ಕೊಡುತ್ತದೆ. ಅಧಿಕಾರಿಗಳನ್ನು ನೇಮಿಸಿ ಸಂಘ ಸುಸೂತ್ರವಾಗಿ ನಡೆದುಕೊಂಡುಹೋಗುವಂತೆ ಮಾಡುತ್ತದೆ. ಸಹಕಾರ ಸಂಘದ ಮೂಲಕವೇ ಸಿಹಿತ ಹಿತಾಸಕ್ತಿಯನ್ನು ಅದು ಹತ್ತಿಕ್ಕುತ್ತದೆ. ಸಹಕಾರ ಸಂಘ ಅಪ್ರಾಮಾಣಿಕತೆಯನ್ನು ಹಿಡಿದು ಕ್ರಮಿಸಹತ್ತಿದರೆ ಅದಕ್ಕೆ ತಕ್ಕ ಶಾಸ್ತಿ ಮಾಡಲೂ ಅದಕ್ಕೆ ಅಧಿಕಾರವಿದೆ. ಅಂಥ ಸರ್ಕಾರವೂ ಸಂಘದ ಸದಸ್ಯ ಆಗಬಹುದು. ಸರ್ಕಾರವೂ ಸದಸ್ಯತ್ವವನ್ನು ತೆಗೆದುಕೊಳ್ಳುವುದೇವರೆ ಸಂಘಕ್ಕೆ ಒಂದಷ್ಟು ಬಂಡವಾಳ ದೊರೆತಂತೆ. ಬಂಡವಾಳ ಹೆಚ್ಚಾದಷ್ಟೂ ಸಂಘ ಊರ್ಜಿತಾವಸ್ಥೆಗೆ ಬರುತ್ತದೆ ; ಅದರ ಚಟುವಟಿಕೆ ಹೆಚ್ಚಾಗುತ್ತದೆ ; ಸಂಘ ಸತ್ತ್ವಶಾಲಿಯಾಗಿ ಬೆಳೆಯುವಂತಾಗುತ್ತದೆ. ಅಧಿನಿಯಮದ 41ರಿಂದ 44ರ ವರೆಗಿನ ಪ್ರಕರಣಗಳು ಸರ್ಕಾರ ಯಾವ ರೀತಿ ಸಹಕಾರ ಸಂಘದ ಆರ್ಥಿಕ ಔನ್ನತ್ಯಕ್ಕೆ ಕಾರಣವಾಗಬಹುದೆಂಬುದನ್ನು ವಿಶದಪಡಿಸುತ್ತವೆ.

ಸದಸ್ಯನಾಗಲು ಅನರ್ಹತೆಗಳು :

ಅಧಿನಿಯಮದ 17ನೆಯ ಪ್ರಕರಣ ಸಂಘದ ಸದಸ್ಯನಾಗಲು ಯಾರುಯಾರು ಅನರ್ಹರು ಎಂಬುದನ್ನು ವಿಶದೀಕರಿಸುತ್ತದೆ.

1 ತನ್ನನ್ನು ದಿವಾಳಿಯೆಂದು ನಿರ್ಣಯಿಸಬೇಕೆಂದು ಅರ್ಜಿ ಹಾಕಿಕೊಂಡವನು ಸಂಘದ ಸದಸ್ಯತ್ವಕ್ಕೆ ಅನರ್ಹ ವ್ಯಕ್ತಿ.

2 ಯಾವುದಾದರೂ ಅಪರಾಧದ ಬಗ್ಗೆ ಶಿಕ್ಷೆಗೆ ಒಳಗಾದ ವ್ಯಕ್ತಿ, ಶಿಕ್ಷೆಯ ಅವಧಿ ಕಳೆದು 5 ವರ್ಷಗಳು ಕಳೆದಿಲ್ಲವೆಂದಾದರೆ, ಅಂಥವನೂ ಸದಸ್ಯತ್ವಕ್ಕೆ ಅನರ್ಹ. ಆದರೆ, ಇದರಲ್ಲಿ ಒಂದು ವಿಷಯವನ್ನು ಗಮನಿಸಬೇಕಾಗುತ್ತದೆ. ಶಿಕ್ಷೆಗೆ ಒಳಗಾದ ವ್ಯಕ್ತಿ ಮಾಡಿದ್ದೆನ್ನುವ ಅಪರಾಧ ರಾಜಕೀಯಕ್ಕೆ ಸಂಬಂಧಪಟ್ಟದ್ದಾಗಿದ್ದರೆ ಅಥವಾ ಅಂಥ ಅಪರಾಧ ಅವನ ನೈತಿಕ ಪತನಕ್ಕೆಡೆಮಾಡಿಕೊಡುವಂತಿಲ್ಲವಾದರೆ ಅವನು ಯಾವುದೇ ಅಪರಾಧಕ್ಕಾಗಿ ಶಿಕ್ಷಿಸಲ್ಪಟ್ಟಿದ್ದರೂ ಸದಸ್ಯತ್ವಕ್ಕೆ ತನ್ನ ಅರ್ಹತೆಯನ್ನು ಕಳೆದುಕೊಳ್ಳಲಾರ. ಬಿಡಿಸಿ ಹೇಳುವುದಿದ್ದರೆ, ಯಾರಾದರೂ ಒಬ್ಬ ವ್ಯಕ್ತಿ ಸಣ್ಣಪುಟ್ಟ ಅಪರಾಧದ ಬಗ್ಗೆ ಶಿಕ್ಷಿಸಲ್ಪಟ್ಟಿದ್ದರೆ ಅದರಿಂದ ಅವನ ನೈತಿಕ ಪತನವಾಗಿದೆಯೆಂದು ಎಣಿಸಲು ಬರುವುದಿಲ್ಲ ; ಯಾರಾದರೂ ಒಬ್ಬನ ನೈತಿಕ ಪತನವಾಗಿದೆಯೆಂದು ಹೇಳಬೇಕಾದರೆ ಅವನು ಯಾವುದಾದರೂ ಒಂದು ಘೋರ ಅಪರಾಧವನ್ನು ಮಾಡಿದ್ದು ಶಿಕ್ಷೆಯನ್ನನುಭವಿಸಿರಬೇಕಾಗುತ್ತದೆ. ಕಳ್ಳತನ, ಮೋಸ, ಕೊಲೆ ಇವೇ ಮುಂತಾದ ಅಪರಾಧಗಳು ಒಬ್ಬನ ನೈತಿಕ ಮಟ್ಟವನ್ನೇ ಬುಡಮೇಲು ಮಾಡುತ್ತವಾದ್ದರಿಂದ ಮತ್ತು ಇಂಥ ಅಪರಾಧಗಳು ಸಮಾಜ ವಿಘಾತಕ ಕೃತ್ಯಗಳಾದ್ದರಿಂದ ಇಂಥ ಅಪರಾಧವೆಸಗಿದ ವ್ಯಕ್ತಿಯ ನೈತಿಕ ಪತನವಾಗಿದೆಯೆಂದು ಎಣಿಸಲೇಬೇಕಾಗುತ್ತದೆ. ಅಂಥವನು ಸಹಕಾರ ತತ್ತ್ವದ ಮೇಲೆ ಕಟ್ಟ

ಲ್ಪಟ್ಟಿರುವ ಸಂಘವ ಸದಸ್ಯನಾಗಲು ಋಷ್ಟು ಮಾತ್ರಕ್ಕೂ ಯೋಗ್ಯನೆನಿಸಲಾರ. ಅದಕ್ಕಾಗಿಯೇ ಸದಸ್ಯತ್ವವನ್ನು ಬಯಸಿ ಅರ್ಜಿ ಹಾಕುವ ವ್ಯಕ್ತಿಗಳ ಗುಣಗಳ ಮಟ್ಟಿಗೆ ಪ್ರಕರಣ 17 ಅಷ್ಟೊಂದು ನಿರ್ದಾಕ್ಷಿಣ್ಯದಿಂದ ಹೇಳಿದೆ. ಅಧಿನಿಯಮದ ಪ್ರಕರಣ 16 ಮತ್ತು 17ರ ಕುಲುಮೆಯಲ್ಲಿ ಬೆಂದು ಹೊರಬಂದ ವ್ಯಕ್ತಿ ಮಾತ್ರ ಸಹಕಾರ ಸಂಘದ ಸದಸ್ಯನಾಗಿ ನಾಮಕರಣ ಹೊಂದುತ್ತಾನೆ ; ಅವನು ಅಂಥ ಸಂಘದ ವಿವಿಧ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳಲು ಅರ್ಹ ವ್ಯಕ್ತಿ ಎನಿಸುತ್ತಾನೆ.

ಸದಸ್ಯತ್ವದ ಹಕ್ಕುಗಳು :

ವ್ಯಕ್ತಿಯೊಬ್ಬ ಸದಸ್ಯನಾಗಿ ಆರಿಸಿಬಂದನೆಂದರೆ ಅವನಿಗೆ ಸಹಕಾರಸಂಘದ ವ್ಯವಹಾರ ಕ್ಷೇತ್ರದಲ್ಲಿ ಒಡನಾಡಲು ಹಕ್ಕ ಪ್ರಾಪ್ತವಾಗುತ್ತದೆ ; ಸಂಘದ ವ್ಯವಹಾರಗಳಲ್ಲಿ ತನ್ನ ಅಭಿಪ್ರಾಯವನ್ನು ಮಂಡಿಸಲು ತಕ್ಕವನಾಗುತ್ತಾನೆ. ಅವನಿಗಿರುವ ಅನೇಕ ತರದ ಹಕ್ಕುಗಳಲ್ಲಿ ಈ ಕೆಳಗಿನವು ಅತಿ ಮುಖ್ಯವಾದವುಗಳು :

1 ಸಂಘ ತನ್ನ ಹೊಣೆಗಾರಿಕೆಯ ಸಂಬಂಧವಾಗಿ ಪರಿಮಿತದಿಂದ ಅಪರಿಮಿತಕ್ಕೆ ಅಥವಾ ಅದರ ಅದಲು ಬದಲಿಗೆ ಬದಲಾಯಿಸಿಕೊಂಡ ವೇಳೆ ಸದಸ್ಯನಾದವನು ಅಂಥ ಬದಲಾವಣೆಗೆ ಒಪ ದಿದ್ದರೆ ತನ್ನ ಷೇರು ಹಣವನ್ನು ಹಿಂತೆಗೆದುಕೊಳ್ಳಬಹುದು (ಪ್ರ 11).

2 ಸಹಕಾರ ಸಂಘ ಒಂದರೊಡನೆ ಮತ್ತೊಂದು ಸೇರ್ಪಡೆಯಾದಾಗ, ಸಂಘದ ಆಸ್ತಿಯ ಅಥವಾ ಸಾಲದ ವರ್ಗಾವಣೆಯಾದಾಗ ಅಥವಾ ಸಂಘ ಒಡೆದು ಬೇರೆಬೇರೆ ಸಂಘಗಳಾಗಿ ಮಾರ್ಪಟ್ಟಾಗ ಸದಸ್ಯನಾದದನು ಅಂಥ ಬದಲಾವಣೆಗೆ ಒಪ್ಪದಿದ್ದರೆ ತನ್ನ ಷೇರುಹಣವನ್ನು ಮರುಪಾವತಿ ಕೇಳಬಹುದು. (ಪ್ರ. 14).

3 ಮತದಾನ ಮಾಡುವ ವೇಳೆ ಬಂದಾಗ ಮತದಾನ ಮಾಡುವುದು. (ಪ್ರ. 20)

4 ಸರ್ವ ಸದಸ್ಯ ಸಭೆಯಲ್ಲಿ ಹಾಜರಾಗಿ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳುವುದು (ಪ್ರ. 21).

5 ಕಾರ್ಯಕಾರಿ ಮಂಡಳಿಗೆ ಚುನಾವಣೆಯ ಕಾಲದಲ್ಲಿ ಸ್ಪರ್ಧಿಸುವುದು ಮತ್ತು ಭಾಗ ವಹಿಸುವುದು [(ನಿಯಮ 14 (21)].

6 ತನ್ನ ಷೇರುಹಣವನ್ನು ವಿಧಿಯನ್ವಯ ವರ್ಗಾಯಿಸಿಕೊಳ್ಳುವುದು. (ಪ್ರ. 23)

7 ತನ್ನ ಷೇರುಹಣವನ್ನು ಕೋರ್ಟಿನ ಆದೇಶದ ರೀತ್ಯ ಜಪ್ತಿ, ಮಾರಾಟ ವಗೈರೆಯಿಂದ ವಿನಾಯಿತಿಪಡಿಸಿಕೊಳ್ಳುವುದು (ಪ್ರ. 36).

8 ಸಂಘದಿಂದ ಬರಬೇಕಾಗಿದ್ದ ಹಣವನ್ನು ಮಾರಾಟ ತೆರಿಗೆ, ವರಮಾನ ತೆರಿಗೆ ಇವೇ ಮುಂತಾದ ಕರಗಳಿಂದ ವಿನಾಯಿತಿ ಪಡಿಸಿಕೊಳ್ಳುವುದು ಪ್ರ. 38).

9 ಅಧಿನಿಯಮ, ನಿಯಮ ಮತ್ತು ಉಪವಿಧಿಗಳನ್ನು ಖರ್ಚಿಲ್ಲದೆ ಸಂಘದ ಕಾರ್ಯಾಲಯದಲ್ಲಿ ಪರಿಶೀಲಿಸುವುದು (ಪ್ರ. 119).

10 ಏನಾದರೂ ವಿವಾದವೆದ್ದಲ್ಲಿ ಅದನ್ನು ಮಧ್ಯಸ್ಥಿಕೆಯಿಂದ ತೀರ್ಮಾನಿಸಿಕೊಳ್ಳಲು ಕೇಳುವುದು (ಪ್ರ. 70).

11 ಮಧ್ಯಸ್ಥಿಕೆದಾರರ ತೀರ್ಮಾನದ ವಿರುದ್ಧ ಮೇಲ್ಮನವಿ ಮಾಡಿಕೊಳ್ಳುವುದು (ಪ್ರ. 105).

12 ಸಂಘವನ್ನು ಸಮಾಪನೆಗೆ ಒಳಪಡಿಸಲು ಕೇಳಿಕೊಳ್ಳುವುದು (ಪ್ರ. 72).

13 ವಿಶೇಷ ಸರ್ವ ಸದಸ್ಯರ ಸಭೆ ಜರಗಿಸಬೇಕೆಂದು ಕೇಳಿಕೊಳ್ಳುವುದು (ಪ್ರ 28).

14 ತನಗೆ ಸಲ್ಲಬೇಕಾದ ಹಣ ತನ್ನ ಅನಂತರ ಯಾರಿಗೆ ಸಲ್ಲಬೇಕೆಂಬ ಬಗ್ಗೆ ನಾಮ ನಿರ್ದೇಶನ ಮಾಡುವುದು (ನಿಯಮ 11).

ಹೀಗೆ ಅಲ್ಲದೆ ಇನ್ನೂ ಅನೇಕ ವಿಧಗಳಲ್ಲಿ ಸಂಘದ ಸದಸ್ಯನಾದವನು ಸಂಘದ ವ್ಯವಹಾರಗಳಲ್ಲಿ ಪಾಲ್ಗೊಳ್ಳಬಹುದಾಗಿದೆ.

ಸಂಘಕ್ಕೆ ಬಾಕಿ ಮಾಡಿಕೊಂಡರೆ ಏನಾಗುತ್ತದೆ ?

ಸಂಘಕ್ಕೆ ಸದಸ್ಯನಾಗಿ ಸೇರಿಕೊಂಡ ಮೇಲೆ ಸಂಘಕ್ಕೆ ಯಾವ ಬಾಬಿನಲ್ಲೂ ಪಾವತಿಸಲು ಬಾಕಿ ಮಾಡಿಕೊಳ್ಳಬಾರದು ; ಸಂಘಕ್ಕೆ ಕೊಡಬೇಕಾಗಿರುವ ಹಣವನ್ನು ಕಾಲಕಾಲಕ್ಕೆ ಸರಿಯಾಗಿ ಪಾವತಿಸುತ್ತ ಬರುವುದು ಸದಸ್ಯನಾದವನ ಆದ್ಯ ಕರ್ತವ್ಯವಿರುತ್ತದೆ. ಸಂಘಕ್ಕೆ ಪಾವತಿಸಲು ಬಾಕಿ ಮಾಡಿಕೊಂಡನೆಂದರೆ ಅವನ ಸದಸ್ಯತ್ವದ ಹಕ್ಕುಗಳಿಗೆ ಕೊಡಲಿಪೆಟ್ಟು ಬಿದ್ದಂತೆ. ಪ್ರತಿಯೊಬ್ಬ ಸದಸ್ಯನೂ 1 ಪ್ರವೇಶ ಶುಲ್ಕ, 2 ಶೇರು ಹಣ, 3 ಕಡ್ಡಾಯ ಠೇವಣಿ ಮತ್ತು 4 ಉಪವಿಧಿಯಲ್ಲಿ ಹೇಳಿರುವಂತೆ ಯಾವುದಾದರೂ ರೀತಿಯಲ್ಲಿ ಹಣ ಪಾವತಿಸುವುದಕ್ಕಿದ್ದರೆ ಅದನ್ನು ಅವಧಿಯೊಳಗೆ ಪಾವತಿಸಲೇಬೇಕು. ಒಂದು ವೇಳೆ ಹಾಗೆ ಅದನ್ನು ಪಾವತಿಸಲು ತಪ್ಪಿದರೆ ಅವನ ಸದಸ್ಯತ್ವದ ಸೌಧ ಬಿರುಕು ಬಿಡುತ್ತದೆ. ಅಂಥವನು ತನ್ನ ಸದಸ್ಯತ್ವದ ಸರ್ವ ಹಕ್ಕನ್ನು ಕಳೆದುಕೊಳ್ಳುತ್ತಾನೆ ; ಮತಕೊಡುವ ಹಕ್ಕನ್ನೂ ಕಳಕೊಳ್ಳುತ್ತಾನೆ. ತನ್ನ ಸದಸ್ಯತ್ವ ಊರ್ಜಿತದಲ್ಲಿರಬೇಕಾದರೆ ಅಧಿನಿಯಮದ ಪ್ರ. 19ರಲ್ಲಿ ಹೇಳಿರುವಂತೆ ತಾನು ಪಾವತಿಸಬೇಕಾಗಿರುವ ಎಲ್ಲ ಮೊಬಲಗನ್ನೂ ಸಲ್ಲಿಸಿರಬೇಕು ಎಂಬುದು ಗಮನಾರ್ಹ. ಹಣ ಪಾವತಿಸಲು ತಪ್ಪಿದ ಸದಸ್ಯನಿಗೆ ಸರ್ವ ಸದಸ್ಯರ ಸಭೆಯ ತಿಳಿವಳಿಕೆಯನ್ನು ಕೂಡ ಕಳುಹಿಸುವ ಅಗತ್ಯವಿಲ್ಲ. ಸಾಲಗಾರನಾದ ಸದಸ್ಯ ಒಂದು ಸಂಘದಿಂದ ಮತ್ತೊಂದಕ್ಕೆ ಪ್ರತಿನಿಧಿಯಾಗುವ ಅರ್ಹತೆಯನ್ನು ಕಳೆದುಕೊಳ್ಳುತ್ತಾನೆ.

ಒಬ್ಬ ಸದಸ್ಯ ಹಣ ಪಾವತಿಸಲು ತಪ್ಪಿರುವನೆಂದು ತೀರ್ಮಾನಿಸಬೇಕಾದರೆ ಅವನಿಗೆ ಬಾಕಿ ಮಾಡಿಕೊಂಡಿರುವ ಹಣವನ್ನು ಪಾವತಿಸಬೇಕೆಂದು ಒಂದು ತಗಾದೆ ತಿಳಿವಳಿಕೆಯನ್ನು ಎರಡು ತಿಂಗಳ ಮುಂಚಿತವಾಗಿ ಕೊಡಬೇಕು. ಅಂಥ ತಿಳಿವಳಿಕೆಯನ್ನು ಕೊಟ್ಟಿದ್ದು, ಸದಸ್ಯ ಮೊಬಲಗನ್ನು ಸರ್ವ ಸದಸ್ಯಸಭೆಗೆ ಒಂದು ತಿಂಗಳ ಮುಂಚಿತವಾಗಿ ಪಾವತಿಸಲು ತಪ್ಪಿದರೆ ಅಂಥವನು ಹಣ ಪಾವತಿಸಲು ತಪ್ಪಿದ ವ್ಯಕ್ತಿ ಎಂದು ಗಣಿಸಲು ಬರುತ್ತದೆ. ಅಂಥವನು ಸಂಘದ ಯಾವ ಕಾರ್ಯ ಕಲಾಪಗಳಲ್ಲೂ ಸದಸ್ಯನಾಗಿ ವರ್ತಿಸಲು ಸಾಧ್ಯವಾಗದು. ಅದ್ದರಿಂದ ಪ್ರತಿಯೊಬ್ಬ ಸದಸ್ಯನೂ ಸಂಘದ ಮತ್ತು ತನ್ನ ಹಿತದೃಷ್ಟಿಯಲ್ಲಿ ಪಾವತಿಸಬೇಕಾದ ಹಣವನ್ನು

ಕಾಲಕ್ಕೆ ಸರಿಯಾಗಿ ಪಾವತಿಸಿ ತನ್ನ ಅರ್ಹತೆಯನ್ನುಳಿಸಿಕೊಳ್ಳಬೇಕಾದುದು ಅವನ ಧರ್ಮ. ಸಂಘಕ್ಕೆ ಸದಸ್ಯನಾಗಿ ಸೇರಿದ ಮೇಲೆ ತನ್ನ ಗುರುತರ ಹೊಣೆಗಾರಿಕೆಯನ್ನರಿತು ಅದರಂತೆ ವರ್ತಿಸಿ ಸಂಘ ಉನ್ನತಿಪಥದಲ್ಲಿ ಸಾಗುವಂತೆ ಮಾಡಬೇಕು. ಒಟ್ಟಿನಲ್ಲಿ ಸಹಕಾರ ಸಂಘದ ಸದಸ್ಯನಾದವನು ಉತ್ತಮ ನಾಗರಿಕನಾಗಿ ವರ್ತಿಸಬೇಕೆಂದು ಒತ್ತಿಒತ್ತಿ ಹೇಳುವ ಆವಶ್ಯಕತೆಯಿರುವುದಿಲ್ಲ.

ಭಾರತದ ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳಿಗೆ ಮಹತ್ತ್ವದ ಸ್ಥಾನವನ್ನು ಕೊಡಲಾಗಿದೆ. ಭೂ ಅಭಿವೃದ್ಧಿ ಮತ್ತು ವ್ಯವಸಾಯ ಕಾರ್ಯಕ್ರಮಗಳಿಗೆ ಅಗತ್ಯವಾದ ಸಾಲವನ್ನೊದಗಿಸಲು ಸಹಕಾರ ಸಂಘಗಳೇ ಸರಿಯಾದ ಸಂಸ್ಥೆಗಳೆಂದು ನಿರ್ಧರಿಸಲಾಗಿದೆ. ಇವು ಬೇರು ಶಕ್ತಿಯುತ ಸಂಘಗಳಾಗಲು ಅಗತ್ಯವಾದ ಅನೇಕ ಕ್ರಮಗಳನ್ನು ಸರ್ಕಾರಗಳು ಕೈಗೊಂಡವು. ಆದರೆ ಸಾಧಿಸಬೇಕಾದ ಗುರಿಗಳಿಗೆ ಹೋಲಿಸಿದರೆ ಸಹಕಾರ ಸಂಘಗಳ ಪ್ರಗತಿ ಇನ್ನೂ ಬಹಳ ಹಿಂದಿದೆ ಎಂಬುದನ್ನು ಮರೆಯಬಾರದು. ವ್ಯವಸಾಯ ಸಹಕಾರ ಸಂಘಗಳ ಪ್ರಗತಿಗೆ ಕೆಲವು ಅಂಶಗಳು ಅಡ್ಡಿಯಾಗಿವೆ ಎಂಬುದನ್ನು ನಾವು ಕಾಣಬಹುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ :

1 ಸುಸ್ತಿ ಸಾಲಗಳಲ್ಲಿ ಹೆಚ್ಚಳ. ಇತ್ತೀಚಿನ ವರ್ಷಗಳಲ್ಲಿ ಸಾಲ ಮರುಪಾವತಿ ಮಾಡುತ್ತಿರುವುದರಲ್ಲಿ ಸದಸ್ಯರು ಕ್ಲುಪ್ತವಾಗಿಲ್ಲದೆ ಸುಸ್ತಿ ಸಾಲಗಳು ಏರುತ್ತಿರುವುದನ್ನು ನಾವು ಕಾಣುತ್ತೇವೆ.

2 ಸದಸ್ಯರಾಗಿರುವ ಗ್ರಾಮೀಣ ಜನರಲ್ಲಿ ಸಹಕಾರ ಸಂಘದ ಆಡಳಿತದ ಬಗ್ಗೆ ನಿರಾಸಕ್ತಿ ಮತ್ತು ತಮ್ಮ ಜವಾಬ್ದಾರಿ ಏನೆಂಬುದನ್ನು ಅರಿಯದೆ ಇರುವುದು.

3 ಹಳ್ಳಿಗಳಲ್ಲಿನ ಗುಂಪುಗಾರಿಕೆ ವೈಷಮ್ಯಗಳಿಂದಾಗಿ ಸಹಕಾರ ಸಂಘದ ಆಡಳಿತ ಮಂಡಳಿಗಳು ತೃಪ್ತಿಕರವಾಗಿ ಕೆಲಸ ಮಾಡದಿರುವುದು.

4 ಆಡಳಿತ ನಡೆಸುವವರಲ್ಲಿ ಕೆಲವು ಸಲ ಕಂಡುಬರುವ ಕಾರ್ಯತತ್ಪರತೆಯ ಅಭಾವ, ಹಾಗೂ ಹಿತಾಸಕ್ತಿಯುಳ್ಳ ಜನ ಅಧಿಕಾರಕ್ಕೆ ಬಂದು ಸಂಘದ ಹಿತಕ್ಕೆ ಕುಂದಕವಾಗುವ ರೀತಿ ವ್ಯವಹರಿಸುವುದು.

ಕೆ. ಎಸ್. ಕೇಶವಮೂರ್ತಿ*

---

* 'ಸಹಕಾರ'

ಕೆ. ಎಸ್. ರಾಘವನ್

ಪ್ರಲೇಖನ ಮತ್ತು ಮಾಹಿತಿ ಪರಿವಹನ

ಪರಿವಹನ ಮಾನವನ ಒಂದು ಮೂಲಭೂತ ಕ್ರಿಯೆ. ನಮ್ಮ ದೇಹವನ್ನೇ ಉದಾಹರಣೆಗೆ ತೆಗೆದುಕೊಂಡರೆ ಪರಿವಹನವಿಲ್ಲದೆ ಒಂದು ಕ್ಷಣ ಕೂಡ ಮಾನವ ಜೀವಿಸಿರಲಾರ ಎಂಬುದು ವಿದಿತವಾಗುತ್ತದೆ. ನಾವು ಒಂದು ವಸ್ತುವನ್ನು ನೋಡಲು ಸಾಧ್ಯವಾಗಿರುವುದು ಪರಿವಹನದಿಂದಲೇ. ಮಾನವ ದೇಹವನ್ನೇ ಪರಿವಹನ ವ್ಯವಸ್ಥೆಗಳ ಒಂದು ಒಕ್ಕೂಟವನ್ನಾಗಿ ಪರಿಗಣಿಸಬಹುದು.

ಮಾಹಿತಿ ಪರಿವಹನ (Information Communication) ಒಂದು ವಿಧದಲ್ಲಿ ಈ ಗ್ರಹದ ಮೇಲೆ ಜೀವ ಸೃಷ್ಟಿಯಾದಂದಿನಿಂದಲೂ ಇದೆಯೆಂದು ಹೇಳಬಹುದು. ಇತರ ಜೀವಿಗಳಿಗಿಂತ ಮಾನವ ಹೆಚ್ಚಾಗಿ ಪರಿವಹನಕ್ಕೆ ಕಾತರಿಸುತ್ತಾನೆ. ಯಾರೊಡನೆಯೂ ಪರಿವಹನಕ್ಕೆ ಅವಕಾಶವಿಲ್ಲದೆ ಒಬ್ಬ ಮನುಷ್ಯನನ್ನು ಒಂದು ಕೊಠಡಿಯಲ್ಲಿ ಕೂಡಿ ಹಾಕಿದಲ್ಲಿ ಆತನ ಮನಸ್ಸು ವಿಕಲ್ಪಗೊಳ್ಳಲು ಬಹಳ ದಿನಗಳು ಬೇಕಾಗುವುದಿಲ್ಲ. ಅಂದರೆ ತನ್ನ ದೇಹದೊಳಗಿನ ಪರಿವಹನವಷ್ಟೇ ಅಲ್ಲದೆ ಇತರರೊಡನೆಯೂ ಪರಿವಹನ ಮಾನವನ ಸ್ವಭಾವ.

ಭಾಷೆ ಹಾಗೂ ಲಿಪಿ ಇವು ಇಲ್ಲದಿದ್ದ ಕಾಲದಲ್ಲಿ ಸಂಜ್ಞೆಯ ಮೂಲಕವೇ ಮಾಹಿತಿ ಪರಿವಹನ ನಡೆಯುತ್ತಿದ್ದಿತು. ಭಾಷೆಯ ಮಾಧ್ಯಮದಲ್ಲಿ ಮಾಹಿತಿ ಪರಿವಹನಕ್ಕೆ ಪುಷ್ಟಿ ದೊರೆಯಿತು. ಮನುಷ್ಯರು ಪರಸ್ಪರ ಸಂಭಾಷಿಸಿ ಜ್ಞಾನಾರ್ಜನೆಮಾಡಲು ಹಾಗೂ ಜ್ಞಾನಪ್ರಸಾರ ಮಾಡಲು ಅವಕಾಶವಾಯಿತು. ಇಲ್ಲಿ ಮುಖ್ಯವಾದ ಅಂಶವೆಂದರೆ, ಮಾಹಿತಿ ಪರಿವಹನ ಪರಿಣಾಮಕಾರಿಯಾದಷ್ಟೂ ಜ್ಞಾನಾರ್ಜನೆ ಮತ್ತು ಜ್ಞಾನಪ್ರಸಾರ ಸುಲಭವಾಗುತ್ತವೆ ಹಾಗೂ ಜ್ಞಾನದ ಬೆಳವಣಿಗೆ ತ್ವರಿತಗೊಳ್ಳುತ್ತದೆ.

ಸಂಭಾಷಣೆಯಿಂದ ಮನುಷ್ಯರ ಪರಸ್ಪರ ಪರಿವಹನೆ ಸಾಧ್ಯವಾದರೂ ಈ ವ್ಯವಸ್ಥೆಯಲ್ಲಿ ಅನೇಕ ನ್ಯೂನತೆಗಳಿದ್ದುವು. ಈ ವ್ಯವಸ್ಥೆಯಲ್ಲಿ ಕಾಲದ ಹಾಗೂ ಭೌಗೋಳಿಕ ಅಡಚಣೆಗಳನ್ನು ಮೀರುವುದು ಅಸಾಧ್ಯವಾಗಿತ್ತು. ಅಂದರೆ ವ್ಯಾಪಕವಾಗಿ ಜ್ಞಾನಪ್ರಸಾರಮಾಡಲು ಈ ಮಾಧ್ಯಮ ಅಷ್ಟು ಪ್ರಯೋಜನಕಾರಿಯಾಗಿರಲಿಲ್ಲ.

ಕಾಗದದ ತಯಾರಿಕೆ ತೊಡಗಿದ ಅನಂತರ ಮತ್ತು ಮುದ್ರಣಯಂತ್ರಗಳು ಬಳಕೆಗೆ ಬಂದ ಮೇಲೆ ಮಾಹಿತಿ ಪರಿವಹನದಲ್ಲಿ ಅನೇಕ ಸುಧಾರಣೆಗಳಾದುವು. ಈ ವ್ಯವಸ್ಥೆಯಲ್ಲಿ ಯಾವುದೇ ಹಸ್ತಪ್ರತಿಯ ಅನೇಕ ಪ್ರತಿಗಳನ್ನು ಮುದ್ರಿಸಲು ಮತ್ತು ವಿತರಿಸಲು ಸಾಧ್ಯವಾಯಿತು. ಅಂದರೆ ಹೆಚ್ಚಿನ ಜನರು ಜ್ಞಾನಾರ್ಜನೆಯ ಅವಕಾಶವನ್ನು ಪಡೆಯುವಂತಾಯಿತು. ಮಾಹಿತಿ ಪರಿವಹನ ಮತ್ತಷ್ಟು ಪರಿಣಾಮಕಾರಿಯಾಗಿ ನಡೆಯಲು ಕಾಗದ ಹಾಗೂ ಮುದ್ರಣ ಯಂತ್ರಗಳಿಂದ ಹೆಚ್ಚಿನ

ಸೌಲಭ್ಯ ಒದಗಿತು. ಈ ವ್ಯವಸ್ಥೆಯ ಅತಿ ಮುಖ್ಯ ಮಾಹಿತಿ ಪರಿವಹನ ಮಾಧ್ಯಮವೆಂದರೆ ಮುದ್ರಿತ ಪುಸ್ತಕವಾಗಿತ್ತು. ಮುದ್ರಿತ ಪುಸ್ತಕ 15ನೆಯ ಶತಮಾನದ ಮಧ್ಯದಿಂದ ಇಂದಿನ ವರೆಗೆ ಬಹಳ ಪರಿಣಾಮಕಾರಿ ಹಾಗೂ ಅತ್ಯಂತ ಜನಪ್ರಿಯ ಮಾಹಿತಿ ಪರಿವಹನ ಮಾಧ್ಯಮವಾಗಿದೆ. ಮುದ್ರಣಯಂತ್ರಗಳು ಬಳಕೆಗೆ ಬಂದ ಮೇಲೆ ಪುಸ್ತಕಗಳು ಸುಲಭ ಬೆಲೆಯಲ್ಲಿ ಜನಸಾಮಾನ್ಯರಿಗೆ ದೊರಕತೊಡಗಿದುವು. ಇಲ್ಲಿ ನೆನಪಿಸಬೇಕಾದ ಒಂದು ಅಂಶವೆಂದರೆ ಮುದ್ರಣ ಯಂತ್ರಗಳು ಬಳಕೆಗೆ ಬಂದ ಹೊಸದರಲ್ಲಿ ಅವುಗಳನ್ನು ಬಹಳ ಬೇಡಿಕೆಯಿದ್ದ ಪುಸ್ತಕ ಮುದ್ರಣ ಕಾರ್ಯಗಳಿಗೆ ಮಾತ್ರ ಉಪಯೋಗಿಸುತ್ತಿದ್ದರು. ಅಂದರೆ ಧರ್ಮ ವಿಚಾರಗಳ ಬಗ್ಗೆ ಪುಸ್ತಕಗಳನ್ನು ಮುದ್ರಿಸಲು, ಅದರಲ್ಲೂ ಮುಖ್ಯವಾಗಿ ಬೈಬಲನ್ನು ಮುದ್ರಿಸಿ ವಿತರಿಸಲು ವಿಶೇಷ ಪ್ರಾಮುಖ್ಯ ನೀಡಲಾಯಿತು. ಆದರೆ ಶೀಘ್ರದಲ್ಲೇ ಇತರ ಕ್ಷೇತ್ರಗಳಲ್ಲೂ, ಅಂದರೆ ಸಮಾಜಶಾಸ್ತ್ರಗಳು ಹಾಗೂ ವಿಜ್ಞಾನ ವಿಚಾರಗಳಲ್ಲೂ ಮುದ್ರಿತ ಪುಸ್ತಕಗಳು ಹೊರಬರತೊಡಗಿ ಜ್ಞಾನಪ್ರಸಾರಕ್ಕೆ ಪುಷ್ಟಿ ದೊರೆಯಿತು.

ಪ್ರೊ. ಜೆ. ಡಿ. ಬರ್ನಾಲ್[1] ಪ್ರಕಾರ 16ನೆಯ ಶತಮಾನದ ಅತಿಮುಖ್ಯ ತಾಂತ್ರಿಕ ಹಾಗೂ ವೈಜ್ಞಾನಿಕ ಬೆಳವಣಿಗೆಗಳಿಗೆ ಮಾಧ್ಯಮವಾಗಿದ್ದುದು ಮುದ್ರಿತ ಪುಸ್ತಕ. ಜ್ಞಾನಾರ್ಜನೆಯಲ್ಲಿ ಆಸಕ್ತಿಯಿರುವವರಿಗೆ ಅದು ದೊರೆಯುವಂತಾದುದು ಪುಸ್ತಕ ಮಾಧ್ಯಮದಿಂದಲೇ. ತಾಂತ್ರಿಕಜ್ಞಾನ, ವೈದ್ಯಕೀಯ ಜ್ಞಾನ ಇವುಗಳೆಲ್ಲ 15ನೆಯ ಶತಮಾನದ ವರೆಗೆ ಒಬ್ಬರಿಂದ ಒಬ್ಬರಿಗೆ ಸಂಭಾಷಣೆಯ ಹಾಗೂ ನೇರ ಶಿಕ್ಷಣದ ಮೂಲಕ ತಿಳಿಯುತ್ತಿದ್ದುವು. ಮುದ್ರಿತ ಪುಸ್ತಕಗಳಲ್ಲಿ ಈ ವಿಚಾರಗಳೆಲ್ಲ ಬಹುಮಟ್ಟಿಗೆ ಹೊರಬರತೊಡಗಿದುದರಿಂದ ವಿವಿಧ ವೃತ್ತಿಗಳು ಬೆಳೆಯಲು ಅವಕಾಶವಾಯಿತು. ಮುದ್ರಿತ ಪುಸ್ತಕಗಳು ಉತ್ತಮ ಜ್ಞಾನ ಪರಿವಾಹಕಗಳಷ್ಟೇ ಅಲ್ಲದೆ ಜ್ಞಾನದ ಬೆಳವಣಿಗೆಗೂ ಬಹಳ ಮಟ್ಟಿಗೆ ಕಾರಣವಾಗಿವೆ. ಪುಸ್ತಕಗಳ ಮೂಲಕ ಜ್ಞಾನಾರ್ಜನೆ ಮಾಡಿದ ಅನೇಕ ವ್ಯಕ್ತಿಗಳಲ್ಲಿ ಕೆಲವರಾದರೂ ಅಷ್ಟಕ್ಕೆ ತೃಪ್ತಿ ಹೊಂದದೆ ಆ ಜ್ಞಾನದ ಆಧಾರದ ಮೇಲೆ ಸಂಶೋಧನೆಗೆ ತೊಡಗಿದರು. ಇದರಿಂದ ಒಂದು ರೀತಿಯ ಶ್ರೇಣಿ ಕ್ರಿಯೆ ಆರಂಭವಾಯಿತೆನ್ನಬಹುದು.

ಇಷ್ಟೆಲ್ಲ ಆದರೂ ಪುಸ್ತಕ ಮಾಧ್ಯಮ ನ್ಯೂನತೆಗಳಿಂದ ಸಂಪೂರ್ಣವಾಗಿ ಮುಕ್ತವಾಗಿರಲಿಲ್ಲ. 16ನೆಯ ಶತಮಾನದಲ್ಲಿ ಅದು ಪರಿಣಾಮಕಾರಿ ಮಾಹಿತಿ ಪರಿವಾಹಕವಾಗಿದ್ದರೂ ಮುಂಬಂದ ವೈಜ್ಞಾನಿಕ ಯುಗದಲ್ಲಿ ಅದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ. ಅದು ಭೂಗೋಳಿಕ ಅಡಚಣೆಗಳನ್ನು ಮೀರಿತಾದರೂ ವೈಜ್ಞಾನಿಕ ಯುಗಕ್ಕೆ ಅಗತ್ಯವಾದಷ್ಟು ತ್ವರಿತವಾಗಿ ಮಾಹಿತಿ ಪ್ರಸಾರಮಾಡುವ ಪರಿವಾಹಕವಾಗಿರಲಿಲ್ಲ. ಪುಸ್ತಕ ಮುದ್ರಣ ಸ್ವಾಭಾವಿಕವಾಗಿಯೇ ಬಹಳ ತ್ವರಿತವಾಗಿ ನಡೆಯಲು ಸಾಧ್ಯವಾಗುವ ಕಾರ್ಯವಲ್ಲ. ಅದಷ್ಟೇ ಅಲ್ಲದೆ ಒಂದು ಸಂಶೋಧನೆಯ ಫಲವಾಗಿ ವಿದಿತವಾದ ಹೊಸ ಜ್ಞಾನವನ್ನು ಒಂದು ಪುಸ್ತಕವಾಗಿ ಪ್ರಕಟಿಸುವುದೂ ಅಸಾಧ್ಯ. ಯಾಕೆಂದರೆ ಒಂದು ಪುಸ್ತಕ ಹೊರಬರಲು ಸಾಕಷ್ಟು

---

[1] Bernal J. D., *Science in History*, London Watts, 1965, p. 242

ವಿಚಾರ ಸಾಮಗ್ರಿಯಿರಬೇಕು. ಕೇವಲ ಒಂದೆರಡು ಪುಟಗಳಲ್ಲಿ ಅಥವಾ ಕೆಲವೇ ಪುಟಗಳಲ್ಲಿ ಪ್ರಕಟಿಸಬಹುದಾದಷ್ಟು ಮಾತ್ರ ಮಾಹಿತಿಯಿದ್ದರೆ ಅದನ್ನು ಪುಸ್ತಕವಾಗಿ ಮುದ್ರಿಸಿ ಹೊರತರುವುದು ತಾಂತ್ರಿಕ ದೃಷ್ಟಿಯಿಂದ ಸಾಧ್ಯವಾದರೂ, ಆರ್ಥಿಕ ದೃಷ್ಟಿಯಿಂದ ನೋಡಿದರೆ ಅಷ್ಟು ಸಮರ್ಪಕವೆನಿಸದು. ಆದರೆ ಇದೇ ಕಾರಣಕ್ಕಾಗಿ ಈ ಹೊಸ ವಿಚಾರಗಳನ್ನು ಮತ್ತಷ್ಟು ಮಾಹಿತಿ ಸಂಗ್ರಹವಾಗುವ ವರೆಗೆ (ಅಂದರೆ ಪುಸ್ತಕ ಮುದ್ರಿಸಿ ಪ್ರಕಟಿಸಲು ಸಾಧ್ಯವಾಗುವಷ್ಟು ಮಾಹಿತಿ) ಪ್ರಕಾಶಿಸಿ ಪ್ರಸರಿಸದೇ ಹೋದರೆ ಜ್ಞಾನದ ಬೆಳವಣಿಗೆ ಕುಂಠಿತವಾಗುತ್ತದೆಂಬುದನ್ನು ಸುಲಭವಾಗಿ ಮನಗಾಣಬಹುದು. ಈ ಕಾರಣದಿಂದಾಗಿ ಮುದ್ರಿತ ಪುಸ್ತಕದೊಂದಿಗೆ, ಅದರ ಕುಂದುಕೊರತೆಗಳೇನೂ ಇಲ್ಲದ, ಆರ್ಥಿಕವಾಗಿ ಸಮರ್ಪಕವಾದ ಹಾಗೂ ಶೀಘ್ರವಾಗಿ ವಿಚಾರ ಪ್ರಸಾರಮಾಡುವ ಸಾಮರ್ಥ್ಯವುಳ್ಳ ಒಂದು ಹೊಸ ಮಾಧ್ಯಮ ವಿಜ್ಞಾನ ಜಗತ್ತಿಗೆ ಆವಶ್ಯಕವಾಯಿತು. ಇದರ ಪರಿಣಾಮವಾಗಿಯೇ ವೈಜ್ಞಾನಿಕ ನಿಯತಕಾಲಿಕಗಳು ಒಂದು ಹೊಸ ಮಾಹಿತಿ ಪರಿವಾಹಕ ಮಾಧ್ಯಮಗಳಾಗಿ ಬಳಕೆಗೆ ಬಂದುವು. ಆಧುನಿಕ ವಿಜ್ಞಾನದ ಉಗಮ 17ನೆಯ ಶತಮಾನದಲ್ಲಾಯಿತೆಂಬುದನ್ನು ಸಾಮಾನ್ಯವಾಗಿ ಎಲ್ಲ ವಿಜ್ಞಾನ ಇತಿಹಾಸಕಾರರೂ ಒಪ್ಪುತ್ತಾರೆ. ನಿಯತಕಾಲಿಕಗಳೂ ಈ ಶತಮಾನದಲ್ಲೇ ಆರಂಭವಾದುವೆಂಬುದು ಗಮನಾರ್ಹ ವಿಷಯ. ಇವು ಪುಸ್ತಕಗಳಿಗೆ ಪೂರಕ ಮಾಹಿತಿ ಪರಿವಾಹಕಗಳೆಂಬುದನ್ನು ಗಮನಿಸಬೇಕು. ಇಂದಿಗೂ ಪ್ರಕಟಣೆಯಲ್ಲಿರುವ ಅತ್ಯಂತ ಹಿಂದಿನ ನಿಯತಕಾಲಿಕ 'ಫಿಲಸಾಫಿಕಲ್ ಟ್ರಾನ್ಸಾಕ್ಷನ್ಸ್ ಆಫ್ ದಿ ರಾಯಲ್ ಸೊಸೈಟಿ' 1665 ರಲ್ಲಿ ಸ್ಥಾಪಿತವಾಯಿತು. ಹೊಸ ವಿಜ್ಞಾನ ವಿಚಾರಗಳನ್ನು ವಿಶ್ವದ ಎಲ್ಲೆಡೆ ತ್ವರಿತವಾಗಿ ಪ್ರಸರಿಸಲು ಈ ಮಾಧ್ಯಮ ಸಹಕಾರಿಯಾಯಿತು. 17ನೆಯ ಶತಮಾನದಿಂದ ಇಂದಿನ ವರೆಗೆ ಹೊಸ ಮಾಹಿತಿಯ ಹಾಗೂ ನಿಯತಕಾಲಿಕದ ನಡುವಣ ಈ ಸಂಬಂಧ ಇದ್ದೇ ಇದೆ. ಹಾಗೂ ವಿಜ್ಞಾನಗಳ ಬೆಳವಣಿಗೆಗೆ ಸಮಾನಾಂತರವಾಗಿ ನಿಯತಕಾಲಿಕಗಳ ಸಂಖ್ಯೆಯೂ ಬೆಳೆದಿರುವುದನ್ನು ಈ ಕೆಳಗಿನ ವಿವರಣ ಪಟ್ಟಿಯಿಂದ ಕಾಣಬಹುದು.[2]

ವರ್ಷ	ನಿಯತಕಾಲಿಕಗಳ ಸಂಖ್ಯೆ
1800	100
1850	1,000
1900	10,000
1950	1,00,000

ಅಧ್ಯಯನ ಅನುಕೂಲಕ್ಕಾಗಿ ವಿಜ್ಞಾನಗಳನ್ನು ಅನೇಕ ವಿಭಾಗಗಳಾಗಿ ವಿಂಗಡಿಸಿರುವುದನ್ನು ನಿಯತಕಾಲಿಕಗಳ ಬೆಳವಣಿಗೆಯಲ್ಲೂ ಕಾಣಬಹುದು.

[2] Barr, K. P.. Estimates of the number of currently available scientific and technical periodicals : *Journal of Documentation*, Vol. 23 ; 1967 ; pp. 110-6

ನಿಯತಕಾಲಿಕಗಳು ಎಷ್ಟರಮಟ್ಟಿಗೆ ವಿಚಾರ ಪರಿವಾಹಕಗಳಾಗಿ ಬೆಳೆದಿವೆಯೆಂದರೆ ವಿಜ್ಞಾನ ಜಗತ್ತಿನಲ್ಲಿ ಹೊಸ ಸಂಶೋಧನೆಗಳೆಲ್ಲ ಸಾಮಾನ್ಯವಾಗಿ ಮೊದಲಬಾರಿಗೆ ನಿಯತಕಾಲಿಕ ಲೇಖನಗಳ ರೂಪದಲ್ಲಿ ಪ್ರಕಟವಾಗುತ್ತವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಂಶೋಧಕರ ಸಂಶೋಧನೆಗೆ ಬೇಕಾದ ಮೂಲ ವಿಚಾರ ಸಾಮಗ್ರಿಗಳಿಗಾಗಿ ಬಹಳ ಹೆಚ್ಚಿನ ಮಟ್ಟಿಗೆ ನಿಯತಕಾಲಿಕಗಳನ್ನು ಅವಲಂಬಿಸುತ್ತಾರೆ. ಈ ಮಾತು ವಿಜ್ಞಾನ ವಿಷಯಗಳಿಗೆ ಮಾತ್ರವಲ್ಲದೆ ಸಮಾಜ ಶಾಸ್ತ್ರಗಳಿಗೂ ಸ್ವಲ್ಪಮಟ್ಟಿಗೆ ಮಾನವಿಕ ಶಾಸ್ತ್ರಗಳಿಗೂ ಅನ್ವಯಿಸುತ್ತದೆ. ಪುಸ್ತಕಗಳಿಗೆ ಹೋಲಿಸಿದಾಗ ಇವುಗಳ ನಿಶ್ಚಿತ ಪ್ರಯೋಜನವೆಂದರೆ ಇವು ಯಾವುದೇ ವಿಷಯದಲ್ಲಿ ಜ್ಞಾನದ ಬೆಳವಣಿಗೆಯೊಂದಿಗೆ ಹೆಜ್ಜೆಯಿಡಬಲ್ಲುವು. ಅನೇಕ ಹೊಸ ವಿಚಾರಗಳ ಬಗ್ಗೆ ಒಂದೂ ಪುಸ್ತಕ ವಿಲ್ಲದಿರಲು ಸಾಧ್ಯವೆಂದರೆ ಅತಿಶಯೋಕ್ತಿಯಾಗಲಾರದು.

ನಿಯತಕಾಲಿಕಗಳ ಇನ್ನೊಂದು ಅನುಕೂಲವೆಂದರೆ ಬಹುತೇಕ ನಿಯತಕಾಲಿಕಗಳು ಲೇಖನಗಳ ಬಗ್ಗೆ ಓದುಗರಿಂದ ಪತ್ರವ್ಯವಹಾರವನ್ನು ಉತ್ತೇಜಿಸುತ್ತವೆ. ಸಾಮಾನ್ಯವಾಗಿ ಎಲ್ಲ ನಿಯತಕಾಲಿಕಗಳಲ್ಲೂ ಪತ್ರವ್ಯವಹಾರ ವಿಭಾಗವಿರುವುದನ್ನು ಇಲ್ಲಿ ನೆನೆಸಬಹುದು. ಈ ಕಾರಣದಿಂದಾಗಿ ಇವು ಪುಸ್ತಕಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲವು. ಅಂದರೆ ಆಧುನಿಕ ಮಾಹಿತಿ ಪರಿವಹನ ವ್ಯವಸ್ಥೆಯಲ್ಲಿ ನಿಯತಕಾಲಿಕಗಳ ಪಾತ್ರ ಪ್ರಧಾನವಾದ್ದು.

ಇಷ್ಟಾದರೂ ಸಹ ನಿಯತಕಾಲಿಕಗಳು ಇಂದಿನ ಜಗತ್ತಿನ ಮಾಹಿತಿ ಪರಿವಹನ ವ್ಯವಸ್ಥೆಯ ಕೊನೆಯ ಘಟ್ಟವಲ್ಲ. ನಿಯತಕಾಲಿಕಗಳಲ್ಲೂ ಅನೇಕ ನ್ಯೂನತೆಗಳನ್ನು ಕಾಣಬಹುದು :

ಒಂದು ಲೇಖನವನ್ನು ಪ್ರಕಟಣೆಗೆ ಸ್ವೀಕರಿಸುವುದಕ್ಕೂ ಅದರ ಪ್ರಕಟಣೆಗೂ ಇರುವ ಕಾಲವ್ಯತ್ಯಾಸ. ಅನೇಕ ನಿಯತಕಾಲಿಕಗಳಲ್ಲಿ ಈ ಕಾಲವ್ಯತ್ಯಾಸ ಆರು ತಿಂಗಳುಗಳಷ್ಟಿರುತ್ತದೆ ಮತ್ತು ಕೆಲವು ನಿಯತಕಾಲಗಳಲ್ಲಿ ಇನ್ನೂ ಹೆಚ್ಚಾಗಿರುತ್ತದೆ. ಹೆಚ್ಚಿನ ವಿಳಂಬ ಲೇಖನದ ಸಂಪಾದನಕ್ಕಾಗಿ ತಗಲುತ್ತದೆ. ಈ ರೀತಿ ಪರಿಷ್ಕರಿಸುವಾಗ ಅನೇಕ ಬಾರಿ ಸಂಪಾದಕರು ಆರ್ಥಿಕ ದೃಷ್ಟಿಯಿಂದ ಒಂದು ಲೇಖನದ ಗಾತ್ರವನ್ನು ಕುಗ್ಗಿಸುವ ಹಾಗೂ ಅನೇಕ ಬಾರಿ ಲೇಖನಗಳನ್ನು ತಿರಸ್ಕರಿಸುವ ಸಾಧ್ಯತೆಯೂ ಉಂಟು. ಇಷ್ಟೇ ಅಲ್ಲದೆ ಈ ಕಾಲ ವಿಳಂಬ ವೈಜ್ಞಾನಿಕ ಲೇಖನಗಳ ಉಪಯುಕ್ತತೆಯನ್ನು ಬಹುಮಟ್ಟಿಗೆ ತಗ್ಗಿಸುವ ಸಾಧ್ಯತೆಯೂ ಉಂಟು.

2 ನಿಯತಕಾಲಿಕಗಳಲ್ಲಿ ಪ್ರಕಟವಾದ ಅನೇಕ ಲೇಖನಗಳು ವ್ಯರ್ಥವಾಗುವ ಸಂಭವವೂ ಉಂಟು. ಯುನೆಸ್ಕೋದ ಒಂದು ಅಧ್ಯಯನದ ಪ್ರಕಾರ ಒಂದು ವಿಶಿಷ್ಟ ನಿಯತಕಾಲಿಕದ ಒಂದು ಲೇಖನ ಆ ನಿಯತಕಾಲಿಕವನ್ನು ಓದುವ 10% ರಷ್ಟು ಸಂಶೋಧಕರಿಗೆ ಮಾತ್ರ ಉಪಯುಕ್ತವೆನಿಸಿರುತ್ತದೆ. ಸಾಮಾನ್ಯ ನಿಯತಕಾಲಿಕದ ಒಂದು ಲೇಖನ ಅದರ ಓದುಗರ 2% ರಷ್ಟು ಮಂದಿಗೆ ಮಾತ್ರ ಉಪಯುಕ್ತವೆನಿಸುತ್ತದೆ. ಅಂದರೆ ನಿಯತಕಾಲಿಕಗಳಲ್ಲಿ ಪ್ರಕಟವಾಗುವ ಅನೇಕ ಲೇಖನಗಳು ಯಾರಿಂದಲೂ ಓದಲ್ಪಡದೇ ಹೋದರೂ ಆಶ್ಚರ್ಯವಿಲ್ಲ.

ಚದರಿಕೆ : ಒಂದು ವಿಷಯದ ಮೇಲಿನ ಲೇಖನಗಳು ಅನೇಕ ನಿಯತಕಾಲಿಕಗಳಲ್ಲಿ ಚದರಿರುವುದು ನಿಯತಕಾಲಿಕಗಳ ಮತ್ತೊಂದು ಕೊರತೆ. ಈ ವಿಷಯ ಮೊದಲಿಂದಲೂ ತಿಳಿದಿದ್ದರೂ ಈ ಬಗ್ಗೆ ತೀಕ್ಷ್ಣ ಅಧ್ಯಯನ ನಡೆಸಿದವರು ಬ್ರ್ಯಾಡ್‌ಫರ್ಡ್. ಅವರ ಅಧ್ಯಯನದಿಂದ ಬೆಳಕಿಗೆ ಬಂದ ಅಂಶಗಳು ಬ್ರ್ಯಾಡ್‌ಫರ್ಡ್ ಚದರಿಕೆ ನಿಯಮ ಎಂದು ಪ್ರಸಿದ್ಧವಾಗಿವೆ.

ಯಾವುದಾದರೊಂದು ನಿರ್ದಿಷ್ಟ ವಿಷಯದ ಮೇಲಿನ ಎಲ್ಲ ನಿಯತಕಾಲಿಕ ಲೇಖನಗಳನ್ನೂ ಹುಡುಕಿ ಆ ನಿಯತಕಾಲಿಕಗಳನ್ನು ಅವು ಆ ನಿರ್ದಿಷ್ಟ ವಿಷಯದ ಮೇಲೆ ಪ್ರಕಟಿಸಿದ ಲೇಖನಗಳ ಸಂಖ್ಯೆಗೆ ಅನುಸಾರವಾಗಿ ಜೋಡಿಸಿದರೆ ಆ ನಿಯತಕಾಲಿಕಗಳನ್ನು ನಿರ್ದಿಷ್ಟ ವಿಷಯದ ಮೇಲೆ ಪ್ರಧಾನವಾಗಿ ಲೇಖನಗಳನ್ನು ಪ್ರಕಟಿಸುವ ನಿಯತಕಾಲಿಕಗಳ ಗುಂಪು ಮತ್ತು ಅಷ್ಟೇ ಲೇಖನಗಳನ್ನು ಒಟ್ಟಾಗಿ ಪ್ರಕಟಿಸಿದ ನಿಯತಕಾಲಿಕಗಳ ಅನೇಕ ಗುಂಪುಗಳಾಗಿ ವಿಂಗಡಿಸಬಹುದು. ಈ ಸಂದರ್ಭದಲ್ಲಿ ಪ್ರಧಾನ ಗುಂಪು ಹಾಗೂ ಇತರ ಗುಂಪುಗಳಲ್ಲಿರುವ ನಿಯತಕಾಲಿಕಗಳ ಸಂಖ್ಯೆ ಈ ರೀತಿ ಇರುತ್ತವೆ.

$$1 : n : n^2 \cdots\cdot$$

ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಬ್ರ್ಯಾಡ್‌ಫರ್ಡನ ನಿಯಮದ ಪ್ರಕಾರ ಒಂದು ನಿರ್ದಿಷ್ಟ ವಿಷಯದ ಮೇಲಿನ ಎಲ್ಲ ನಿಯತಕಾಲಿಕ ಲೇಖನಗಳನ್ನು ಗಣನೆಗೆ ತಂದುಕೊಂಡರೆ ಅವುಗಳಲ್ಲಿ $\frac{1}{3}$ ರಷ್ಟು ಲೇಖನಗಳು ಮಾತ್ರ ಆ ನಿರ್ದಿಷ್ಟ ವಿಷಯಕ್ಕೇ ಮೀಸಲಾದ ನಿಯತಕಾಲಿಕಗಳಲ್ಲಿ ಪ್ರಕಟವಾಗಿರುತ್ತವೆ. ಇನ್ನು $\frac{1}{3}$ ಭಾಗದಷ್ಟು ಲೇಖನಗಳು ಆ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ವಿಷಯಗಳ ಮೇಲಿನ ನಿಯತಕಾಲಿಕಗಳಲ್ಲಿ ಪ್ರಕಟವಾಗಿರುತ್ತವೆ. ಕೊನೆಯ $\frac{1}{3}$ ಭಾಗದಷ್ಟು ಲೇಖನಗಳು ಆ ವಿಶಿಷ್ಟ ವಿಷಯಕ್ಕೆ ನೇರ ಸಂಬಂಧವಿಲ್ಲದ ನಿಯತಕಾಲಿಕಗಳಲ್ಲಿ ಪ್ರಕಟವಾಗಿರುತ್ತವೆ.

ಇಂದಿನ ಮಾಹಿತಿ ಪರಿವಹನ ವ್ಯವಸ್ಥೆಯಲ್ಲಿ ನಿಯತಕಾಲಿಕಗಳ ಪಾತ್ರವನ್ನು ಪರಿಶೀಲಿಸುವಲ್ಲಿ ಬ್ರ್ಯಾಫರ್ಡನ ನಿಯಮ ಅತ್ಯಂತ ಉಪಯುಕ್ತವಾದ್ದು. ಒಂದು ನಿರ್ದಿಷ್ಟ ವಿಷಯದ ಮೇಲಿನ ಎಲ್ಲ ನಿಯತ ಕಾಲಿಕಗಳನ್ನು ನೋಡಿದರೂ, ಆ ನಿರ್ದಿಷ್ಟ ವಿಷಯದ ಮೇಲಿನ 66% ರಷ್ಟು ನಿಯತಕಾಲಿಕ ಲೇಖನಗಳು ಸಂಶೋಧಕನ ಗಣನೆಗೆ ಬಂದಿರುವುದಿಲ್ಲ.

ನಿಯತಕಾಲಿಕಗಳಲ್ಲಿ ಎಲ್ಲ ವಿಚಾರಗಳನ್ನೂ ಪ್ರಕಟಿಸಲಾಗುವುದಿಲ್ಲ. ಏಕೆಂದರೆ ನಿಯತ ಕಾಲಿಕಗಳಲ್ಲಿ ಪ್ರಕಟವಾದ ವಿಚಾರಗಳು ರಹಸ್ಯವಾಗಿರುವುದಿಲ್ಲ. ಅನೇಕ ಸಂಶೋಧನ ವಿಚಾರಗಳನ್ನು ದೇಶಗಳ ರಕ್ಷಣೆಯ ದೃಷ್ಟಿಯಿಂದ ಬಹಿರಂಗಪಡಿಸುವುದಿಲ್ಲ. ಅಂಥ ಸಂಶೋಧನ ವಿಚಾರಗಳನ್ನು ಕೆಲವೇ ಜನರಿಗೆ ತಿಳಿಸಲು ಬೇರೊಂದು ಹೊಸ ಮಾಧ್ಯಮ ಬೇಕಾಗುತ್ತದೆ. ಈ ಹೊಸ ಮಾಧ್ಯಮದ ಆವಶ್ಯಕತೆ ಮೊದಲನೆಯ ಮತ್ತು ಎರಡನೆಯ ಮಹಾ ಯುದ್ಧಗಳ ಕಾಲದಲ್ಲಿ ವಿಶೇಷವಾಗಿ ಕಂಡುಬಂತು.

ಈ ಎಲ್ಲ ಕಾರಣಗಳಿಂದಾಗಿ ಸಂಶೋಧನ ಮತ್ತು ತಾಂತ್ರಿಕ ವರದಿಗಳ ರೂಪದಲ್ಲಿ ಒಂದು ಹೊಸ ಮಾಹಿತಿ ಪರಿವಹನ ಮಾಧ್ಯಮ ರೂಪಿತವಾಯಿತು.

ಸಂಶೋಧನ ವರದಿಗಳನ್ನು ತಯಾರಿಸಿ ವಿಜ್ಞಾನ ಜಗತ್ತಿನ ತಮ್ಮ ಸಹೋದ್ಯೋಗಿಗಳೊಂದಿಗೆ ವಿಚಾರ ವಿನಿಮಯವನ್ನು ವಿಜ್ಞಾನಿಗಳು ಬಹಳ ಹಿಂದಿನಿಂದಲೂ ಮಾಡುತ್ತ ಬಂದಿದ್ದಾರೆ. ಆದರೆ ಇಂದಿನ ಸಂಶೋಧನ ವರದಿಗಳು ಸಂಸ್ಥೆಗಳಿಂದ ಹೊರತರಲ್ಪಟ್ಟು ವ್ಯಾಪಕವಾಗಿ ಮಾಹಿತಿ ಪರಿವಹನ ಮಾಡಲು ಸೂಕ್ತವಾಗಿವೆ. ಸಂಶೋಧನ ವರದಿಗಳ ಬೆಳವಣಿಗೆಯನ್ನು ಗಮನಿಸಿದರೆ ಅವು ಸರ್ಕಾರಗಳ ಸಂಶೋಧನ ವೆಚ್ಚಕ್ಕೆ ಸಮಾನಾಂತರವಾಗಿ ಬೆಳೆಯುತ್ತಿರುವುದನ್ನು ಕಾಣಬಹುದು. ಸರ್ಕಾರದ ಆದೇಶದ ಮೇಲೆ ಕೈಗೊಂಡ ಸಂಶೋಧನೆಗಳ ಬಗ್ಗೆ

ಕಾಲಕಾಲಕ್ಕೆ ವರದಿಗಳನ್ನು ಸರ್ಕಾರ ಅಪೇಕ್ಷಿಸುವುದು ಸಹಜ. ಈ ರೀತಿಯ ವರದಿಗಳಿಗೆ ಈ ಮಾಧ್ಯಮ ಅತಿಸೂಕ್ತ. ಇದಕ್ಕೆ ಕಾರಣಗಳಿವು :

1 ನಿಯತಕಾಲಿಕಗಳಲ್ಲಿ ಈ ವರದಿಗಳು ತ್ವರಿತವಾಗಿ ಪ್ರಕಟವಾಗುವುದಿಲ್ಲ.

2 ಈ ವರದಿಗಳು ಕೆಲವೇ ಸಂಶೋಧಕರಿಗೆ ಆಸಕ್ತಿ ಉಂಟುಮಾಡುವಂಥವಾಗಿರುತ್ತವೆ.

3 ಈ ವರದಿಗಳಲ್ಲಿರುವ ಮಾಹಿತಿಯನ್ನು ಅನೇಕ ವೇಳೆ ಬಹಿರಂಗಪಡಿಸಲು ಸರ್ಕಾರ ಇಚ್ಛಿಸುವುದಿಲ್ಲ.

ಈ ಶತಮಾನದ ವೈಜ್ಞಾನಿಕ ಸಾಹಿತ್ಯದಲ್ಲಿ ಸಂಶೋಧನ ವರದಿಗಳ ಪಾತ್ರ ಹಿರಿದು. 1963ರಲ್ಲಿ ಪ್ರಕಟವಾದ ವೀನ್‌ಬರ್ಗ್ ವರದಿಯ ಪ್ರಕಾರ ಅಮೆರಿಕ ಸಂಯುಕ್ತ ಸಂಸ್ಥಾನ ವೊಂದರಲ್ಲೇ ಪ್ರತಿವರ್ಷ ಸುಮಾರು 1,00,000 ಸಂಶೋಧನ ವರದಿಗಳು ಹೊರಬರುತ್ತಿವೆ. ಕೆಲವು ವೈಜ್ಞಾನಿಕ ವಿಷಯಗಳು (ಉದಾ : ವಾಯುಯಾನ ತಂತ್ರಜ್ಞಾನ, ಬಾಹ್ಯಾಕಾಶ ತಂತ್ರ ಜ್ಞಾನ, ಪರಮಾಣು ತಂತ್ರಜ್ಞಾನ). ತಮ್ಮ ಬೆಳವಣಿಗೆಗೆ ಬಹುಮಟ್ಟಿಗೆ ಸಂಶೋಧನ ವರದಿ ಗಳಲ್ಲಿರುವ ಮಾಹಿತಿಯನ್ನೇ ಅವಲಂಬಿಸಿವೆ.

ಇಷ್ಟಾದರೂ ಇವುಗಳಲ್ಲಿ ನ್ಯೂನತೆಗಳಿಲ್ಲವೆಂದಲ್ಲ. ಇವುಗಳಲ್ಲಿ ಮುಖ್ಯವಾಗಿ :

1 ಸಂಶೋಧನ ವರದಿಗಳು ಪರಿಷ್ಕೃತವಾಗಿರುವುದಿಲ್ಲ.

2 ಅನೇಕ ಸಂಶೋಧನ ವರದಿಗಳು ಕೆಲವೇ ಪ್ರತಿಗಳಲ್ಲಿ ಹೊರಬರುತ್ತವೆ.

ಈ ಎರಡು ಕಾರಣಗಳಿಂದ ಅನೇಕ ಸಂಶೋಧಕರು ಸಂಶೋಧನವರದಿಗಳಲ್ಲಿರುವ ಸಾಹಿತ್ಯವನ್ನು ಅಧ್ಯಯನಮಾಡಲು ಸಾಧ್ಯವಾಗುವುದಿಲ್ಲ.

ಮೇಲೆ ಹೇಳಿದ ಮಾಧ್ಯಮಗಳೇ ಅಲ್ಲದೆ ಇಂದಿನ ಪ್ರಪಂಚದಲ್ಲಿ ಇನ್ನೂ ಅನೇಕ ಮಾಧ್ಯ ಮಗಳ ಮೂಲಕ ಮಾಹಿತಿ ಪರಿವಹನ ನಡೆಯುತ್ತಿದೆ.

A) ವಿಚಾರಗೋಷ್ಠಿಗಳ ವರದಿಗಳು

ವಿಚಾರಗೋಷ್ಠಿಗಳಲ್ಲಿ ಸಂಶೋಧಕರು ಸ್ವತಃ ಭಾಗವಹಿಸುವುದರಿಂದ ಇವು ಅತಿ ಮುಖ್ಯ ಮಾಹಿತಿ ಪರಿವಾಹಕಗಳಾಗಬಲ್ಲವು. ಗೋಷ್ಠಿಯಲ್ಲಿ ಮಂಡಿಸಿದ ಲೇಖನಗಳು ಹಾಗೂ ಗೋಷ್ಠಿಯ ಕಾರ್ಯಕಲಾಪಗಳ ವರದಿಗಳು ಸಾಮಾನ್ಯವಾಗಿ ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತವೆ.

B) ಪ್ರೌಢ ಪ್ರಬಂಧಗಳು

ಸ್ನಾತಕೋತ್ತರ ಅಥವಾ ಡಾಕ್ಟೊರಲ್ ಪದವಿಗಳಿಗಾಗಿ ಒಪ್ಪಿಸಿದ ಪ್ರೌಢಪ್ರಬಂಧಗಳಲ್ಲೂ ಸಂಶೋಧನ ವಿಚಾರಗಳಿರುತ್ತವೆ. ಈ ವಿಚಾರಗಳು ಸಾಮಾನ್ಯವಾಗಿ ನಿಯತಕಾಲಿಕಗಳಲ್ಲಿ ಪ್ರಕಟವಾಗಿರುವುದಿಲ್ಲವಾದ್ದರಿಂದ ಇವು ಸಂಶೋಧಕರಿಗೆ ಮಾಹಿತಿಯನ್ನು ಒದಗಿಸಬಲ್ಲುವು.

ಸಂಶೋಧಕರು ತಮ್ಮ ಕ್ಷೇತ್ರದ ಸಹೋದ್ಯೋಗಿಗಳೊಂದಿಗೆ ಪತ್ರವ್ಯವಹಾರ ಇಟ್ಟು ಕೊಂಡಿರುವುದು ಸಹಜ. ತಮ್ಮ ಲೇಖನಗಳ ಪ್ರತಿಗಳನ್ನು ಇತರ ಸಂಶೋಧಕರಿಗೆ ಲೇಖನ ಪ್ರಕಟವಾಗುವುದಕ್ಕೆ ಮೊದಲೇ ಕಳುಹಿಸುವುದು ಅಸಹಜವೇನಲ್ಲ. ಈ ಲೇಖನಗಳಲ್ಲಿ ಕೆಲವಾ

ದರೂ ಪ್ರಕಟವಾಗದೇ ಹೋಗುವ ಸಾಧ್ಯತೆಯಿದೆ. ಆ ಮಟ್ಟಿಗೆ ಈ ಪ್ರಕಟನ ಪೂರ್ವ ಪ್ರತಿಗಳು (ಪ್ರೀ ಪ್ರಿಂಟ್ಸ್) ಮಾಹಿತಿ ಪರಿವಾಹಕಗಳಾಗಿ ಕೆಲಸಮಾಡುತ್ತವೆ.

ಇವೇ ಅಲ್ಲದೆ ಮಾನಕಗಳ (standard) ಹಾಗೂ ಏಕಸ್ವಗಳ (patents) ವಿವರಣ ಗ್ರಂಥಗಳ ಮೂಲಕವೂ ಮಾಹಿತಿ ಪರಿವಹನ ನಡೆಯುತ್ತದೆ.

ಒಟ್ಟಿನಲ್ಲಿ ಇಂದಿನ ಮೂಲ ಮಾಹಿತಿ ಪರಿವಹನ ವ್ಯವಸ್ಥೆ ಮೇಲೆ ಹೇಳಿದ ಅನೇಕ ಮಾಧ್ಯಮಗಳನ್ನು ಒಳಗೊಂಡಿದೆ. ಅವನ್ನು ಸಮಗ್ರವಾಗಿ ಪರಿಶೀಲಿಸಿದರೆ ಕೆಳಗಿನ ಕೆಲವು ಅಂಶಗಳು ವಿದಿತವಾಗುತ್ತವೆ.

ಗಾತ್ರ : ಮೂಲಸಾಹಿತ್ಯದ ಗಾತ್ರ ಬಹಳ ದೊಡ್ಡದು. ಆದ್ದರಿಂದ ಯಾವುದೇ ಸಂಶೋಧಕ ತನ್ನ ನಿರ್ದಿಷ್ಟ ವಿಷಯದ ಮೇಲಿನ ಸಾಹಿತ್ಯದ ಸಂಪೂರ್ಣ ಅಧ್ಯಯನ ಮಾಡುವುದು ಕಷ್ಟಕರವಾದ ಕೆಲಸ. ವಿಶ್ವದ ಜನಸಂಖ್ಯೆ ವರ್ಷಕ್ಕೆ 2%ರಷ್ಟು ಬೆಳೆಯುತ್ತಿದ್ದರೆ ಮೂಲಸಾಹಿತ್ಯ ವರ್ಷಕ್ಕೆ 5–10% ರಷ್ಟು ಬೆಳೆಯುತ್ತಿದೆ.

ನಿಯತಕಾಲಿಕಗಳ ಸಂಖ್ಯೆ ಈ ಮೊದಲೇ ಹೇಳಿದಂತೆ ಹೆಚ್ಚುತ್ತಿರುವುದಲ್ಲದೆ ನಿಯತಕಾಲಿಕಗಳ ಗಾತ್ರ ಬೆಳೆಯುತ್ತಿರುವುದನ್ನು ಕೆಳಗಿನ ವಿವರಣಪಟ್ಟಿಯಿಂದ ಮನಗಾಣಬಹುದು.

ನಿಯತಕಾಲಿಕದ ಹೆಸರು	ಒಟ್ಟು ಪುಟಗಳ ಸಂಖ್ಯೆ	
	1920	1959
Physical Review	1,157 ಪುಟಗಳು	6,837 ಪುಟಗಳು
Journal of American Chemical Society	2,716 ಪುಟಗಳು	6,601 ಪುಟಗಳು

ಇದನ್ನು 'ಮಾಹಿತಿ ಸ್ಫೋಟ' ಎಂದು ಕರೆದಿರುವುದನ್ನು ಇಲ್ಲಿ ನೆನೆಸಬಹುದು. ಇದರ ಬಗ್ಗೆ ಅನೇಕ ವಿಜ್ಞಾನಿಗಳು ಹಾಗೂ ಕೆಲವು ವೈಜ್ಞಾನಿಕ ಸಂಸ್ಥೆಗಳ ಅಭಿಪ್ರಾಯ ಈ ರೀತಿ ಇದೆ :

ಇಂದಿನ ಮೂಲಸಾಹಿತ್ಯದಲ್ಲಿ ಅನುಪಯುಕ್ತ ವಿಷಯ ಬಹಳಷ್ಟಿದೆ. ಆದ್ದರಿಂದ 'ಮಾಹಿತಿ ಸ್ಫೋಟ' ಕ್ಕಿಂತ ಹೆಚ್ಚಾಗಿ 'ಸಾಹಿತ್ಯ ಸ್ಫೋಟ'ವನ್ನು ಕಾಣಬಹುದು. ಅಮೆರಿಕದ ಫಿಲಡೆಲ್ಫಿಯದಲ್ಲಿರುವ ವೈಜ್ಞಾನಿಕ ಮಾಹಿತಿ ಸಂಸ್ಥೆಯ ಪ್ರಕಾರ ವಿಜ್ಞಾನವಿಷಯಗಳಲ್ಲಿಯ ಹೆಚ್ಚಿನ ಉಪಯುಕ್ತ ಸಾಹಿತ್ಯ ಕೇವಲ 2,500 ನಿಯತಕಾಲಿಕಗಳಲ್ಲಿ ಪ್ರಕಟವಾಗುತ್ತದೆ. ಈ ಅಂಕೆಗಳನ್ನು ಒಪ್ಪದಿದ್ದರೂ ಪ್ರಕಟಿತಸಾಹಿತ್ಯದಲ್ಲಿ ಸಾಕಷ್ಟು ಅನುಪಯುಕ್ತ ಸಾಹಿತ್ಯ ಇದೆಯೆಂಬುದನ್ನು ಒಪ್ಪಲೇಬೇಕು. ಅನುಪಯುಕ್ತ ಸಾಹಿತ್ಯ ಹೆಚ್ಚಿನ ಪ್ರಮಾಣದಲ್ಲಿದ್ದರೆ ಸಂಶೋಧಕರು ವಾಸ್ತವವಾಗಿ ಅಧ್ಯಯನ ಮಾಡಬೇಕಾದ ಸಾಹಿತ್ಯದ ಪರಿಮಾಣ ಸಾಕಷ್ಟು ಕಡಿಮೆಯಾಗುತ್ತದೆ. ಇದರಿಂದ ಸಾಹಿತ್ಯ ಸ್ಫೋಟದ ಪ್ರಭಾವ ಕಡಿಮೆಯಾಗುತ್ತದೆಯೋ ಎಂಬ ಪ್ರಶ್ನೆ ಏಳುವುದು ಸ್ವಾಭಾವಿಕ. ಸಂಶೋಧಕರು ಒಂದು ಲೇಖನದ ಉಪಯುಕ್ತತೆ ಅಥವಾ ಅನುಪಯುಕ್ತತೆಯನ್ನು ನಿರ್ಧರಿಸಬೇಕಾದರೆ ಅದರ ಅಧ್ಯಯನ ಆವಶ್ಯಕ ಎಂಬುದನ್ನು ಮನ

ಗಂಡರೆ ಸಾಹಿತ್ಯ ಸ್ಫೋಟದ ಪ್ರಭಾವ ಏನೇನೂ ಕಡಿಮೆಯಾಗಲಾರದು ಎಂದು ತಿಳಿಯುತ್ತದೆ.


2 **ವೈವಿಧ್ಯ** : ಸಾಹಿತ್ಯದ ಗಾತ್ರವೊಂದೇ ಮಾಹಿತಿ ಪರಿವಹನಕಾರ್ಯಕ್ಕೆ ಹೆಚ್ಚಿನ ತೊಂದರೆಯನ್ನುಂಟುಮಾಡದು. ಉದಾಹರಣೆಗೆ ಈ ಎಲ್ಲ ಸಾಹಿತ್ಯವೂ ನಿಯತಕಾಲಿಕ ಲೇಖನಗಳ ರೂಪದಲ್ಲೇ ಹೊರಬಂದರೆ ಸಂಶೋಧಕರಿಗೆ ಇವನ್ನು ಗುರುತಿಸಿ ಅಧ್ಯಯನ ಮಾಡುವುದು ಅಷ್ಟೇನೂ ಕಷ್ಟವಾಗಲಾರದು. ಆದರೆ ಈ ಮೊದಲೇ ಹೇಳಿದಂತೆ ಸಾಹಿತ್ಯ (ವಿಶೇಷವಾಗಿ ವಿಜ್ಞಾನ ಸಾಹಿತ್ಯ) ವಿವಿಧ ಮಾಧ್ಯಮಗಳಲ್ಲಿ ಹೊರಬರುತ್ತಿದೆಯಾದ್ದರಿಂದ ಅದನ್ನು ಗುರುತಿಸಿ ಅಧ್ಯಯನ ಮಾಡಬೇಕಾದ ಲೇಖನಗಳನ್ನು ಆರಿಸುವುದು ಅತ್ಯಂತ ಕಷ್ಟದ ಕೆಲಸವಾಗಿದೆ.

3 **ಭಾಷೆ** : ವಿಜ್ಞಾನ ಹಾಗೂ ಇತರ ವಿಷಯಗಳ ಸಾಹಿತ್ಯ ವಿಶ್ವದ ವಿವಿಧಭಾಷೆಗಳಲ್ಲಿ ಹೊರಬರುತ್ತಿದೆ. ಈ ಶತಮಾನದ ಆರಂಭದ ವರೆಗೆ ಬಹುಮಟ್ಟಿನ ಸಾಹಿತ್ಯ ಆಂಗ್ಲ ಭಾಷೆಯಲ್ಲೇ ಪ್ರಕಟವಾಗುತ್ತಿದ್ದರೂ, ಕಳೆದ 70 ವರ್ಷಗಳಿಂದ, ವಿಶೇಷವಾಗಿ ಎರಡನೆಯ ಮಹಾಯುದ್ಧದ ಅನಂತರ, ಉಪಯುಕ್ತಸಾಹಿತ್ಯ ರಷ್ಯನ್, ಚೀನೀ, ಜಪಾನೀ, ಫ್ರೆಂಚ್, ಜರ್ಮನ್ ಹಾಗೂ ಸ್ಪಾನಿಷ್ ಭಾಷೆಗಳನ್ನೊಳಗೊಂಡು ಸುಮಾರು ಐವತ್ತು ಭಾಷೆಗಳಲ್ಲಿ ಹೊರಬರುತ್ತಿದೆ. ಹೆಚ್ಚಿನ ಸಂಶೋಧಕರು ಎರಡು ಅಥವಾ ಮೂರುಭಾಷೆಗಳಲ್ಲಿ ಮಾತ್ರ ಪರಿಣತಿ ಪಡೆದಿರುತ್ತಾರೆ. ಆದ್ದರಿಂದ ತಮ್ಮ ವಿಶಿಷ್ಟ ವಿಷಯದ ಮೇಲಿನ ಸಾಹಿತ್ಯದ ಸಂಪೂರ್ಣ ಅಧ್ಯಯನ ಕಷ್ಟಸಾಧ್ಯವಾಗುತ್ತದೆ. ವಿಶ್ವಾದ್ಯಂತ ಅನೇಕ ಸಂಸ್ಥೆಗಳು ಭಾಷಾಂತರ ಕಾರ್ಯದಲ್ಲಿ ನಿರತವಾಗಿದ್ದು ಕೋರಿಕೆಯ ಮೇರೆಗೆ ಲೇಖನಗಳ ಭಾಷಾಂತರಗಳನ್ನೊದಗಿಸಿದರೂ ಪ್ರಥಮತಃ ವಿವಿಧ ಭಾಷೆಗಳಲ್ಲಿ ಉಪಯುಕ್ತ ಲೇಖನಗಳನ್ನು ಗುರುತಿಸುವುದು ಅವಶ್ಯವಾಗುತ್ತದೆ.

4 **ಚದರಿಕೆ ಮತ್ತು ಅವಲಂಬನೆ** : ವಿಜ್ಞಾನ ಸಾಹಿತ್ಯದ ಚದರಿಕೆಯ ಬಗ್ಗೆ ಈ ಮೊದಲೇ ಹೇಳಿದೆ. ಈ ಕಾರಣದಿಂದಾಗಿ ಒಂದು ವಿಶಿಷ್ಟ ವಿಷಯದ ಮೇಲಿನ ಎಲ್ಲ ಉಪಯುಕ್ತ ಸಾಹಿತ್ಯವನ್ನು ಗುರುತಿಸುವುದು ಕಷ್ಟಕರವಾದ ಕೆಲಸ. ಯಾವುದೇ ಸಂಶೋಧನೆಗೆ ಅದಕ್ಕೆ ಸಂಬಂಧಿಸಿದ ಹಿಂದೆ ಪ್ರಕಟವಾದ ಸಂಶೋಧನ ಸಾಹಿತ್ಯದ ಅಧ್ಯಯನ ಅತ್ಯಾವಶ್ಯಕ. ಅಪೂರ್ಣ ಅಧ್ಯಯನ ಸಂಶೋಧನೆಯ ಮಟ್ಟದ ಮೇಲೆ ಪ್ರಭಾವ ಬೀರುವುದೇ ಅಲ್ಲದೆ, ಹಿಂದೆ ನಡೆದ ಸಂಶೋಧನೆಯನ್ನೇ ಅಪಾರ ಹಣ ವ್ಯಯಿಸಿ ಪುನರಾವರ್ತಿಸುವ ಸಾಧ್ಯತೆಗೆ ಎಡೆಕೊಡುತ್ತದೆ. ಎಲ್ಲ ಸಂಶೋಧನೆಗಳೂ ಕ್ರಾಂತಿಕಾರಕ ಬದಲಾವಣೆಗಳನ್ನುಂಟು ಮಾಡುವಂಥವಾಗಿರುವುದಿಲ್ಲ. ಆದರೆ ಅನೇಕ ಸಂಶೋಧನ ಲೇಖನಗಳು ಒಟ್ಟಾಗಿ ಪರಿಣಾಮಕಾರಿಯಾಗಬಲ್ಲುವು.

ಮೇಲೆ ಹೇಳಿದ ಎಲ್ಲ ಕಾರಣಗಳಿಂದ ಮೂಲ ಮಾಹಿತಿ ಪರಿವಹನ ವ್ಯವಸ್ಥೆಯ ಪರಿಣಾಮಕಾರೀ ಕಾರ್ಯನಿರ್ವಹಣೆಗೆ ಅನೇಕ ಅಡಚಣೆಗಳುಂಟಾಗುತ್ತವೆ. ಈ ಅಡಚಣೆಗಳನ್ನು ಈ ರೀತಿ ನಮೂದಿಸಬಹುದು :

ಮಾಹಿತಿ ಪರಿವಹನಕ್ಕೆ ಅಡೆತಡೆಗಳು[3]



ಮೂಲವ್ಯವಸ್ಥೆಯ ಈ ಎಲ್ಲ ನ್ಯೂನತೆಗಳ ಕಾರಣ ಒಂದು ದ್ವಿತೀಯಕ ವ್ಯವಸ್ಥೆಯ ಅವಶ್ಯಕತೆ ಕಂಡುಬಂದಿತು. ಈ ದ್ವಿತೀಯಕ ಮಾಹಿತಿ ಪರಿವಹನ ವ್ಯವಸ್ಥೆಯ ಆಧಾರ ಪ್ರಲೇಖನ. ಕಾರ್ಯ ಈ ಅಡೆತಡೆಗಳನ್ನು ನಿವಾರಿಸುವಲ್ಲಿ ಪ್ರಲೇಖನ ಎಷ್ಟರಮಟ್ಟಿಗೆ ಸಹಕಾರಿಯಾಗಬಲ್ಲದೆಂಬುದನ್ನು ಇನ್ನು ಮುಂದೆ ಪರಿಶೀಲಿಸೋಣ.

ಮಾಹಿತಿಯನ್ನು ಗುರುತಿಸಿ, ವ್ಯವಸ್ಥೆಗೊಳಿಸಿ ಪ್ರಸರಿಸುವ ವಿಧಾನಕ್ಕೆ ಪ್ರಲೇಖನ ಎಂದು ಹೆಸರು.

ಅಂದರೆ ಒಂದು ವಿಷಯದ ಮೇಲಿನ ವಿವಿಧ ಗ್ರಂಥಗಳಲ್ಲಿರುವ ಮಾಹಿತಿಯನ್ನು ಗುರುತಿಸಿ ಆ ಎಲ್ಲ ಮಾಹಿತಿಯನ್ನು ಸೂಕ್ತ ಮಾರ್ಗದಲ್ಲಿ ಒದಗಿಸುವುದು ಪ್ರಲೇಖನದ ಮುಖ್ಯ ಉದ್ದೇಶ. ಪ್ರಲೇಖನ ಕೆಳಗೆ ಸೂಚಿಸಿರುವಂತೆ ವಿವಿಧ ಮಟ್ಟಗಳಲ್ಲಿ ನಡೆಯಬಹುದು :

1. ಅಂತರರಾಷ್ಟ್ರೀಯ ಮಟ್ಟ
2. ರಾಷ್ಟ್ರೀಯ ಮಟ್ಟ
3. ಪ್ರಾದೇಶಿಕ ಮಟ್ಟ
4. ಸ್ಥಳೀಯ ಮಟ್ಟ

ಪ್ರಲೇಖನಕಾರ್ಯ ಒಂದು ಪ್ರಲೇಖನ ಸೇವೆಯಲ್ಲಿ ಅಂತ್ಯಗೊಳ್ಳುತ್ತದೆ. ಪ್ರಲೇಖನ ಸೇವೆ ಸಾಮಾನ್ಯ ಪ್ರಲೇಖನ ಪಟ್ಟಿ, ಸಾಹಿತ್ಯ ಸಮೀಕ್ಷೆ ಮತ್ತು ಪ್ರವೃತ್ತಿಯ ವರದಿ ಅಥವಾ ಬೇರಾವುದೇ ಸೂಕ್ತರೂಪವನ್ನು ತಳೆಯಬಹುದು.

ಅಂತರರಾಷ್ಟ್ರೀಯ ಪ್ರಲೇಖನ ಸೇವೆಗಳ ಉದಾಹರಣೆಗಳಾಗಿ 'ಕೆಮಿಕಲ್ ಅಬ್‌ಸ್ಟ್ರಾಕ್ಟ್ಸ್' ಹಾಗೂ 'ಇಂಡೆಕ್ಸ್ ಮೆಡಿಕಸ್'ಗಳನ್ನು ಹೇಳಬಹುದು.

ಪ್ರಲೇಖನ ಸೇವೆಗಳು ತಮ್ಮ ಕ್ಷೇತ್ರದಲ್ಲಿ ವಿಶ್ವಾದ್ಯಂತ ಪ್ರಕಟವಾದ ವಿವಿಧ ಗ್ರಂಥಗಳನ್ನು ಗುರುತಿಸಿ ಅವುಗಳ ವ್ಯವಸ್ಥಿತ ಸೂಚಿಯನ್ನು ತಯಾರಿಸಿ ನಿಯತಕಾಲಿಕಗಳ ರೂಪದಲ್ಲಿ ಹೊರತರುತ್ತವೆ. ವಿವಿಧ ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಲೇಖನಸೇವೆಗಳ ವ್ಯವಸ್ಥೆಗಳಲ್ಲಿ ಹೆಚ್ಚಿನ ವ್ಯತ್ಯಾಸ ಕಾಣಲಾರದಾದರೂ ಅವು ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ವ್ಯತ್ಯಾಸಗಳನ್ನು ಹೊಂದಿರುತ್ತವೆ.

---

[3] Neelameghan. A., Libraries, Social Change and Communication of Ideas: *Library Science with a slant to Documentation* 10 (1) 1973

ಪೂರಕಮಾಹಿತಿಪರಿವಹನ ವ್ಯವಸ್ಥೆಯ ಉಪಯುಕ್ತತೆಯನ್ನು ಇನ್ನು ಪರಿಶೀಲಿಸೋಣ.

1 **ತ್ವರಿತಮಾಹಿತಿ ಪರಿವಹನ** : ತ್ವರಿತಮಾಹಿತಿ ಪರಿವಹನ ಸಂಪೂರ್ಣವಾಗಿ ಮೂಲಪರಿವಹನ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಪೂರಕಪರಿವಹನ ವ್ಯವಸ್ಥೆ ಮಾಹಿತಿ ಪ್ರಕಟವಾದ ಅನಂತರ ಅಥವಾ ಮಾಹಿತಿ ಪ್ರಕಟಣೆಗೆ ಸಿದ್ಧವಾದ ಅನಂತರ ಕಾರ್ಯನಿರತವಾಗಲು ಸಾಧ್ಯವಾದ್ದರಿಂದ ಈ ದಿಶೆಯಲ್ಲಿ ಅದು ಹೆಚ್ಚಿನ ಸಹಾಯ ಮಾಡಲು ಸಾಧ್ಯವಾಗಲಾರದು. ಆದರೆ ಪೂರಕ ಪರಿವಹನ ವ್ಯವಸ್ಥೆ ಪ್ರಕಟಿತ ಮಾಹಿತಿಯ ಉಪಯೋಗವನ್ನು ತ್ವರಿತಗೊಳಿಸ ಬಲ್ಲದು. ಈ ಪೂರಕ ಪರಿವಹನ ವ್ಯವಸ್ಥೆಯಿಂದ ಮಾಹಿತಿಯನ್ನು ಗುರುತಿಸುವ ಕೆಲಸ ಹಗುರ ವಾಗುತ್ತದೆ ಮತ್ತು ಆ ಕಾರಣ ಸಂಶೋಧಕರು ಮಾಹಿತಿಯೊಡನೆ ಸಂಪರ್ಕಕ್ಕೆ ಬರುವ ಸಾಧ್ಯತೆ ಹೆಚ್ಚಾಗುತ್ತದೆ. ಅಸಮರ್ಪಕ ಹಾಗೂ ಅಪೂರ್ಣ ಪ್ರಲೇಖನದಿಂದಾಗಿ ಮೆಂಡೆಲನ ಅನುವಂಶಿಕತಾ ಸಿದ್ಧಾಂತ ಬೆಳಕಿಗೆ ಬರುವುದು 35 ವರ್ಷಗಳಷ್ಟು ತಡವಾಯಿತೆಂಬುದನ್ನು ಇಲ್ಲಿ ನೆನಯ ಬಹುದು.[4] ಈ ಕಾರಣದಿಂದಾಗಿ ಜೀವರಸಾಯನ ಶಾಸ್ತ್ರದ ಅನೇಕ ಮಹತ್ವದ ಬೆಳವಣಿಗೆಗಳು ಎಷ್ಟು ತಡವಾಗಿರಬಹುದೆಂಬುದನ್ನು ಊಹಿಸುವುದು ಕಷ್ಟವಾಗಲಾರದು. ವಿಜ್ಞಾನದ ಇತಿಹಾಸದಲ್ಲಿ ಇಂಥ ಅನೇಕ ಬೆಳವಣಿಗೆಗಳು ತಡವಾಗಿ ಬೆಳಕಿಗೆ ಬಂದು, ಅಥವಾ ಬೆಳಕಿಗೆ ಬರದೆ, ಅವುಗಳ ಉಪಯೋಗವನ್ನು ಈ ಜಗತ್ತು ಪಡೆಯದೆ ಹೋಗಿರಬಹುದು.

2 **ಭಾಷೆ** : ಪ್ರಲೇಖನ ಸೇವೆಗಳು ವಿವಿಧ ಭಾಷೆಗಳಲ್ಲಿ ಪ್ರಕಟವಾದ ಮಾಹಿತಿಯ ಬಗ್ಗೆ ಒಂದು ಭಾಷೆಯಲ್ಲಿ ತಿಳಿವಳಿಕೆಯನ್ನು ಕೊಡುತ್ತವೆ. ಉದಾಹರಣೆಗೆ 'ಫಿಸಿಕ್ಸ್ ಆಬ್‌ಸ್ಟ್ರಾಕ್ಟ್ಸ್' ಎಂಬುದು ವಿಶ್ವದ ವಿವಿಧ ಭಾಷೆಗಳಲ್ಲಿ ಭೌತಶಾಸ್ತ್ರದ ವಿವಿಧ ಕ್ಷೇತ್ರಗಳನ್ನು ಕುರಿತು ಪ್ರಕಟವಾದ ಗ್ರಂಥಗಳ ಬಗ್ಗೆ ಆಂಗ್ಲಭಾಷೆಯಲ್ಲಿ ಮಾಹಿತಿಯನ್ನೊದಗಿಸುತ್ತದೆ. ಅಂದರೆ ಆಂಗ್ಲಭಾಷೆಯನ್ನು ತಿಳಿದ ಒಬ್ಬ ಭೌತವಿಜ್ಞಾನಿ ವಿವಿಧ ಭಾಷೆಗಳಲ್ಲಿ ತನ್ನ ಕ್ಷೇತ್ರದಲ್ಲಿ ಪ್ರಕಟವಾಗಿರುವ ಸಂಶೋಧನ ಗ್ರಂಥಗಳನ್ನು ಈ ಪ್ರಲೇಖನಸೇವೆಯ ಸಹಾಯದಿಂದ ಗುರುತಿಸಬಹುದು. ಕೆಲವು ಪ್ರಲೇಖನ ಸೇವೆಗಳು ಒದಗಿಸುವ ಮಾಹಿತಿ ಮೂಲಕ ಹಾಗೂ ಮೂಲ ಲೇಖನದ ಸಾರಾಂಶ ಸಾಕಷ್ಟಿದ್ದು ಅನೇಕವೇಳೆ ಮೂಲಸಾಹಿತ್ಯವನ್ನು ನೋಡುವ ಹಾಗೂ ಅಧ್ಯಯಿಸುವ ಆವಶ್ಯಕತೆಯೇ ಒದಗುವುದಿಲ್ಲ.

3 **ಗಾತ್ರ ಹಾಗೂ ಅತಿರಿಕ್ತ ಸಾಹಿತ್ಯ** : ಸಂಶೋಧನ ಗ್ರಂಥಗಳ ಸಂಖ್ಯೆ ಬಹಳ ಹೆಚ್ಚಿರುವುದರಿಂದ ತನ್ನ ವಿಶಿಷ್ಟ ವಿಷಯದ ಮೇಲಿನ ಎಲ್ಲ ಸಾಹಿತ್ಯವನ್ನು ಅಧ್ಯಯಿಸುವುದು ಸಂಶೋಧಕರಿಗೆ ಕಷ್ಟದ ಕೆಲಸವಾಗುತ್ತದೆ. ಪ್ರಲೇಖನಸೇವೆಗಳು ಸಂಶೋಧಕನಿಗೆ ಬೇಕಾದ ಉಪಯುಕ್ತ ಗ್ರಂಥಗಳ ಆಯ್ಕೆಯಲ್ಲಿ ಅತಿಹೆಚ್ಚಿನ ಸಹಾಯ ನೀಡುತ್ತವೆ. ಇದೇ ಅಲ್ಲದೆ ಪ್ರಲೇಖನಕಾರ್ಯದಲ್ಲಿ ನುರಿತವರು ಮೂಲಸಾಹಿತ್ಯವನ್ನು ಪರಿಶೀಲಿಸಿ ಸಂಶೋಧಕರಿಗೆ

---

[4] Pillard A. F. C., The disordered state of bibliography and indications of its effects upon scientific and technical progress; *Proc. British Society for International Bibliography*, 4 (1942), p 41–52

ಉಪಯುಕ್ತವೆನಿಸುವ ಗ್ರಂಥಗಳ ಬಗ್ಗೆ ಮಾಹಿತಿಯನ್ನೊದಗಿಸುವ ಪ್ರಲೇಖನ ಸೇವೆಗಳು ಅನೇಕವಿವೆ. ಸಂಶೋಧಕರ ಸಮಯ ವ್ಯರ್ಥವಾಗುವ ಸಂಭವವನ್ನು ಕಡಿಮೆಮಾಡುವಲ್ಲಿ ಪ್ರಲೇಖನ ಸೇವೆಗಳು ಪ್ರಮುಖ ಪಾತ್ರವಹಿಸುತ್ತವೆ.

4 **ಚದರಿಕೆ :** ಮೂಲಸಾಹಿತ್ಯದ ಈ ಗುಣದಿಂದಾಗಿ ಸಂಶೋಧಕರು ಅನೇಕ ಉಪಯುಕ್ತ ಲೇಖನಗಳನ್ನು ಗುರುತಿಸದೇ ಹೋಗುವ ಸಾಧ್ಯತೆ ಇದೆ. ಪ್ರಲೇಖನಸೇವೆಗಳು ವಿವಿಧ ನಿಯತಕಾಲಿಕಗಳಲ್ಲಿ ಪ್ರಕಟವಾದ ಹಾಗೂ ಇತರ ಲೇಖನಗಳ ಬಗ್ಗೆ ಒಂದೇ ಕಡೆಮಾಹಿತಿಯನ್ನೊದಗಿಸಿ ಮೂಲಸಾಹಿತ್ಯ ವ್ಯವಸ್ಥೆಯ ಈ ನ್ಯೂನತೆಯ ಪರಿಣಾಮವನ್ನು ತಡೆಗಟ್ಟುತ್ತವೆ.

ಮೇಲೆ ಹೇಳಿದ್ದಷ್ಟೇ ಅಲ್ಲದೆ ಪ್ರಲೇಖನಸೇವೆಗಳ ಮೂಲಕ ಒಬ್ಬ ಸಂಶೋಧಕ ತನ್ನ ಕ್ಷೇತ್ರದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ತಿಳಿದುಕೊಳ್ಳಬಹುದು.

ಸಂಶೋಧನೆಗೆ ಹಾಗೂ ಅದರ ಮೂಲಕ ರಾಷ್ಟ್ರಗಳ ಬೆಳವಣಿಗೆಗೆ ಹಾಗೂ ಮಾನವನ ಉನ್ನತಿಗೆ ಸೂಕ್ತಮಾಹಿತಿಯು ಒದಗುವಿಕೆ ಅತ್ಯಾವಶ್ಯಕ. ಮಾಹಿತಿ ಪರಿವಹನ ಕಾರ್ಯಕ್ಕಾಗಿ ನಿರ್ಮಿಸಿದ 'ಮೂಲಪರಿವಹನ ವ್ಯವಸ್ಥೆ'ಗೆ ಪೂರಕವಾಗಿ ನಿರ್ಮಿಸಿದ ಪೂರಕಪರಿವಹನ ವ್ಯವಸ್ಥೆಯ ಆಧಾರ ಪ್ರಲೇಖನ.

ಪ್ರಲೇಖನ ಸೇವೆಯನ್ನು ಸಮರ್ಪಕವಾಗಿ ಯಾರು ಒದಗಿಸಬಲ್ಲರು ? ಅವರ ಶಿಕ್ಷಣ ಎಂಥದಾಗಿರಬೇಕು ? ಪೂರ್ವಸಿದ್ಧತೆಗಳೇನಿರಬೇಕು ? ಪ್ರಲೇಖನ ಕಾರ್ಯ ನಡೆಸುವಾತ ಕೇವಲ ಗ್ರಂಥಾಲಯ ವಿಜ್ಞಾನದಲ್ಲಿ ಪರಿಣತಿ ಹೊಂದಿದ್ದರೆ ಸಾಕೆ ? ಅಥವಾ ಅದಕ್ಕೆ ಅನುಗುಣವಾದ ವಿಜ್ಞಾನ ಅಥವಾ ತಂತ್ರಜ್ಞಾನದಲ್ಲಿ ಅವನು ಪ್ರಾವೀಣ್ಯ ಗಳಿಸಿರಬೇಕೆ ? ಗ್ರಂಥಗಳ ಸಂಗ್ರಹಣ ವ್ಯವಸ್ಥೆ, ವರ್ಗೀಕರಣ ಮತ್ತು ವಿತರಣೆಗಳ ಶಿಕ್ಷಣ ಮತ್ತು ಅನುಭವಗಳಿದ್ದ ಪಕ್ಷಕ್ಕೆ ಮಾತ್ರ ಪ್ರಲೇಖನ ಕಾರ್ಯ ಸುಸೂತ್ರವಾಗಿ ನಡೆಯುತ್ತದೆಯೆ?—ಮುಂತಾದ ಪ್ರಶ್ನೆಗಳಿಗೆ ಇರುವ ಉತ್ತರಗಳು ಪ್ರಲೇಖನಕಾರ್ಯ ನಡೆಯುವ ವಿಧಾನವನ್ನು ವಿವರಿಸುವಂಥವು. ಪ್ರಲೇಖನ ಕಾರ್ಯವನ್ನು ನಿರ್ವಹಿಸುವಾತ ತನ್ನ ಸೇವೆಯನ್ನು ಸಲ್ಲಿಸುವುದರಲ್ಲಿ ಸಾರ್ಥಕತೆಯನ್ನು ಪಡೆಯುವಂಥವನಾಗಿರಬೇಕು. ಎಷ್ಟೋ ಸಂದರ್ಭಗಳಲ್ಲಿ ಸಂಬಂಧಪಟ್ಟ ಶಾಸ್ತ್ರದಲ್ಲಿ ಆಸಕ್ತಿ, ಅಭಿರುಚಿಯುಳ್ಳ ವ್ಯಕ್ತಿ ಗ್ರಂಥಾಲಯ ವಿಜ್ಞಾನದ ಶಿಕ್ಷಣವನ್ನು ಪಡೆದು ತನ್ನ ಕರ್ತವ್ಯವನ್ನು ತೃಪ್ತಿಕರವಾಗಿ ಈಡೇರಿಸಿದುದುಂಟು. ಆದರೂ ಪ್ರಲೇಖನ ಕಾರ್ಯಕ್ಕೆ ಯೋಗ್ಯನಾಗಬೇಕಾದರೆ ಮೂಲವಾಗಿ ಆತನಿಗೆ ಗ್ರಂಥಾಲಯ ವಿಜ್ಞಾನದ ಅರಿವು ಅಗತ್ಯ. ಜೊತೆಗೆ ಪ್ರಲೇಖನ ವಿಭಾಗದಲ್ಲಿ ಕೆಲಸ ಮಾಡುವ ವಿವಿಧ ತಜ್ಞರಿಗೆ ಯುಕ್ತ ಶಿಕ್ಷಣ ಮತ್ತು ತರಬೇತಿಗಳೂ ಅಗತ್ಯವಾಗುತ್ತವೆ. ಪ್ರಾದೇಶಿಕ ಭಾಷೆಗಳ ಮತ್ತು ಅಂತರರಾಷ್ಟ್ರೀಯ ಭಾಷೆಗಳ ಪರಿಚಯವೂ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವ ಅರ್ಹತೆಗಳೂ ಇರುವುದು ಅನಿವಾರ್ಯವೆನಿಸುತ್ತದೆ.*

* 'ಕನ್ನಡ ವಿಶ್ವಕೋಶ', ಸಂಪುಟ ೬, ಪು. ೭೩೩

ಡಾ. ಎಂ. ಎನ್. ನರಸಿಂಹನ್

ಭಾರತೀಯ ತರ್ಕಶಾಸ್ತ್ರದ ರೂಪರೇಖೆಗಳು ೨

ಸಂಹಿತೋಪನಿಷತ್ತುಗಳ ಕಾಲ

ಋಗ್ವೇದದ ಅನಂತರದ ಕಾಲದಲ್ಲಿ ಅದರ ಧ್ಯೇಯಗಳ ಸಾಧನೆ ಅತ್ಯಂತ ರಭಸದಿಂದ ನಡೆದು, ಮಾಕ್ಸ್‌ಮುಲ್ಲರ್ ಅಭಿಪ್ರಾಯ ಪಡುವಂತೆ ಭಾರತೀಯರ ವಿಚಾರಧಾರೆ ತನ್ನ ಶಿಖರ ಮುಟ್ಟಿತೆನ್ನಬಹುದು. ಈ ಶಕೆಗಳಲ್ಲಿ ಭಾರತೀಯ ದರ್ಶನ ಸಾಧಿಸಿದ ಕೆಲವು ಪವಾಡಗಳು ಇಂದಿಗೂ ಕೇವಲ ಆದರ್ಶಪ್ರಾಯವಾಗಿ ಮಾತ್ರವಲ್ಲ, ನಾಡಿನ ಜೀವನದ ಒಳನಾಡಿಯಾಗಿ ಉಳಿದಿವೆ. ಅದರ ಋಷಿಗಳು ಕೇಳಿದ ಪ್ರಶ್ನೆಗಳು ಅನುಸರಿಸಿದ ವಿಚಾರಪಂಥ ಭಾರತೀಯ ಜೀವನದ ನಾನಾ ಕ್ಷೇತ್ರಗಳಲ್ಲಿ ಮೂಲಾಧಾರ ಸ್ತಂಭಗಳಂತೆ ಇಂದಿಗೂ ಉಳಿದಿವೆ. ಮುಖ್ಯವಾಗಿ ನಾವು ಅವುಗಳಲ್ಲಿ ಜ್ಞಾನ ಮತ್ತು ಕರ್ಮವೆಂಬ ಎರಡು ಹಾದಿಗಳನ್ನು ಕಾಣುತ್ತೇವೆ. ಮೊದಲನೆಯದು ವಿಚಾರ ವಿಮರ್ಶೆ, ದರ್ಶನ ತತ್ವಗಳು, ಅವುಗಳನ್ನು ಸಾಧಿಸುವ ತಪೋಕ್ರಮಗಳಲ್ಲಿ ಆಸಕ್ತಿ ತೋರಿದರೆ, ಎರಡನೆಯದು ಜನಸಾಮಾನ್ಯರಿಗೂ ಬೇಕಾದ ಮತ ಧರ್ಮಾಚರಣೆಗಳಲ್ಲಿ ನಿರತವಾಗಿದ್ದಿತು. ಹೊಸ ಶಕೆಗಳಲ್ಲಿ ಜ್ಞಾನಕ್ಕಿಂತ ಕರ್ಮ ಹೆಚ್ಚು ಪ್ರಾಧಾನ್ಯ ಪಡೆದು ಒಂದು ಹೊಸ ತರಹೆಯ ಸಾಹಿತ್ಯ ಸೃಷ್ಟಿಗೆ ಅವಕಾಶವಾಯಿತು. ಈ ರೀತಿಯ ನವೀನ ಸಾಹಿತ್ಯದಲ್ಲಿ ವಿಮರ್ಶೆ ವಿಚಾರ ತತ್ವಗಳಿಗಿಂತ ಯಜ್ಞಯಾಗಾದಿಗಳ ಆಚರಣೆಯನ್ನು ವ್ಯವಸ್ಥೆಗೊಳಿಸುವ ಗ್ರಂಥಗಳ ರಚನೆ, ಶೇಖರಿಸಿ ಕೂಡಿಸುವಿಕೆ ತಜ್ಞರ ಗಮನ ಸೆಳೆದವು. ಬ್ರಾಹ್ಮಣಗಳೆಂದು ಕರೆಯಲ್ಪಟ್ಟ ಈ ಬಗೆಯ ವೈದಿಕ ಸಾಹಿತ್ಯಭಾಗ 'ಸೃಷ್ಟಿಯುಗ'ಕ್ಕೆ ಬದಲು ಕೇವಲ 'ಶೇಖರಣೆಯುಗ'ವಾಗಿ ಪರಿಣಮಿಸಿ, ಸಂತ ಅನುಭವಿಗಳಿಗೆ ಬದಲು ಆರಾಧಕ ಮತ್ತು ದೈವಜ್ಞರಿಂದ ಮುಂದುವರಿಸಲ್ಪಟ್ಟಿತು. ಸಾಯಣ ಈ ಬಗೆಯ ಕೃತಿಗಳನ್ನು ಯಜ್ಞಯಾಗಾದಿಗಳ ಕ್ರಮ ವಿವರಿಸುವ 'ವಿಧಿ' ಮತ್ತು ವಸ್ತು ವಿಷಯಗಳ ಸ್ವರೂಪ ಚರ್ಚಿಸುವ ದರ್ಶನ ತತ್ತ್ವಗಳ 'ಅರ್ಥವಾದ' ಎಂಬ ಎರಡು ಭಾಗಗಳನ್ನಾಗಿ ವಿಂಗಡಿಸಿ ಹೊಸ ಸಾಹಿತ್ಯ ಸೃಷ್ಟಿಯ ಜೊತೆ ಅವುಗಳ ನಿರ್ಮಾಪಕರ ಅನುಸರಿಸಿದ ಹೊಸ ಬೋಧನೆಯ ಕ್ರಮಗಳ ಕಡೆ ನಮ್ಮ ಗಮನ ಸೆಳೆಯುತ್ತಾನೆ. ಅಂದು ಸೃಷ್ಟಿಯಾದ ಸಾಹಿತ್ಯ ನಮಗೆ ದೊರೆತಿರುವ ಸಂಹಿತೆಗಳಷ್ಟಕ್ಕೇ ಸೀಮಿತವಾಗಿಲ್ಲದಿದ್ದರೂ, ಬಹುಮಟ್ಟಿಗೆ ಅವು ಒಬ್ಬೊಬ್ಬ ಪ್ರತಿಭಾಸ್ವತ ವ್ಯಕ್ತಿಗಳಿಂದ ಸೃಷ್ಟಿಸಲ್ಪಟ್ಟು ಕಂಠಪಾಠವಾಗಿ ಬೋಧಿಸಲ್ಪಡುತ್ತಿದ್ದು, ವಂಶಪಾರಂಪರ್ಯವಾಗಿ ಅಥವಾ ಗುರುವಿನಿಂದ ಶಿಷ್ಯನಿಗೆ ಬೋಧನೆಯ ಮೂಲಕ ಮುಂದುವರಿಸಲ್ಪಡುತ್ತಿದ್ದಿತು, ಎನ್ನುವುದರಲ್ಲಿ ಸಂದೇಹವಿಲ್ಲ. ಈ ಬಗೆಯ ನವೀನ ಸಂಪ್ರದಾಯ ಬೆಳೆದಂತೆಲ್ಲ ವೈಯಕ್ತಿಕ ಮನೋಭಾವಗಳೆಲ್ಲವನ್ನೂ ಒಟ್ಟುಗೂಡಿಸಿ ಒಂದು ಸಮನ್ವಿತ ಭಾವನೆ ತರುವುದು ಅಗತ್ಯವಾಯಿತು. ಇದಕ್ಕಾಗಿ ವಿಶೇಷ ಪಾಂಡಿತ್ಯ ಗಳಿಸಿದ ತಜ್ಞರು ವೇಶ

ಪರ್ಯಟನ ಮಾಡಿ ಅವುಗಳೆಲ್ಲವನ್ನು ಸಂಪಾದಿಸಿ ಒಟ್ಟುಗೂಡಿಸುವುದರಲ್ಲಿ ನಿರತರಾದರು. ಅಂಥ ಪ್ರಯತ್ನದ ಫಲಗಳು ಅನ್ಯರಿಗೆ ಒಯ್ಯಲ್ಪಡುತ್ತಿದ್ದುವು. ಕೇವಲ ಭಾವನೆಗಳಲ್ಲಿ ಮಾತ್ರ ವ್ಯತ್ಯಾಸವಲ್ಲ. ಆಗಾಗ್ಗೆ ವಿಪರೀತ ವಿರೋಧಗಳು ತಲೆದೋರಿ ಬೋಧಕರು ಬೇರೆಬೇರೆ ಶಾಖೆಯಾಗುವುದನ್ನು ನಾವು ಈ ಕಾಲದ ಕೃತಿಗಳಲ್ಲಿ ಕಾಣುತ್ತೇವೆ. ಇದರಿಂದ ಯಾರೂ ಯಾವ ಒಬ್ಬ ಹಿರಿಯ ವ್ಯಕ್ತಿಯ ಭಾವನೆಗಳಿಗೂ ತಲೆಬಾಗದೆ ತಮ್ಮ ವೈಯಕ್ತಿಕ ಭಾವನೆ ಬೆಳೆಸಲು ಅವಕಾಶವಿದ್ದಿತೆಂಬುದು ಸ್ಪಷ್ಟವಾಗುತ್ತದೆ. ವಿಚಾರದಲ್ಲಿ ಭೇದಭಾವನೆ ಹೊಸ ಶಾಖೆಗಳಿಗೆ ಅವಕಾಶ ಮಾಡುವುದರ ಜೊತೆಗೆ ಪೈಪೋಟಿಗೆ ಕಾರಣವಾಗಿ ಪ್ರತಿ ಪಂಥವೂ ತನ್ನ ಭಾವನೆಗಳನ್ನು ಸಮರ್ಥಿಸಿ ಸಾಧಿಸಲು ಸ್ಪರ್ಧಿಸಬೇಕಾಯಿತು. ಚರ್ಚೆ ನಡೆದು ಯಾವುದು ಹೆಚ್ಚು ಸಮಂಜಸವೋ ಅದು ಮಾತ್ರ ಉಳಿದು, ಪೊಳ್ಳಾದವು ಹಿಂದುಳಿದು ಅಳಿಯಬೇಕಾಯಿತು. ಇಂದಿಗೂ ಸಹ ಸಂಹಿತೆಗಳಲ್ಲಿ ಅಲ್ಲಲ್ಲಿ ಕೇವಲ ಅಪೂರ್ಣ ರೀತಿಯಲ್ಲಿ ವ್ಯಕ್ತವಾಗಿರುವ ಉಕ್ತಿಭಾವನೆಗಳೇ ಇದಕ್ಕೆ ನಿದರ್ಶನ. ಈ ಬಗೆಯ ವಿಚಾರ ಸ್ವಾತಂತ್ರ್ಯ ಸಂಹಿತೆಗಳ ಕಾಲಕ್ಕೆ ಮಾತ್ರ ಸೇರಿದುದಲ್ಲ. ಋಗ್ವೇದದ ಕಾಲದಲ್ಲಿ ಆರಂಭವಾದ ತೌಲನಿಕ ಮನೋಭಾವದ ಮುಂದುವರಿಸುವಿಕೆಯಷ್ಟೆ ಅಲ್ಲದೆ ಅದು ಇಡೀ ಭಾರತೀಯ ತರ್ಕ ದರ್ಶನ ಶಾಸ್ತ್ರಗಳ ಬೆನ್ನೆಲುಬು ಆಗಿಯೇ ಉಳಿದಿದೆ. ಪಾಶ್ಚಾತ್ಯ ದರ್ಶನ ಪ್ರಪಂಚದಲ್ಲಿ ಪ್ಲೇಟೋನ ಅನಂತರ ಬಂದ ದರ್ಶನ ಸಾಹಿತ್ಯವೆಲ್ಲ ಅವನ ಬರವಣಿಗೆಗಳ ಮೇಲಿನ ಟಿಪ್ಪಣಿಗಳು (ಸಮರ್ಥಿಸಲು ಅಥವಾ ವಿರೋಧಿಸಲು) ಎಂಬಂತೆ ಅನಂತರ ಬಂದ ವೈದಿಕ ಅವೈದಿಕ ಸಾಹಿತ್ಯವೆಲ್ಲ ಋಗ್ವೇದದ ಕವಿದಾರ್ಶನಿಕರು ಹೇಳಿ ಕೇಳಿದ ಪ್ರಶ್ನೆಗಳ ಪುನರ್ವಿಮರ್ಶಿತ ಪರಿಹಾರಗಳು ಎಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ. ಅದರ ವಿಮರ್ಶಕರು ಅನುಭವಿಸಿದ ವಿಚಾರ ಸ್ವಾತಂತ್ರ್ಯ ತಮ್ಮ ಅನಂತರದ ಜನರಿಗೆ ಅವರು ಕೊಟ್ಟ ಹಿರಿಯ ಕಾಣಿಕೆ ಎಂಬುದೂ ನಿಸ್ಸಂದೇಹವಾದ ಮಾತು.

ಹೊಸ ವೈದಿಕ ಸಾಹಿತ್ಯ ಸೃಷ್ಟಿಯಾಗುವುದರ ಜೊತೆಯಲ್ಲಿಯೇ ಅದರ ಪ್ರಚಾರ ಮತ್ತು ಮುಂದುವರಿಸುವಿಕೆಯ ಕಡೆಗೂ ಬುಧಜನ ಗಮನ ಕೊಡಬೇಕಾಯಿತು. ವೇದಾಭ್ಯಾಸಕ್ಕಾಗಿ ವಿಶೇಷ ತರಹೆಯ ಶಾಲಾ ಸಂಸ್ಥೆಗಳು, ವಿದ್ವತ್ಸಭೆಗಳು, ಧಾರ್ಮಿಕ ಗುಂಪುಗಳು ಏರ್ಪಡಿಸಲ್ಪಡುವ ಆವಶ್ಯಕತೆ ತಲೆದೋರಿ ಇಂದಿಗೂ ಶಾಖಾಚರಣ, ಪರಿಷತ್, ಕುಲ ಮತ್ತು ಗೋತ್ರಗಳು ಎಂಬ ಹೆಸರಿನಿಂದ ರೂಢಿಯಲ್ಲಿರುವ ಸಂಸ್ಥೆಗಳು ಹುಟ್ಟಿಕೊಂಡುವು. ಇವುಗಳಲ್ಲಿ ಪ್ರತಿಯೊಂದೂ ಅವುಗಳ ಸ್ಥಾಪಕಾಚಾರ್ಯರುಗಳ ಅಭಿಪ್ರಾಯಗಳನ್ನು ಶೇಖರಿಸಿ ವ್ಯವಸ್ಥೆಗೊಳಿಸಿ ಪ್ರಚಾರ ಮಾಡಲು ಸಾಧನವಾದವು. 'ಶಾಖಾ' ಶಬ್ದ ಮೊದಮೊದಲು ವೃಕ್ಷದ ಕೊಂಬೆಗಳು ಎಂಬ ಅರ್ಥದಲ್ಲಿ ಋಕ್, ಯಜುಸ್ ಮತ್ತು ಸಾಮ ವೇದಗಳ ಸಂಹಿತೆಗಳನ್ನು ಸೂಚಿಸಲು ಪ್ರಯೋಗಿಸಲ್ಪಟ್ಟಿದೆ ಎಂದು ಮ್ಯಾಕ್ಸ್‌ಮ್ಯುಲರ್[1] ಅಭಿಪ್ರಾಯಪಟ್ಟರೆ, ಮಧುಸೂದನ ಸ್ವರಸ್ವತಿ[2] ಅದು ಪ್ರತಿ ವೇದದ ಪಾಠಾಂತರಗಳನ್ನು ಹೇಳುವ ವಿವಿಧ ಭಾಗಗಳಿಗೆ ಅನ್ವಯಿಸುತ್ತದೆ ಎಂದಿದ್ದಾರೆ.

---

[1] Max Muller : *Sanskrit literature*, p. 124

[2] Madusudana Saraswathi, quoted by Max muller in *Sanskrit literature*, p. 122

ಪುಸ್ತಕ ರೂಪ ತಾಳದೆ ಕೇವಲ ಬಾಯಿ ಪಾಠದಲ್ಲೇ ವ್ಯತ್ಯಾಸಗಳನ್ನು ಮುಂದುವರಿಸಬೇಕಾಗಿದ್ದುದರಿಂದ ಹಳೆಯ ಕೊಂಬೆಯಿಂದ ಹೊಸ ಕೊಂಬೆ ಹೊರಡುವಂತೆ ಗುರುವಿನಿಂದ ಶಿಷ್ಯ ಬೆಳೆಯುತ್ತಿದ್ದನೆಂಬ ಅರ್ಥವನ್ನು ಈ ಶಬ್ದ ಸೂಚಿಸುತ್ತದೆ. ಶಾಖೆ ಚರಣಗಳ ನಡುವೆ ಉಚ್ಚಾರಣೆಯಲ್ಲಿ ಬಹು ವ್ಯತ್ಯಾಸವಿರುತ್ತಿದ್ದುದ್ದರಿಂದ ಅವುಗಳ ಸರಿ ಉಚ್ಚಾರಣೆ, ಕಾಪಾಡುವಿಕೆ ಬಹಳ ಮುಖ್ಯವಾದ ಕರ್ತವ್ಯವಾಯಿತು. ಮಾತ್ರ, ಛಂದಸ್ಸು ಮುಂತಾದವುಗಳ ಕಡೆ ಗಮನ ಕೊಟ್ಟು ವೇದೇತರ ಭಾಷೆಯಿಂದ ಹಾಳಾಗದಂತೆ ವೇದೋಕ್ತಿಗಳನ್ನು ಮುಂದುವರಿಸುವುದು ಗುರು ಶಿಷ್ಯರ ಪವಿತ್ರ ಜವಾಬ್ದಾರಿಯಾಯಿತು. ಅಂದಿನ ಕಾಲದಲ್ಲಿ ಶಾಖೆ, ಪ್ರತಿಶಾಖೆ ಮತ್ತು ಚರಣಗಳು ಸಾಧಿಸಿದ ಮಹತ್ಕಾರ್ಯವಿದು. ಇಂದಿಗೂ ಸಹ ನಶಿಸಿ ಹೋಗಿರುವ ಅಂಥ ವೈದಿಕ ಶಾಖೆಗಳ ಗ್ರಂಥವಲ್ಲಿ ಅವುಗಳ ಕರ್ತೃಗಳ ಹೆಸರು ಅಚ್ಚಳಿಯದೆ ಉಳಿದಿರುವುದೇ ಈ ಬಗೆಯ ಭಾಷೆ ಮತ್ತು ಉಚ್ಚಾರಣಾ ನಿಪುಣರು ಮತ್ತು ಸಂಸ್ಕೃತಿಗಾರರು ನಡೆಸಿದ ಕಾರ್ಯಕ್ಕೆ ಸಾಕ್ಷಿ.

ಶಾಖಾ ಚರಣಗಳು ಇಷ್ಟು ಮಾತ್ರ ಸಾಧಿಸಿ ತೃಪ್ತಿ ಹೊಂದದೆ ಕೆಲವೇ ವ್ಯಕ್ತಿ ಮತ್ತು ಕೇಂದ್ರಗಳಲ್ಲಿ ಆರಂಭವಾದ ವಿಚಾರಧಾರೆ ನಾನಾ ದಿಕ್ಕುಗಳಲ್ಲಿ ಹರಡಲು ಕಾರಣವಾದುವು. ಅವುಗಳಲ್ಲಿಯ ವಿಚಾರ ತತ್ತ್ವಗಳನ್ನು ವಿಮರ್ಶಿಸಲು ವಿಶೇಷ ತಜ್ಞರ ಸಭೆಗಳು ಆಗ್ಗಿಂದಾಗ್ಯೆ ಏರ್ಪಡುತ್ತಿದ್ದುವು. ಇವುಗಳನ್ನು ಪರಿಷತ್ತುಗಳೆಂದು ಕರೆಯುತ್ತಿದರು. ಪರಿಷತ್ ಎಂದರೆ ಸುತ್ತಲೂ ಕುಳಿತುಕೊಳ್ಳುವುದು ಎಂದರ್ಥ. ಋಗ್ವೇದದ ಅನಂತರದ ಸಾಹಿತ್ಯದಲ್ಲಿ (ಅದರಲ್ಲಿಯೂ ಉಪನಿಷತ್ತುಗಳಲ್ಲಿ) ಈ ಶಬ್ದ ದರ್ಶನತತ್ತ್ವಗಳ ಚರ್ಚೆಯಲ್ಲಿ ನಿರತರಾಗಿದ್ದ ತಜ್ಞರ ತಂಡವನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ. ಶಾಖೆ ಚರಣಗಳಲ್ಲಿ ಒಂದೇ ಮತದ (ಅಭಿಪ್ರಾಯದ) ಮತ್ತು ಗುರುವಿನ ಶಿಷ್ಯರ ಸಂತತಿಗೆ ಮಾತ್ರ ಅವಕಾಶವಿದ್ದರೆ ಪರಿಷತ್ತಿನಲ್ಲಿ ಎಲ್ಲ ಶಾಖೆ ಚರಣಗಳ ವಿದ್ವಾಂಸರಿಗೂ ಸೇರಲವಕಾಶವಿರುತ್ತಿದ್ದಿತು. ಗೋಭಿಲಗೃಹ್ಯಸೂತ್ರ[3] 'ಪರಿಷತ್' ಶಬ್ದವನ್ನು ಗುರು ಮತ್ತು ಶಿಷ್ಯರ ಗುಂಪನ್ನು ಸೂಚಿಸಲು ಪ್ರಯೋಗಿಸಿದೆ. ದುರ್ಗಾಚಾರ್ಯರು ನಿರುಕ್ತದ[4] ಉಕ್ತಿಯೊಂದರ ಮೇಲೆ ವ್ಯಾಖ್ಯಾನಮಾಡುತ್ತ, ಪರಿಷತ್ ಎಂದರೆ ಒಂದೇ ಗ್ರಂಥ, ಉಚ್ಚಾರಣಾಕ್ರಮ, ಸಂಹಿತೆ ಮತ್ತು ಬೋಧನಾಕ್ರಮ ಇವನ್ನನುಸರಿಸುತ್ತಿದ್ದ ವಿದ್ಯಾಕೇಂದ್ರ ಎಂದಿದ್ದಾರೆ. ಆಧುನಿಕರ ದೃಷ್ಟಿಯಿಂದ ಅದನ್ನು ನಾನಾ ಶಾಲಾ ಕಾಲೇಜುಗಳನ್ನೊಳಗೊಂಡ ವಿಶ್ವವಿದ್ಯಾನಿಲಯ ಎನ್ನಬಹುದು. ವಿವಿಧ ವ್ಯಕ್ತಿಗಳ ಸಾಮಾನ್ಯ ಸಭೆ, ವಿವಿಧ ಮನೋಭಾವ ನಂಬಿಕೆಗಳ ಜನ ಒಂದೇ ವಸ್ತುವನ್ನು ನೋಡಿದಾಗ ಒದಗುವ ದೃಷ್ಟಿಕೋನ ವಿಪರೀತ ಭೇದಗಳ ಸೂಚಕ. ಆದರೆ ಪರಿಷತ್ತುಗಳಲ್ಲಿ ವೈಯಕ್ತಿಕ ಭಾವನೆಗಳನ್ನು ಪರೀಕ್ಷಿಸಿ ಅವುಗಳ ಸೂಕ್ತಾಸೂಕ್ತತೆಯನ್ನು, ಸರಿತಪ್ಪುಗಳನ್ನು ವಿಮರ್ಶಿಸಿ ವ್ಯಕ್ತಿ ವೈವಿಧ್ಯಗಳ ಹಿನ್ನೆಲೆಯಲ್ಲಿರುವ ಸಾಮಾನ್ಯ ತತ್ತ್ವಗಳನ್ನು ಕಂಡುಹಿಡಿಯುತ್ತಿಸುತ್ತಿದ್ದ ವಿದ್ವತ್ ಸಭೆಗಳು ಆಧುನಿಕ ವೈಜ್ಞಾನಿಕ ಪದ್ಧತಿಯ ಸಾಮಾನ್ಯೀಕರಣ ಕ್ರಮವನ್ನು ನೆನಪಿಗೆ ತರುತ್ತವೆ.

ಸಂಹಿತೋಪನಿಷತ್ತುಗಳ ಕಾಲದಲ್ಲಿಯೂ ವಿದ್ಯಾಭ್ಯಾಸದ ಗುರಿ 'ಬ್ರಹ್ಮ ವರ್ಚಸ'ವೇ

---

[3] ಗೋಭಿಲ ಗೃಹ್ಯಸೂತ್ರ, ಅ III-2-40

[4] Durgacharya on *Nirukta*, I-17

ಆಗಿದ್ದಿತು. ಕೇವಲ ವಿಷಯ ಶೇಖರಣೆ ಮಾತ್ರ ಅದರ ಗುರಿಯಾಗಿರದೆ ಅದು ಪರಮ ಸತ್ಯವಾದ ಬ್ರಹ್ಮನೆಡೆ ವಿದ್ಯಾರ್ಥಿಯನ್ನು ಒಯ್ಯುವ ಕ್ರಮವಾಗಿದ್ದಿತು. ಶತಪಥ ಬ್ರಾಹ್ಮಣ ವೇದಾಭ್ಯಾಸವನ್ನು 'ಸ್ವಾಧ್ಯಾಯ' ಎಂಬ ಶಬ್ದದಿಂದ ಸೂಚಿಸಿ ಆ ಶಬ್ದಕ್ಕೆ 'ಅಮರವಾದ ಬ್ರಹ್ಮನನ್ನು ಪಡೆಯುವ ಯಜ್ಞವೆಂದು' ಅರ್ಥ ಮಾಡುತ್ತದೆ. ಆ ಬಗೆಯ ಅಧ್ಯಯನ ವ್ಯಕ್ತಿಯನ್ನು ಶಾಂತ ಚಿತ್ತನನ್ನಾಗಿಯೂ ಸ್ವತಂತ್ರನನ್ನಾಗಿಯೂ ಸ್ವವೈದ್ಯನನ್ನಾಗಿಯೂ ಇಂದ್ರಿಯಗಳ ಮೇಲೆ ಹತೋಟಿಯುಳ್ಳವನನ್ನಾಗಿಯೂ, ಸಮಾನ ಮನ ಸ್ಥಿತಪ್ರಜ್ಞನನ್ನಾಗಿಯೂ ಮಾಡಿ ಛಾತ್ರವರ್ಗದವರ ಬುದ್ಧಿ–ವಿಕಾಸ ಮತ್ತು ಖ್ಯಾತಿ ಹರಡಲು ಅವಕಾಶ ಮಾಡುತ್ತದೆಂದು ತೈತ್ತಿರೀಯ ಆರಣ್ಯಕ ತಿಳಿಸುತ್ತದೆ. ಅಷ್ಟಕ್ಕೇ ನಿಲ್ಲಿಸದೆ ಆ ಬಗೆಯ ಸಾಧನೆ ಕೆಲವು ಕ್ರಮಗಳ ನಿಯಮ ಅನುಷ್ಠಾನದಿಂದ ಮಾತ್ರ ಸಾಧ್ಯ ಎಂದೂ ಅದು ಹೇಳುತ್ತದೆ. ಗ್ರಾಮದ ಹೊರಗಡೆ ಹೋಗಿ ಉಷಃಕಾಲದಲ್ಲಿ ವೇದ ಪಠನದಲ್ಲಿ ನಿರತನಾಗಬೇಕು. ಅದಲ್ಲದೆ ಇತಿಹಾಸ, ಪುರಾಣ ಮುಂತಾದವನ್ನೂ ಅಭ್ಯಸಿಸಬೇಕೆಂದೂ ಅದು ತಿಳಿಸುತ್ತದೆ. ಮಾತ್ರವಲ್ಲ, ಅವುಗಳ ಅಭ್ಯಾಸ ಗುರುಮುಖೇನ ಮಾತ್ರ ಸಾಗಬೇಕು.[5] ಅಪಾತ್ರರಿಗೆ ಕೊಡಲ್ಪಡಬಾರದು ಎಂದು ಹೇಳುವ ಉಕ್ತಿಗಳು ಈ ಗ್ರಂಥಗಳಲ್ಲಿ ಬಹು ಸಾಮಾನ್ಯ. ಗುರುಶಿಷ್ಯರ ಈ ಬಗೆಯ ಸಂಬಂಧ ಕೇವಲ ಮಾನವರಿಗೆ ಮಾತ್ರ ಸೀಮಿತವಾಗಿರದೆ ದೇವತೆಗಳಿಗೂ ಅನ್ವಯಿಸಿದ ಪ್ರಸಂಗಗಳನ್ನು ನಾವು ಕಾಣುತ್ತೇವೆ. ಛಾಂದೋಗ್ಯದಲ್ಲಿ [6] ಇಂದ್ರನು ಪ್ರಜಾಪತಿಯ ಬಳಿ 101 ವರುಷಗಳು ವಿದ್ಯಾರ್ಥಿಯಾಗಿದ್ದನೆಂದು ಓದುತ್ತೇವೆ. ಕೌಶೀತಕಿ[7]ಯಲ್ಲಿ ಆರುಣಿಯು ಚಿತ್ರಗಾರ್ಗ್ಯಾಯನಿಯಲ್ಲಿಯೂ ಬೃಹದಾರಣ್ಯಕದಲ್ಲಿ[8] ಗಾರ್ಗ್ಯನು ಅಜಾತಶತ್ರುವಿನ ಬಳಿಯಲ್ಲಿಯೂ ವಿದ್ಯೆ ಬೇಡಿದುದೂ ಪ್ರಶ್ನೋಪನಿಷತ್ತಿನಲ್ಲಿ[9] ಸುಕೇಶ, ಸತ್ಯಕಾಮ, ಸೌರ್ಯಾಯಣಿ, ಕೌಸಲ್ಯ, ವೈದರ್ಭಿ ಮತ್ತು ಬಂದಿನ್‌ಗಳು ಪಿಪ್ಪಲಾದನನ್ನು ಆಶ್ರಯಿಸಿದುದೂ ಇದಕ್ಕೆ ನಿದರ್ಶನಗಳು. ದೇವತೆಗಳೂ ಈ ಬಗೆಯ ಕ್ರಮ ಪಾಠಗಳಿಗೆ ತಲೆಬಾಗಬೇಕಾಗಿದ್ದಿತು ಎನ್ನುವುದು ಸ್ವಲ್ಪ ಅತಿಶಯೋಕ್ತಿ ಎಂದು ತೋರಿದರೂ ಎಂಥ ಉನ್ನತ ಮಟ್ಟದ ಪಾಂಡಿತ್ಯ ವರ್ಗದ ಜನವೂ ವೈದಿಕ ಶೃತಿ ಪಾಠದ ಕಟ್ಟುಗಳಿಗೆ ಒಳಗಾಗ ಬೇಕಿತ್ತೆನ್ನುವುದರಲ್ಲಿ ಸಂದೇಹವಿಲ್ಲ. ಸತ್ಯದ ಅನ್ವೇಷಣೆ ಸುಲಭ ಸಾಧ್ಯವಲ್ಲ. ಎಲ್ಲರಿಗೂ ಅದು ನಿಲುಕುವುದೂ ಇಲ್ಲ. ಹೊಸಚಾದ ಕತ್ತಿಯ ಅಲಗಿನ ಮೇಲೆ ನಡೆದಂತೆ ಅದು. ಅದನ್ನು ಓದುವ ಜನರಿಂದ ಪ್ರಾಚೀನ ಭಾರತದಲ್ಲಿ ಯಾವ ಮಟ್ಟವನ್ನು ಅಪೇಕ್ಷಿಸುತ್ತಿದ್ದರು ಎಂಬುದನ್ನು ತಿಳಿಸುವುದು ಮೇಲಿನ ಉಕ್ತಿಯ ಉದ್ದೇಶವಷ್ಟೆ.

ಬೋಧಕನ ಯೋಗ್ಯತೆ ದಕ್ಷತೆ ಬಗ್ಗೆ ಋಗ್ವೇದದ ಅನಂತರದ ಕಾಲದಲ್ಲಿಯೂ ಬಹು ಆಸಕ್ತಿ ತೋರುತ್ತಿದ್ದುದು ಸಾಮಾನ್ಯ. ಅಯೋಗ್ಯರಲ್ಲದ ಜನರಿಂದ ಬ್ರಹ್ಮಸತ್ಯ ಸಾಧಿಸಲ್ಪಡುವುದಿಲ್ಲ

[5] ಕಠೋಪನಿಷತ್ತು, II–8

[6] ಛಾಂದೋಗ್ಯ ಉಪನಿಷತ್ತು, III

[7] ಕೌಶೀತಕಿ ಉಪನಿಷತ್ತು, II–1

[8] ಬೃಹದಾರಣ್ಯಕ ಉಪನಿಷತ್ತು, II–1–4

[9] ಪ್ರಶ್ನೋಪನಿಷತ್ತು, I–1

ಎಂಬ ಕಠೋಪನಿಷತ್ತಿನ[10] ಒಂದು ವಾಕ್ಯ ಸಾಕು, ಆಚಾರ್ಯನ ಅರ್ಹತೆ ವಿವರಿಸಲು. ಮುಂಡಕ[11] ಒಳ್ಳೆಯ ಆಚಾರ್ಯನನ್ನು 'ಶ್ರೋತ್ರಿಯ' ಮತ್ತು 'ಬ್ರಹ್ಮನಿಷ್ಠ' ಶಬ್ದಗಳಿಂದ ಸೂಚಿಸುತ್ತದೆ. ಸ್ವಾಧ್ಯಾಯ ಅವನಲ್ಲಿ ಬ್ರಹ್ಮಸತ್ಯದಲ್ಲಿ ನಂಬಿಕೆ ಮೂಡಿಸದಿದ್ದಲ್ಲಿ ಅದು ಅಂಧ ಅಂಧನನ್ನು ಕರೆದೊಯ್ಯುವಂತೆ ಆಗುತ್ತದೆ. ಸತ್ಪಾತ್ರನಾದ ವಿದ್ಯಾರ್ಥಿ ಬಂದಾಗ ಆತನಿಗೆ ಯಥಾರ್ಥವಾಗಿ ವಿದ್ಯೆ ಕಲಿಸುವುದು ಗುರುವಿನ ಜವಾಬ್ದಾರಿಯಾಗಿದ್ದಿತು.[12] ಅಷ್ಟೇ ಅಲ್ಲ. ವಿಷಯ ನಿರೂಪಣೆಯಲ್ಲಿ ಯಾವ ಬಗೆಯ ಕಾರ್ಪಣ್ಯ ಮುಚ್ಚುಮರೆಸುವಿಕೆಯೂ ಸಲ್ಲದು. ಹಾಗೆ ಮಾಡಿದರೆ ವಿನಾಶ ಅವನಿಗೆ ಸಿದ್ಧ.[13] ತೈತ್ತಿರೀಯ[14] ಆರಣ್ಯಕ ಮತ್ತು ಶತಪಥ ಬ್ರಾಹ್ಮಣಗಳು[15] ಒಂದು ವರ್ಷ ತನ್ನ ಜೊತೆಯಲ್ಲಿ ವಾಸಿಸಿದ ಶಿಷ್ಯನಿಗೆ ಆಚಾರ್ಯನು ಮನಬಿಚ್ಚಿ ಎಲ್ಲವನ್ನೂ ಹೇಳಬೇಕೆಂದು ತಿಳಿಸುತ್ತದೆ. ವಿದ್ಯಾರ್ಥಿಯ ದಕ್ಷತೆ ಮತ್ತು ಯೋಗತ್ಯೆಗಳನ್ನನುಸರಿಸಿ ವಿದ್ಯಾದಾನಮಾಡುವ ಹಕ್ಕನ್ನು ಗುರು ಪಡೆದಿದ್ದ. ಅಯೋಗ್ಯನಿಗೆ ವಿದ್ಯೆ ನೀಡಲು ನಿರಾಕರಿಸಿದ, ವಿಶೇಷ ವಿದ್ಯೆಗಳನ್ನು ಕೆಲವರಿಗೆ ಮಾತ್ರ ಮೀಸಲಾಗಿಟ್ಟ ಪ್ರಸಂಗಗಳೂ ಅಲ್ಲಲ್ಲಿ ಇವೆ. ಅಷ್ಟೇ ಅಲ್ಲ. ಯೋಗ್ಯನೂ ಸತ್ಪಾತ್ರನೂ ಆದ ಶಿಷ್ಯ ಬರದಿದ್ದರೆ ಜ್ಞಾನದ ಪರಂಪರೆ ಅವಿಚ್ಛಿನ್ನನಾಗಿ ಮುಂದೆ ಸಾಗಲು ಯೋಗ್ಯ ವಿದ್ಯಾರ್ಥಿಯನ್ನು ಹುಡುಕುವುದು ಗುರುವಿನ ಪವಿತ್ರ ಕರ್ತವ್ಯವಾಗಿದ್ದಿತು. ತೈತ್ತಿರೀಯಾರಣ್ಯಕದಲ್ಲಿ[16] ಗುರು ಸತ್ಪಾತ್ರನನ್ನು ಪಡೆಯಲು ಹಾತೊರೆಯುವುದನ್ನು ಕಾಣುತ್ತೇವೆ. "ನೀರು ಹೇಗೆ ಹಳ್ಳದ ಕಡೆ ಹರಿಯುತ್ತದೆಯೋ ಹಾಗೆಯೇ ವಿದ್ಯಾರ್ಥಿಗಳು ನನ್ನೆಡೆ ಸುಲಭವಾಗಿ ಬರಲಿ" ಎಂಬ ತೈತ್ತಿರೀಯ ಉಪನಿಷತ್ತಿನ[17] ಮಾತೂ ಇದೇ ಭಾವನೆಯನ್ನು ಸ್ಪಷ್ಟಪಡಿಸುತ್ತದೆ. ವಿದ್ಯಾರ್ಥಿಗಳಿಗೆ ಕಾಯುವುದು, ಪ್ರಾರ್ಥಿಸುವುದು ಇರಲಿ, ಮೇಲೆ ಹೇಳಿದಂತೆ ಗುರುವೇ ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಹೋದ ಪ್ರಸಂಗಗಳನ್ನು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಕಾಣತ್ತೇವೆ.

ಗುರು ಶಿಷ್ಯರುಗಳ ಲಕ್ಷಣಗಳು ನಿರ್ಣಯಿಸಲ್ಪಟ್ಟಂತೆಯೇ ಬೋಧಿತ ವಿಷಯಗಳೂ ಬೋಧನ ಕ್ರಮಗಳೂ ತಜ್ಞರ ಗಮನ ಸೆಳೆದಿದ್ದುವು. ಶಿಷ್ಯನು ಗುರು ಶುಶ್ರೂಷೆಮಾಡಿದ ಅನಂತರ ತನ್ನ ವ್ಯಾಸಂಗ ಮುಂದುವರಿಸುತ್ತಿದ್ದನೆಂದು ಛಾಂದೋಗ್ಯ[18] ತಿಳಿಸುತ್ತದೆ. 12 ರಿಂದ 32 ವರ್ಷಗಳ ವರೆವಿಗೆ ಪ್ರಸರಿಸುತ್ತಿದ್ದ ವ್ಯಾಸಂಗ ಕಾಲದಲ್ಲಿ ಆಚಾರ್ಯನ ಪ್ರಸನ್ನತೆ ಪಡೆಯಲು

---

[10] ಕಠೋಪನಿಷತ್ತು, I–2–8
[11] ಮುಂಡಕೋಪನಿಷತ್ತು I–2–12
[12] Ibid., I–2–13
[13] ಪ್ರಶ್ನೋಪನಿಷತ್ತು, VI–1
[14] ತೈತ್ತಿರೀಯ ಆರಣ್ಯಕ, VII–4
[15] ಶತಪಥ ಬ್ರಾಹ್ಮಣ, XVI–1–1
[16] ತೈತ್ತಿರೀಯಾರಣ್ಯಕ, VII–4
[17] ತೈತ್ತಿರೀಯ ಉಪನಿಷತ್ತು, I–4–3
[18] ಛಾಂದೋಗ್ಯ ಉಪನಿಷತ್ತು, VIII–15

ಮಾಡಬೇಕಾಗಿದ್ದ ಭಿಕ್ಷೆ, ಅಗ್ನಿಕಾಷ್ಠ ತರುವಿಕೆ, ಗೋಪಾಲನೆ ಮುಂತಾದ ಕರ್ತವ್ಯ ನಿರ್ವಹ ಯಾದ ಮೇಲೆ ಶಾಸ್ತ್ರಾಭ್ಯಾಸ ಮುಂದುವರಿಯುತ್ತಿದ್ದಿತು. ವೇದಗಳ ಪಠನವೇ ಶಾಸ್ತ್ರಾಧ್ಯ ನದ ಆರಂಭ. ಕೇವಲ ಕಂಠಪಾಠ ಉಚ್ಚಾರಣೆಯೇ ಪ್ರಧಾನವಾಗಿರದೆ ಅವುಗಳಿಗೆ ಪೋಷ ಸಹಾಯಕಗಳಾಗಿದ್ದ ಶಬ್ದಗಳ ವ್ಯುತ್ಪತ್ತಿ ಉಚ್ಚಾರಣೆ ಮತ್ತು ಛಂದಸ್ಸು, ಪ್ರಾದೇಶಿಕ ವ್ಯಾಕರ ಮತ್ತು ಧಾತು ಸ್ವರೂಪ ಜ್ಞಾನಗಳನ್ನು ವಿದ್ಯಾರ್ಥಿ ಅರಿಯಲೇ ಬೇಕಾಗಿದ್ದಿತು. ತೈತ್ತಿರೀಯ ಪ್ರತಿಶಾಖ್ಯದಲ್ಲಿ[19] ಹೇಳಿರುವಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ವೇದಸಾಹಿತ್ಯದಲ್ಲಿ ಶಬ್ದಗಳು ಲಘುವೇ ಗುರುವೇ ಸಮವೇ ಹ್ರಸ್ವವೇ ದೀರ್ಘವೇ ಅಥವಾ ಪ್ಲುತವೇ ಲೋಪವೇ ಆಗಮವೇ ವಿಕಾಸವೇ ಪ್ರಕೃತಿಯೇ ವಿಕೃತಿಯೇ ಮುಂತಾದುವನ್ನೂ ಉಚ್ಚಾರಣೆಗೆ ಸಂಬಂ ಪಟ್ಟ ಕ್ರಮಗಳು ಸ್ವರಿತವೇ ಉದಾತ್ತವೇ ನೀಚವೇ ಎಂಬುವನ್ನೂ ಅವಕ್ಕೆ ಬೇಕಾ ನಾದ ಶ್ವಾಸಗಳನ್ನೂ ಅವುಗಳ ಜನ್ಮಸ್ಥಳ (ಉದ್ಗಮ)ಗಳನ್ನೂ ಬಹು ನಿರ್ಣಯ ಕ್ರಮದ ತಿಳಿದು ಅಭ್ಯಸಿಸಬೇಕಾಗಿದ್ದಿತು. ಈ ಬಗೆಯ ಜ್ಞಾನ ಪಡೆಯಲು ಬೇಕಾಗಿದ್ದ ನೀತಿನಿಯಮ ಗಳನ್ನು ಐತರೇಯ ಆರಣ್ಯಕ[20] ಬಹು ಸ್ಪಷ್ಟವಾಗಿ ನಿರೂಪಿಸುತ್ತದೆ. ಆದರೆ ವೇದಾಧ್ಯಯ ಕೇವಲ ಈ ರೀತಿಯ ಬಾಹ್ಯ ಶಿಕ್ಷಣ ಚಟುವಟಿಕೆಯ ನಿಯಂತ್ರಣದಲ್ಲಿ ಪರ್ಯವಸಾನವಾಯಿತೆಂ ತಿಳಿದರೆ ತಪ್ಪಾಗುತ್ತದೆ. ಆಂತರಿಕ ಪರಿಪಕ್ವತೆಯಲ್ಲಿ ಈ ಬಗೆಯ ಶಿಕ್ಷಣ ಮೊದಲ ಹಂತವಷ್ಟೆ ಮಾನಸಿಕ, ಹೃದಯ ಶಿಕ್ಷೆ ಪಡೆದ ಅನಂತರ ಶಿಷ್ಯನ ಮನಃಪ್ರವೃತ್ತಿಗಳಿಗೆ ದೇಹವನ್ನು ಸಿ ಮಾಡುವುದು ಕಾಯ ಶಿಕ್ಷೆಯ ಗುರಿ. ಉಪನಿಷತ್ತುಗಳು ಘೋಷಿಸುವ ಬ್ರಹ್ಮಾನುಭವಕ್ಕೆ ಅ ಕೇವಲ ಪೂರ್ವಸಿದ್ಧತೆಯಷ್ಟೆ. ಗೋಪಥ ಬ್ರಾಹ್ಮಣ ಹೇಳುವಂತೆ ಬ್ರಹ್ಮ ವರ್ಚಸ ಪಡೆಯಬೇ ಜಾತಿ, ಕುಲ, ಮತ, ಅನ್ನ, ಪಾನ, ನಿದ್ರೆ, ದೇಹಸೌಖ್ಯ, ಕಾರ್ಯ, ಸೌಂದರ್ಯ, ಕೀರ್ತಿ, ಕಾಮ ಕ್ರೋಧ, ಮಾತ್ಸರ್ಯ ಮುಂತಾದವುಗಳೆಲ್ಲವನ್ನೂ ನಿಗ್ರಹಿಸಿ ಆತ್ಮಸಂಯಮವನ್ನು ಪಡೆ ಬೇಕು. ಇವುಗಳನ್ನು ಪಡೆಯುವುದು ಸುಲಭಸಾಧ್ಯ ಕೆಲಸವಲ್ಲ. ಕೇವಲ ಶಾಸ್ತ್ರಜ್ಞಾನ ಗಳಿಸ ವುದರಿಂದ ಇವುಗಳನ್ನು ಪಡೆಯಲು ಸಾಧ್ಯವಿಲ್ಲ. ಇಡೀ ಜೀವನವನ್ನೇ ಅದಕ್ಕಾಗಿ ಮುಡಿಪಾಗಿಟ್ಟು ಶ್ರಮಿಸಿದರೆ ಮಾತ್ರ ಅವುಗಳನ್ನು ಪಡೆಯಬಹುದು. ಇಷ್ಟು ಶ್ರಮದ ಫಲ ಬ್ರಹ್ಮ (ಸತ್ಯ ಸಾಕ್ಷಾತ್ಕಾರ.

ಸಂಹಿತೆಗಳ ಅನಂತರದ ಕಾಲದಲ್ಲಿ (ಅದರಲ್ಲಿಯೂ ಉಪನಿಷತ್ತುಗಳ ಕಾಲದ ವೇಳೆಗೆ ವಿವಿಧ ಶಾಸ್ತ್ರಗಳೆಲ್ಲ ವರ್ಗೀಕೃತವಾಗಿ ಪರಾವಿದ್ಯಾ ಮತ್ತು ಅಪರಾವಿದ್ಯಾ ಎಂದು ವಿಭಾ ಸಲ್ಪಟ್ಟಿದ್ದು, ಬ್ರಹ್ಮಸತ್ಯವನ್ನು ತಿಳಿಸುವ ವಿದ್ಯೆ ಮಾತ್ರ ಪರಾವಿದ್ಯೆಯೆಂಬ, ಉಳಿ ಶಾಸ್ತ್ರಗಳೆಲ್ಲ ಅದಕ್ಕೆ ಸಾಧನ ಮಾತ್ರ ಎಂಬ ಭಾವನೆ ಬೆಳೆದಿತ್ತು. ಮುಂಡಕ ಉಪನಿಷತ್ತಿನ[21] ಮಾತಿನಲ್ಲಿ ಪರಾವಿದ್ಯೆ 'ಸರ್ವವಿದ್ಯಾ ಪ್ರತಿಷ್ಠಾ,' ವೇದಾಂತ 'ಸಕಲಶಾಸ್ತ್ರಗಳಿಗೂ ತಳಹದಿ, ವೇದಗಳ ಮುಕುಟ,' 'ವೇದಾಂತೇತರ ಶಾಸ್ತ್ರಗಳೆಲ್ಲ ಅವಿದ್ಯೆ' ಮುಂತಾದ ಭಾವನೆಗಳು ಜ

---

19 ತೈತ್ತಿರೀಯ ಪ್ರತಿಶಾಖ್ಯ, XXIV

20 ಐತರೇಯ ಆರಣ್ಯಕ V (ending section)

21 ಮುಂಡಕೋಪನಿಷತ್, I-1-4, 5

ಪ್ರಾಮಾಣ್ಯವಾಗಿದ್ದುದರಿಂದ ಆನ್ವೀಕ್ಷಿಕೀ ಎಷ್ಟೇ ಜನಪ್ರಿಯ ಶಾಸ್ತ್ರವಾಗಿದ್ದರೂ ಸ್ವತಂತ್ರ ಶಾಸ್ತ್ರ ಎಂಬ ಅಭಿಪ್ರಾಯ ಮೂಡಲು ಸಾಧ್ಯವಾಗಲಿಲ್ಲ.

ಉಪನಿಷತ್ತಿನ ಕಾಲದಲ್ಲಿ ಋಕ್, ಯಜುಸ್ ಮತ್ತು ಸಾಮವೇದಗಳಲ್ಲದೆ ಸುಮಾರು ಇಪ್ಪತ್ತೆಂಟು ವಿದ್ಯೆಗಳ ಹೆಸರನ್ನು ನಾವು ಕಾಣುತ್ತೇವೆ. ಅವುಗಳಲ್ಲಿ ಎರಡರ ಹೆಸರು ನಮಗೆ ತರ್ಕಶಾಸ್ತ್ರದ ಬೆಳವಣಿಗೆಯ ಚರಿತ್ರೆ ರಚಿಸುವ ದೃಷ್ಟಿಗೆ ಉಪಯುಕ್ತವಾದವು. ಒಂದು 'ವಿದ್ಯಾ', ಮತ್ತೊಂದು 'ವಾಕೋ ವಾಕ್ಯಂ'. ಇವುಗಳಲ್ಲಿ 'ವಿದ್ಯಾ' ಶಾಸ್ತ್ರದ ವ್ಯಾಸಂಗ ವಿಷಯದ ಬಗ್ಗೆ ಸ್ವಲ್ಪ ಸಂಶಯ ವ್ಯಕ್ತಪಡಿಸಿದ್ದಾರೆ ಕೆಲವರು. ಶತಪಥ ಬ್ರಾಹ್ಮಣದಲ್ಲಿ[22] ಬರುವ ಈ ಶಬ್ದದ ಬಗ್ಗೆ ಟಿಪ್ಪಣಿ ಬರೆಯುತ್ತ ಸಾಯಣ ಅದು ನ್ಯಾಯ ಮೀಮಾಂಸಾ ದರ್ಶನಗಳಿಗೆ ಅನ್ವಯಿಸುತ್ತದೆ ಎಂದು ವಿವರಿಸಿದರೆ, ಪಾಶ್ಚಾತ್ಯ ವಿದ್ವಾಂಸ ಎಗ್‌ಲಿಂಗ್[23] ಅದೊಂದು ವಿಶೇಷ ಶಾಸ್ತ್ರದ ಹೆಸರೆಂದೂ ಪ್ರಾಯಶಃ ವಿಷ ಅಥವಾ ಸರ್ಪ ವಿದ್ಯೆಗೆ ಅನ್ವಯಿಸುತ್ತದೆಂದೂ, ಗೆಲ್ಡ್ನರ್ ಅದು ಒಂದು ಪ್ರಪ್ರಥಮ ಬ್ರಾಹ್ಮಣ ಗ್ರಂಥವೆಂದೂ ಅಭಿಪ್ರಾಯಪಟ್ಟಿದ್ದಾರೆ. ಆದರೆ ಮತ್ತೊಂದು ಶಾಸ್ತ್ರವಾದ 'ವಾಕೋ ವಾಕ್ಯಂ' ಬಗ್ಗೆ ಈ ಬಗೆಯ ಅಸ್ಪಷ್ಟತೆ ಸಂದೇಹಗಳಿಲ್ಲ. ಇದರ ಸ್ವರೂಪದ ಬಗ್ಗೆ ಟೀಕಿಸುತ್ತ ಗೆಲ್ಡ್ನರ್, ಸಂಭಾಷಣಾ ರೂಪದಿಂದ ಕೂಡಿದ ಇದರ ಕ್ರಮ ಗದ್ಯ ರಚನೆಯ ನಿರೂಪಣಾ ಕ್ರಮದಿಂದ ಭಿನ್ನವಾದುದು ಎಂದಿದ್ದಾನೆ. ಆಚಾರ್ಯ ಶಂಕರರು ತಮ್ಮ ಛಾಂದೋಗ್ಯ ಭಾಷ್ಯದಲ್ಲಿ[24] ಈ ಶಾಸ್ತ್ರಕ್ಕೆ ತರ್ಕಶಾಸ್ತ್ರ ಅಥವಾ ವಾದಶಾಸ್ತ್ರ ಎಂದು ಅರ್ಥ ಮಾಡಿದ್ದಾರೆ. ಸಂಹಿತೆ ಉಪನಿಷತ್ತುಗಳಲ್ಲಿಯೂ ಈ ಶಬ್ದ 'ಬ್ರಹ್ಮೋದಯ' ಅಥವಾ ಬ್ರಹ್ಮತತ್ತ್ವದ ಬಗ್ಗೆ ಮಾಡಿದ ಸಂಭಾಷಣೆಗಳನ್ನು ಸೂಚಿಸುತ್ತದೆ. ಇದರಿಂದ ಸಂಭಾಷಣೆ ಆ ಕಾಲದ ಬೋಧನಾ ಕ್ರಮದಲ್ಲಿ ಅದರಲ್ಲಿಯೂ ದರ್ಶನ ಸಮಸ್ಯೆಗಳ ಜಿಜ್ಞಾಸೆಯಲ್ಲಿ ಬಹು ಪ್ರಧಾನ ಪಾತ್ರ ವಹಿಸುತ್ತಿದ್ದುದು ವ್ಯಕ್ತವಾಗುತ್ತದೆ. ಬೋಧನೆ ಉಪಾಧ್ಯಾಯ ಹೇಳುವ ಮತ್ತು ಶಿಷ್ಯ ಕೇಳುವ 'ಏಕಪಾತ್ರಾಭಿನಯ' ಅಥವಾ 'ಏಕಮಾರ್ಗಾವಲಂಬ'ಯಾಗದೆ, ಅವರಿಬ್ಬರೂ ಸಮಾನ ಜವಾಬ್ದಾರಿಯಿಂದ ನಡೆಸುತ್ತಿದ್ದ ಜ್ಞಾನಾರ್ಜನೆಯ ಕ್ರಮವೆಂದು ಸ್ಥಾಪಿತವಾಗಿತ್ತು. ಅದರ ಉದ್ದೇಶ ಶಿಷ್ಯರ ಮನಸ್ಸಿಗೆ ಬೇಕಿರಲಿ ಬೇಕಿಲ್ಲದಿರಲಿ ಗುರು ತನಗೆ ತಿಳಿದ ವಿಷಯಗಳೆಲ್ಲವನ್ನೂ ನೂಕುವುದಲ್ಲ. ಅವರನ್ನು ಚಕಿತ ವಿಸ್ಮಯಗೊಳಿಸಿ ಸ್ತಂಭೀಭೂತರನ್ನಾಗಿ ಮಾಡುವುದಲ್ಲ. ಅವರ ವಿಚಾರ ಕ್ರಮವನ್ನು ರೂಪಿಸಿ, ಅನುಚಿತವೂ ಅಪ್ರಾಸಂಗಿಕವೂ ಅಹಿತಕರವಾದುದೂ ಅದ ರೀತಿಯಲ್ಲಿ ಚಿತ್ತ ಪ್ರವರ್ತಿಸುವುದನ್ನು ತಪ್ಪಿಸಿ, ಸತ್ಯವೂ ಯುಕ್ತವೂ ಪ್ರಯೋಜನಕಾರಿಯೂ ಅದುದರ ಕಡೆ ತಿರುಗಿಸುವುದು ಆಚಾರ್ಯನ ಆದ್ಯ ಕರ್ತವ್ಯವಾಗಿದ್ದಿತು. ಇದಕ್ಕಿಂತಲೂ ಮಿಗಿಲಾಗಿ, ಯಾವ ಸಮಸ್ಯೆ ಬಂದರೂ ಒಂದು ಬಗೆಯ ಆಜನ್ಮ ಸಿದ್ಧವೂ ಸತತವೂ ಆದ ಮಾನಸಿಕ ಪಾರತಂತ್ರ್ಯದಿಂದ ಶಿಷ್ಯರನ್ನು ತಪ್ಪಿಸಿ ಸ್ವವಿಚಾರ ಪರತೆಯಿಂದ ಸ್ವತಂತ್ರವಾಗಿ ಸಮಸ್ಯೆಗಳಿಗೆ ಉತ್ತರ ನೀಡುವ ಮನೋಧಾರ್ಢ್ಯ ಸಂಸ್ಕೃತಿ

---

[22] ಶತಪಥ ಬ್ರಾಹ್ಮಣ, XI-5, 6, 8

[23] Eggeling, *Sacred Books of the East*, Vol. 44, p. 98

[24] ಛಾಂದೋಗ್ಯ ಉಪನಿಷತ್ತು, ಶಂಕರ ಭಾಷ್ಯ, VII-1. 2, 4

ಅಭ್ಯಾಸವನ್ನು ಮಾಡಿಸಲೆತ್ನಿಸುವುದು ಅವನ ಪ್ರಧಾನ ಮತ್ತು ಪವಿತ್ರ ಜವಾಬ್ದಾರಿಯಾಗಿದ್ದಿತು. ಉಪನಿಷತ್ತುಗಳಲ್ಲಿ ವಿದ್ಯಾರ್ಥಿಗಳು ತಮ್ಮ ಆಚಾರ್ಯರುಗಳನ್ನು ನಿರ್ಭಯ ನಿಸ್ಸಂಕೋಚತೆ ಯಿಂದ ಪ್ರಶ್ನಿಸುವ ಸಂಧರ್ಭಗಳೇ ಅಂತೇವಾಸಿಗಳಿಗೆ ಈ ರೀತಿಯ ಗುರುದತ್ತ ಪ್ರಚೋದಕ ಚರ್ಚಾ ಸ್ವಾತಂತ್ರ್ಯಕ್ಕೆ ನಿದರ್ಶನಗಳು. ಇಲ್ಲಿ ಸ್ವಾತಂತ್ರ್ಯವೆಂದರೆ ಸ್ವೇಚ್ಛಾವರ್ತನದಿಂದ ಕುಚೋದ್ಯದಿಂದ ತೊಡಗಿದ ಚೇಷ್ಟೆಗಳೆಂದು ಅರ್ಥಮಾಡಲಾಗದು. ಕ್ರಮಬದ್ಧ, ವರ್ಗೀಕೃತ, ಶ್ರೇಣಿಗಳಿಂದ ಕೂಡಿದ ವಿಚಾರ ವಿಮರ್ಶಾಪೂರಿತ ಶಾಸ್ತ್ರ ವಿಶ್ಲೇಷಣಕ್ಕೆ ಸಹಾಯಕವಾಗುವ ಪ್ರಶ್ನೆಗಳಿಗೆ ಮಾತ್ರ ಅವಕಾಶವಿರುತ್ತಿದ್ದಿತು. ಪ್ರಶ್ನ ಮತ್ತು ಕೇನೋಪನಿಷತ್ತುಗಳಲ್ಲಿ[25] ಕಾಣಿಸಿ ಕೊಳ್ಳುವ ಗುರುಶಿಷ್ಯ ಸಂಭಾಷಣಾ ಪ್ರಶ್ನೋತ್ತರಗಳು, ಪ್ರಶ್ನೋಪನಿಷತ್ತಿನಲ್ಲಿ[26] ಅಂತೇವಾಸಿಯ ಸಂದೇಹ ನಿವಾರಣಾಸಲುವಾಗಿ ಆಚಾರ್ಯ ನೀಡುವ ಸೂಕ್ತ ಉದಾಹರಣೆಗಳು, ಕಠ ಮತ್ತು ಕೇನೋಪನಿಷತ್ತಿನಲ್ಲಿ ಬರುವ ಕಲ್ಪಿತ ಕಥೆಗಳು ಈ ಬಗೆಯ ಚರ್ಚೆಯ ಸದುದ್ದೇಶಗಳ ಸಮರ್ಥ ನೀಯ ಪ್ರಸಂಗಗಳು. ಉಪನಿಷತ್ತುಗಳ ಈ ವ್ಯವಹಾರ ಪ್ರಾಚೀನ ಗ್ರೀಕ್ ದಾರ್ಶನಿಕರಲ್ಲಿ 'ಅಲೆದಾಡುತ್ತಿದ್ದ ತೊಣಚಿ' ಎಂದು ಹಾಸ್ಯಮಾಡಲ್ಪಡುತ್ತಿದ್ದ ಆದರೆ ಸತ್ಯಪ್ರಿಯ ನಿರ್ಭಯಸ್ಥ ವಾದಕಲಾಕೋವಿದ ಸಾಕ್ರಟೀಸನನ್ನು ನೆನಪಿಗೆ ತರುತ್ತದೆ. ತೃಣಕಾಷ್ಠದಿಂದ ಪರಮಸತ್ಯದ ವರೆಗೆ, ಅರಮನೆಯಿಂದ ಸೆರೆಮನೆಯ ವರೆಗೆ, ಮುಂಜಾವಿನ ಸಂಜೆಯ ವರೆಗೆ ಎಲ್ಲ ಬಗೆಯ ಜನರೊಡನೆ ನಿಸ್ಸಂಕೋಚವಾಗಿ ಪ್ರಶ್ನಿಸಿ ಟೀಕಿಸಿ ಚರ್ಚೆ ಮಾಡುತ್ತಿದ್ದ ಇವನನ್ನು ವಿತಂಡವಾದಿ ಯೆಂದು ಜನ ತಪ್ಪು ತಿಳಿದುದು ಅವರ ದೌರ್ಭಾಗ್ಯವೇ ವಿನಾ ಅವನ ತಪ್ಪಲ್ಲ. ಖಂಡಿತವಾಗಿಯೂ ಅವನ ಉದ್ದೇಶ ಅನ್ಯರನ್ನು ಅವಮಾನಗೊಳಿಸಿ ನೋವುಂಟುಮಾಡಿ ತನ್ಮೂಲಕ ತನ್ನ ಹಿರಿತನ ತೋರಿಸಿಕೊಳ್ಳಬೇಕೆಂಬುದಲ್ಲ. ಅವನೇ ಹೇಳಿಕೊಂಡಿರುವಂತೆ ಸೂಲಗಿತ್ತಿಯಾದ ತನ್ನ ತಾಯಿ ಶಿಶುಗಳ ದೈಹಿಕ ಜನನಕ್ಕೆ ಹೇಗೆ ಕಾರಣಳಾಗಿದ್ದಳೋ, ಶಿಲ್ಪಿಯಾಗಿದ್ದ ಅವನ ತಂದೆ ಹೇಗೆ ರೂಪರಹಿತ ಜಡವಸ್ತುವಿಗೆ ಸುಂದರ ಮೂರ್ತಿಯ ರೂಪ ನೀಡುತ್ತಿದ್ದನೋ ಅದರಂತೆಯೇ ಜನರ ಮನಸ್ಸಿನಲ್ಲಿ ನಿತ್ಯವೂ ಸತ್ಯವೂ ಆದುದರ ಜ್ಞಾನ ಉಂಟುಮಾಡಲು ಅವನು ಶ್ರಮಿಸು ತ್ತಿದ್ದ. ಸತ್ಯಕ್ಕೆ ಜೀವವನ್ನು ಬಲಿದಾನಮಾಡಿದ ಅವನ ವಾದ ಕಲೆಯ ಉದ್ದೇಶ ಸತ್ಯಾನ್ವೇ ಷಣೆಯಲ್ಲಿಯೇ ನಿರತವಾಗುವಂತೆ ವಿಚಾರ ಮತ್ತು ವಾಕ್‌ಶಕ್ತಿಗಳನ್ನು ರೂಪಿಸುವುದಾಗಿದ್ದಿತು ಇದರಂತೆಯೇ ಪ್ರಾಚೀನ ಭಾರತದಲ್ಲಿಯೂ ಸಂಹಿತೋಪನಿಷತ್ತುಗಳ ಕಾಲದಲ್ಲಿ ಸಂಭಾಷಣಾ ಕ್ರಮ ಅಭ್ಯಾಸದಲ್ಲಿದ್ದಿತೆಂದಾಗ ಅದರ ಪ್ರಮಾತೃಸಿದ್ಧಾಂತಗಳು ಜನರನ್ನು ಮರುಳು ಗೊಳಿಸಲು ಚರ್ಚೆಯನ್ನು ಸಾಧನವನ್ನಾಗಿ ಬಳಸದೆ ಸತ್ಯದ ಸೌಧದ ಸೋಪಾನಗಳನ್ನು ನಾಜೋಕಾಗಿ ಮಾತ್ರವಲ್ಲದೆ ಭದ್ರತೆಯಿಂದಲೂ ಕೂಡಿದುದಾಗಿ ಕಟ್ಟಲು ಉಪಯೋಗಿಸಿ ರೆಂಬುದು ನಿಜವಾಗಿಯೂ ಪ್ರಶಂಸನೀಯಾಂಶ.

ಸಂಹಿತೋಪನಿಷತ್ತುಗಳಲ್ಲಿ ನಾವು ಕಾಣುವ ಇದಕ್ಕಿಂತ ಮಿಗಿಲಾದ ಐತಿಹ್ಯವೆಂದರೆ ವಾದಶಾಸ್ತ್ರದ ಮತ್ತು ಸಂಭಾಷಣಾಕಲೆಯ ಕೆಲವು ಪ್ರಧಾನ ಶಬ್ದಗಳ ಪ್ರಯೋಗ. ತೈತ್ತಿರೀಯ

[25] ಪ್ರಶ್ನೋಪನಿಷತ್ತು, III

[26] ಅದೇ, II

ಬ್ರಾಹ್ಮಣದಲ್ಲಿ ಬರುವ ಪಶ್ನೆಗಾರ (ಪ್ರಶ್ನಿನ್), ಅದ್ಭ ವಿಚಾರಣೆ, ಪಾಟಿಸವಾಲು ಮಾಡುವವ (ಅಭಿಪ್ರಶ್ನಿನ್), ಉತ್ತರ ನೀಡುವವ (ಪ್ರಶ್ನವಿವಾಕ), ಅಥರ್ವವೇದದ ಪ್ರತಿಪಾದಕ ಅಥವಾ ವ್ಯಾಖ್ಯಾನಗಾರ (ಪ್ರವಾಚಕ) ಶಬ್ದಗಳು ಅನಂತರ ಕಾಲದ ಆನ್ವೀಕ್ಷಿಕೀ ಶಾಸ್ತ್ರದ ಬೆಳವಣಿಗೆಗೆ ನಾಂದಿಯಾಗಿವೆ. ವಾದಕಲೆ ಒಂದು ವಿಶೇಷಕಲೆ. ವಾದ ಹಂತಹಂತವಾಗಿ ಮುಂದುವರಿಯ ಬೇಕು. ಒಂದು ಸೌಧ ರಚನೆಯಲ್ಲಿ ಹೇಗೆ ಕಟ್ಟಡ ಕಟ್ಟುವವನು ವ್ಯವಸ್ಥಿತ ಕ್ರಮದಲ್ಲಿ ಕೆಲಸ ಸಾಗಿಸುತ್ತಾನೆಯೋ, ಹಾಗೆ ಮಾಡುವಾಗ ಪ್ರತಿ ಹಿಂದಿನ ಹಂತದ ಭದ್ರತೆಯನ್ನು ಪರೀಕ್ಷಿಸಿ ಅನಂತರ ಮುಂದೆ ಕಟ್ಟಡ ಕಟ್ಟುವಿಕೆ ಸಾಗಿಸುತ್ತಾನೆಯೋ, ಹಾಗೆಯೇ ವಾದ ಮಾಡುವವನೂ ಒಂದು ನಿರ್ದಿಷ್ಟವಾದ ಕ್ರಮಮನೋಭಾವಗಳನ್ನು ಪಡೆದು ಮುನ್ನುಗುತ್ತಾನೆ. ಆರಂಭದಲ್ಲಿ ಒಂದು ಪ್ರಶ್ನೆ ಕೇಳಿ ಅದರ ಬಗ್ಗೆ ಒಂದು ಖಚಿತ ನಿರ್ಣಯಕ್ಕೆ ಬರುವ ಮೊದಲು ಅದರ ಬಗ್ಗೆ ವಿರೋಧ ಭಾವನೆಗಳೆಲ್ಲವನ್ನೂ ನಿರೂಪಿಸಿ, ವಿಶ್ಲೇಷಿಸಿ, ಟೀಕಿಸಿ, ವಿಮರ್ಶಿಸಿ, ಅವುಗಳ ಸೂಕ್ತಾ ಸೂಕ್ತತೆಯನ್ನೂ ಪ್ರಯೋಜನವನ್ನೂ ಪರೀಕ್ಷೆಮಾಡಿ ಕೊನೆಯಲ್ಲಿ ತೀರ್ಮಾನಕ್ಕೆ ಬರುತ್ತಾನೆ. ಪ್ರಾಚೀನ ಭಾರತದಲ್ಲಿ ಪ್ರಾಜ್ಞರು ಅನುಸರಿಸುತ್ತಿದ್ದ ಈ ಕ್ರಮ ಆಧುನಿಕ ಪಾಶ್ಚಾತ್ಯ ದಾರ್ಶನಿಕ ನಾದ ಹೆಗೆಲ್‌ನ ಪೂರ್ವಪಕ್ಷ ನಿರೂಪಣ, ಖಂಡನ ಮತ್ತು ಸಿದ್ಧಾಂತವೆಂಬ ಮೂರು ಹಂತ ಗಳಿಂದ ಕೂಡಿದ ಪರಾಮರ್ಶ ಕ್ರಮವನ್ನು ನೆನಪಿಗೆ ತರುತ್ತದೆ. ಈ ಬಗೆಯ ಕ್ರಮಾಚರಣೆಯ ಉದ್ದೇಶ ಕೇವಲ ತೌಲನಿಕ ಮನೋಭಾವನೆಯ ಬೆಳವಣಿಗೆ ಮಾತ್ರವಲ್ಲ. ಪಾಶ್ಚಾತ್ಯ ಗ್ರೀಕ್ ತತ್ವಶಾಸ್ತ್ರದ ಸಮ್ರಾಟನೆಂದು ಪರಿಗಣಿತನಾಗಿರುವ ಪ್ಲೇಟೋ ತನ್ನ ಗುರು ಸಾಕ್ರಟೀಸ ನನ್ನು ಚಿತ್ರಿಸಿರುವ ಕ್ರಮರೀತಿಗಳು ಇಲ್ಲಿ ಪ್ರಾಸಂಗಿಕ. ಅತ್ಯಂತ ಮೇಧಾವಿ ವರಿಷ್ಠ ಮತ್ತು ಧಾರ್ಮಿಕ ಮನೋಭಾವದಿಂದ ಕೂಡಿದ ನಿಷ್ಪಕ್ಷಪಾತಿ ಸಾಕ್ರಟೀಸನನ್ನು ವಾದ ಚತುರನಂತೆ ನಿರೂಪಿಸುವುದು ಮಾತ್ರ ಅವನ ಉದ್ದೇಶವಾಗಿರಲಿಲ್ಲ. ಹಾಗೆಯೇ ಮಾಡಿದ್ದರೂ, ಪ್ಲೇಟೋನ ಗುರಿ ಅದು ಮಾತ್ರ ಎಂದರೆ ತಪ್ಪಾಗುತ್ತದೆ. ಚರ್ಚೆಗಳಲ್ಲೆಲ್ಲಾ ಸಾಕ್ರಟೀಸನೇ ಪ್ರಧಾನ ವ್ಯಕ್ತಿ. ಅವನ ಭಾವನೆಗಳೇ ಅಂತ್ಯದಲ್ಲಿ ಸಮರ್ಥಿಸಿ ಸ್ಥಾಪಿಸಲ್ಪಡುವುವು. ಆದರೂ ಇಡೀ ಸಂಭಾಷಣೆ ಅವನ ಅಭಿಪ್ರಾಯ ನಿರೂಪಣೆ ಮಾತ್ರವಲ್ಲ. ಅವನ ನೇತೃತ್ವದಲ್ಲಿ ಪ್ರತಿಯೊಬ್ಬನೂ ತನ್ನ ಭಾವನೆಗಳನ್ನು ವ್ಯಕ್ತಪಡಿಸಿ ಚರ್ಚೆ ಮುಂದುವರಿಯಲು ಸಹಾಯ ಮಾಡುತ್ತಿದ್ದ. ಇಲ್ಲದಿದ್ದರೆ ಚರ್ಚೆ ಏಕ ಪಕ್ಷಾಭಿಪ್ರಾಯ ದೋಷದಿಂದ ಕೂಡಿರುತ್ತಿತ್ತು. ಪ್ಲೇಟೋ ಬಹು ಚಮತ್ಕಾರದಿಂದ ಸಾಕ್ರಟೀಸನನ್ನು ಈ ದೋಷದಿಂದ ಪಾರು ಮಾಡಿದ್ದಾನೆ. ಇದಕ್ಕೆ ಅವನ ಗುರು ಅನುಸರಿಸುತ್ತಿದ್ದ ಕ್ರಮವೇ ಕಾರಣ. ತನಗೆ ಏನೂ ಗೊತ್ತಿಲ್ಲ ಎಂದೂ, ತಾನು ಸತ್ಯಾನ್ವೇಷಣೆಯಲ್ಲಿ ತೊಡಗಿದ್ದ ಕೇವಲ ವಿದ್ಯಾರ್ಥಿಯೆಂದೂ ಹೇಳಿಕೊಂಡು ಸಾಕ್ರ ಟೀಸ್ ಅನ್ಯರೆಲ್ಲರಿಗೂ ತಮ್ಮ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿ ಸಮರ್ಥಿಸಲು ಅವಕಾಶ ಕೊಡುತ್ತಿದ್ದ. ಅನಂತರ ಚೂರಿಯಂತೆ ಮೊನಚಾದ ತನ್ನ ಪ್ರಶ್ನೆಗಳಿಂದ ಅವರ ಮಾತಿನ ಅಸ್ಪಷ್ಟತೆ ಅಪರಿಪೂರ್ಣತೆಗಳನ್ನೂ ಅವುಗಳ ದುಷ್ಪರಿಣಾಮಗಳನ್ನೂ ತೋರಿಸಿ ಅವರು ತಮ್ಮ ತಪ್ಪು ಗಳನ್ನು ತಾವೇ ಒಪ್ಪಿಕೊಳ್ಳುವಂತೆ ಮಾಡಿ ಸರಿಹಾದಿಯಲ್ಲಿ ಹೋಗಲು ಸಹಾಯಮಾಡುತ್ತಿದ್ದ. ಈ ರೀತಿ ಸಂಭಾಷಣಾ ಕ್ರಮ ಚಿತ್ರಿಸಿ ಪ್ಲೇಟೋ ತನ್ನ ಪ್ರತಿ ಗ್ರಂಥವನ್ನೂ ಅಂದು ಜನಸಾಮಾನ್ಯ ರಲ್ಲಿ ರೂಢಿಯಲ್ಲಿದ್ದ ದರ್ಶನ ಭಾವನೆಗಳ ಕಿರುಕೋಶದಂತೆ ಮಾಡಿದ್ದಾನೆ. ಅಷ್ಟು ಮಾತ್ರವಲ್ಲ,

ಚರ್ಚೆ ಏಕಪಕ್ಷೀಯವೂ ಏಕಮತಾಭಿಪ್ರಾಯದಿಂದ ಮಾತ್ರವೂ ಕೂಡಿರದೆ ನಾನಾಮತಗಳ ಪರೀಕ್ಷೆಯ ವೇದಿಕೆಯಾಗಬೇಕು. ಆಗ ಮಾತ್ರ ಅದು ದರ್ಶನದ ಮಟ್ಟ ಮುಟ್ಟಿದಂತಾಗುತ್ತದೆ ಎಂದು ಸಾಕ್ರಟೀಸನ ಉದಾಹರಣೆಯಿಂದಲೇ ತೋರಿದ್ದಾನೆ. ಈ ಬಗೆಯ ಮನೋಭಾವ ಪ್ರಾಚೀನ ಭಾರತಕ್ಕೆ ಹೊಸದಲ್ಲವೆಂಬುದನ್ನು ಸಂಹಿತೋಪನಿಷತ್ತುಗಳಲ್ಲಿ ಕಾಣಬಹುದು.

ಚರ್ಚೆಯಲ್ಲಿ ಅನೇಕ ಮನಸ್ಸುಗಳು ಒಟ್ಟುಗೂಡುವುದು ಸಹಜ. ಆದರೆ ಅದು ವಿಪರೀತ ಭಾವನೆಗಳ ವಿರೋಧ ಟೀಕೆಗೆ ಅವಕಾಶಮಾಡಿ ಬಿರುಸುಬಿಕ್ಕಟ್ಟುಗಳನ್ನುಂಟುಮಾಡಿ ವಾತಾವರಣದ ಪ್ರಶಾಂತತೆಯನ್ನು ಕಡಿಮೆಮಾಡಬಹುದು. ಇದರಿಂದ ವಿಷಯ ಗ್ರಹಣಕ್ಕೆ ಚ್ಯುತಿ ಬಂದು ಸತ್ಯದ ಕಡೆ ಗಮನ ಕಡಿಮೆಯಾಗಬಹುದೆಂದು ತಿಳಿದ ಬೃಹದಾರಣ್ಯಕವು ಚರ್ಚೆ ಕೇವಲ ವಾದಿ ಪ್ರತಿವಾದಿಗಳ ನಡುವಿನ ಮಾತಿನ ಘರ್ಷಣೆ ಗಲಭೆಗಳಲ್ಲಿ ಪರ್ಯವಸಾನವಾಗದೆ ಮನನ ನಿಧಿಧ್ಯಾಸನಗಳಿಗೆ ಶ್ರವಣ ಅವಕಾಶವಾಗಬೇಕೆಂದು ತಿಳಿಸುತ್ತದೆ. ಅಲ್ಲಿಗೇ ನಿಲ್ಲಿಸದೆ, ಶ್ರವಣದಲ್ಲೇ ಆರು ಹಂತ(ಲಿಂಗ)ಗಳನ್ನು ಅದು ಹೇಳುತ್ತದೆ. ವೇದಾಧ್ಯಯನದ ಮೊದಲು ಮಾಡಬೇಕಾದ ಶಾಸ್ತ್ರೋಕ್ತ ವಿಧಿಗಳು (ಉಪಕ್ರಮ), ಬೋಧಿತ ಪಾಠಗಳ ಸತತ ಪಾರಾಯಣ (ಅಭ್ಯಾಸ), ವಿಷಯಗಳ ಅರ್ಥ ಗ್ರಹಣ (ಅಪೂರ್ವತಾ), ಪರಿಣಾಮಗಳ ತಿಳಿಯುವಿಕೆ (ಫಲ), ವಿವರಣಾ ಟಿಪ್ಪಣಿಗಳನ್ನು ನೋಡುವಿಕೆ (ಅರ್ಥವಾದ) ಮತ್ತು ನಿರ್ಣಯಗಳ ಸಾಧನೆ (ಉಪಪತ್ತಿ) ಎಂಬುವೇ ಆ ಆರು ಲಿಂಗಗಳು. ಈ ರೀತಿಯಲ್ಲಿ ಕೇಳಬೇಕಾದುದನ್ನು ಅಭ್ಯಾಸಮಾಡಬೇಕಾದುದಲ್ಲದೆ ವಿದ್ಯಾರ್ಥಿ ಅನಂತರ ಮನನ ನಿಧಿಧ್ಯಾಸನಗಳಲ್ಲಿ ತೊಡಗಬೇಕೆಂದು ಆ ಗ್ರಂಥದಲ್ಲಿ ತಿಳಿಸಿದೆ. ಇದರಿಂದ ವೇದಾಧ್ಯಯನ ಕಿವಿಯಿಂದ ಕೇಳಿ ಗಿಳಿಗಳಂತೆ ಕಂಠಪಾಠಮಾಡಿ ಒಪ್ಪಿಸುವುದಲ್ಲ. ಹುಮ್ಮಸ್ಸಿನಿಂದ ತುಂಬಿದ 'ಕುಶಾಗ್ರಬುದ್ಧಿ' ಎನ್ನುವಂಥ ಮನೋಜಾಗ್ರತಾ ಸಂಸ್ಕೃತಿ ಪಡೆಯುವ ಕಲೆಯದು ಎಂಬುದು ಸ್ಪಷ್ಟವಾಗುತ್ತದೆ. ಸತ್ಯಾನ್ವೇಷಣೆಯಲ್ಲಿ ತೊಡಗಿದ ವಿಚಾರಧಾರೆಯಲ್ಲಿ ಯಾವ ರೀತಿಯ ಸಂದೇಹ ಸಂಶಯಗಳೂ ತಲೆದೋರಬಾರದು. ಆಗ ಮಾತ್ರ ಜಿಜ್ಞಾಸು ತನ್ನ ಸತ್ಯ ಜಿಜ್ಞಾಸೆಯಲ್ಲಿ ಜಯ ಗಳಿಸಬಲ್ಲ. ಅಂಥ ತೌಲನಿಕ ಮನಃಪ್ರವೃತ್ತಿಯನ್ನು ಚರ್ಚೆ ಮಾತ್ರ ಒದಗಿಸಬಲ್ಲದು ಎಂಬುದನ್ನು ಸಂಹಿತೋಪನಿಷತ್ತುಗಳು ಸ್ಥಾಪಿಸಿವೆ.

ಸಂಹಿತೋಪನಿಷತ್ತುಗಳ ಕಾಲದ ಅನ್ವೀಕ್ಷಿಕೀ ಶಾಸ್ತ್ರದ ಬೆಳವಣಿಗೆಯನ್ನು ಚಿತ್ರಿಸುವಾಗ ಆ ಕಾಲದಲ್ಲಿ ರೂಢಿಯಲ್ಲಿದ್ದ ಕೆಲವು ವಿಶೇಷ ಪದ್ಧತಿಗಳನ್ನು ಸೂಚಿಸುವುದು ಪ್ರಾಸಂಗಿಕ. ವೇದಾಧ್ಯಯನ ಸಂಪನ್ನರಾದ ಗುರುಗಳ ಗೃಹಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಲ್ಲದೆ ನಾನಾ ಪ್ರದೇಶಗಳಲ್ಲಿ ಅಗ್ಗಿಂದಾಗ್ಗೆ ಸಂಚರಿಸುತ್ತಿದ್ದ ವಿದ್ಯಾರ್ಥಿಗಳ ತಂಡ ಈ ಕಾಲದ ಒಂದು ವಿಶೇಷ. ಈ ರೀತಿ ಚಲಿಸುತ್ತಿದ್ದ ವಿದ್ಯಾರ್ಥಿಗಳನ್ನು 'ಚಾರಕ'[28] ಶಬ್ದದಿಂದ ಅಂದಿನ ಗ್ರಂಥಗಳು ಸೂಚಿಸಿವೆ. ('ಚರ್' ಧಾತುವಿನಿಂದ ಬರುವ) ಓದುವ ಸಂಕಲ್ಪವ್ರತವನ್ನು ಅಂಗೀಕರಿಸಿ ಆಚರಿಸುತ್ತಿದ್ದುದರಿಂದ ಅವರಿಗೆ ಆ ಹೆಸರು ಬಂದಿತೆಂದು ಆಚಾರ್ಯ ಶಂಕರರು ಅಭಿಪ್ರಾಯ ಸೂಚಿಸಿದ್ದಾರೆ. ಶತಪಥ ಬ್ರಾಹ್ಮಣ[29]ದಲ್ಲಿ ಈ ಬಗೆಯ ವಿದ್ಯಾರ್ಥಿಗಳ ಬಗ್ಗೆ ಒಂದು

---

[28] ನಾಸಿಕ್‌ನಲ್ಲಿನ ಉಸವದಾತ ಎಂಬಲ್ಲಿ ದೊರೆತಿರುವ ಶಾಸನಗಳಲ್ಲಿ ಈ ಶಬ್ದ ಪ್ರಯೋಗವಾಗಿದೆ (ಚರಕ ಪರ್ಷಭ್ಯಃ) Refer : *Indian Antiquary*, 1883, p. 30

[29] ಶತಪಥ ಬ್ರಾಹ್ಮಣ, IV-2,4,1

ಉಲ್ಲೇಖವಿದೆ. ಇವರು ಮಾಡುತ್ತಿದ್ದ ಕೆಲಸ ನಿಜವಾಗಿಯೂ ಪ್ರಶಂಸನೀಯ. ವೈದಿಕ ವಾಙ್ಮಯ ಪ್ರಚಾರಕ್ಕೆ ಅವರು ಒಂದು ಮುಖ್ಯ ಕಾರಣರಾದರೆಂದರೆ ಅತಿಶಯೋಕ್ತಿಯಲ್ಲ. ನಿಜವಾಗಿಯೂ ಅವರು ಸಂಚರಿಸುವ ಪುಸ್ತಕಭಂಡಾರಗಳಾಗಿದ್ದು, ದೇಶಾದ್ಯಂತ ಪರ್ಯಟನ ಮಾಡಿ ತಜ್ಞರ ಮತ್ತು ವಿದ್ಯಾರ್ಥಿಗಳ ಜೊತೆ ವಾದ ಹೂಡಿ, ಚರ್ಚೆ ಮಾಡಿ ವಿಜೇತರಾಗಿ ಬಹುಮಾನ ಗಳಿಸುತ್ತಿದ್ದುದನ್ನು ಬೃಹದಾರಣ್ಯಕ ಉಪನಿಷತ್ತು ಚಿತ್ರಿಸುತ್ತದೆ. ಶತಪಥ ಬ್ರಾಹ್ಮಣದಲ್ಲಿ [30] ಬರುವ ಉದ್ದಾಲಕ ಆರುಣಿಗಳ ಪ್ರಸಂಗ, ಬೃಹದಾರಣ್ಯಕದಲ್ಲಿ [31] ಬರುವ ಯಾಜ್ಞವಲ್ಕ್ಯ ಮತ್ತು ಗಾರ್ಗಿ ವಾಚಕ್ನವಿ ಮತ್ತು ವಿದಗ್ಧ ಶಾಕಲ್ಯ ಮುಂತಾದವರ ಚರ್ಚಾ ಕೂಟಗಳು ಮತ್ತು ಶತಪಥ ಬ್ರಾಹ್ಮಣದಲ್ಲಿಯೇ [32] ಬರುವ 'ಬ್ರಹ್ಮೋದಯ' ಎಂಬ ವಿಶೇಷ ಕವಿ ಕಾವ್ಯಸ್ಪರ್ಧಾ ಕೂಟಗಳು: ಈ ಬಗೆಯ ವಾದ ಕಲೆಯ ವಿವಿಧ ರೂಪಗಳು. ಇವು ವಾದ ಕಲೆ ಆ ಕಾಲದಲ್ಲಿ ಸತ್ಯಾನ್ವೇಷಣೆಯಲ್ಲಿ ಮುಂದುವರಿದು ಎಷ್ಟು ಜನಪ್ರಿಯವಾಗಿತ್ತೆಂಬುದನ್ನು ಮಾತ್ರವಲ್ಲದೆ ಬುಧ ಜನರು ವಿಮರ್ಶನಾತ್ಮಕ ಪ್ರಜ್ಞೆಯ ಬಗ್ಗೆ ತೋರುತ್ತಿದ್ದ ಆಸಕ್ತಿ ಕಾತರತೆಗಳನ್ನೂ ಸೂಚಿಸುತ್ತವೆ. ಈ ಬಗೆಯ ಉತ್ಸಾಹ ಕೌಶಲಗಳು ಕೇವಲ ಯಜ್ಞಯಾಗಾದಿಗಳಂಥ ವಿಶೇಷ ಸಂದರ್ಭಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಒಂದಾದ ಮೇಲೆ ಒಂದು, ಒಂದಲ್ಲ ಒಂದು ಸಂದರ್ಭವನ್ನು ನೆಪಮಾಡಿಕೊಂಡು ಸಭೆ ಸೇರಿ ಚರ್ಚೆ ನಡೆಸುತ್ತಿದ್ದುದು ಆ ಕಾಲದ ಒಂದು ಸಾಮಾನ್ಯ ಅಭ್ಯಾಸವಾಗಿದ್ದಿತು. ಅದು ಮಾತ್ರವಲ್ಲದೆ ವಾದ ಶಾಸ್ತ್ರದಲ್ಲಿ ಪ್ರಾವೀಣ್ಯ ಪಡೆಯುವ ಸಲುವಾಗಿಯೇ ಏರ್ಪಡಿಸಿದ್ದ ಕೆಲವು ವಿಶೇಷ ಸಂಸ್ಥೆಗಳನ್ನೂ ನಾವು ಈ ಕಾಲದಲ್ಲಿ ಕಾಣುತ್ತೇವೆ. ಕೆಲವು ಸಂಸ್ಥೆಗಳು ವಾದ ಕಲಾ ಚತುರರನ್ನು ಪೋಷಿಸಿ ಅವರ ಕಲಾಭಿವೃದ್ಧಿಗೆ ಬೇಕಾದ ಸಕಲ ಉತ್ತೇಜನಗಳನ್ನು ನೀಡಿ ಅವರುಗಳನ್ನು ವಿಶೇಷ ಸಮಾರಂಭಗಳಲ್ಲಿ ಭಾಗವಹಿಸಲು ಕಳುಹಿಸಿದ ಪ್ರಸಂಗಗಳೂ ಇವೆ. ಇಷ್ಟು ಮಾತ್ರವಲ್ಲ. ಸಾಮಾನ್ಯವಾಗಿ ಗುರು ಶಿಷ್ಯನಿಗೆ ಬೋಧಿಸುವಾಗ ಸಂಭಾಷಣಾ ಅಥವಾ ಚರ್ಚಾಕ್ರಮವೇ ಅತ್ಯುತ್ತಮವಾದುದೆಂಬ ಭಾವನೆ ಆ ಕಾಲದಲ್ಲಿ ಪ್ರಚಾರದಲ್ಲಿದ್ದಿತು. ಯಾಜ್ಞವಲ್ಕ್ಯನು ಮೈತ್ರೇಯಿಗೆ ಬೋಧಿಸುವಾಗ ಉದ್ದೇಶ ಪೂರ್ವಕವಾಗಿಯೇ ಸಂಭಾಷಣಾ (ಚರ್ಚಾ) ಕ್ರಮವನ್ನು ಅನುಸರಿಸಿದನೆಂದು ಬೃಹದಾರಣ್ಯಕ[33] ಹೇಳುತ್ತದೆ. ಕೇವಲ ತಜ್ಞರು ಮಾತ್ರವಲ್ಲ, ರಾಜಮಹಾರಾಜರುಗಳು ಸಹ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ ಸಂದರ್ಭಗಳನ್ನು ಸಂಹಿತೋಪನಿಷತ್ತುಗಳು ಒದಗಿಸುತ್ತವೆ. ಪಾಂಚಾಲ ಪರಿಷತ್ತಿನ ಸದಸ್ಯನಾಗಿದ್ದ ಪ್ರವಾಹನ ಜೈವಲಿ ಪ್ರತಿ ಪ್ರಾತಃಕಾಲವೂ ವಿಶೇಷ ಪರಿಶ್ರಮ ಪಡೆದಿದ್ದ ಸಭೆಯೊಂದಕ್ಕೆ ಹೋಗುತ್ತಿದ್ದನೆಂದು ಛಾಂದೋಗ್ಯದಲ್ಲಿ[34] ಹೇಳಿದೆ. ಅವನು ಹೋಗುವುದಿರಲಿ, ದೊರೆಗಳು ಆಸಕ್ತಿ ವಹಿಸಿ ತಾವೇ ತಮ್ಮ ಆಸ್ಥಾನಗಳಲ್ಲಿ ಅಂಥ ಕೂಟಗಳನ್ನು ಏರ್ಪಡಿಸುತ್ತಿ

---

[30] ಅದೇ, XI-4,1

[31] ಬೃಹದಾರಣ್ಯಕ ಉಪನಿಷತ್ತು, VI-1

[32] ಶತಪಥ ಬ್ರಾಹ್ಮಣ, VIII-5,2

[33] ಬೃಹದಾರಣ್ಯಕ ಉಪನಿಷತ್ತು, II-4, IV-5

[34] ಛಾಂದೋಗ್ಯ ಉಪನಿಷತ್ತು, I-8

ದ್ದುದು ಇನ್ನೂ ಸ್ವಾರಸ್ಯದ ವಿಷಯ. ವಿದೇಹದ ದೊರೆ ಜನಕ ತನ್ನ ಸಭೆಗೆ ನಾನಾ ದೇಶಗಳಿಂದ ಬುಧ ಜನರನ್ನು ಕರೆಸುತ್ತಿದ್ದನೆಂದು ಹೇಳುವ ಬೃಹದಾರಣ್ಯಕದ[35] ಉಕ್ತಿ ಇದಕ್ಕೆ ನಿದರ್ಶನ. ಈ ರೀತಿಯ ಸಂದರ್ಭಗಳು ಕೇವಲ ಗುರುಕುಲವಾಸಗಳಲ್ಲಿ ಮಾತ್ರವಲ್ಲದೆ ನಾಡಿನಾದ್ಯಂತ ಚಲಿಸುತ್ತಿದ್ದ ಆಚಾರ್ಯಶಿಷ್ಯ ತಂಡಗಳಲ್ಲಿಯೂ ರಾಜಸಭೆಗಳಲ್ಲಿಯೂ ವಾದ ಕಲೆ ಬೆಳೆಯುತ್ತಿದ್ದಿತೆಂಬುದನ್ನು ಸ್ಥಾಪಿಸುತ್ತವೆ. ಚಲನಪ್ರಿಯರಾಗಿದ್ದ ಅಂಥ ಆಚಾರ್ಯ ಅಂತೇವಾಸಿಗಳ ತಂಡ ತಮ್ಮ ದೇಶಪರ್ಯಟನೆಗಳ ಮೂಲಕ ವಿದ್ಯಾಕಾಂಕ್ಷಿಗಳನ್ನೂ ಪಂಡಿತರನ್ನೂ ಸಂಧಿಸಿ ವಿವಿಧ ಶಾಸ್ತ್ರಗಳ ಬಗ್ಗೆ, ಅವರಲ್ಲಿಯೂ ಅಂದು ಬಹು ಮುಖ್ಯವೆಂದು ಪರಿಗಣಿಸಲ್ಪಟ್ಟಿದ್ದ ಆತ್ಮಬ್ರಹ್ಮ ತತ್ವಗಳನ್ನು ವಿಶ್ಲೇಷಿಸಿ ವಿಮರ್ಶಿಸಿ ದೃಢನಿರ್ಣಯಗಳನ್ನು ಕೈಗೊಳ್ಳುವಂತೆ ಮಾಡಲೆತ್ನಿಸಿದುದು ವಾದಶಾಸ್ತ್ರದ ಪ್ರಗತಿಗೆ ಬಹು ಬೆಂಬಲ ನೀಡಿದಂತಾಯಿತು. ಇಂಥ ವಿಚಾರ ವಿಮರ್ಶನ ಜಿಜ್ಞಾಸೆಯ ಫಲವೇ ಇಂದು ವಿಶ್ವವಿಖ್ಯಾತವಾಗಿರುವ ಉಪನಿಷತ್ತುಗಳು.

ಪಂಡಿತ ಪರಿಷತ್ತುಗಳು, ಚರ್ಚಾಗೋಷ್ಠಿಗಳಲ್ಲದೆ ಆಗ್ಗಿಂದಾಗ್ಗೆ ರಾಜಮಹಾರಾಜರುಗಳಿಂದ ಏರ್ಪಡಿಸಲ್ಪಡುತ್ತಿದ್ದ ವಿಶೇಷ ಸಮಾರಂಭ ಸಮ್ಮೇಳನಗಳು ಈ ಕಾಲದಲ್ಲಿ ವಿಚಾರ ವಿಮರ್ಶೆ ವಿನಿಮಯ ಮಾಡುವ ಪ್ರಧಾನ ಸಾಧನಗಳಾಗಿದ್ದುವು. ಇಂಥ ಸಮಾರಂಭಗಳಲ್ಲಿ ಪ್ರಾಯಶಃ ನಾಡಿನ ಪರಿಷ್ಕರಿಸಿದ ಮಹಾ ಪಂಡಿತರು ಮತ್ತಿತರ ಬುಧ ಜನರು ಭಾಗವಹಿಸಿ ವಿವಿಧ ಶಾಸ್ತ್ರಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ ಸಂಶಯ ನಿವಾರಣೆ ಮಾಡುತ್ತಿದ್ದರು. ಅವು ಜ್ಞಾನ ರಾಶಿಯ ವಿನಿಮಯ ಕೇಂದ್ರಗಳಾಗಿದ್ದುದರಲ್ಲಿ ಸಂದೇಹವೇ ಇಲ್ಲ. ಬೃಹದಾರಣ್ಯಕ ಉಪನಿಷತ್ತು, ಶತಪಥ ಬ್ರಾಹ್ಮಣ ಮತ್ತು ವಾಯು ಪುರಾಣದಲ್ಲಿ ಬರುವ ವಿದೇಹ ಮಹಾರಾಜ ಜನಕ ಅಶ್ವಮೇಧ ಯಾಗ ಸಂದರ್ಭದಲ್ಲಿ ಆಮಂತ್ರಿಸಿದ್ದ ವಿದ್ವದ್ಗೋಷ್ಠಿ ಈ ಬಗೆಯ ಸಮ್ಮೇಳನಕ್ಕೆ ನಿದರ್ಶನ. ಪಾಂಡಿತ್ಯ, ಚರ್ಚಾ ಕೌಶಲ ಮುಂತಾದುವನ್ನು ಪ್ರದರ್ಶಿಸಿದವರಿಗೆ ದೊರೆ ಸಾವಿರ ದನಗಳ ಕೊಂಬಿಗೆ ಚಿನ್ನದ ನಾಣ್ಯಗಳನ್ನು ಕಟ್ಟಿದ ಚೀಲಗಳನ್ನು ಬಹುಮಾನವಾಗಿ ಕೊಟ್ಟನೆಂಬ ಬೃಹದಾರಣ್ಯಕದ ವಾಕ್ಯ[36] ಅಂದಿನ ಕಾಲದಲ್ಲಿ ಚರ್ಚೆ, ವಾದ ಕಲೆಗೆ ಜನ ಎಷ್ಟು ಗೌರವ ನೀಡುತ್ತಿದ್ದರೆಂಬುದಕ್ಕೆ ಸಾಕ್ಷಿ. ಈ ಬಗೆಯ ಸಮಾರಂಭಗಳು ಬಹು ವೈಭವಪೂರಿತವಾಗಿ ನಡೆಯುತ್ತಿದ್ದುವೆಂದೂ, ಚರ್ಚೆ ಮಹಾಪಂಡಿತರಿಗೆ ಮಾತ್ರ ಸೀಮಿತವಾಗಿದ್ದರೂ ಅದನ್ನು ನೋಡಿ ಕೇಳಿ ಸಂತೋಷ ಪಡಲು ಸಾವಿರಾರು ಮಂದಿ ಪ್ರೇಕ್ಷಕ ವರ್ಗದವರು ಸೇರುತ್ತಿದ್ದರೆಂದೂ ಪ್ರೊ. ಓಲ್ಡನ್‌ಬರ್ಗ್ ತಿಳಿಸಿದ್ದಾರೆ. ಕೇವಲ ನಾಡಿನ ಪ್ರಜೆಗಳಿಗೆ ಅದು ಮೀಸಲಾಗಿರದೆ, ಇತರ ರಾಷ್ಟ್ರಗಳ ಪ್ರತಿನಿಧಿಗಳೂ ಅದಕ್ಕೆ ಬರುತ್ತಿದ್ದರು. ವಿಶೇಷ ಗೌರವಾದರಗಳಿಂದ ಆಹ್ವಾನಿತರಾದ ಅಂಥ ಅನ್ಯರಾಷ್ಟ್ರ ಪ್ರತಿನಿಧಿಗಳಿಂದಾಗಿ ಉಭಯರಾಷ್ಟ್ರಗಳ ನಡುವೆ ವಿಚಾರ ವಿನಿಮಯ ಬಹು ಬಿರುಸಾಗಿ ಸಾಗಿ ನಡೆದು ಅನ್ಯೋನ್ಯ ಪ್ರೇರಣೆ ಪ್ರೈಪೋಟಿಯಿಂದ ಉಭಯ ರಾಷ್ಟ್ರಗಳಲ್ಲಿಯೂ ವಾದ ಕಲೆ ಪ್ರಗತಿಹೊಂದಲು ಕಾರಣವಾಯಿತೆಂದು ಅವರು ಅಭಿಪ್ರಾಯ ಸೂಚಿಸಿದ್ದಾರೆ.[37]

---

[35] ಬೃಹದಾರಣ್ಯಕ ಉಪನಿಷತ್ತು, VI-2

[36] ಬೃಹದಾರಣ್ಯಕ ಉಪನಿಷತ್ತು, III-8

[37] Oldenberg : *Buddha*, p. 30

ಇವೆಲ್ಲಕ್ಕಿಂತಲೂ ಮಿಗಿಲಾದ ಒಂದು ವಿಶೇಷಾಂಶವೆಂದರೆ, ಚರ್ಚಾ ಕೂಟ ಸಮಾರಂಭಗಳಲ್ಲಿ ಭಾಗವಹಿಸುವ ಅಧಿಕಾರ ಅವಕಾಶಗಳು ಗಂಡಸರಿಗೆ ಮಾತ್ರ ಸೀಮಿತವಾಗಿರದೆ ಹೆಂಗಸರಿಗೂ ಸಮಾನಾವಕಾಶ ದೊರೆಯುತ್ತಿದ್ದುದು. ಪ್ರಾಚೀನ ಭಾರತದಲ್ಲಿ ಮಹಿಳೆ ತನ್ನ ಯೋಗ್ಯತೆ ದಕ್ಷತೆಗಳಿಂದ ಎಂಥ ಸ್ಥಾನ ಗಳಿಸಿದ್ದಳೆಂಬುದಕ್ಕೆ ಇದು ಸಾಧಾರ ಸಾಕ್ಷಿ, 'ಕಾಶಿ ಅಥವಾ ವಿದರ್ಭದಿಂದ ಬರುವ ಧನುರ್ಧಾರಿ ಹೇಗೆ ಸಶಸ್ತ್ರನಾಗಿ ತನ್ನ ಪರಾಕ್ರಮ ತೋರಲು ಬರುತ್ತಾನೆಯೋ ಹಾಗೆ ನಾನು ವಾದದಲ್ಲಿ ನಿನ್ನನ್ನು ಎದುರಿಸಲು ಸಿದ್ಧನಿದ್ದೇನೆ' ಎಂದು ಯಾಜ್ಞವಲ್ಕ್ಯನಿಗೆ ಗಾರ್ಗಿ ಕೊಡುವ ಪ್ರತ್ಯುತ್ತರ ಶಾಸ್ತ್ರಜ್ಞಾನ ಮತ್ತು ವ್ಯವಸ್ಥಿತ ಮತ್ತು ಸುಶಿಕ್ಷಿತ ವಿಚಾರ ಕ್ರಮಗಳಲ್ಲಿ ಸ್ತ್ರೀ ಯಾವ ಮಟ್ಟ ಮತ್ತು ಪರಿಪೂರ್ಣತೆ ಪಡೆದಿದ್ದಳೆಂಬುದರ ಸೂಚಕ.

ಸಂಹಿತೋಪನಿಷತ್ತುಗಳ ಕಾಲದಲ್ಲಿ ಆನ್ವೀಕ್ಷಿಕೀಶಾಸ್ತ್ರ ಗಳಿಸಿದ್ದ ಪ್ರಗತಿ ಸ್ಥಾನಮಾನಗಳನ್ನು ಮೇಲೆ ಸೂಕ್ಷ್ಮವಾಗಿ ತಿಳಿಸಿದ್ದಾಯಿತು. ಇವೆಲ್ಲಕ್ಕಿಂತಲೂ ಉಪನಿಷತ್ತುಗಳ ಹಿರಿಮೆಯನ್ನು ಎತ್ತಿ ತೋರುವ ಇನ್ನೂ ಪ್ರಧಾನ ವಿಷಯವನ್ನು ಕಠೋಪನಿಷತ್ತಿನ ಕೆಲವು ವಾಕ್ಯಗಳು ನಮ್ಮ ಗಮನಕ್ಕೆ ತರುತ್ತವೆ. ಅದೇನೆಂದರೆ ಆನ್ವೀಕ್ಷಿಕೀಶಾಸ್ತ್ರದ ವಿಷಯ ವ್ಯಾಪ್ತಿ ಉಪಯುಕ್ತತೆಯ ಸೀಮಿತತ್ವದ ಅರಿವು. ಗುಲಗಂಜಿಗೆ ತನ್ನ ತಪ್ಪಿನ ಅರಿವಿರುವುದಿಲ್ಲ ಎಂಬಂತೆ ಪ್ರಾಯಶಃ ಶಾಸ್ತ್ರಜ್ಞರಿಗೆ ತಾವು ಪರಿಶ್ರಮ ಪಡೆದಿರುವ ಜ್ಞಾನದ ವ್ಯಾಪಕತೆ ವಿಸ್ತೀರ್ಣತೆಗಳ ಪರಿಮಿತಿಯ ಅರಿವು ಅಷ್ಟಾಗಿರುವುದಿಲ್ಲ. ಇದ್ದರೂ ತಮ್ಮ ಸಾಧನೆ ಹಿರಿತನಗಳ ಕಡೆ ಗಮನ ಹರಿಸುವಷ್ಟು ಲೋಪದೋಷಗಳ ಕಡೆ ಗಮನ ಹರಿಸುವುದು ಕಡಿಮೆ. ಖ್ಯಾತ ದಾರ್ಶನಿಕ ಅಪ್ಪಯ್ಯ ದೀಕ್ಷಿತರು ಈ ವಿಷಯವನ್ನು ಪ್ರಸ್ತಾಪಿಸುತ್ತ, 'ನೀತಿಜ್ಞಾನಿಗಳು, ವೇದಜ್ಞಾನಿಗಳು, ಬ್ರಹ್ಮಜ್ಞಾನಿಗಳು ಸಹ ದೊರಕುತ್ತಾರೆ. ಆದರೆ ಸ್ವ ಅಜ್ಞಾನದ ಜ್ಞಾನಿಗಳು ಬಹು 'ದುರ್ಲಭರು'[38] ಎಂದು ಅಪ್ಪಣೆ ಕೊಡಿಸಿದ್ದಾರೆ. ನಮಗೆ ನಮ್ಮ ಬೆನ್ನು ಕಾಣದಿರುವುದು ಸಹಜವಾದುದು. ಇದೇ ಅಭಿಪ್ರಾಯವನ್ನು ಪ್ರಾಚೀನ ಗ್ರೀಕ್ ತತ್ತ್ವಜ್ಞಾನಿ ಸಾಕ್ರಟೀಸ್ ತನ್ನ ಅಮರವಾಣಿಯೊಂದರಲ್ಲಿ ಹೊರಗೆಡಹಿದ್ದಾನೆ. ಅವನು ವರಿಷ್ಠಜ್ಞಾನಿ. ಅಂದಿನ ಗ್ರೀಕ್ ಸಾಮ್ರಾಜ್ಯದಲ್ಲಿನ ಅತ್ಯಂತ ಮೇಧಾವಿ ಎಂದು ಪೌರರಿರಲಿ, ಗ್ರೀಸ್ ನಗರದ ದೇವತೆಗಳು ಸಹ ನುಡಿದುದನ್ನು ಕೇಳಿ ಕುತೂಹಲ ಮಾತ್ಸರ್ಯಗಳು ಕೆರಳಿದ ಕೆಲವರು ಅವನನ್ನು ಸಂಧಿಸಿ 'ಏಕೆ ನೀನು ಅತ್ಯಂತ ಮೇಧಾವಿ ಮತ್ತು ವಿವೇಕಸ್ಥ?' ಎಂದು ಕೇಳಿದಾಗ ಅವನು ಉತ್ತರಿಸಿದ ನಂತೆ, 'ಹೌದು, ನಿಜವಾಗಿಯೂ ನಾನು ವಿವೇಕಸ್ಥ. ಏಕೆಂದರೆ ನನ್ನ ಅಜ್ಞಾನದ ಅರಿವು ನನಗಿದೆ,' ಎಂದು. ನಿಜವಾದ ಶಾಸ್ತ್ರಜ್ಞಾನಿಗೆ ಅವನ ಮತ್ತು ಅವನ ಶಾಸ್ತ್ರದ ಮಿತಿಯ ಅರಿವಿರಬೇಕು. ಈ ಬಗೆಯ 'ನಮ್ಮ ಅಜ್ಞಾನದ ಅಳತೆಯ ಅರಿವು' ಉಪನಿಷತ್ತುಗಳಿಗೆ ತಿಳಿಯದ ವಿಷಯವಲ್ಲ. ಡಾ॥ ರಾಧಾಕೃಷ್ಣನ್‌ರವರು[39] ಹೇಳುವಂತೆ ಉಪನಿಷತ್ತುಗಳಲ್ಲಿ ಕಾಣ

---

[38] ನೀತಿಜ್ಞಾ ನಿಯತಿಜ್ಞಾ ವೇದಜ್ಞಾ ಅಪಿ ಭವಂತಿ ಶಾಸ್ತ್ರಜ್ಞಾಃ ।
ಬ್ರಹ್ಮಜ್ಞಾ ಅಪಿ ಲಭ್ಯಾಃ ಸ್ವಾಜ್ಞಾನ ಜ್ಞಾನಿನೋ ವಿರಲಾಃ ॥

—ಅಪ್ಪಯ್ಯ ದೀಕ್ಷಿತ

[39] *Indian Philosophy*, Dr. S. Radhakrishnan, Vol. I, page 174

ಬರುವ ಬ್ರಹ್ಮಜ್ಞಾನಿಗಳು ಮಾನವನ ಮನಸ್ಸು ಬುದ್ಧಿಗಳು ತಮ್ಮ ಸಾಂಪ್ರದಾಯಿಕ ಮತ್ತು ಸಾಂಕೇತಿಕ ಲಾಂಛನಗಳಿಂದ ಸತ್ಯವನ್ನು ಮುಟ್ಟಲಾರವು ಎಂಬುದನ್ನು ಮನಗಂಡಿದ್ದರು. ಅತೀಂದ್ರಿಯವೂ ಮನೋತೀತವೂ ಶಾಸ್ತ್ರ ಮತ್ತು ಭಾಷೆಗಳಿಗೆ ನಿಲುಕದುದೂ ಆದ ಸತ್ಯವನ್ನು ದೇಶ ಕಾಲ ಉಪಾಧಿಗಳ ಸಂಕೋಲೆಗೆ ಸಿಕ್ಕಿಬಿದ್ದಿರುವ ಕಾಯು ಮನಸ್ಸುಗಳು ಎಂದೂ ಗ್ರಹಿಸಲಾರವು. ಇದನ್ನು ತಿಳಿದೇ ಬ್ರಹ್ಮಋಷಿಗಳು 'ಮಾತು ಅದರಿಂದ ಹಿಮ್ಮೆಟ್ಟುತ್ತದೆ. ಮನ ಅದರ ಬಳಿ ಹೋಗಲಾರದು' ಎಂದು ವ್ಯಕ್ತಪಡಿಸಿದ್ದಾರೆ.[40] ಕಣ್ಣು ಅಲ್ಲಿಗೆ ಹೋಗುವುದಿಲ್ಲ. ಮತ್ತಾವ ಸಾಮಾನ್ಯ ಗ್ರಹಣೇಂದ್ರಿಯಗಳಿಗೂ ಅದು ನಿಲುಕುವುದಿಲ್ಲ. ಹಾಗಾದರೆ ಅದನ್ನು ಪಡೆಯುವ ಕ್ರಮ ಹೇಗೆ? ಎಂದು ಪ್ರಶ್ನಿಸುವ ಕೇನೋಪನಿಷತ್ತಿನ[41] ಮುಖ್ಯ ಸಮಸ್ಯೆಯೂ ಇದೇ. ಬೌದ್ಧಿಕ ವಿವರಣೆಗಳು, ಶಾಬ್ದಿಕ ನಿರೂಪಣಾ ಸಂಕೇತಗಳು ಸತ್ಯದ ಕೇವಲ ಅಪೂರ್ಣ ಚಿತ್ರ ಮಾತ್ರ ನೀಡಬಲ್ಲವು ; ಪೂರ್ಣ ಚಿತ್ರವನ್ನಲ್ಲ. ಶಾಸ್ತ್ರಜ್ಞಾನ ನೀಡುವ ಕಾರ್ಯಕಾರಣ ವಿವರಗಳು, ಹೇತು ವಿದ್ಯೆಯ ವಿಚಾರ ರೂಪ ಆದರ್ಶ ನಿಯಮಗಳು, ವಿಚಾರವನ್ನು ಪ್ರತಿಬಿಂಬಿಸುವ ಸಾಧನವಾದ ಭಾಷೆಯನ್ನು ಸಜ್ಜುಗೊಳಿಸಲು ಕಾತರನಾದ ವ್ಯಾಕರಣಶಾಸ್ತ್ರಜ್ಞ ಹೇಳುವ ಕ್ರಮಗಳೆಲ್ಲವೂ ಸತ್ಯಾನ್ವೇಷಣೆಯ ಹಾದಿಯಲ್ಲಿ ಅಸಮರ್ಪಕ ಮತ್ತು ಅಪೂರ್ಣ ಸಾಧನಗಳು ಎಂಬುದನ್ನು ಮನಗಂಡಿದ್ದ ಉಪನಿಷತ್ತುಗಳು ತಮ್ಮ ಅಸಾಮರ್ಥತೆಯ ಚಿಂತೆಯಲ್ಲಿಯೇ ಕಾಲಹರಣ ಮಾಡದೆ ಸತ್ಯವನ್ನು ಪಡೆಯಲು ಇವೆಲ್ಲವನ್ನು ಮೀರಿದ ಅಂತರ್ದೃಷ್ಟಿ ಕ್ರಮನ್ನು ಬೋಧಿಸುತ್ತವೆ. ಎಲ್ಲ ಶಾಸ್ತ್ರಗಳನ್ನೂ ಬದಿಗೊತ್ತಿ ಕೇವಲ ಮಗುವಿನಂತೆ ವರ್ತಿಸಲು ಬಹು ಸ್ವಾರಸ್ಯವಾಗಿ ಸತ್ಯಾನ್ವೇಷಕನಿಗೆ ಬೃಹದಾರಣ್ಯಕ[42] ಬುದ್ಧಿ ಹೇಳುತ್ತದೆ. 'ಆತ್ಮಸಾಕ್ಷಾತ್ಕಾರ ಜ್ಞಾನದಿಂದ ಬಂದುದಲ್ಲ. ಬುದ್ಧಿಕೌಶಲದ ಫಲವಲ್ಲ ಅದು. ಬಹುಗ್ರಂಥಾವಲೋಕನ ಮಾಡುವುದಕ್ಕೆ ಸಿಗುವ ಪಾರಿತೋಷಕವಲ್ಲ ಅದು.[43] ಪರಮಾಣುವಿಗಿಂತ ಅತ್ಯಂತ ಸೂಕ್ಷ್ಮವಾದುದು ಅದು. ಅತ್ಯಂತ ಹಿರಿಯದಾದುದಕ್ಕಿಂತಲೂ ಹಿರಿಯದೂ ಹೌದು ಅದು.[44] ಅದನ್ನು ತಿಳಿದಿದ್ದೇವೆಂದು ಹೇಳಿಕೊಳ್ಳುವವರಿಗೆ ನಿಜವಾಗಿಯೂ ಅದರ ಪರಿಚಯವೇ ಇರುವುದಿಲ್ಲ. ಅದನ್ನು ನಾವು ತಿಳಿದಿಲ್ಲ ಎಂದು ಹೇಳುವವರಿಗೆ ನಿಜವಾಗಿಯೂ ಅದು ಲಭ್ಯವಾಗಿರುತ್ತದೆ.'

---

[40] 'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ' – ತೈತ್ತಿರೀಯ ಉಪ. II-4

[41] ನತತ್ರ ಚಕ್ಷುಃ ಗಚ್ಛತಿ ನವಾಕ್ ಗಚ್ಛತಿ ನೋ ಮನಃ ।
ನವಿದ್ಮೋ ನವಿಜಾನೀಯೋ ಯಥೈತದನುಶಿಷ್ಯಾತ್ ॥ –ಕೇನೋಪನಿಷತ್ I–3

[42] ತಸ್ಮಾತ್ ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್
–ಬೃಹದಾರಣ್ಯಕ ಉಪ. III–5–1

[43] ನಾಯಮಾತ್ಮಾ ಪ್ರವಚನೇನಲಭ್ಯೋ ನಮೇಧಯಾ ನಬಹುನಾಶ್ರುತೇನ
–ಕಠೋಪನಿಷತ್ II 23 (II–23)

[44] ಅಣೋರಣೀಯಾನ್ ಮಹತೋಮಹೀಯಾನ್–
ಶ್ವೇತಾಶ್ವತರ ಉಪ, III–20

ಎಂದು ಹೇಳುವ ಕೇನೋಪನಿಷತ್ತಿನ ಮಾತು[45] ನಿಜವಾಗಿಯೂ ಗಮನಾರ್ಹವಾದುದು. ಹೀಗೆಂದ ಮಾತ್ರಕ್ಕೆ ಉಪನಿಷತ್ತುಗಳು ಶಾಸ್ತ್ರಜ್ಞಾನ ಅನಾವಶ್ಯಕ ಅಪ್ರಯೋಜಕವೆಂದು ಸಾರುತ್ತವೆ ಎಂದು ಅರ್ಥ ಮಾಡಬಾರದು. ಬೃಹದಾರಣ್ಯಕ ಉಪನಿಷತ್ತು ಹೇಳುವಂತೆ 'ಶಾಸ್ತ್ರಜ್ಞಾನವಿಲ್ಲದ ವಿಚಾರಣೆ ಅಂಧತನ. ಆದರೆ ಶಾಸ್ತ್ರಜ್ಞಾನವೇ ಸರ್ವಸ್ವವೆಂದು ತಿಳಿಯುವುದು ಅಂಧತನದಲ್ಲಿ ಅಂಧತನ.[46] ಉಪನಿಷತ್ತಿನ ಈ ಬಗೆಯ ಉಕ್ತಿಗಳು ಅದರ ತತ್ತ್ವಗಳ ಮನೋಭಿಪ್ರಾಯಗಳ ಸೂಚಕ ಪ್ರತೀಕಗಳು. ಶಾಸ್ತ್ರ ತನ್ನ ವ್ಯಾಸಂಗ ವಿಷಯ ಪ್ರತಿಪಾದನೆ, ನಿರೂಪಣಾಕ್ರಮ ಮತ್ತು ಉಪಯುಕ್ತತೆಗಳ ಕಡೆ ಗಮನ ಹರಿಸಿದಂತೆ ತನ್ನ ಕ್ಷೇತ್ರ ವಿಸ್ತೀರ್ಣಶಕ್ತಿ ಪ್ರಾಮುಖ್ಯಗಳ ಮಿತಿಯ ಕಡೆಗೂ ಗಮನ ಕೊಟ್ಟದ್ದು ಪ್ರಾಚೀನ ಭಾರತದ ಶಾಸ್ತ್ರಜ್ಞರ ದಕ್ಷತೆಯ ಕುರುಹು. ಆದರಲ್ಲಿಯೂ ತರ್ಕಶಾಸ್ತ್ರದ ಬಗ್ಗೆ ಈ ಮಾತು ಅತ್ಯಂತ ಸಮರ್ಪಕ. ಅನೇಕರ ಶಾಸ್ತ್ರಗಳೆಲ್ಲವೂ ಒಂದಲ್ಲ ಒಂದು ವಿಷಯವನ್ನು ಆರಿಸಿಕೊಂಡು ಕ್ರಮಬದ್ಧ ರೀತಿಯಲ್ಲಿ ಅದರ ಬಗ್ಗೆ ವಿಚಾರಮಾಡುತ್ತವೆ. ಪ್ರತಿಯೊಂದು ಶಾಸ್ತ್ರವೂ ವಿಚಾರಕ್ರಮವನ್ನು ತನ್ನ ಆಧಾರ ಸ್ತಂಭ ಅಥವಾ ಮೂಲ ಸಲಕರಣೆಯಂತೆ ಬಳಸುತ್ತದೆ. ಅಷ್ಟಾದರೂ ಯಾವ ಶಾಸ್ತ್ರವೂ ತನ್ನ ಸಾಧನವಾದ ವಿಚಾರಕ್ರಮವನ್ನೇ ಕುರಿತು ವಿಚಾರಮಾಡುವುದಿಲ್ಲ. ತರ್ಕವಾದರೋ ಈ ಪವಿತ್ರ ಕೆಲಸಮಾಡಿ ಅನ್ಯ ಶಾಸ್ತ್ರಗಳೆಲ್ಲಕ್ಕೂ ಮಹದುಪಕಾರಮಾಡುತ್ತದೆ. ಆದುದರಿಂದಲೇ ಅದಕ್ಕೆ 'ಶಾಸ್ತ್ರಗಳ ಶಾಸ್ತ್ರ' ಎಂಬ ಬಿರುದು. ಇದನ್ನು ತಿಳಿದೇ ಕೌಟಿಲ್ಯ ಅದನ್ನು 'ಸರ್ವಶಾಸ್ತ್ರೋಪಕಾರಕ'[47] ಎಂದು ಹೊಗಳಿದ್ದಾನೆ. ಇಷ್ಟಾದರೂ ಉಪನಿಷತ್ತಿನ ಕಾಲದ ಬುಧಜನರು ತರ್ಕಕ್ಕೆ ಕೌಟಿಲ್ಯನಂಥವರು ಕೊಟ್ಟ ಬಿರುದನ್ನು ಕೇಳಿ ತಲೆದೂಗಿ ಸುಮ್ಮನಾಗಲಿಲ್ಲ. ಅಂಥ ಶಾಸ್ತ್ರಗಳ ಶಾಸ್ತ್ರಕ್ಕೂ ಮಿತಿಯಿದೆ. ಅನ್ಯಶಾಸ್ತ್ರಗಳ ದೃಷ್ಟಿಯಿಂದ ಅದು ಶಾಸ್ತ್ರಗಳ ಶಾಸ್ತ್ರವೇ ವಿನಾ ಬ್ರಹ್ಮಸತ್ಯದ ದೃಷ್ಟಿಯಿಂದಲ್ಲ. ಸತ್ಯದ ದೃಷ್ಟಿಯಿಂದ ಅದೊಂದು ಕೇವಲ ಅಪರಾ ವಿದ್ಯೆಯಷ್ಟೆ, ಎಂಬ ಮುಂಡಕ ಉಪನಿಷತ್ತಿನ ಮಾತೂ,[48] 'ನ ಏಷಾ ತರ್ಕೇಣ . . .' ಎಂಬ ಕಠೋಪನಿಷತ್ತಿನ ಉಕ್ತಿಯೂ, 'ಕಲೆ ಕಲೆಗಾರನಿಗಿಂತ ಮೇಲಾದುದು, ಜೀವನ ಕಲೆಗಿಂತಲೂ ಮೇಲಾದುದು'

---

[45] ಯಸ್ಯಾಮತಂ ತಸ್ಯಮತಂ ಮತಂ ಯಸ್ಯನವೇದಸಃ |
ಅವಿಜ್ಞಾತಂ ವಿಜಾನತಾಂ ವಿಜ್ಞಾತಮ ವಿಜಾನತಾಂ ||–ಕೇನೋಪನಿಷತ್, II-3

[46] ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ತತೋಭೂಯ ಇವ ತೇ
ತಮೋಯ ವಿದ್ಯಯಾಗ್ಂ ರತಾಃ

–ಬೃಹದಾರಣ್ಯಕ ಉಪ. IV-4

[47] ಪ್ರದೀಪಃ ಸರ್ವವಿದ್ಯಾನಾಂ ಉಪಾಯಃ ಸರ್ವಕರ್ಮಣಾಂ |
ಆಶ್ರಯಃ ಸರ್ವಧರ್ಮಾಣಾಂ ಶಾಶ್ವದಾನ್ವೀಕ್ಷಿಕೀ ಮತಾ ||

–ಕೌಟಿಲ್ಯ

[48] ದ್ವೇ ವಿದ್ಯೇವೇದಿತವ್ಯೇ ಇತಿ . . . ಬ್ರಹ್ಮವಿದೋವದಂತಿ ಪರಾ...
ತತ್ರಾಪರಾ ಋಗ್ವೇದೋ . . . . ಜ್ಯೋತಿಷ್ಯಮಿತಿ ||

—ಮುಂಡಕೋಪನಿಷತ್, I-4

ಎಂಬಂತೆ 'ತರ್ಕ ಇತರ ಶಾಸ್ತ್ರಗಳಿಗಿಂತಲೂ ಮಿಗಿಲಾದುದು. ಆದರೆ ಸತ್ಯ ತರ್ಕಕ್ಕಿಂತಲೂ ಹಿರಿದಾದುದು' ಎಂಬ ಔಪನಿಷದಿಕ ಋಷಿವರ್ಯರ ಅಮರವಾಣಿ ನೆನಪಿಗೆ ಬರುತ್ತದೆ.

ಅವೈದಿಕ ಮತಗಳು

ಚಾರ್ವಾಕ ಮತ

ಋಗ್ವೇದದ ಕೆಲವು ಸೂಕ್ತಗಳು ದೇವರಲ್ಲಿ[49] ನಂಬಿಕೆಯಿಲ್ಲದ, ಯಜ್ಞಯಾಗಾದಿಗಳನ್ನು ಆಚರಿಸದ ಕೆಲವು ಜನರನ್ನು ಉದ್ದೇಶಿಸಿ ಹೇಳುವ ಮಂತ್ರಗಳು. ಆ ಬಗೆಯ ಜನ ಕಾಲಕ್ರಮೇಣ ಬೃಹಸ್ಪತಿಯೆಂಬ ಆಚಾರ್ಯನ ಶಿಷ್ಯನಾದ ಚಾರ್ವಾಕನಲ್ಲಿ ಶಿಷ್ಯತ್ವ ಪಡೆದು ಮುಂದೆ ಚಾರ್ವಾಕ ರೆಂದು ಪ್ರಸಿದ್ಧರಾದರೆಂದು ಪ್ರತೀತಿ. ಬೃಹಸ್ಪತಿ ಲೋಕಮುನಿಯ ಮಗನಾದುದರಿಂದ ಅವನು ಸ್ಥಾಪಿಸಿದ ಮತಕ್ಕೆ ಲೋಕಾಯತವೆಂಬ ಹೆಸರೂ ಉಂಟು. ಚಾರ್ವಾಕ ಅಥವಾ ಲೋಕಾಯತ ಮತ ಆ ಕಾಲದಲ್ಲಿ ಆಚರಣೆಯಲ್ಲಿದ್ದ ಅವೈದಿಕ ಮತ್ತು ಅದ್ವೈತ ವಾದಿಗಳ ತಂಡವನ್ನು ಸೂಚಿಸು ತ್ತದೆ. ಹೆಚ್ಚು ಶ್ರಮವಿಲ್ಲದೆ ಸುಖಜೀವನ ನಡೆಸಲು ಕರೆಯಿತ್ತ ಚಾರ್ವಾಕನ ಮತ ಲೋಕ ಪ್ರಿಯವಾದುದರಲ್ಲಿ ಸಂದೇಹವಿಲ್ಲ. ಆದರೆ ಆಸ್ತಿಕತೆ ಅಧ್ಯಾತ್ಮ ಜೀವನಗಳೇ ಒಳನಾಡಿಯಾದ ಭಾರತ ದೇಶದಲ್ಲಿ ಅವು ಚಿರಂಜೀವಿಯಾಗಿ ಬಾಳಲು ಸಾಧ್ಯವಾಗಲಿಲ್ಲ.[50] ಆ ಮತದ ಅನುಯಾ ಯಿಗಳಿರಲಿ, ಅವರ ಗ್ರಂಥಗಳೂ ಸಂಪೂರ್ಣವಾಗಿ ನಶಿಸಿ ಹೋಗಿವೆ. ಅನ್ಯಮತ ಸಿದ್ಧಾಂತಗಳು ಅದರ ತತ್ತ್ವವನ್ನು ಟೀಕಿಸುವಾಗ ಪ್ರಾಸಂಗಿಕವಾಗಿ ಬರುವ ಉಕ್ತಿಗಳನ್ನು ಬಿಟ್ಟರೆ, ಸಂಪೂರ್ಣ ಬೃಹಸ್ಪತಿ ರಚಿತ ಸೂತ್ರಗಳಾಗಲಿ, ಅನಂತರ ಬಂದ ಅವನ ಅನುಯಾಯಿಗಳ ಮೂಲ, ಟಿಪ್ಪಣಿ ಗ್ರಂಥಗಳಾಗಲಿ ನಮಗೆ ದೊರೆತಿಲ್ಲ. ಇದೇ ಈ ಮತದ ಮುಖ್ಯ ಅಪಕೀರ್ತಿಗೆ ಕಾರಣ.

ಭಾರತೀಯ ದರ್ಶನದ ಇತಿಹಾಸದಲ್ಲಿ ಲೋಕಾಯತ ಮತ ಬಹು ಅದೃಢತೆಯನ್ನು ತೋರಿದೆ. 'ಲೋಕ' ಮತ್ತು 'ಆಯತ' ಶಬ್ದಗಳಿಂದ ಲೋಕಾವೃತ ಆದ್ದು ; ಆಯತ ಆ + ಯಂ + ಕ ಅಥವಾ ಆ + ಯತ್ + ಅ ಶಬ್ದಗಳಿಂದ ಕೂಡಿದ್ದು, 'ಪ್ರಯತ್ನಪಡು' ಎಂಬರ್ಥ ಸೂಚಿಸುತ್ತದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಭೌದ್ಧ ರಚಿತ

---

[49] ನೈಷಾ ತರ್ಕೇಣ ಮತಿರಾಪನೇಯ . . . .

ಕಠೋಪನಿಷತ್, II–9

[50] ಚಾರ್ವಾಕ ಮತ ಭಾರತದಲ್ಲಿ ಜನಿಸಲಿಲ್ಲವೆಂದೂ ಭಾರತೀಯ ಸಂಸ್ಕೃತಿಗೂ ಹಿಂದಿನ ದಾದ ಸುಮೇರಿಯನ್ ಸಂಸ್ಕೃತಿಯಿಂದ ಇದು ಇಲ್ಲಿಗೆ ಬಂದಿರಬಹುದೆಂದೂ ಪ್ರೊ. ದಾಸ್ ಗುಪ್ತ ಊಹಿಸಿದ್ದಾರೆ : *History of Indian Philosophy*, Vol. I, Chapter on Carvaka

ವಾದ ಅಗ್ಗ್ರವಂಶವೆಂಬ ಗ್ರಂಥ ಲೋಕಾಯತ ಶಬ್ದ ಆಯತಂತಿ ಶಬ್ದದಿಂದ ಬಂದದ್ದೆಂತಲೂ ಉಸ್ಸಾಹಂತಿ, ವಾಯಮಂತಿ ಶಬ್ದಗಳಿಗೆ ಪರ್ಯಾಯವಾಚಿಯೆಂದೂ ಹೇಳಿ, ಆ ಶಬ್ದಕ್ಕೆ ಹೆಚ್ಚಿನ ಪ್ರಯತ್ನಪಡು ಎಂದರ್ಥ ಮಾಡುತ್ತದೆ. ಮತ್ತೊಂದು ಕಡೆ ಆಯತಂತಿ ಶಬ್ದಕ್ಕೆ ಹೆಚ್ಚಿನ ಶ್ರಮ ಪಡುವುದರಿಂದ ತಪ್ಪಿಸು ಎಂದರ್ಥ ಮಾಡುತ್ತದೆ (ತೇನ ಲೋಕೋ ನ ಯತತಿ ನ ಈಹತಿ ವಾ ಲೋಕಾಯತಂ) 'ಪ್ರೊಫೆಸರ್ ತುಚಿಯವರು ಬುದ್ಧಘೋಷನ 'ನಾನಾರ್ಥ ಪ್ರಕಾಶನಿ' ಎಂಬ ಗ್ರಂಥದಿಂದ ಒಂದು ವಾಕ್ಯವನ್ನು ಉಲ್ಲೇಖಿಸಿ, ಆಯತಶಬ್ದವನ್ನು 'ಆಧಾರ' ಅಥವಾ 'ನೆಲೆ' ಎಂಬರ್ಥದಲ್ಲಿ ಉಪಯೋಗಿಸಿದೆಯೆಂದೂ ಇದರಿಂದ ಅದು ಹೆಡ್ಡ ಮೂರ್ಖತನಗಳ, ಧರ್ಮ ದೂಷಕರ ಪ್ರಪಂಚ ಅಥವಾ ತಂಡವನ್ನು ಸೂಚಿಸುವುದೆಂದೂ ಅಭಿಪ್ರಾಯಪಟ್ಟಿದ್ದಾರೆ. ಲೋಕಾಯತ ಶಬ್ದವನ್ನು 'ಲೋಕೇಷು ಆಯತ' (ಆ+ಯಂ+ಕ್ತ) ಎಂದು ಪದಭಾಗಮಾಡಿ 'ಜನರಲ್ಲಿ ಪ್ರಿಯವಾಗಿ ಬಳಕೆಯಲ್ಲಿದ್ದುದು' ಎಂದು ಸರ್ವದರ್ಶನ ಸಂಗ್ರಹ ಅರ್ಥಮಾಡುತ್ತದೆ. ಅಮರಕೋಶ ಅದನ್ನು 'ಲೋಕಾಯತಂ' ಎಂಬ ನಪುಂಸಕ ಲಿಂಗ ರೂಪದಲ್ಲಿ ಪ್ರಯೋಗಿಸುತ್ತದೆ. ಇದರಿಂದ ಎರಡು 'ಲೋಕಾಯತ' ಶಬ್ದಗಳಿವೆಯೆಂಬುದು ಸ್ಪಷ್ಟವಾಗುತ್ತದೆ. ಒಂದು, 'ಜನರಲ್ಲಿ ರೂಢಿಯಲ್ಲಿದ್ದುದು' ಎಂದರ್ಥ ಕೊಡುವ ಗುಣವಾಚಕ ರೂಪ. ಮತ್ತೊಂದು, ವಾದ, ಕುತರ್ಕ, ವಿತಂಡ ಎಂಬ ಲಾಕ್ಷಣಿಕ ಅರ್ಥ.[51] ಶುಕ್ರ ನೀತಿ ಗ್ರಂಥದಲ್ಲಿ ಆಗಿನ ಕಾಲದಲ್ಲಿ ಅಭ್ಯಸಿಸುತ್ತಿದ್ದ ಶಾಸ್ತ್ರಗಳ ಕಲೆಗಳ ಪಟ್ಟಿಯಲ್ಲಿ ಲೋಕಾಯತ ದರ್ಶನದ ಹೆಸರಿದೆ. ಅದರ ಅನುಯಾಯಿಗಳು ಜಗದ್ವಸ್ತುಗಳೆಲ್ಲವೂ ಸ್ವಭಾವ ಜನ್ಯ ; ವೇದ ಪ್ರಮಾಣವಲ್ಲ ; ದೇವರಿಲ್ಲ, ಎಂದು ನಂಬಿದ್ದರೆಂದು ನೀತಿ ಗ್ರಂಥದಲ್ಲಿ ಹೇಳಿದೆ. ಮನುವಿನ ಸೂತ್ರದ[52] ಮೇಲೆ ಟೀಕಿಸುತ್ತ ಮೇಧಾತಿಥಿ ಗೌತಮ ಲೋಕಾಯತ ಶಬ್ದ ಚಾರ್ವಾಕ ದರ್ಶನವನ್ನು ಮಾತ್ರವಲ್ಲದೆ ಅದಕ್ಕಿಂತ ಹಿಂದಿದ್ದ ವಾದಕ್ರಮಗಳನ್ನೆಲ್ಲ ಸೂಚಿಸುತ್ತದೆಯೆಂದು ಬರೆದಿದ್ದಾನೆ. ಇದರಿಂದ ಲೋಕಾಯತ ಮತ ಪ್ರಾರಂಭವಾಗುವ ಮೊದಲೇ ವಾದ ಕಲೆ ಬೆಳೆದು ರೂಢಿಯಲ್ಲಿತ್ತು ಎಂದಾಗುತ್ತದೆ.

ಕ್ರಿ. ಪೂ. ಸುಮಾರು 300ರಲ್ಲಿ ರಚಿತವಾಯಿತೆಂದು ಹೇಳುವ ಕಾತ್ಯಾಯನನ ವಾರ್ತಿಕ ಸೂತ್ರಕ್ಕಿಂತ ಮೊದಲೇ ವಾದ ಕಲೆಗೆ ಸಂಬಂಧಪಟ್ಟ ಒಂದು ಪುರಾತನ ಗ್ರಂಥವಿದ್ದಿರಬೇಕು. ಅದು ಬಹು ಪ್ರಾಚೀನ ಗ್ರಂಥವಾಗಿದ್ದು ಅನಂತರ ಬಂದ ಲೋಕಾಯತ ದರ್ಶನದ ಜೊತೆ ಸೇರಿರಬೇಕು. ಕ್ರಿ. ಶ. 7ರಿಂದ 14ನೆಯ ಶತಮಾನದ ವರೆಗೆ ಬಂದ ಕಮಲಾಶೀಲ, ಜಯಂತ, ಪ್ರಭಾಚಂದ್ರ, ಗುಣರತ್ನ ಮುಂತಾದ ತಾರ್ಕಿಕರಲ್ಲಿ ಕೆಲವರು ಮೇಲೆ ಹೇಳಿದ ಜನರ ತಂಡದ ವಾದವನ್ನು ಲೋಕಾಯತವೆಂದೂ, ಕೆಲವರು ಚಾರ್ವಾಕವೆಂದೂ, 14ನೆಯ ಶತಮಾನದಲ್ಲೇ ಇದ್ದ ಗುಣರತ್ನ ಅದನ್ನು ಬೃಹಸ್ಪತಿ ದರ್ಶನವೆಂದೂ ಹೇಳಿರುವುದು ಚಾರ್ವಾಕದರ್ಶನ ಮೊದಲು ಬೇರೆಬೇರೆ ಹೆಸರಿನಿಂದ ಕರೆಯಲ್ಪಡುತ್ತಿದ್ದು ಅನಂತರ ಒಟ್ಟುಗೂಡಿರಬಹುದೆಂದು ಊಹೆ

---

[51] ಛಾಂದೋಗ್ಯ ಉಪನಿಷತ್ತು, VII–1.2

[52] Prof. Dasgupta, *History of Indian Philosophy*, Vol. III. p. 517

ಮಾಡಲು ಸಹಾಯಕಗಳಾಗುತ್ತವೆ. ಮಾತ್ರವಲ್ಲದೆ ಕಮಲಾಶೀಲ ತನ್ನ ನ್ಯಾಯಮಂಜರಿ ಗ್ರಂಥದಲ್ಲಿ ಧೂರ್ತ ಮತ್ತು ಸುಶಿಕ್ಷಿತ ಚಾರ್ವಾಕ ತಂಡದವರನ್ನು ಕುರಿತು ಬರೆದಿದ್ದಾನೆ. ಇದರಿಂದ ಪತಂಜಲಿ ಮತ್ತು ಕಮಲಾಶೀಲರ ಕಾಲಕ್ಕೆ ಮೊದಲು ಎರಡು ಚಾರ್ವಾಕ ಮತಗಳು ಆಚರಣೆಯಲ್ಲಿದ್ದುವು ಎಂದಾಗುತ್ತದೆ. ಇದಲ್ಲದೆ ಬೃಹಸ್ಪತಿಯು ಕರ್ತೃತ್ವದ ಒಂದು ಪ್ರತ್ಯೇಕ ಗ್ರಂಥವಿದ್ದಿರಬೇಕೆಂದು ಸರ್ವದರ್ಶನ ಗ್ರಂಥದಲ್ಲಿ ಚಾರ್ವಾಕ ಮತ ನಿರೂಪಣೆಯಲ್ಲಿ ಉಲ್ಲೇಖಿಸ ಲಾಗಿರುವ ವಾಕ್ಯಗಳಿಂದ ಊಹಿಸಬಹುದಾಗಿದೆ. ಈ ಬಗೆಯ ಜನ ಮತ್ತು ವಾದವನ್ನು ಜೈನ ಬೌದ್ಧಮತಗಳು ಮಾತ್ರ ಖಂಡಿಸಿದುವೆಂದೂ ಅನೇಕ ಬ್ರಾಹ್ಮಣರು ಇತರ ಶಾಸ್ತ್ರಗಳೊಂದಿಗೆ ಲೋಕಾಯತ ಶಾಸ್ತ್ರವನ್ನು ಕಲಿಯುತ್ತಿದ್ದರೆಂದೂ ಅಂಗುತ್ತರನಿಕಾಯ ಬೌದ್ಧಗ್ರಂಥ ತಿಳಿಸುತ್ತದೆ.

ಕ್ರಿ. ಪೂ. 6ನೆಯ ಶತಮಾನದ ವೇಳೆಗೆ ಚಾರ್ವಾಕ ಸಿದ್ಧಾಂತ ಒಂದು ರೂಪ ತಾಳಿ ತ್ತೆಂಬುದಕ್ಕೆ ಸಾಕಷ್ಟು ಆಧಾರ ದೊರೆತಿದೆ. ಅದರ ಮುಖ್ಯ ತತ್ತ್ವಗಳನ್ನು ಬೃಹದಾರಣ್ಯಕ ಉಪನಿಷತ್ತಿನಲ್ಲಿ[53] ಸೂಕ್ಷ್ಮವಾಗಿ ತಿಳಿಸಲಾಗಿದೆ. ಉಪನಿಷತ್ತುಗಳಲ್ಲಿ ಮಾತ್ರವಲ್ಲ, ವಾಲ್ಮೀಕಿ ರಾಮಾಯಣ, ಮಹಾಭಾರತ, ಚರಕ ಸಂಹಿತೆ ಮುಂತಾದ ಗ್ರಂಥಗಳಲ್ಲಿಯೂ ವಿಶೇಷ ಪಾತ್ರಗಳ ಮೂಲಕ ಲೋಕಾಯತ ಶಾಸ್ತ್ರ ಮತ್ತು ತತ್ತ್ವಗಳು ನಿರೂಪಿಸಲ್ಪಟ್ಟಿವೆ. ವಾಲ್ಮೀಕಿ ರಾಮಾಯಣ ಚಾರ್ವಾಕರನ್ನು 'ಅನುಪಯೋಗ ಮತ್ತು ಅಪ್ರಾಸಂಗಿಕ ವಿಷಯಗಳಲ್ಲಿ ತೊಡಗಿದ್ದ ಜನ' ಎಂದು ವರ್ಣಿಸುತ್ತದೆ. ಹರಿವಂಶ[54] ಅಂಥ ಜನರ ತಂಡವನ್ನು ಅಪ್ರಮುಖ ಜ್ಞಾನದಲ್ಲಿ ಪರಿಶ್ರಮ ಪಡೆಯುವವರ ಗುಂಪಿನಲ್ಲಿ ಸೇರಿಸಿದೆ. ಜಗತ್ತಿನಲ್ಲಿರುವ ವಸ್ತುಗಳೆಲ್ಲ ಪಂಚಭೂತಗಳಿಂದ ರಚಿತವಾದವು. ಅವು ವಿವಿಧ ಪ್ರಮಾಣಗಳಲ್ಲಿ ಮಿಶ್ರಿತವಾಗಿ ಪ್ರಾಪಂಚಿಕ ವಸ್ತುಗಳಾಗುತ್ತವೆ. ಅವುಗಳ ಒಟ್ಟುಗೂಡುವಿಕೆಯೇ ಜನನ. ವಿಲೀನತೆ ವಿಸರ್ಜನೆಗಳೇ ಮರಣ. ಹುಟ್ಟು ಮತ್ತು ಸಾವು ಪಂಚಭೂತ ಅವಸ್ಥಾ ವಿಶೇಷಗಳು. ಪ್ರತ್ಯಕ್ಷ ಒಂದೇ ಪ್ರಮಾಣ. ಯಾವುದು ಇಂದ್ರಿಯಗಳಿಗೆ ಗೋಚರವಾಗುತ್ತದೆಯೋ ಅದು ಮಾತ್ರ ಸತ್ಯ. ಪಂಚಭೂತ ರಚಿತವಾದ ದೇಹ ಮಾತ್ರ ನಮಗೆ ಕಾಣುತ್ತದೆ. ಆದುದರಿಂದ ಮನುಷ್ಯ ನಲ್ಲಿ ದೇಹ ಮಾತ್ರ ಸತ್ಯ. ಆತ್ಮ, ಪ್ರಾಣ, ಮನಸ್ಸು, ಚೈತನ್ಯ ಮುಂತಾದವುಗಳೆಲ್ಲ ದೇಹಕ್ಕೇ ಅನ್ವಯಿಸುತ್ತವೆ. ಅವು ದೇಹಕ್ಕೆ ಬೇರೆ ಬೇರೆ ಹೆಸರುಗಳಷ್ಟೇ. ಹಾಗದರೆ ದೇಹ ದಂತೆ ಅವು ಏಕೆ ಕಾಣುವುದಿಲ್ಲ ಎಂದು ಕೇಳಿದರೆ, ಹೇಗೆ ವೀಳೆಯದೆಲೆ, ಅಡಿಕೆ ಮತ್ತು ಸುಣ್ಣ ಇವುಗಳಲ್ಲಿ ಯಾವುದೊಂದು ವಸ್ತು ಕೆಂಪಗಿಲ್ಲದಿದ್ದರೂ, ಅವುಗಳೆಲ್ಲ ಒಟ್ಟುಗೂಡಿದಾಗ ಕೆಂಪು ಬಣ್ಣ ಉತ್ಪತ್ತಿಯಾಗುತ್ತದೆಯೋ ಹಾಗೆ ಪಂಚಭೂತಗಳಲ್ಲಿ ಯಾವುದೊಂದೂ ಪ್ರಾಣ ಆತ್ಮ ರೀತಿ ಕಾಣದಿದ್ದರೂ ಅವುಗಳ ಒಟ್ಟುಗೂಡುವಿಕೆಯಿಂದ ಉಂಟಾಗುತ್ತವೆ. ಆತ್ಮ ಮಾತ್ರವಲ್ಲ. ಅದಕ್ಕೆ ಸಂಬಂಧಪಟ್ಟ ಪುಣ್ಯಪಾಪಗಳು, ಧರ್ಮ ವ್ಯತ್ಯಾಸಗಳು, ಸ್ವರ್ಗ ನರಕಗಳು. ದೇವರು ಸಹ, ಮೂಢರ ನಂಬಿಕೆಗಳು. ಅವುಗಳಲ್ಲಿ ಯಾವುದಾದರೂ ಇದ್ದಿದ್ದರೆ ಇಂದ್ರಿಯಗಳಿಗೆ ಗೋಚರವಾಗಬೇಕಾಗಿದ್ದಿತು. ಆದರೆ ಇದುವರೆಗೆ ಯಾರೂ ಅವನ್ನು ಕಂಡಿಲ್ಲ. ಅವೆಲ್ಲ

---

[53] ಮನು, II-17

[54] *Bhagavata*, XI-18-3

ಸ್ವಾರ್ಥ ಪೂಜಾರಿಗಳ ಸೃಷ್ಟಿ. ಸುಖವೇ ಸ್ವರ್ಗ. ಅಸುಖವೇ ನರಕ. ಸುಖಕ್ಕೊಯ್ಯುವ ಕಾರ್ಯಗಳೇ ಪುಣ್ಯಕಾರ್ಯಗಳು. ನೋವುಂಟುಮಾಡುವ ಕಾರ್ಯಗಳೇ ಪಾಪಗಳು. ದೇಹ ನಶಿಸಿದ ಮೇ ಏನೂ ಉಳಿಯುವುದಿಲ್ಲ. ಪ್ರಾಣ ಆತ್ಮಗಳು ಹಿಂದಿರುಗುವುದು ಕನಸಿನ ಮಾತು. ಆದುದರಿಂದ ಜೀವಿಸಿರುವ ವರೆಗೆ ಸುಖ ಅನುಭವಿಸುವುದೇ ಜೀವನಧ್ಯೇಯವಾಗಿರಬೇಕು. ಹಾಗೇ ಬಾಳುವವನೇ ಬುದ್ಧಿವಂತ. ಇವು ಲೋಕಾಯತನ ತತ್ತ್ವಗಳು.

ತನ್ನ ದರ್ಶನದ ಪ್ರಮೇಯ ತತ್ತ್ವಗಳನ್ನು ಪ್ರಮಾಣದ ಆಧಾರದ ಮೇಲೇ ಕಟ್ಟಲೆತ್ನಿಸುವುದರಿಂದ ಚಾರ್ವಾಕ ಒಂದು ಬಗೆಯ ಪ್ರಮಾಣಿಕ. ಅನ್ಯದಾರ್ಶನಿಕ ತಾರ್ಕಿಕರಂತೆ ಜ್ಞಾನದ ಸ್ವರೂಪ, ಅದನ್ನು ಪಡೆಯುವ ಕ್ರಮ, ಅದರ ಮೌಲ್ಯ ಮುಂತಾದವು ಜ್ಞಾನ ಮೀಮಾಂಸೆಯ ಮುಖ್ಯ ಸಮಸ್ಯೆಗಳೆಂದು ಅವನೂ ಒಪ್ಪುತ್ತಾನೆ. ಆದರೆ ಅವುಗಳಂತೆ ಪ್ರತ್ಯಕ್ಷ, ಅನುಮಾನ ಮತ್ತು ಶಬ್ದಗಳೆಲ್ಲವನ್ನೂ ಪ್ರಮೆಯನ್ನು ಪಡೆಯುವ ಸಾಧನವೆಂಬುದನ್ನು ಅವನು ಒಪ್ಪುವುದಿಲ್ಲ. ಅವನ ಮತದಲ್ಲಿ ಪ್ರತ್ಯಕ್ಷ ಮಾತ್ರ ಪ್ರಮಾಣ. ಅದು ಎರಡು ಬಗೆ: ಬಾಹ್ಯ ಮತ್ತು ಆಂತರಿಕ. ಬಾಹ್ಯ ಪ್ರತ್ಯಕ್ಷ ಹೊರಗಿನ ಇಂದ್ರಿಯಗಳ ಮೂಲಕ ಜ್ಞಾನ ಗಳಿಸುವಿಕೆ. ಆಂತರಿಕ ಪ್ರತ್ಯಕ್ಷ ಮನಸ್ಸಿನ ಮೂಲಕ ತಿಳಿಯುವುದು. ಆಂತರಿಕ ಪ್ರತ್ಯಕ್ಷ ಬಾಹ್ಯ ಪ್ರತ್ಯಕ್ಷವನ್ನು ಅವಲಂಬಿಸಿರುತ್ತದೆ. ಅವುಗಳಿಂದ ಪಡೆಯುವ ಜ್ಞಾನ ಮಾತ್ರ, ಅವು ತೋರಿ ಸಾಧಿಸುವ ವಸ್ತುಗಳು ಮಾತ್ರ ಸತ್ಯ; ಉಳಿದವು ಅಸತ್ಯ ಎಂಬುದು ಅವನ ಮತ. ಆದರೆ ಇಷ್ಟು ಮಾತ್ರ ಹೇಳಿದ್ದರೆ ಅವನ ಮತವನ್ನು ಅನಂತರ ಬಂದ ದಾರ್ಶನಿಕ ತಾರ್ಕಿಕರು ಅಷ್ಟಾಗಿ ಟೀಕಿಸುತ್ತಿರಲಿಲ್ಲ. ಪ್ರತ್ಯಕ್ಷವಲ್ಲದ ಅನ್ಯ ಪ್ರಮಾಣಗಳು ಪ್ರಮಾಣಗಳಲ್ಲ ಎಂದು ಸಾಧಿಸಲು ಅವನು ಹೂಡುವ ವಾದ ವಿಧಾನ ಅನ್ಯ ದರ್ಶನಗಳ ಗಮನವನ್ನು ಬಹಳ ಸೆಳೆದಿದೆ. ಅವುಗಳ ಪರಿಚಯ ಅವನ ವಾದಕ್ರಮವನ್ನು ತಿಳಿಸುವುದರಿಂದ ಅನಗತ್ಯವಲ್ಲ.

ಚಾರ್ವಾಕನ ಮೀಮಾಂಸೆಯಲ್ಲಿ ಗಮನಿಸಬೇಕಾದವು ಎರಡು ತತ್ತ್ವಗಳು. ಮೊದಲನೆಯದು ಪ್ರತ್ಯಕ್ಷೇತರ ಪ್ರಮಾಣ ನಿರಾಕಾರ ಎರಡನೆಯದು ಕಾರ್ಯಕಾರಣ ನಿಯಮ ನಿರಾಕಾರ. ಪ್ರತ್ಯಕ್ಷವಲ್ಲದೆ ಪ್ರಮಾಣವೆಂದು ಇತರರಿಂದ ಅಂಗೀಕರಿಸಲ್ಪಡುವ ಕ್ರಮವೆಂದರೆ ಅನುಮಾನ. ಚಾರ್ವಾಕ ಅದನ್ನು ಪ್ರಮಾಣವೆಂದು ಒಪ್ಪುವುದಿಲ್ಲ. ಅನುಮಾನದಲ್ಲಿ ಸಾಧನ, ಸಾಧ್ಯ ಮತ್ತು ವ್ಯಾಪ್ತಿ ಬಹು ಮುಖ್ಯವಾದವು. ಅದರಲ್ಲಿಯೂ ವ್ಯಾಪ್ತಿ ಅನುಮಾನದ ಒಳನಾಡಿ. ಅದನ್ನು ಇಂದ್ರಿಯಗಳಿಂದ ನೋಡಿ ತಿಳಿಯಲು ಸಾಧ್ಯವಿಲ್ಲ. ಬಾಹ್ಯ ಅಥವಾ ಆಂತರಿಕ ಇಂದ್ರಿಯಗಳಾವುವಕ್ಕೂ ಅದು ಗೋಚರವಾಗುವುದಿಲ್ಲ. ಬಾಹ್ಯ ಪ್ರತ್ಯಕ್ಷದಲ್ಲಿ ಪ್ರಾಪಂಚಿಕ ವಸ್ತುಗಳು ಸಾಕ್ಷಾತ್ತಾಗಿ ಬಾಹ್ಯೇಂದ್ರಿಯಗಳಿಗೆ ಗೋಚರವಾಗಿ ಜ್ಞಾನ ಉಂಟುಮಾಡುತ್ತವೆ. ಆದರೆ ಆ ಬಗೆಯ ಜ್ಞಾನ ವೈಯಕ್ತಿಕ ವಸ್ತುಗಳಿಗೆ ಸೀಮಿತವಾಗಿರುತ್ತದೆ. ಅದು ಕೇವಲ ಒಂದೆರಡು ಅಥವಾ ಕೆಲವಾರು ವಸ್ತುಗಳ ಜ್ಞಾನ. ಅದು ವಸ್ತುಗಳನ್ನು ಒಂದೊಂದಾಗಿ ನೋಡಿ ತಿಳಿದ ಜ್ಞಾನ. ಜಾತಿ ಅಥವಾ ಸಮುದಾಯದ ಜ್ಞಾನವಲ್ಲ. ಅಲ್ಲದೆ ಅದು ಬಾಹ್ಯ ವಸ್ತುಗಳೊಡನೆ ನೇರವಾಗಿ ಸಂಬಂಧ ಬೆಳೆಸಿದಾಗ ಮಾತ್ರ ಉಂಟಾಗುತ್ತದೆ. ಬಾಹ್ಯ ಪ್ರತ್ಯಕ್ಷದ ಕ್ಷೇತ್ರದಲ್ಲಿ ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲದ ವಿಷಯಗಳೆಲ್ಲ ಕೂಡಿರಲು ಸಾಧ್ಯವಿರುವುದಿಲ್ಲ. ಅನುಭವದಲ್ಲಿ ನಾವು ಕಾಣುವುದು ಕೆಲವೇ ಘಟನೆಗಳು. ಭೂತಕಾಲದ ಜ್ಞಾನ ನೋಡಿ ಪಡೆ

ಯಲು ಸಾಧ್ಯವಿಲ್ಲ. ಭವಿಷ್ಯದ ಘಟನೆಗಳಾದರೋ, ಬಹು ಅದೃಷ್ಟ ಮತ್ತು ಅಸ್ಪಷ್ಟ. ವರ್ತಮಾನದಲ್ಲಿಯೂ ನಮ್ಮ ನೋಡುವಿಕೆ ಬಹು ಮಿತವಾಗಿರುತ್ತದೆ. ಹೀಗಿರುವಾಗ ಸರ್ವ ಕಾಲ, ಸರ್ವ ದೇಶ ಮತ್ತು ಸರ್ವ ವ್ಯಕ್ತಿಗಳಿಗೂ ಅನ್ವಯಿಸುವ ಜಾತಿ ಜ್ಞಾನ ಹೇಗೆ ಸಾಧ್ಯ ? ವ್ಯಾಪ್ತಿ ಈ ಬಗೆಯ ಜ್ಞಾನಕ್ಕೆ ಅನ್ವಯಿಸುತ್ತದೆ. ಆದುದರಿಂದ ವ್ಯಾಪ್ತಿ ಪ್ರತ್ಯಕ್ಷದಿಂದ ಅಸಾಧ್ಯ.

ಹಾಗಾದರೆ ವ್ಯಾಪ್ತಿಜ್ಞಾನ ಅನುಮಾನದಿಂದ ಸಾಧ್ಯವೋ ? ಚಾರ್ವಾಕ ಇಲ್ಲ ಎನ್ನುತ್ತಾನೆ. ವ್ಯಾಪ್ತಿಜ್ಞಾನ ಅನುಮಾನದಿಂದ ಸಾಧ್ಯ ಎಂದರೆ, ಆ ಅನುಮಾನಕ್ಕೆ ಮತ್ತೊಂದು ವ್ಯಾಪ್ತಿ ಇರಬೇಕು. ಆ ವ್ಯಾಪ್ತಿಗೆ ಮತ್ತೊಂದು ವ್ಯಾಪ್ತಿ ಇದ್ದಿರಬೇಕು. ಹೀಗೆ ವ್ಯಾಪ್ತಿ ಜ್ಞಾನ ಅನುಮಾನದಿಂದ ಸಾಧ್ಯವೆಂದೊಪ್ಪಿದರೆ ಅನವಸ್ಥಾದೋಷ ಉಂಟಾಗುತ್ತದೆ. ಆದುದರಿಂದ ಅನುಮಾನ ವ್ಯಾಪ್ತಿಗೆ ಆಧಾರವಾಗಲಾರದು.

ಅನುಮಾನ ಬೇಡ, ವ್ಯಾಪ್ತಿ ಶಬ್ದಪ್ರಮಾಣದಿಂದಲಾದರೂ ಗ್ರಹಿಸಬಹುದೇಯೆಂದರೆ ಚಾರ್ವಾಕ ಅದೂ ಸಾಧ್ಯವಿಲ್ಲ ಎನ್ನುತ್ತಾನೆ. ಶಬ್ದ ಎಂದರೆ ಆಪ್ತರ ಮಾತು. ಮಾತು ಭಾಷೆಯ ಪ್ರತೀಕ ಭಾಷೆ ವೈಯಕ್ತಿಕವಾದ ಚಿಹ್ನೆಯಲ್ಲ. ಎಲ್ಲರಿಗೂ ಒಪ್ಪಿಗೆಯಾದ ಸಮನಾದ ಅರ್ಥ ಹೇಳುವ ಶಬ್ದಗುಚ್ಛ. ಆದರೆ ಆ ಬಗೆಯ ಸಾಮಾನ್ಯ ಅರ್ಥಗ್ರಹಣ ಪ್ರತ್ಯಕ್ಷದಿಂದ ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯ ಮಾತಿನ ಅರ್ಥ ಒಂದು ವಿಶೇಷ ಸಂದರ್ಭದಲ್ಲಿ ವೈಯಕ್ತಿಕ ಪ್ರಸಂಗ ನಿರೂಪಿಸುತ್ತದೆಯೇ ವಿನಾ ಎಲ್ಲ ಕಾಲಕ್ಕೂ ಎಲ್ಲ ವ್ಯಕ್ತಿಗಳಿಗೂ ಸಮನಾಗಿ ಅನ್ವಯಿಸುವ ಅರ್ಥ ಸೂಚಿಸುವುದಿಲ್ಲ. ಮಾತ್ರವಲ್ಲ, ಒಬ್ಬನ ಮಾತು ಒಂದು ಸಂದರ್ಭದಲ್ಲಿ ನಿಜವೆಂದು ಹೇಳಲು ಅದು ಮತ್ತೊಂದು ವಚನವನ್ನು ಅವಲಂಬಿಸಬೇಕು. ಅದು ಮತ್ತೊಂದನ್ನು ಹೀಗೆ ಅನುಮಾನದಲ್ಲಿಯಂತೆಯೇ ಆಪ್ತ ವಚನದಲ್ಲಿಯೂ ಅನವಸ್ಥಾ ದೋಷವುಂಟಾಗುತ್ತದೆ.

ವ್ಯಾಪ್ತಿಯನ್ನು ಉಪಮಾನದಿಂದಲೂ ತಿಳಿಯಲು ಸಾಧ್ಯವಿಲ್ಲ ಎನ್ನುತ್ತಾನೆ ಲೋಕಾಯತ. ಉಪಮಾನವು ಶಬ್ದ ಮತ್ತು ವಸ್ತುಗಳ ಸಾಮಾನ್ಯ ಸಂಬಂಧವನ್ನು ಅನುಸರಿಸುತ್ತದೆ. ಆ ಬಗೆಯ ಸಂಬಂಧವೂ ಜಾತಿ ವಾಚಕ ಅಥವಾ ಸಾಮಾನ್ಯವಾದುದು; ವೈಯಕ್ತಿಕವಾದುದಲ್ಲ. ಅನುಮಾನ, ಶಬ್ದ ಪ್ರಮಾಣಗಳ ದೋಷವೇ ಇಲ್ಲಿಯೂ ಉಂಟಾಗುತ್ತದೆ.

ಅನುಮಾನದಲ್ಲಿ ವ್ಯಾಪ್ತಿ ಯಾವ ಬಗೆಯ ಉಪಾಧಿಯಿಂದಲೂ ಸೀಮಿತ ಅಥವಾ ಬಾಧಿತವಾಗಿರಕೂಡದು. ಆದರೆ ಅಂಥ ಸಂದರ್ಭಗಳು ದುಸ್ಸಾಧ್ಯ. ಅನೇಕ ಉಪಾಧಿಗಳ ಅರಿವೇ ನಮಗಿಲ್ಲದಿರಬಹುದು. ಇದ್ದರೂ ಎಲ್ಲ ಉಪಾಧಿಗಳನ್ನೂ ಯಾವ ಸಂದರ್ಭದಲ್ಲಿಯೂ ತೃಪ್ತಿಗೊಳಿಸಲಾಗುವುದಿಲ್ಲ. ಪ್ರತ್ಯಕ್ಷವಿಲ್ಲದ ಅಬಾಧಿತ ವ್ಯಾಪ್ತಿಯನ್ನು ತಿಳಿಯಲು ಸಾಧ್ಯವಿಲ್ಲ. ಅಂಥ ವ್ಯಾಪ್ತಿ ದೊರಕದಿದ್ದರೆ ಅನುಮಾನ ಪ್ರಮಾಣವಾಗಲಾರದು ಎಂದು ಈ ಮತದ ಅಭಿಮತ.

ಚಾರ್ವಾಕ ಕಾರ್ಯಕಾರಣಗಳ ನಡುವೆ ನಿಯಮಿತ ಸಂಬಂಧವಿದೆಯೆಂಬುದನ್ನೂ ಒಪ್ಪುವುದಿಲ್ಲ. ಒಂದು ಘಟನೆಯ ಪೂರ್ವಾಂಗ ಉತ್ತರಾಂಗಗಳ (ಉಪಾಧಿ ಕಾರ್ಯಗಳ) ಸಂಬಂಧ ಕೇವಲ ಆಕಸ್ಮಿಕವಾದುದು. ಇದು ಇದ್ದಾಗಲೆಲ್ಲ ಅದು ನಡೆಯುತ್ತದೆ ಎಂಬುದನ್ನು ಅನುಭವದಲ್ಲಿ ಕಂಡು ನಾವು ಎರಡು ಅಂಶಗಳ ನಡುವೆ ಕಾರ್ಯಕಾರಣ ಸಂಬಂಧ ಹೇಳುತ್ತೇವೆ. ಉದಾಹರಣೆಗೆ ಎಲ್ಲ ಸಂದರ್ಭಗಳಲ್ಲಿಯೂ ಚಿನ್ನ ಕಲ್ಲಿನ ಜೊತೆಯಲ್ಲಿ ಭೂಮಿಯಲ್ಲಿ ದೊರಕುತ್ತದೆ.

ಆದರೆ ಒಂದು ಮತ್ತೊಂದರ ಕಾರಣವಲ್ಲ. ಜೊತೆಯಲ್ಲಿರುವಿಕೆ ಕೇವಲ ಆಕಸ್ಮಿಕ. ಆಕಸ್ಮಿಕ ಸಹವರ್ತನೆ ಕಾರ್ಯಕಾರಣ ಸಂಬಂಧವಲ್ಲ. ಕೆಲವೇ ಘಟನೆಗಳಿಗೆ ಸೀಮಿತವಾದುದರಿಂದ, ಜಾತಿ ಸಂಬಂಧ ಸೂಚಕವಲ್ಲದುದರಿಂದ ಅದು ವ್ಯಾಪ್ತಿಯಾಗಲಾರದು.

ಕ್ರಿ. ಪೂ. 8ನೆಯ ಶತಮಾನದಲ್ಲಿದ್ದನೆಂದು ಹೇಳಲ್ಪಡುವ ಶಾಂತರಕ್ಷಿತ ಮತ್ತು ಪುರಂದರ[55] ಎಂಬ ಚಾರ್ವಾಕ ಮತಸ್ಥರು ಕೆಲವು ಸಂದರ್ಭಗಳಲ್ಲಿ ಅನುಮಾನದ ಬೆಲೆಯನ್ನು ಕಾರ್ಯಸಾಧನೆ ದೃಷ್ಟಿಯಿಂದ ಪರೀಕ್ಷಿಸಲೆತ್ನಿಸಿದ್ದಾರೆ. ಹಲವು ಅನುಮಾನಗಳು ನಮಗೆ ಜಯ ಗೊಳಿಸಿ ನಮ್ಮ ಕಾರ್ಯಸಾಧನೆಗೆ ನೆರವಾಗಬಹುದು. ಮತ್ತೆ ಕೆಲವು ಪ್ರತಿಕೂಲವಾಗಬಹುದು. ಅದು ಕೇವಲ ಕಾಕತಾಳೀಯ, ಕೇವಲ ಯಾದೃಚ್ಛಿಕ. ಯಾದೃಚ್ಛಿಕತೆ ಸಾಮಾನ್ಯವಾಗಲಾರದು.

ಈ ಬಗೆಯ ವಾದ ಸರಣಿ ಹೂಡಿ ಚಾರ್ವಾಕ, 'ಪ್ರತ್ಯಕ್ಷ ಪ್ರಮಾಣದಲ್ಲಿ ದೊರೆತ ವಸ್ತು ಜ್ಞಾನ ಮಾತ್ರ ಸತ್ಯ. ಇಂದ್ರಿಯಗಳಿಗೆ ಅಗೋಚರವಾದವು ಅಸತ್ಯ. ಅಂಥ ವಸ್ತುಗಳಿವೆ ಯೆಂದರೆ, ನಮ್ಮ ಊಹಾಪೋಹಗಳೆಲ್ಲ ಮಾನಸಿಕ ಕಲ್ಪನೆಗಳೆಲ್ಲ ಸತ್ಯವಾಗಿರಬೇಕು.' 'ಆಸೆ ಆಕಾಂಕ್ಷೆಗಳೇ ಕುದುರೆಗಳಾದರೆ, ಭಿಕ್ಷುಕರೂ ಸವಾರಿ ಮಾಡಬಲ್ಲರು' ಎಂಬಂತೆ, 'ಊಹಿಸಿದ ತತ್‌ಕ್ಷಣವೇ ಬಡವರು ಬಲ್ಲಿದರಾಗಬೇಕು, ಊಳಿಗದವರೆಲ್ಲ ಸ್ವಾಮಿಗಳಾಗಬೇಕು. ಆದರೆ ಅದೆಲ್ಲಾ ಕನಸು, ಎಂದೂ ನೆನಸಾಗಲಾರದು', ಎಂದು ಸಾರಿದ.

ಬುದ್ಧಘೋಷ[56] ಈ ಬಗೆಯ ವಾದವನ್ನು ಹೂಡಿದ ಚಾರ್ವಾಕರನ್ನು ವಿತಂಡವಾದಿ ಗಳೆಂದು ಕರೆದಿದ್ದಾನೆ. ಚಾರ್ವಾಕರು ವಿತಂಡವಾದಿಗಳೇನೋ ಹೌದು. ಆದರೆ ಅದು ಪಾಮರನ ಅರ್ಥದಲ್ಲಿ ಅಲ್ಲ. ಸಾಮಾನ್ಯರು ವಿತಂಡವೆಂದರೆ ಅನುಪಯೋಗ, ಅತಿ ಪ್ರಸಂಗ ವೆಂದು ಅರ್ಥ ಮಾಡುತ್ತಾರೆ. ಆದರೆ ತರ್ಕದಲ್ಲಿ ಆ ಶಬ್ದಕ್ಕೆ ವಿಶೇಷಾರ್ಥವಿದೆ. ನ್ಯಾಯ ಸೂತ್ರವು ಚರ್ಚೆಯಲ್ಲಿ ವಾದ ಮತ್ತು ವಿತಂಡ ಎಂಬ ಎರಡು ಬಗೆಯಿದೆಯೆಂದು ಹೇಳುತ್ತದೆ. ಅದರ ಪ್ರಕಾರ ವಾದ ಒಂದು ಗೊತ್ತಾದ ವಿಷಯವನ್ನು ಸೂಕ್ತರೀತಿಯಲ್ಲಿ ಸಾಧಿಸಲೆತ್ನಿಸುವ ಕ್ರಮ. ವಿತಂಡ ಇದಕ್ಕೆ ವಿರುದ್ಧವಾದುದು. ಯಾವ ರಚನಾತ್ಮಕ ದೃಷ್ಟಿ ಅಥವಾ ಪ್ರಯೋ ಜನವೂ ಇಲ್ಲದೆ ಯಾವ ನಿರ್ದಿಷ್ಟವಾದ ವಿಷಯವನ್ನೂ ಸಾಧಿಸಲೆತ್ನಿಸದೆ ವಿರೋಧಿ ಪ್ರತಿಸ್ಪರ್ಧಿ ಗಳ ಭಾವಗಳನ್ನು ಕೇವಲ ಖಂಡಿಸಿ ಟೀಕಿಸಿ ಅವಹೇಳನಮಾಡಲು ಯತ್ನಿಸಿದ ಚರ್ಚೆಯೇ ವಿತಂಡ. ಅದರಲ್ಲಿ ಉದ್ದೇಶಿಸಿದ ಮತಾಭಿಪ್ರಾಯವಾಗಲಿ ಸೂಕ್ತ ಅಥವಾ ಸಾಧಿಸಿದ ನಿರ್ಣಯ ದೆಡೆ ಹೋಗುವ ಸಂಕಲ್ಪವಾಗಲಿ ಇರುವುದಿಲ್ಲ. ಪ್ರತಿವಾದಿಯನ್ನು ಸೋಲಿಸಲು ಹೂಡಿದ ಪೂರ್ವನಿಶ್ಚಿತ ಕುತಂತ್ರ ಕ್ರಮವಷ್ಟೇ ಅದು. ಬೇಕೆಂದೇ (ಜಲ್ಪ) ಶಬ್ದಗಳಿಗೆ ತಪ್ಪು ಅರ್ಥ ಸೂಚಿಸಿ (ಛಲ) ತಬ್ಬಿಬ್ಬುಮಾಡಿ ಭ್ರಾಂತಿಗೊಳಿಸುವ ಮತ್ತು ಅಸತ್ಯ ಹೋಲಿಕೆಗಳನ್ನು ತೋರಿ (ಜಾತಿ) ಪ್ರತಿಸ್ಪರ್ಧಿಯನ್ನು ವಿರೋಧ ತೀರ್ಮಾನಕ್ಕೆ ಕರೆದೊಯ್ಯುವಂತೆ ಮಾಡುವ (ನಿಗ್ರಹ ಸ್ಥಾನ) ವಾದಚಾತುರ್ಯವದು. ವಾದವಾದರೋ ವ್ಯವಸ್ಥಿತ ಮತ್ತು ನಿಯಮಬದ್ಧವಾದ

---

[55] Prof. Dasgupta, *History of Indian Philosophy*. Vol, III p. 536

[56] ಅಭಿಧಾನ ಪ್ರದೀಪಿಕಾ, V–112, quoted by Prof. Dasgupta

ಕ್ರಮದಲ್ಲಿ ಸತ್ಯಾನ್ವೇಷಣೆಯಲ್ಲಿ ತೊಡಗಿದ ವಿಚಾರಸರಣಿ. ವಿತಂಡವು ಸತ್ಯದ ಕಡೆ ಗಮನ ಹರಿಸುವುದೇ ಇಲ್ಲ. ಆದುದರಿಂದಲೇ ಅದು ತಾರ್ಕಿಕ ದೃಷ್ಟಿಯಿಂದ ವಾದಕ್ರಮವೇ ಅಲ್ಲವೆಂದು ಅನೇಕರು ಅದನ್ನು ತಿರಸ್ಕರಿಸಿದರೂ ಜಯಂತ ತನ್ನ ನ್ಯಾಯಮಂಜರಿಯಲ್ಲಿ, 'ಬೌದ್ಧರು ವ್ಯವಸ್ಥಿತ ತಾರ್ಕಿಕವಾದ ಮತ್ತು ಕುತಂತ್ರದಿಂದ ಕೂಡಿದ ಚಮತ್ಕಾರವಾದ ಎರಡಕ್ಕೂ ವ್ಯತ್ಯಾಸ ತೋರದೆ ಎರಡನ್ನೂ ವಾದ ಶಬ್ದದಿಂದ ಸೂಚಿಸುತ್ತಾರೆ. ಆದುದರಿಂದ ವಿತಂಡವನ್ನೂ ಅವರು ವಾದವೆಂದೇ ಪರಿಗಣಿಸುತ್ತಾರೆ,' [57] ಎಂದಿದ್ದಾನೆ. ಬುದ್ಧಘೋಷನೇ, 'ಕಾಗೆ ಬಿಳುಪಾಗಿದೆ. ಏಕೆಂದರೆ ಅದರ ಮೂಳೆ ಬಿಳುಪು. ಬಾತು ಕೆಂಪಾಗಿದೆ. ಏಕೆಂದರೆ ಅದರ ಮಾಂಸ ಕೆಂಪು.' ಎಂಬ ಉದಾಹರಣೆಗಳಿಂದ, ಜನಪ್ರಿಯತೆ ಗಳಿಸಿದ್ದ ಲೋಕಾಯತ ದರ್ಶನವನ್ನು ತಿಳಿಸಿದ್ದಾನೆ; ಅದನ್ನು 'ವಿತಂಡ ಸಲ್ಲಾಪ ಕಥಾ' ಎಂದು ಕರೆದಿದ್ದಾನೆ. ಸಮ್ ಮತ್ತು ಲಾಪ್ ಶಬ್ದಗಳಿಂದ ಆದ ಸಲ್ಲಾಪ ಶಬ್ದ ಸಾಂಪ್ರದಾಯಿಕ ಮತ್ತು ರೂಢಿಬದ್ಧ ಮಾತುಗಳನ್ನು ಸೂಚಿಸುತ್ತದೆ. ಆದರೆ ನ್ಯಾಯ ಸೂತ್ರದ ದೃಷ್ಟಿಯಿಂದ ಅವು ವಿತಂಡಕ್ಕೆ ಉದಾಹರಣೆಗಳಾಗಲಾರವು. ಅವು ಜಾತಿಗೆ ಉದಾಹರಣೆಗಳಲ್ಲ. ಏಕೆಂದರೆ ಅವು ಸಹವರ್ತನೆ ಮತ್ತು ಸಹಭಾವನೆಗಳಿಲ್ಲದ ಹೋಲಿಕೆಗಳಿಂದ ಮಾಡಿದ ತೀರ್ಮಾನಗಳು.

12ನೆಯ ಶತಮಾನದ್ದೆಂದು ಹೇಳಲಾದ ಅಗ್ಗವಂಶದ ಶಬ್ದ ನೀತಿಯಿಂದ ಪ್ರೊ. ರ್ಹಿಸ್ ಡೇವಿಸ್[58] ಒಂದು ವಾಕ್ಯವನ್ನು ಉಲ್ಲೇಖಿಸಿ, ಲೋಕಾಯತ ಶಬ್ದಕ್ಕೆ, 'ಲೋ' ಎಂದರೆ ಸಾಮಾನ್ಯ ಜನ, ಕಾಯತ ಎಂದರೆ 'ಹೋರಾಡಿ ವಾದದಲ್ಲಿ ಸುಖ ಪಡುತ್ತಾರೆ' ಎಂದು ಅರ್ಥ ಮಾಡಿದ್ದಾರೆ. ಜಯಗೊಳಿಸುವುದೇ ಮುಖ್ಯ ಗುರಿಯಾದರೆ ವಾದದ ಉದ್ದೇಶ ಸಾರ್ಥಕತೆಗಳೇ ಕೆಡುತ್ತವೆ. ವಾದದ ಉದ್ದೇಶ ಸತ್ಯಸಾಧನೆ. ಅದಿಲ್ಲದಿದ್ದರೆ ಅದು ಕೇವಲ ಶಬ್ದಗಳ ಸುರಿಮಳೆ. ಇದನ್ನು ಮನಗಂಡ ವಿದುರನೆಂಬ ಬೌದ್ಧ ಪಂಡಿತ[59], ಲೋಕಾಯತರ ಮಾತನ್ನು ಕೇಳಬೇಡಿ. ಅದು ಸ್ವರ್ಗದ ಹಾದಿಯಲ್ಲಿ ಕರೆದೊಯ್ಯುವುದಿಲ್ಲ, ಎಂದು ಹೇಳಿದ್ದಾನೆ. ವಿದುರನ ಮಾತು, ಬೌದ್ಧರಲ್ಲದವರು ಹೂಡಿದ ವಾದ ಕುತಂತ್ರಗಳು ವಿತಂಡ ಎಂದು ಸೂಚಿಸುತ್ತದೆ. ಕುತಂತ್ರ ವ್ಯಾಜ್ಯಕ್ಕೋಸ್ಕರವೇ ಹೂಡಿದ ವಾದಗಳು ಉಪಯುಕ್ತ ಫಲಗಳನ್ನು ಸಾಧಿಸಲಾರವು. ಬುದ್ಧಿಯ ವೃದ್ಧಿಗೆ ಅವಕಾಶ ಮಾಡದ ಮಾನಸಿಕ ಶಕ್ತಿಯ ದುರುಪಯೋಗವದು. ಅಷ್ಟಾದರೂ ಭಾರತ ದರ್ಶನ ತರ್ಕಗಳ ಚರಿತ್ರೆಯನ್ನು ರೂಪಿಸುವಾಗ ಚಾರ್ವಾಕನಿಗೆ ಸ್ಥಳ ಕೊಡದಿರಲಾಗದು. ನಮಗೆ ಸಮ್ಮತಿಸುವ ವಾದಗಳನ್ನು ಅವನು ಪ್ರತಿಪಾದಿಸದಿದ್ದರೂ ಆ ಕಾಲದಲ್ಲಿದ್ದ ಜನಾಕರ್ಷಕವಾಗಿದ್ದ ವಿಚಾರಧಾರೆಯೊಂದನ್ನು ಅವನು ನಿರೂಪಿಸಿದ್ದಾನೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಇತರ ದರ್ಶನ ತತ್ತ್ವಗಳನ್ನು ಟೀಕಿಸಿ, ಖಂಡಿಸಿ ನಿರಾಕರಿಸುವ ವಿಧ್ವಂಸಕರ ಮತವೇನೋ ಹೌದು ಅದು. ಆದರೂ ತರ್ಕಶಾಸ್ತ್ರದಲ್ಲಿ ಅಂಥ ಮತಧರ್ಮಗಳಿಗೂ ಅವಕಾಶವಿದೆ. ವ್ಯವಸಾಯದಲ್ಲಿ ಹೇಗೆ ಹೊಸ ಹೊಸ ಪೈರು ನಾಟುವ ಮೊದಲು ಕಳೆ ಕಿತ್ತು ಭೂಮಿಯನ್ನು ಉತ್ತು ನೆಲ ಹದ

---

[57] *H.I.P*, Vol· I–p· 512

[58] Rhys Davis : *Dialogues of the Buddha*, Vol II

[59] ಅದೇ

ಮಾಡುತ್ತೇವೆಯೋ ಹಾಗೆ ತಮ್ಮ ನಾಸ್ತಿಕತೆಯ ಹರಿತ ಪ್ರಶ್ನೆಗಳ ಮೂಲಕ ವಿಚಾರ ವಿಮರ್ಶೆಗಳಿಗೆ ಚಾರ್ವಾಕರು ಅವಕಾಶ ಮಾಡಿದರು. ಆದುದರಿಂದಲೇ ಹರಿಭದ್ರ ಮತ್ತು ಮಾಧವರು ತಮ್ಮ ದರ್ಶನ ಗ್ರಂಥಗಳಲ್ಲಿ ಭಾರತೀಯ ದರ್ಶನಗಳನ್ನು ನಿರೂಪಿಸುವಾಗ ಬೃಹಸ್ಪತಿ ದರ್ಶನಕ್ಕೂ ಅವಕಾಶ ಮಾಡಿಕೊಟ್ಟಿದ್ದಾರೆ.

ಲೋಕಾಯತನ ಈ ಬಗೆಯ ವಾದಕ್ರಮ ಎಂದು ಮತ್ತು ಹೇಗೆ ನಾಸ್ತಿಕತೆಯ ಕಡೆ ವಾಲಿತು, ಎಂಬುದನ್ನು ನಿರ್ಧರಿಸುವುದು ಕಷ್ಟ. ವಾದಕಲೆ ಮಾನವನ ಇತಿಹಾಸದಲ್ಲಿ ಅತಿ ಪುರಾತನವಾದುದು. ಕ್ರಿ. ಶ. ಒಂದನೆಯ ಶತಮಾನಕ್ಕೆ ಸೇರಿದುದು ಎಂದು ಹೇಳುವ ಚರಕ ಸಂಹಿತೆಯಲ್ಲಿ ನಿರೂಪಿಸಿರುವ ವಾದಕಲೆಯ ನಿಯಮಗಳು ಅಗ್ನಿವೇಶ ಸಂಹಿತೆಯ ಒಂದು ತಿದ್ದಿದ ಪುನರಾವರ್ತನ ಗ್ರಂಥವೆಂದು ತಿಳಿದು ಬಂದಿದೆ. ಇದು ಸತ್ಯವಾದರೆ ಅದಕ್ಕೆ ಒಂದೆರಡು ಶತಮಾನಗಳ ಮುಂಚೆಯಾದರೂ ಅದರ ಮೂಲರೂಪವನ್ನೊಳಗೊಂಡ ಗ್ರಂಥ ರಚಿತವಿದ್ದಿರಬೇಕೆಂಬುದು ಸ್ಪಷ್ಟವಾಗುತ್ತದೆ. ಆಯುರ್ವೇದ ಮತ್ತು ನ್ಯಾಯಶಾಸ್ತ್ರ ಪರಿಣತರು ಇತರ ಸಹೋದ್ಯೋಗಿಗಳ ಟೀಕೆಯಿಂದ ತಪ್ಪಿಸಿಕೊಳ್ಳಲು ವಾದಕಲೆಯಲ್ಲಿ ಪರಿಶ್ರಮ ಪಡೆಯುತ್ತಿದ್ದುದು ಆ ಶಾಸ್ತ್ರಗಳ ಗ್ರಂಥಗಳಿಂದಲೇ ವ್ಯಕ್ತವಾಗುತ್ತದೆ. ಮಹಾಭಾರತದಲ್ಲಿ[60] ಹೇತುವಾದಿಗಳೆಂಬ ಜನ ತಮ್ಮ ಪಂಗಡದವರಲ್ಲಿಯೇ ವಾದ ಹೂಡಿ ಜಯ ಗಳಿಸಲೆತ್ನಿಸುವುದನ್ನು ನಾವು ಕಾಣುತ್ತೇವೆ. ಛಾಂದೋಗ್ಯ ಉಪನಿಷತ್ತಿನಲ್ಲಿ[61] ಬರುವ 'ವಾಕೋವಾಕ್ಯ' ಶಬ್ದ ಒಂದು ವಾದಕ್ರಮವನ್ನೇ ಸೂಚಿಸುತ್ತದೆ. ಇದರಿಂದ ವಾದಕಲೆ ಬಹು ಪುರಾತನವಾದುದೆಂದು ಸಿದ್ಧವಾದರೂ ಹೇಗೆ ನಾಸ್ತಿಕತೆಯನ್ನಾವರಿಸಿತು ಎಂಬುದು ಸ್ಪಷ್ಟವಾಗಿಲ್ಲ. ಪ್ರೊ. ದಾಸಗುಪ್ತರು[62] ಈ ವಿಚಾರವನ್ನು ಚರ್ಚಿಸುತ್ತ, 'ಶ್ರುತಿಸ್ಮೃತಿ ವಾಕ್ಯಗಳಿಂದ ಮಾತ್ರ ಬ್ರಹ್ಮ ತತ್ತ್ವ. ಅನುಮಾನವೇ ಮೊದಲಾದ ಅನ್ಯೇತರ ಯುಕ್ತಿ ಪ್ರಮಾಣಗಳಿಂದ ಸಾಧ್ಯವಿಲ್ಲ,' ಎಂಬ ಆಸ್ತಿಕ ದರ್ಶನಗಳ ಉಲ್ಲೇಖಗಳನ್ನು ಉಪಯೋಗಿಸಿಕೊಂಡು ತಮ್ಮ ವಿತಂಡ ವಾದ ತರ್ಕದಿಂದ ವೇದೋಕ್ತವಾದ ಆತ್ಮದ ಅಮರತ್ವ ಅವಿನಾಶತೆಗಳನ್ನೂ ಸ್ವರ್ಗ ಮತ್ತು ಪುನರ್ಜನ್ಮ ತತ್ತ್ವಗಳನ್ನೂ ದೈವ ಪಿತೃಯಾನ ಪ್ರಯಾಣಗಳನ್ನೂ ಯಜ್ಞಯಾಗಾದಿಗಳ ಫಲಗಳನ್ನೂ ಪ್ರತ್ಯಕ್ಷವಾಗಿ ಕಾಣದುದರಿಂದ ಕೆಲವು ಮಂದಿ ನಾಸ್ತಿಕತೆಯ ಕಡೆಗೆ ತಿರುಗಿರಬೇಕು,' ಎಂದು ಬರೆದಿದ್ದಾರೆ. ಆ ಬಗೆಯ ಜನ ಬೇರೆಯವರಲ್ಲ, ನಮ್ಮಲ್ಲಿಯೇ ಹುಟ್ಟಿ ಬಂದವರು. ಇದಕ್ಕೆ ಶ್ರುತಿ ಸ್ಮೃತಿಗಳಿಗಿಂತ ಹೇತು ಶಾಸ್ತ್ರದಲ್ಲಿಯೇ ಹೆಚ್ಚು ಆಸಕ್ತಿ ನಂಬಿಕೆಗಳನ್ನು ತೋರುವ ಬ್ರಾಹ್ಮಣರನ್ನು ಮನು[63] ನಾಸ್ತಿಕರೆಂದು ಕರೆಯುವುದೇ ಸಾಕ್ಷಿ. ಅಂಥವರೊಡನೆ ಮಾತನಾಡುವುದೂ ತಪ್ಪೆಂದು ಮತ್ತೊಂದು ಕಡೆ ಹೇಳಿ

---

60 ಮಹಾಭಾರತ, XIII-789

61 ಛಾಂದೋಗ್ಯ ಉಪನಿಷತ್ತು, VII-1-2

62 Prof. Dasgupta, *History of Indian Philosophy*, Vol. III p. 517

63 ಮನು., II-17

ದ್ದಾನೆ. ಮನುಸ್ಮೃತಿ ಮಾತ್ರವಲ್ಲ. ಭಾಗವತ ಪುರಾಣವೂ[64] ಆ ಬಗೆಯ ಜನರನ್ನು ಉದ್ದೇಶಿಸಿ ಹೇಳುತ್ತದೆ. ಇದರಿಂದ ವೇದೋಕ್ತಿಗಳನ್ನು ಪ್ರತಿಭಟಿಸಿ ಸ್ವೇಚ್ಛಾಪರರಂತೆ ಎಲ್ಲ ಬಗೆಯಲ್ಲಿಯೂ ಪೂರ್ವಾಪರ ವಿವೇಚನೆಯಿಲ್ಲದೆ ವಾದ ಹೂಡುತ್ತಿದ್ದ ನಾಸ್ತಿಕ ಜನರ ತಂಡ ಮೊದಲಿನಿಂದಲೂ ಭಾರತದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಹೆಚ್ಚು ಶ್ರಮಿಸದೆ ಸುಖಜೀವನ ನಡೆಸಲು ಕರೆಯಿತ್ತ ಚಾರ್ವಾಕರ ಮತವನ್ನು ತುಚ್ಛ ಮತ್ತು ನಿಂದಾತ್ಮಕ ಮನಃಪ್ರವೃತ್ತಿ ಮತ್ತು ಸುಖಲೋಲುಪತೆಯನ್ನು ಬೋಧಿಸಿದ ದರ್ಶನ ಎಂದು ಅವಹೇಳನ ಮಾಡುವುದು ಅಷ್ಟು ಸೂಕ್ತವಲ್ಲ. ಡಾ. ರಾಧಾಕೃಷ್ಣನ್ ಅವರು[65] ಅಭಿಪ್ರಾಯಪಡುವಂತೆ ಲೋಕಾಯತ ಮತ ಎಲ್ಲ ಕಾಲದಲ್ಲೂ ಮೂಢನಂಬಿಕೆಯನ್ನು ಚುಚ್ಚಿ ಒಡೆದು ಸತ್ಯಾಂಶ ಪ್ರಕಾಶಿಸುವಂತೆ ಅವಕಾಶ ಮಾಡಿಕೊಡುವ ಮಾನವನ ಪ್ರಾಜ್ಞ ಮನೋಭಾವವನ್ನು ಸೂಚಿಸುತ್ತದೆ. ಪ್ರತಿದರ್ಶನವೂ ಆಯಾಕಾಲದ ಜನರ ವಿಚಾರಮಥನದ ಫಲ. ವೇದೋಪನಿಷತ್ತುಗಳ ಅನಂತರ ಬಂದ ಕಾಲ ಭಾರತೀಯ ದರ್ಶನದಲ್ಲಿ ಒಂದು ಪರ್ವಕಾಲ. ಹಿಂದಿನ ಕಾಲದಿಂದಲೂ ಸಾಂಪ್ರದಾಯಿಕವಾಗಿ ಬಂದಿದ್ದ ಅನೇಕ ರೂಢಿಬದ್ಧ ಮತ್ತು ವೈದಿಕ ನಂಬಿಕೆಗಳನ್ನು ಕೆಲವರು ಕಡೆಗಣ್ಣಿನಿಂದ ಕಂಡದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಅವುಗಳ ಸತ್ಯತೆ ಮತ್ತು ಸೂಕ್ತತೆಗಳನ್ನು ಶಂಕಿಸಿ ಪ್ರಶ್ನಿಸಿ ವಿಚಾರ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದುದರಲ್ಲಿ ಅನುಚಿತವಾದ್ದೇನೂ ಇಲ್ಲ. ಶತಮಾನಗಳಿಂದಲೂ ಅನೂಚಾನವಾಗಿ ಬಂದಿದ್ದ ನಂಬಿಕೆ ಭಾವನೆಗಳನ್ನು ವಿಚಾರ ವಿಮರ್ಶೆಗಳಿಗೊಳಪಡಿಸಿ ಹೊಸ ವಿಚಾರಧಾರೆ ಹೊಸ ಮನೋಧರ್ಮ ಬೆಳೆಯಲು ಅವಕಾಶ ಮಾಡುವುದು ಸುಲಭಸಾಧ್ಯವಲ್ಲ. ಅಧಿಕಾರಯುತ ತತ್ತ್ವಗಳನ್ನು ಬದಿಗೊತ್ತಿ ವ್ಯಕ್ತಿಯ ವಿಚಾರ, ವಾದ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯ ಬೆಳೆಸುವವರು ಇತರರ ಖಂಡನೆಗೂ ಮೂದಲಿಕೆಗೂ ಒಳಪಡುವುದು ಸಾಮಾನ್ಯ. ನೈಜತೆಯನ್ನು ಮುಚ್ಚಿ, ಇತರ ಬಾಹ್ಯಾಂಶಗಳಲ್ಲಿ ಆಸಕ್ತಿ ತೋರಿದ್ದ ಮನಸ್ಸನ್ನು ತನ್ನ ಸ್ವಾಭಾವಿಕ ನೈಜತೆಯ ಕಡೆ ತಿರುಗಿಸಿದ ಪವಾಡದ ಕೀರ್ತಿ ಚಾರ್ವಾಕರಿಗೆ ಸಲ್ಲುತ್ತದೆ. ಶತಮಾನಗಳ ಅನಂತರ ಬಂದ ಇತರ ಪ್ರತಿಭಾನ್ವಿತ ಖ್ಯಾತ ತಾರ್ಕಿಕರಂತೆ ತರ್ಕಶಾಸ್ತ್ರದ ಇತಿಹಾಸದಲ್ಲಿ ಹೊಸ ಅಧ್ಯಾಯಗಳನ್ನು ಅವರು ಆರಂಭಿಸದಿರಬಹುದು. ಆದರೆ ಅವರ ಕಾಲದಲ್ಲಿ ಸಾಂಕ್ರಾಮಿಕ ಜಾಡ್ಯದಂತೆ ಹರಡುತ್ತಿದ್ದ 'ಕಂಡದ್ದು ಕೇಳಿದ್ದು ಹೇಳಿದ್ದೆ'ಲ್ಲವನ್ನೂ ನಂಬಿ ಮಾನವರ ಮನಸ್ಸನ್ನು ಮೂಢನಂಬಿಕೆಗಳ ಪಾಳು ಬಾವಿಯನ್ನಾಗಿ ಮಾಡುವ ಸಾಮಾನ್ಯ ಅಭ್ಯಾಸವನ್ನು ತಡೆಗಟ್ಟಿ, ವಿಚಾರದ ಮೂಲಾಧಾರಗಳನ್ನು ಪರೀಕ್ಷಿಸಿ, ವಾದಕಲೆಯನ್ನು ವ್ಯವಸ್ಥಿತವೂ ಕ್ರಮಬದ್ಧವೂ ಆಗುವಂತೆ ಮಾಡಿ ವಿಮರ್ಶನಾತ್ಮಕ ಬುದ್ಧಿ ಜನಸಾಮಾನ್ಯರಲ್ಲಿ ಬೆಳೆಯಲು ಚಾರ್ವಾಕರು ಕಾರಣರಾದರು. "ಕಂಡು ನೋಡಿದ್ದನ್ನು ಮಾತ್ರ ನಂಬಿ" ಎಂಬ ತಮ್ಮ ಚಾಟಿ ಏಟಿನಿಂದ ಇತರ ದರ್ಶನ ಸಿದ್ಧಾಂತಗಳು ಒಪ್ಪಿದ್ದ ಅನುಮಾನ, ಶಬ್ದ ಇತ್ಯಾದಿ ಪ್ರಮಾಣಗಳೆಲ್ಲವನ್ನೂ ಮತ್ತೊಮ್ಮೆ ಅನುಭವ ನಿಯಮಗಳ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಹವ್ಯಾಸ ದಾರ್ಶನಿಕ ತಾರ್ಕಿಕರಲ್ಲಿ ಮೂಡುವಂತೆ ಮಾಡಿದ ಗೌರವ ಚಾರ್ವಾಕರಿಗೆ ಸಲ್ಲುತ್ತದೆ.

---

64. *Bhagavata*, XI-18-30

65. Dr. S. Radhakrishnan, *Indian Philosophy*, Vol I, p. 285

ಅದಕ್ಕಿಂತ ಮಿಗಿಲಾಗಿ, ಮುಖ್ಯವಾಗಿ ಚಾರ್ವಾಕ ದರ್ಶನ, ಪ್ರೊ|| ರಿಸ್ ಡೇವಿಸ್ ಮತ್ತು ಫ್ರಾಂಕೆ ಎಂಬ ಪಾಶ್ಚಾತ್ಯ ವಿದ್ವಾಂಸರು[66] ಹೇಳುವಂತೆ, ಒಂದು ಬಗೆಯ ಪ್ರಕೃತಿ ವಸ್ತುಜ್ಞಾನ ಬೋಧಿಸುವ ದರ್ಶನ. ಪ್ರಕೃತಿ ಸೌಂದರ್ಯ ಅನುಭವಿಸಿ ಸುಖಜೀವನ ನಡೆಸಲು ಭಾರತದ ಕೆಲವು ಜನ ಕೊಟ್ಟ ಕರೆಯೇ ಅದು. ಅನುಭವವಾಣಿಗಳು, ಒಗಟುಗಳು, ಯಮಕಗಳು ಮತ್ತು ಕಲ್ಲುಮಣ್ಣು ಮೃಗ ಮರ ಪಕ್ಷಿ ಕ್ರಿಮಿ ಕೀಟಾದಿಗಳ ವಿಚಾರದಲ್ಲಿ ಪ್ರಾಚೀನ ಕಾಲದಿಂದಲೂ ಅನೂಚಾನವಾಗಿ ಬಂದಿದ್ದ ನಂಬಿಕೆ ಅಭಿಪ್ರಾಯಗಳಲ್ಲಿ ಆಸಕ್ತಿ ತೋರಿದ ಜನರ ತಂಡವಿದು. ಆದರೆ ಈ ಬಗೆಯ ಜ್ಞಾನ ಸಾಕಷ್ಟು ಮುಂದುವರಿದಿರಲಿಲ್ಲ. ಅದನ್ನು ಗಳಿಸುವುದೂ ಸುಲಭಸಾಧ್ಯವಾಗಿರಲಿಲ್ಲ. ಆದುದರಿಂದ ಜನರು ಅದರ ಕಡೆ ಅಷ್ಟಾಗಿ ಗಮನ ಕೊಡುತ್ತಿರಲಿಲ್ಲ. ಅಲ್ಲದೆ ಬ್ರಹ್ಮಜ್ಞಾನ ಉನ್ನತವಾದುದು. ಉಳಿದುವೆಲ್ಲ ಕೀಳುಮಟ್ಟದವು ಎಂಬ ಭಾವನೆ ಆ ಕಾಲದ ಜನರಲ್ಲಿ ಮೂಡಿದ್ದುದರಿಂದ ಪ್ರಕೃತಿ ವಿಜ್ಞಾನದ ಪ್ರಗತಿಗೆ ಪ್ರೋತ್ಸಾಹವೂ ಇರಲಿಲ್ಲ. ಇದರಿಂದ ಜನಸಾಮಾನ್ಯರಲ್ಲಿ ಪ್ರಕೃತಿ ವಿಜ್ಞಾನ ಮೋಕ್ಷದಾಯಕವಲ್ಲ ಎಂಬ ನಂಬಿಕೆಯುಂಟಾಗಿ ಆ ಬಗೆಯ ಜ್ಞಾನದ ವಿಚಾರದಲ್ಲಿ ಹೆಚ್ಚು ತಾತ್ಸಾರ ಬೆಳೆಯಲವಕಾಶವಾಯಿತು. ಆಧ್ಯಾತ್ಮಿಕ ವಿಷಯಗಳ ಬಗ್ಗೆ ಹೆಚ್ಚು ಆದರ ಬೆಳೆದು ಜೀವನದ ತಕ್ಕಡಿಯ ಸಮತೂಕ ತಪ್ಪಿ ಪ್ರಾಪಂಚಿಕ ವಿಷಯಗಳ ಕಡೆಗೆ ಗಮನ ಕಡಿಮೆಯಾಯಿತು. ಜನತೆಯಲ್ಲಿ ಬೆಳೆಯುತ್ತಿದ್ದ ಅಭಿಪ್ರಾಯವನ್ನು ತಿದ್ದಿ, ಆ ಬಗೆಯ ಸುಖವೂ ಜೀವನದ ಗುರಿ ಸಾಧಿಸುವುದರಲ್ಲಿ ಒಂದು ತಪ್ಪಿಸಿಕೊಳ್ಳಲಾಗದ ಹಂತವೆಂದು ಅವರಿಗೆ ತೋರಿಸಲು ಮುಂಬಂದ ಜನರ ತಂಡ ಲೋಕಾಯತರದು. ತರ್ಕವನ್ನು ಇಂದಿನ ರೂಪದಲ್ಲಿ ಬೋಧಿಸಿ ಅಭ್ಯಾಸಿಸದಿದ್ದರೂ ಅನುಭವಕ್ಕೆ ಸಾಕಷ್ಟು ಪ್ರಾಧಾನ್ಯ ಕೊಟ್ಟು ಸಾಮಾನ್ಯರ ಅಭಿಪ್ರಾಯಗಳಿಗೂ ಮನ್ನಣೆ ದೊರಕಿಸಿಕೊಟ್ಟ ಜನರು ಅವರು. ಅವರ ಅನಂತರ ಬಂದ ತಾರ್ಕಿಕ ದಾರ್ಶನಿಕರೆಲ್ಲ ಅವರ ದರ್ಶನವನ್ನು ಒಂದಲ್ಲ ಒಂದು ರೀತಿಯಲ್ಲಿ ಬಳಸಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಅಷ್ಟು ಮಾತ್ರವಲ್ಲ. ಅವರ ದರ್ಶನ ತತ್ತ್ವಗಳನ್ನು ಬೋಧಿಸುವುದು ಮಾತ್ರವಲ್ಲ, ಅನುಷ್ಠಾನಕ್ಕೂ ತಂದು ದೇಹ ಸೌಖ್ಯವೇ, ಅದನ್ನು ಸಾಧಿಸುವುದೇ ಮಾನವನ ಜೀವನದ ಗುರಿ ಎಂದು ತಿಳಿದಿರುವ ಜನರನ್ನೊಳಗೊಂಡ ಉತ್ತರ ಭಾರತದ ಕೆಲವು ದೇವೀ ಉಪಾಸಕ ಗುಂಪುಗಳಿವೆಯೆಂದು ಪ್ರೊ|| ದೇವಿಪ್ರಸಾದ ಚಟ್ಟೋಪಾಧ್ಯಾಯರು[67] ಹೇಳಿದ್ದಾರೆ. ಇದರಿಂದ ಚಾರ್ವಾಕ ದರ್ಶನವನ್ನು ಎಷ್ಟೇ ಸುಖಲೋಲುಪತೆ ಭೋಧಿಸುವ ದರ್ಶನವೆಂದು ನಿಂದಿಸಿದರೂ, ಭಾರತೀಯ ತರ್ಕ ತತ್ವಶಾಸ್ತ್ರಗಳ ರೂಪರೇಖೆಗಳನ್ನು ಚಿತ್ರಿಸುವಾಗ ಅದರ ಹೆಸರನ್ನು ಮರೆಯಲಾಗದು. ಸ್ವಮತಾಂಧತೆಯಿಂದ ನಶಿಸುತ್ತಿದ್ದ ಆ ಕಾಲದ ತಾರ್ಕಿಕ ದಾರ್ಶನಿಕರನ್ನು ಮೈಮರೆತ ನಿದ್ದೆಯಿಂದ ಹೊಡೆದೆಬ್ಬಿಸಿ ವಿಚಾರಮಥನದಲ್ಲಿ ತೊಡಗುವಂತೆ ಮಾಡಿದವರ ಹೆಸರುಗಳಲ್ಲಿ ಅವರದು ಮೊದಲನೆಯದೇ ಆಗಬೇಕು. ಅವರ ಮೂಲಕ ಇತರ ಅವೈದಿಕ ನಾಸ್ತಿಕ ಮತಗಳಾದ ಜೈನ ಬೌದ್ಧಮತಗಳು ಬೆಳೆಯಲವಕಾಶವಾಯಿತು. ಈ ದೃಷ್ಟಿಯಿಂದ ಅವರನ್ನು ಭಾರತದ ದರ್ಶನಮಾಲೆಯಲ್ಲಿ ವೇದೋಪನಿಷತ್ತುಗಳಿಗೂ, ಅನಂತರ ಬಂದ ಷಡ್ದರ್ಶನ ಪೂರ್ವೋತ್ತರ ಮೀಮಾಂಸಗಳಿಗೂ ಸಂಬಂಧ ತೋರುವ ಕೊಂಡಿಯೆಂದರೆ ಅತಿಶಯೋಕ್ತಿಯಲ್ಲ.

66 Rhys Davis *Dialogues of the Buddha*, Vol II
67 Debiprasad Chattopadhyaya, *Lokayata*

ಲೋಕಾಯತರ, ನಾಸ್ತಿಕರ ಮತ್ತು ಶ್ರದ್ಧಾಹೀನರ ಮೂಲ ಸೂತ್ರಗ್ರಂಥಗಳು ನಮಗೆ ಉಪಲಬ್ಧವಿಲ್ಲವೆಂಬುದು ಭಾರತೀಯ ತತ್ತ್ವಶಾಸ್ತ್ರದ ವಿದ್ಯಾರ್ಥಿಗಳಿಗೆ ಚೆನ್ನಾಗಿಯೇ ವಿದಿತವಿದೆ. ಯಾವುದೇ ಸಿದ್ಧಾಂತ ಅಥವಾ ವಿಚಾರಸರಣಿಯನ್ನು ಅದರ ಕಡುವಿರೋಧಿಗಳ ಪ್ರತಿಪಾದನೆಯನ್ನು ಮಾತ್ರ ಅವಲಂಬಿಸಿ ಅರಿಯಬೇಕೆಂದು ಒತ್ತಾಯಬಂದರೆ ಆ ಮಾರ್ಗವು ಅತ್ಯಂತ ಕ್ಷೇಮಕಾರಿಯಾದುದೇನೂ ಅಲ್ಲ. ಪೂರ್ವಗ್ರಹಗಳಿಂದಲೂ ವೈಯಕ್ತಿಕ ಮನೋವಿಕಲ್ಪಗಳಿಂದಲೂ ವಿಮುಕ್ತರಾದ ವಿರೋಧಿಗಳು ವಿರಳ. ವಿರೋಧಿಗಳ ಅಭಿಪ್ರಾಯಗಳೇ ಪೂರ್ವಪಕ್ಷಗಳು. ಇವುಗಳ ನಿರೂಪಣೆಯು ಅಸಮರ್ಪಕ ಹಾಗೂ ಸಹಾನುಭೂತಿ ಕಾಣದ ರೀತಿಯಿಂದ ಬರುವುದೇ ಸಾಧಾರಣವಾಗಿರುವುದರಿಂದ, ಇವುಗಳ ತತ್ತ್ವಶಾಸ್ತ್ರೀಯ ಬೆಲೆಯನ್ನು ಸರಿಯಾಗಿ ಕಟ್ಟಿ, ಸಮಂಜಸವಾಗಿ ನಿರ್ಣಯಿಸುವುದೇನೂ ಸುಲಭವಲ್ಲ. ಸರ್ವಾಸ್ತಿವಾದಿ ಬೌದ್ಧರು, ಪಾಶುಪತರು ಮತ್ತು ಪಾಂಚರಾತ್ರರ ಸಿದ್ಧಾಂತಗಳು ಶಂಕರಾಚಾರ್ಯರ ಕೈಯಲ್ಲಿ ಹೇಗೆ ಮುಕ್ಕಾಗಿವೆಯೆಂಬುದನ್ನು ಅನುಲಕ್ಷಿಸಿದಾಗ, ಒಂದು ಸಿದ್ಧಾಂತವನ್ನು ಅದರ ವಿರೋಧಿಗಳ ಪ್ರತಿಪಾದನೆಯ ಮೇಲಿಂದಲೇ ಅಧ್ಯಯನ ಮಾಡಬೇಕಾದ ಪ್ರಸಂಗವನ್ನು ಈ ತೊಂದರೆಗಳ ಯೋಗ್ಯ ಪರಿಜ್ಞಾನದಿಂದಲೇ ಪರಿಗ್ರಹಿಸಬೇಕೆಂಬುದು ವಿಶದವಾಗುತ್ತದೆ.

—**ದಕ್ಷಿಣಾರಂಜನಶಾಸ್ತ್ರಿ***

---

* ಅನುವಾದ : ಡಾ. ಕೆ. ಕೃಷ್ಣಮೂರ್ತಿ, 'ಯುಗಯಾತ್ರೀ ಭಾರತೀಯ ಸಂಸ್ಕೃತಿ' ಸಂ, 3 (ಪ್ರಸಾರಾಂಗ), ಪು, ೧೧೩

ಸೀತಾರಾಮ ಜಾಗೀರ್‌ದಾರ್

ಎರಡು ಹೊಸ ಶಾಸನಗಳು ಮತ್ತು ನಾಗಚಂದ್ರನ ಇತಿವೃತ್ತ

'ಅಭಿನವ ಪಂಪ' ಎಂದು ಪ್ರಸಿದ್ಧನಾದ ನಾಗಚಂದ್ರ ಕವಿ 'ರಾಮಚಂದ್ರಚರಿತ ಪುರಾಣಂ' ಮತ್ತು 'ಮಲ್ಲಿನಾಥ ಪುರಾಣಂ' ಎಂಬ ಎರಡು ಕೃತಿಗಳನ್ನು ಕನ್ನಡದಲ್ಲಿ ರಚಿಸಿದುದು ಸದ್ಯ ವಿಶ್ರುತ ಸಂಗತಿ. ಈ ಎರಡು ಕೃತಿಗಳಲ್ಲೂ ಅತ ತನ್ನ ಬಗ್ಗೆ ವಿಶೇಷ ಹೇಳಿಕೊಂಡಿಲ್ಲ. ಅವನು ಬಾಳಿ ಬದುಕಿದ ಕಾಲ ಹಾಗೂ ಪ್ರದೇಶ ಇವು ಇನ್ನೂ ಅನಿರ್ಣೀತ ಸಂಗತಿಗಳು.[1]

ನಾಗಚಂದ್ರ ತಾನು ವಿಜಯಪುರದಲ್ಲಿ ಮಲ್ಲಿನಾಥ ತೀರ್ಥಂಕರನ ಬಸದಿಯನ್ನು ಕಟ್ಟಿಸಿದುದಾಗಿ ಹೇಳಿದ್ದಾನೆ :

> ನಿಜವಿಭವೋದಯಂ ಸಫಳಮಾಯ್ತೆನೆ ಮಲ್ಲಿಜಿನೇಂದ್ರಗೇಹಮಂ
> ವಿಜಯಪುರಕ್ಕಳಂಕರಣಮಾಗಿರೆ ಮಾಡಿಸಿ ತತ್ಚರಿತ್ರಮಂ
> ಸುಜನಸಭಾವತಂಸಮೆನೆ ಪೇಳ್ದು ದಿತೋದಿತಮಾಗೆ ಮಾಡಿದಂ
> ನಿಜಕವಿತಾ ಗುಣೋದಯಮಿದೆಂಬಿನಮೀ ಕೃತಿ ನಾಗಚಂದ್ರನಾ ||[2]

ಈ 'ವಿಜಯಪುರ' ಯಾವುದು ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ :

1) 'ಮಧುರಚೆನ್ನ'[3] ಮತ್ತು ರಾ. ನರಸಿಂಹಾಚಾರ್ಯರು[4] ಕವಿ ಈಗಿನ ಉತ್ತರ ಕರ್ನಾಟಕದ ಬಿಜಾಪುರ ಜಿಲ್ಲೆಯ ಬಿಜಾಪುರದಲ್ಲಿ (ಇದರ ಕನ್ನಡ ರೂಪ ಮತ್ತು ಜನಬಳಕೆಯಲ್ಲಿ ಇಂದಿಗೂ

---

[1] ಇತ್ತೀಚೆಗೆ ಹೊರಬಂದ ಈ ಗ್ರಂಥಗಳನ್ನು ನೋಡಿ :

a) ಮಲ್ಲಿನಾಥ ಪುರಾಣಂ (ಸಂ. ಡಾ. ಬಿ. ಬಿ. ಹೆಂಡಿ), ಪ್ರಸ್ತಾವನೆ, ಪು. iii–xiv (1974)

b) ಮಲ್ಲಿನಾಥ ಪುರಾಣ ಸಂಗ್ರಹ (ಸಂ. ಡಾ. ಎಂ. ಎಂ. ಕಲ್ಬುರ್ಗಿ), ಪೀಠಿಕೆ, ಪು. xiv (1974)

c) ರಾಮಚಂದ್ರಚರಿತ ಪುರಾಣಂ (ಸಂ. ಡಾ. ಆರ್. ಸಿ. ಹಿರೇಮಠ) (1975), ಪ್ರಸ್ತಾವನೆ ಪು. 1–6

d) ಡಿ. ವಿಜಯ, ನಾಗಚಂದ್ರ–ಇತಿವೃತ್ತ, ಕನ್ನಡ ಸಾಹಿತ್ಯ ಚರಿತ್ರೆ (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು) (1975) ಪು. ೭೭೩–೭೯೧

[2] ಪೂರ್ವೋಕ್ತ 'ಮಲ್ಲಿನಾಥ ಪುರಾಣಂ', ಆ. ೧೪–ಪ. ೨೧೧, ಪು. ೩೫೭

[3] ಅದೇ ಗ್ರಂಥ, ಪ್ರಸ್ತಾವನೆ, ಪು. IV

[4] ಕ. ಕ. ಚ., ಭಾಗ ೧ (1961), ಪು. 111

ಇರುವ ರೂಪ 'ವಿಜಾಪ್ರರ'<ವಿಜಯಪುರ ಎಂದೇ) ಇದ್ದನು ಎಂದು ಅಭಿಪ್ರಾಯ ಪಟ್ಟಿದ್ದಾರೆ.

2) ಗೋವಿಂದ ಪೈ ಅವರು 'ಬನವಾಸಿ ದೇಶದ ಪಡುಗಡಿಯ ಕಡಲ ದಂಡೆಯಲ್ಲಿ ತಾನೆ ಇರುವ ಯಾವುದೊಂದು ಊರಿಸವನಾಗಿರಬೇಕು', ಎಂದಿದ್ದಾರೆ.[5]

3) ಡಿ. ಎಲ್. ನರಸಿಂಹಾಚಾರ್ ಅವರು 'ಪಂಪರಾಮಾಯಣಸಂಗ್ರಹ' ಎಂಬ ಗ್ರಂಥ ದಲ್ಲಿ ಈ ಎರಡು ಅಭಿಪ್ರಾಯಗಳಿಗೆ ವ್ಯತಿರಿಕ್ತವಾಗಿ, ಮೈಸೂರು ಜಿಲ್ಲೆಯ 'ತಲಕಾಡು ಪ್ರಾಂತದ ವಿಜಯಪುರ' ಎಂದು ತೃತೀಯ ಪಂಥವನ್ನು ಪ್ರತಿಪಾದಿಸಿದ್ದಾರೆ–ಇನಿತು ಶಂಕೆ ಯುಳ್ಳವರೂ ಆಗಿದ್ದಾರೆ.[6]

ಈ ಮೂರು ಅಭಿಪ್ರಾಯಗಳಲ್ಲಿ ಒಂದಾದ ಶ್ರೀ ಪೈಯವರ ಅಭಿಪ್ರಾಯವನ್ನು ಕುರಿತು ಡಾ. ರಂ. ಶ್ರೀ. ಮುಗಳಿ, "ಶ್ರೀ ಗೋವಿಂದ ಪೈಗಳು ಕೊಟ್ಟ ಆಧಾರಗಳು ಬಲಿಷ್ಠವಾಗಿಲ್ಲ" ಎಂದು ಸೂಚಿಸಿದ್ದಾರೆ.[7] ನಾಮ ಸಾದೃಶ್ಯದ ಮೂಲಕ ಎರಡು ವಿಜಯಪುರಗಳಲ್ಲಿ ಯಾವುದು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಡಾ. ಮುಗಳಿ, ಡಾ. ಹಿರೇಮಠ, ಡಾ. ಹಂಪ, ಡಾ. ಕಲ್ಬುರ್ಗಿ ಇವರುಗಳು ಒಂದನೆಯ ಅಭಿಪ್ರಾಯವನ್ನು ಅನುಮೋದಿಸಿದರೆ[8] ಕೆಲವರು ಡಿ. ಎಲ್. ಎನ್. ಅವರ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ.[9] ಸದ್ಯ ನನಗೆ ತಿಳಿದಂತೆ ಎರಡೂ ವಿಜಯಪುರಗಳಲ್ಲಿ ಮಲ್ಲಿನಾಥನ ಜಿನಬಸದಿಯ ಅವಶೇಷಗಳು ಇಲ್ಲ. ಉತ್ತರ ಭಾಗದ ವಿಜಯಪುರ ಮಹಮ್ಮದೀಯರ ಆಡಳಿತೆಯ ಕಾಲದಲ್ಲಿ ವಿಶೇಷ ಹಾಳಾಗಿದ್ದು ಅಲ್ಲಿಯ ಹಲವು ದೇವಾಯತನಗಳು ನಾಮನಿರ್ದೇಶವಿಲ್ಲದ ಹಾಗೆ ನಿಶ್ಶೇಷವಾಗಿ ಹಾಳಾದಂತೆ ದಕ್ಷಿಣದ ವಿಜಯಪುರ ಹಾಳಾಗಿಲ್ಲ. ತಲಕಾಡಿನ ಈ ವಿಜಯಪುರದಲ್ಲಿ ತಲಕಾಡಿನ ದೇವಸ್ಥಾನಗಳ ಹಾಗೆ ಕಿಂಚಿತ್ತಾದರೂ ಅವಶೇಷ ಉಳಿಯುತ್ತಿತ್ತು. ವಿಜಯಪುರದಲ್ಲಿಯೆ ಇನ್ನೂ ಕೆಲವು ದೇವಾಲಯ ಗಳು ಉಳಿದು ನಿಂತಿವೆಯೆಂಬುದು ಗಮನಾರ್ಹವಾದ ಸಂಗತಿ. ಉತ್ತರ ಕರ್ನಾಟಕದ ವಿಜಯಪುರ ದಲ್ಲಿ ನಾಗಚಂದ್ರಕವಿಯ 'ರಾಮಚಂದ್ರಚರಿತ ಪುರಾಣಂ' ಗ್ರಂಥದ ಕೆಲ ಪದ್ಯಗಳ ಪದಗುಂಫನ ಗಳನ್ನು ಹೊತ್ತುನಿಂತ ಸುಮಾರು ಸಮಕಾಲೀನ ಶಾಸನಾಧಾರವೊಂದು ಇದ್ದ ಕಾರಣದಿಂದ ಒಂದನೆಯ ಅಭಿಪ್ರಾಯ ಡಾ. ಕಲ್ಬುರ್ಗಿ ಅವರು ಹೇಳುವಂತೆ 'ಇನ್ನೂ ಗಟ್ಟಿಯಾಗಿ ಉಳಿದಿದೆ'[10] ಇದೇ ರೀತಿಯಾಗಿ ನಾಗಚಂದ್ರನ ಕಾಲದ ಸಮಸ್ಯೆಯೂ ವಿದ್ವಾಂಸರಲ್ಲಿ ಕ್ರಿ. ಶ. ಸು. ೧೦೦೦ ದಿಂದ ೧೨ನೆಯ ಶತಮಾನದ ಪೂರ್ವಾರ್ಧದ ವರೆಗೆ ತೂಗುಮಂಚದಲ್ಲಿ ಜೀಕಿಹಾಕುತ್ತಲಿದೆ. ಇನ್ನು

---

[5]ನಾಗಚಂದ್ರನ ಕಾಲನಿರ್ಣಯ, 'ಅಭಿನವ ಪಂಪ' ಗ್ರಂಥ, ಪು. ೩೬

[6]ಪಂಪರಾಮಾಯಣ ಸಂಗ್ರಹ (1951), ಪೀಠಿಕೆ, ಪು. VII, ಅ. ಟಿ. ೨

[7]ಕನ್ನಡ ಸಾಹಿತ್ಯ ಚರಿತ್ರೆ (1953) ಪು. ೧೨೪

[8]ಪೂರ್ವೋಕ್ತ ಬರವಣಿಗೆಗಳು

[9] a) ನಾಗಚಂದ್ರ (ಸಿ.ಪಿ.ಕೆ), ಪು ೬ (1973)

b) ಕನ್ನಡ ಸಾಹಿತ್ಯ ಚರಿತ್ರೆ (ಕ. ಅ. ಸಂಸ್ಥೆ, ಮೈಸೂರು) ಪು. ೭೮೩

[10]ಡಾ. ಎಂ. ಎಂ. ಕಲ್ಬುರ್ಗಿ, ಪೂರ್ವೋಕ್ತ ಗ್ರಂಥ, ಪು. xiv

ನಾಗಚಂದ್ರನ ವಂಶ ಚರಿತ್ರೆಯ ನಿರೂಪಣೆಯ ಸಮಸ್ಯೆಯಲ್ಲಿ 'ಸಮಯ ಪರೀಕ್ಷೆ' ಗ್ರಂಥದ ಕರ್ತೃ ಬ್ರಹ್ಮಶಿವನನ್ನು ಆವನ ಮೊಮ್ಮಗನೆಂದು ಕೆಲವರು ನಿರೂಪಿಸಿದ್ದಾರೆ[11] ಬ್ರಹ್ಮಶಿವನಿಗೂ ನಾಗಚಂದ್ರನಿಗೂ ಹೀಗೆ ತಳುಕುಹಾಕುವುದು ಸರಿಯಲ್ಲವೆಂದು ಈಗಾಗಲೇ ಬರೆದಾಗಿದೆ. ನಾಗಚಂದ್ರನ ವಂಶದ ಬಗ್ಗೆ, ಆತ ಇದ್ದ ಸ್ಥಳದ ಬಗ್ಗೆ ವಿಜಾಪುರ ಜಿಲ್ಲೆಯ ವಿಜಾಪುರದಿಂದ ಸುಮಾರು ೧೬ ಮೈಲಿಗಳ ವಿಹಗ ಪಥದಂತರದಲ್ಲಿರುವ 'ಬಾಬಾನಗರ' ಎಂಬ ಗ್ರಾಮದಲ್ಲಿ ದೊರೆತ ಶಾಸನವೊಂದು ಹೊಸ ಬೆಳಕನ್ನು ಬೀರುತ್ತದೆ.[12] ದುರ್ದೈವದ ಸಂಗತಿಯೆಂದರೆ, ಈ ಈ ದೊಡ್ಡ ಶಾಸನದಲ್ಲಿ (71 ಪಂಕ್ತಿಗಳಿವೆ) ಸ್ಥಳವು ಸಾಲದೆ ಮೇಲೆ ಬರೆದ, ಕವಿಯ ಮೊಮ್ಮಗನಿಗೆ ಸಂಬಂಧಿಸಿದ ಒಂದು ಪದ್ಯಭಾಗವನ್ನು ಬಿಟ್ಟರೆ ಮಧ್ಯಭಾಗದಲ್ಲಿ ಅಲ್ಲಲ್ಲಿ ಬರೆದುದೆಲ್ಲವೂ ಅಳಿಸಿಹೋಗಿದೆ. ನಾಗಚಂದ್ರನಿಗೆ 'ನಾಗಚಂದ್ರ' ಹಾಗೂ'ನಾಗಾರ್ಯ' ಎಂಬ ಇಬ್ಬರು ಮೊಮ್ಮಕ್ಕಳು ಇದ್ದ ಉಲ್ಲೇಖ ಈ ಶಾಸನದಲ್ಲಿದೆ. ನೋಡಿ:

70 ಪೊಸಮುತ್ತಂ ಚತುರಾಸ್ಯನಾಯ್ದ ಮೃತದಿಂದ[ಂ] ತೋಯ್ದುಕೋದಿಕ್ಕಿದೆಕ್ಕಸರಂ
ವಾಗ್ವಧುವಿಗೆ ತಾನೆನಿಸಿ ಸುವ್ಯಕ್ತಂಗಳಾದಕ್ಕರಂ ಮಿಸುಗಲು
ಶಾಸನಮಂ ಸಮನ್ತು ಬರೆದಂ

71 ಶ್ರೀ ಮಲ್ಲಿನಾಥದೇವಾವಸಥಂ ಸತ್ಕವಿ ನಾಗಚಂದ್ರನುತಮೊಮ್ಮಂ
ನಾಗಚಂದ್ರಾಗ್ರಜಂ ॥ ಮೂಲಿಗ ನಾಗಾರ್ಯ್ಯಂ......॥[13]

—ಇಲ್ಲಿ ಬಂದಿರುವ 'ಮಲ್ಲಿನಾಥ ದೇವಾವಸಥ' ಇದು ನಾಗಚಂದ್ರ (ಅಭಿನವ ಪಂಪ) ಕಟ್ಟಿಸಿದ ವಿಜಯಪುರಕ್ಕೆ ಅಲಂಕರಣವಾದ ಮಲ್ಲಿನಾಥ ತೀರ್ಥಂಕರನ ಬಸದಿ ಎಂದು ನನ್ನ ಅಭಿಪ್ರಾಯ. ಆಗಿನ ಕಾಲಕ್ಕೆ ಕನ್ನಡ ನಾಡಿನ ಈ ಭಾಗದಲ್ಲೂ ಜೈನ ಧರ್ಮ ಸಾಕಷ್ಟು ಪ್ರಚಾರದಲ್ಲಿದ್ದಿತು. ಚಾವುಂಡರಾಯ, ರನ್ನ ಮೊದಲಾದವರಿಗೆ ಗುರುವಾದ ಅಜಿತಸೇನಾಚಾರ್ಯರ ಪೀಠ ಈ ಭಾಗದಲ್ಲಿದ್ದಿತು. "ಮೂಲ ಸಂಘ ದೇಸಿಯ ಗಣ ಪುಸ್ತಕ ಗಚ್ಛ ಇಂಗಳೇಶ್ವರದ ಬಳಿ" ಎಂಬಲ್ಲಿನ

---

[11] a) ಎಚ್. ದೇವೀರಪ್ಪ : ಬ್ರಹ್ಮಶಿವನ ಕಾಲ ವಿಚಾರ (ಪ್ರ. ಕ. ೨೪-೪)

b) ಡಾ. ಎಂ. ಎಂ. ಕಲ್ಬುರ್ಗಿ, ಪೂರ್ವೋಕ್ತಗ್ರಂಥ, ಪ್ರಸ್ತಾವನೆ, ಪು. vi–viii

[12] 'ಬಾಬಾನಗರ ಇದರ ಮೂಲ ಹೆಸರು 'ಕನ್ನಡಿಗೆ'. ಇಲ್ಲಿ ಒಂದು ಜಿನಬಸದಿ ಇದ್ದುದಾಗಿ ಈ ಶಾಸನದಿಂದ ಸ್ಪಷ್ಟವಿದೆ. ಈ ಊರು ಬಿಜಾಪುರದಿಂದ ಜತ್ತಕ್ಕೆ ಹೋಗುವ ರಸ್ತೆಯಲ್ಲಿ 'ತಿಕೋಟಾ' ಬಳಿಯಲ್ಲಿದೆ. ಈ ಶಾಸನವನ್ನು ಕ್ರಿ.ಶ. 1167–1176ರ ವರೆಗೆ ಆಳಿದ ಕಳಚುರ್ಯ ಚಕ್ರವರ್ತಿ ರಾಯಮುರಾರಿಸೋವಿ ದೇವನ ಕಾಲಕ್ಕೆ ಬರೆಯಲಾಗಿದೆ; ತೇದಿಯನ್ನುಳ್ಳ ಭಾಗ ಈಗ ಅಳಿಸಿಹೋಗಿದೆ. ಇದು SII· Vol· XVIII, No· 187, pp. 256-259ರಲ್ಲಿ ಅಚ್ಚಾಗಿದೆ. ಆದರೆ ಅದರಲ್ಲಿ ಇದರ ಮಹತ್ವವನ್ನು ಗುರುತಿಸಲಾಗಿಲ್ಲ.

[13] ಇದು ಈಗಿರುವಂತೆ ಒಂದು ಕಿಂಚಿದಶುದ್ಧ ಮತ್ತೇಭವಿಕ್ರೀಡಿತ ವೃತ್ತ. ಮೂರನೆಯ ಪಾದದಲ್ಲಿ ಗಣಸಂಯೋಜನೆಯಲ್ಲಿ ದೋಷವಿದೆ. ನಾಗಾರ್ಯವನ್ನು ನಾಗಚಂದ್ರನ ಅಣ್ಣ ಎಂದು ಸ್ವೀಕರಿಸದಿದ್ದರೆ ಪದ್ಯದಲ್ಲಿ ಕರ್ತೃವೇ ಇಲ್ಲದಂತಾಗುತ್ತದೆ. ಕೆಲವೊಮ್ಮೆ ವೃತ್ತವನ್ನು ಐದು ಪಾದಗಳ ವರೆಗೂ ಬೆಳೆಸಿ ಬರೆಯುವುದು ರೂಢಿಯಲ್ಲಿದ್ದಿತು (ನೋಡಿ. ಡಾ. ಎಂ. ಎಂ. ಕಲ್ಬುರ್ಗಿ, ಶಾಸನ ಛಂದಸ್ಸು, ಕರ್ನಾಟಕ ಭಾರತಿ, ಸಂ. ೩, ಸಂ, ೪, ಪು. ೫೦–೫೩)

ಇಂಗಳೇಶ್ವರ ಈ ಭಾಗದ್ದೆಂಬುದು ಸುವಿಶ್ರುತ ಸಂಗತಿ.[14] ಅದು ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನಲ್ಲಿದೆ. ಈಗ ಉಲ್ಲೇಖಿಸಿದ ಶಾಸನದ ಪ್ರಕಾರ ಬಿಜಾಪುರ ತಾಲ್ಲೂಕಿಗೆ ಹತ್ತಿರವೇ ಇರುವ 'ಮಂಗಳವೇಡೆ' ಒಂದು ಪ್ರಸಿದ್ಧ ಜೈನ ಕೇಂದ್ರವಾಗಿದ್ದಿತು.[15] ಇಲ್ಲಿ ಬರುವ 'ಮಂಗಳವೇಡದ ರಾಯರಾಚಾರ್ಯ......[ಮೂ]ಲ ಸಂಘದ ದೇಶಿಗಣದ ತ್ರಿಭುವನ ಗುರು' ಶ್ರವಣಬೆಳ್ಗೊಳದ ಶಾಸನದಲ್ಲಿ ಬರುವ "ಶ್ರೀಮತ್ತ್ರಿಭುವನ ರಾಜಗುರು ಶ್ರೀಭಾನುಚಂದ್ರ ಸಿದ್ಧಾಂತ ಚಕ್ರವರ್ತಿ" ಆಗಿರಬಹುದು.[16] ಬಿಜಾಪುರ, ಗುಲ್ಬರ್ಗ ಮತ್ತು ಬೀದರ ಜಿಲ್ಲೆಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಜೈನಧರ್ಮ ಇಳಿಮುಖ ಕಂಡದ್ದು ಈ ಭಾಗದಲ್ಲಿಯ ಸಾಮ್ರಾಜ್ಯದ ರಾಜಧಾನಿಗಳು ದೂರಕ್ಕೆ ಸ್ಥಳಾಂತರಗೊಂಡಾಗ ಎಂದು ನಮಗೆ ತೋರುತ್ತದೆ. ರಾಜಮನೆತನಗಳು ಈ ಧರ್ಮವನ್ನು ಹತ್ತಿಕ್ಕುವುದಕ್ಕಿಂತ ಧಾರ್ಮಿಕ ಕ್ರಾಂತಿಯೇ ಆ ಮತವನ್ನು ಹತ್ತಿಕ್ಕಿತು.[17] ವಿಶೇಷವಾಗಿ ರಾಜರುಗಳು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಈ ತ್ರಿಭುವನ ರಾಜಗುರು ಭಾನುಚಂದ್ರನ 'ತ್ರಿಭುವನ' ಎಂಬ ಬಿರುದನ್ನು ವಿಶ್ಲೇಷಿಸಿದರೆ 6ನೆಯ ವಿಕ್ರಮಾದಿತ್ಯನ 'ತ್ರಿಭುವನಮಲ್ಲ' ಎಂಬ ಬಿರುದನ್ನೇ ಹೊಂದಿದ್ದುದು ಸ್ಪಷ್ಟವಿದೆ. ವಾದಿರಾಜ ಪಂಡಿತ ಜಗದೇಕಮಲ್ಲವಾದಿನ್' ಎಂಬ ಬಿರುದನ್ನು ಹೊಂದಿದ್ದುದನ್ನೂ ಇಲ್ಲಿ ಜ್ಞಾಪಿಸಿಕೊಳ್ಳಬೇಕು.[18] ಈ ಭಾನುಚಂದ್ರ[19], ಕ್ರಿ. ಶ. 1115ರಲ್ಲಿ ಸಮಾಧಿ ಮರಣವನ್ನಪ್ಪಿದ ಮೇಘಚಂದ್ರ[20] ಮೊದಲಾಗಿ ಅನೇಕ ಜೈನಯತಿಗಳು ನಾಗಚಂದ್ರನ ಗುರು ಬಾಳಚಂದ್ರನ ಶಿಷ್ಯರಾಗಿದ್ದರು.[21] 'ಮಲ್ಲಿನಾಥಪೂಣ'ದ ಪ್ರಕಾರ ಬಾಳಚಂದ್ರನಿಗೆ 'ನಾಗಭಟ್ಟಾರಕ' ಎಂಬ ಅಪರ ನಾಮವಿದ್ದಿತು.[22] ಇದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಪ್ರಾಯಃ ಈ ಅಪರ ನಾಮವನ್ನೇ ನಾಗಚಂದ್ರನ ಹಿರಿಯ ಮೊಮ್ಮನಿಗೆ ಇಟ್ಟಿರಬೇಕು. ಮತ್ತೆ ಇನ್ನೊಬ್ಬನಿಗೆ 'ಅಭಿನವ ಪಂಪ'ನ ಹೆಸರನ್ನು ಇಟ್ಟದ್ದೂ ಸ್ಪಷ್ಟವಿದೆ. ಸದ್ಯ ನಾಗಚಂದ್ರನ ಪೀಳಿಗೆಯನ್ನು ಹೀಗೆ ರಚಿಸಬಹುದು :

---

[14] a) Dr. P. B. Desai, *Jainism in South India and some Jaina Epigraphs*, p. 392

b) *Ep. Car. Vol II (1973)*, No. 364, 456, pp. 228, 277 ಈವಿಷಯವನ್ನು ಪ್ರತಿಪಾದಿಸುವ ಅನೇಕ ಶಾಸನಗಳಿವೆ.

[15] *SII*, Vol. XVIII, No. 187, lines 36 to 37

[16] *Ep. Car*. Vol II (1973), No. 374, p. 241

[17] a) *SII*. Vol. XX, No. 56, ತಾಳಿಕೋಟೆಯ ಶಾಸನ, 1184 A)

b) ಈ ಶಾಸನ ಭಾಗವನ್ನು ಡಾ. ಎಂ. ಎಂ. ಕಲ್ಬುರ್ಗಿ 'ಶಾಸನಗಳಲ್ಲಿ ಶಿವಶರಣರು' ಪುಸ್ತಿಕೆಯಲ್ಲಿ ಉಲ್ಲೇಖಿಸಿದ್ದಾರೆ. ಪು. 29

c) ಏಕಾಂತದ ರಾಮಯ್ಯನಿಗೆ ಸಂಬಂಧಿಸಿದ ಅಬ್ಬಲೂರ ಶಾಸನ ನೋಡಿ. ಅದೇ ಗ್ರಂಥ, ಪು. 91

[18] ಡಾ. ಕೆ. ಕೃಷ್ಣಮೂರ್ತಿ, ಸಂಸ್ಕೃತ ಕಾವ್ಯ, ಪು. 305 (1958)

[19] *Ep. Car*. Vol. II, No. 81, p. 61 (1973)

[20] *Ibid.*, No. 156, pp. 92-98

[21] *Ibid.*, No. 360, p. 217

[22] ಮಲ್ಲಿನಾಥ ಪುರಾಣಂ, ಆ, 10-82 ವ, ಪು. 225,

ನಾಗಚಂದ್ರನ ಪೀಳಿಗೆಯನ್ನು ಹೀಗೆ ರಚಿಸಬಹುದು :

ನಾಗಚಂದ್ರ
|
× (ಮಗನ ಹೆಸರು ತಿಳಿಯದು)
|
ನಾಗಾರ್ಯ (ಮೂಲಿಗ)[23] — ನಾಗಚಂದ್ರ

ನಾಗಚಂದ್ರಕವಿಯ ಕಾಲ ಯಾವುದು ಎಂಬ ಸಮಸ್ಯೆಯನ್ನು ಬಿಡಿಸಲು ಸಾಧ್ಯವೇ ಎಂಬುದನ್ನು ನೋಡೋಣ. ಈ ಇಬ್ಬರು ಮೊಮ್ಮಕ್ಕಳು ಸಾಕಷ್ಟು ಪ್ರಬುದ್ಧರೂ ಪ್ರಸಿದ್ಧರೂ ಆಗಿದ್ದರೆಂಬುದು ಬಾಬಾನಗರದ ಈ ಶಾಸನದಿಂದ ಸ್ಪಷ್ಟ. ಈ ಶಾಸನವನ್ನು ರಾಯಮುರಾರಿ ಸೋವಿದೇವನ ಕಾಲಕ್ಕೆ ಬರೆದುದೂ ಸ್ಪಷ್ಟವೇ ಇರುವುದರಿಂದ ಇವರು ಕ್ರಿ. ಶ. ಸು. 1167–1176 ರ ಮಧ್ಯದಲ್ಲಿ ಸುಮಾರು ವಯಸ್ಕರಾಗಿದ್ದರು ಎಂಬುದು ಗ್ರಹಿಕೆಗೆ ಬರುವ ಸಂಗತಿ. ಇದು ಸರಿಯಾದರೆ ನಾಗಚಂದ್ರನ ಈ ಮೊಮ್ಮಕ್ಕಳು, ಕ್ರಿ. ಶ. ಸು. 1120ರ ಎಡಬಲದಲ್ಲಿ ಹುಟ್ಟಿರಬೇಕು. ಇನ್ನು ನಾಗಚಂದ್ರ 'ರಾಮಚಂದ್ರ ಚರಿತಪುರಾಣಂ' ಗ್ರಂಥವನ್ನು ಕ್ರಿ. ಶ. 1112 ಕ್ಕೂ ಮುಂಚಿತವೇ ಬರೆದಿದ್ದನೆಂದು ನನಗೆ ತೋರುತ್ತದೆ. ಏಕೆಂದರೆ ಈ ಕಾವ್ಯದಲ್ಲಿನ ಅತ ಕೊಟ್ಟ ಗುರುಪರಂಪರೆಯ ವರ್ಣನೆಯನ್ನು ಗದ್ಯದ ಕೊಂಡಿಯನ್ನು ಬಿಟ್ಟರೆ ಇದೇ ರೀತಿಯಲ್ಲಿ (ನಾಲ್ಕು ಪದ್ಯಗಳನ್ನು) ಯಥಾವತ್ತಾಗಿ ಒಬ್ಬ ಶಾಸನಕಾರನು ಬಳಸಿಕೊಂಡಿದ್ದಾನೆ. ಶಾಸನದ ಆ ಭಾಗವಿಂತಿದೆ :—

ಸಾಲುಗಳು :

26 — ।। ಚತುರಂಗುಳ ಚಾರಣ
27 [ಸು][24] ದ್ಧಿ ತಮಗೆ ಸಮನಿಸಿದುದೆನಿಪ ತಪದುನ್ನತಿಯಿಂ ಶ್ರುತದಿಂ ಭೂಮ
28 ಣ್ಡಳ ವಿಶ್ರುತರೆನಿಸಿದರಲ್ತೆ ಕೊಣ್ಡ ಕೊಣ್ಡಾಚಾರ್ಯ್ಯರು[25] ॥ವಚನ॥

---

[23] ಮೂಲಿಗ–ಇದಕ್ಕೆ ಮೂರು ಅರ್ಥಗಳು ಸಾಧ್ಯ (1) ಮೂಲಿಕೆಗಳನ್ನು ವ್ಯವಹರಿಸುವ–ಕೊಡುವ ಪ್ರಾಯಃ ವೈದ್ಯ, (2) ದೇವಗೃಹಗಳ ಉಸ್ತುವಾರಿಯನ್ನು ನೋಡಿಕೊಳ್ಳುವ (3) ಊರನ್ನು ಕಾಯುವ ಅಧಿಕಾರ ಉಳ್ಳ ವ್ಯಕ್ತಿ. ನಾನು ಎರಡನೆಯ ಅರ್ಥವನ್ನು ಪ್ರಕೃತದಲ್ಲಿ ಸ್ವೀಕರಿಸಿರುವೆ. ನಾಗಾರ್ಯನಿಗಿಂತ ನಾಗಚಂದ್ರನು ತುಂಬ ಪ್ರಸಿದ್ಧ ವ್ಯಕ್ತಿಯೆಂದೂ ಶಾಸನದಲ್ಲಿ ವ್ಯಕ್ತವಾಗಿದೆ.

[24] ಶಾಸನ ಸಂಪಾದಕರಿಗೆ ಈ ಪದ್ಯ ನಾಗಚಂದ್ರನ ಕಾವ್ಯಗಳದ್ದು ಎಂದು ತಿಳಿದಿದ್ದರೆ ಕಂಸದಲ್ಲಿ 'ಖು' ಎಂದೇ ಬರೆಯುತ್ತಿದ್ದರು. ಇನ್ನೂ ಒಂದೆರಡು ದೋಷಗಳು ಮುಂದೆ ಬಂದಿವೆ. ಸಂಶೋಧಕರು ಬಾಬಾನಗರದ ಹಾಗೂ ಈ ಕಂಸಣ್ಣೂರಿನ ಶಾಸನಗಳನ್ನು ಇನ್ನೊಮ್ಮೆ ನೋಡಬೇಕು.

[25] ಶಾಸನದಲ್ಲಿ ಮೂಲತಃ ಇದೇ ರೂಪ ಇದ್ದರೆ ಈ ಶಾಸನ ಕವಿಯ ನೇತೃತ್ವದಲ್ಲಿ ಸಿದ್ಧವಾಗಿಲ್ಲವೆಂದು ನನಗೆ ತೋರುತ್ತದೆ. ಏಕೆಂದರೆ ಎರಡು ಕಾವ್ಯಗಳಲ್ಲೂ 'ರ್' ಎಂದು ರೇಫೆ ವ್ಯಂಜನಾಂತವಾಗಿಯೇ ಇದೆ. ನೋಡಿ : ಮ. ನಾ. ಪು. ಆ. ೧–೧೫ ; ರಾ. ಚ. ಪು. ಆ, ೧–೧೨

29 ಆ ಕೊಣ್ಡಕುನ್ದಾನ್ವಯದ ಶ್ರೀಮೂಲ ಸಂಘದ ದೇಸಿಗಣದ ಪುಸ್ತಕಗಚ್ಛ
30 ದ ಪಿರಿಯ ಸಮುದಾಯದಾಚಾರ್ಯ್ಯವರ್ಯ್ಯರು ॥ ವಿಮಳ ಶ್ರೌತಂ ಕೈ
31 ವಲ್ಯಮೆಂಬ ಸಂಕಲ್ಪಮಿನಿತೆ ನೆಗ್ಗ್ರ[26]ೞಿಯುಂ ವಿಶ್ವಮನಱಿವ ಮಹಿಮೆಯಿಂ
32 ವರ್ದ್ಧಮಾನ ಜಿನಪತಿಗೆ ವರ್ದ್ಧಮಾನ ಮುನೀ[ಂ*]ದ್ರಂ ॥[27] ಆ ಮುನೀಂದ್ರ ಪಾದಾರಾಧ
33 ಕಂ॥ ಅರವಿನ್ದಸ್ಮೇರಮಾಸ್ಯಂ ತಿಳಿದೆ [28] ಹೃದಯ ಸಂಶುದ್ಧಿಯಿಂ ಮಾನಸಂ ಶಾನ್ತ
34 ರಸಾಧೀನಂ ಸಮಾಧಾನಮನಱಿಪೆ ತಪಸ್ತಪ್ತ ಮುತ್ತಪ್ತ ಕಾರ್ತ್ತಸ್ವರ ಶಾಖಾ
35 ಲೀಳೆಯುಂ[29] ಪಾಳಿಸೆ ತನುಸಯುನಂ ಕಾಪ್ಪುರಂ ಮಾಡೆ ಕಾರುಣ್ಯ ರಸಸ್ರೌತಂಗ
36 ಳಂ[30] ಲೋಕಮನೆಱಗಿಸಿದಂ ಬಾಳಚನ್ದ್ರ ಬ್ರತೀಂದ್ರಂ ॥ ಪ್ರಚುರ ಕಳಾನ್ವಿತರಕುಟಿ
37 ಳರಚಂಚಳಸ್ಸುದ್ಧ [31] ಪಕ್ಷಪ್ರಿತ್ತದ್ದೋರ್ಷಾಪಚಯ ಪ್ರಕಾಶರೆನೆ ಬಾಳಚನ್ದ್ರ
38 ದೇವಪ್ರಭಾವ[32]ಮೇನಚ್ಚರಿಯೋ ॥ ಆ ಮುನಿಪನ ಸನ್ನಾನದೊಳಾಮುಖಮಂ ಬಳ
39 ಸೆ ನಿಜತಪೋ ವಿಭವ ಸಮುದ್ದಾಮಯಶಂ ಪೆಸರ್ವಡೆದಂ ಕಾಮಾಂತಕನರ್ಹ
40 ಣನ್ದಿ ಬೆಟ್ಟದ ದೇವಂ ॥ ಮಾಗಿಯ ದರ್ಪಮಂ ಕಿಡಿಸಿ ಬೇಸಗೆಯುಂ ಬೆದಱಿಟ್ಟಿ ಮೀಱಿ
41 ಮೇಘಾಮಮಂ ತ್ರಿಕಾಳ ನಿಯಮ ಸ್ಥಿತಿಯಿಂ ಪರಮಾತ್ಮಯೋಗದೊಳ್
42 ಯೋಗಿಗಳಸ್ನಾರಾರೆನಿಸಿ ಬೆಟ್ಟದ ದೇವರ ಮಾಳ್ಕೆಯಿಂ ತಪಶ್ರೀಗಧಿನಾಥ
43 ನಾಗಿ ಜಿನಶಾಸನ ದೀಪಕನಾದೊಡೊಪ್ಪುಗುಂ ॥ . . . . ಇತ್ಯಾದಿ[33].

---

[26] ಕಾವ್ಯಗಳಲ್ಲಿ'ನೇ' ಎಂದು ದೀರ್ಘರೂಪವನ್ನು ಹೊಂದಿದೆ. ಇದು ಸರಿಯಾದುದು. ಶಾಸನ ಓದುವವರು ತಪ್ಪನ್ನು ಮಾಡಿದ್ದಾರೆ. ಏಕೆಂದರೆ, 'ಎ, ಏ' ಕಾರಗಳಿಗೆ ಒಂದೇ ಚಾಕ್ಷು ರೂಪ ಇದ್ದಿತು. ನೋಡಿ : ಕ. ಸಾ. ಪ. ಪತ್ರಿಕೆ, ಸಂ. ೫೬, ಸಂ. ೨, ಕನ್ನಡ ವರ್ಣಗಳು ಒಂದು ವಿವೇಚನೆ.

[27] ಈ ಪದ್ಯ ರಾ. ಚ. ಪು. ಆ. ೧–೧೫ ರಂತೆಯೆ ಇದೆ. ಮ. ನಾ. ಪು. ದಲ್ಲಿ (ಆ. ೧–೧೮) 'ಶ್ರೋತ್ರಂ' ಎಂದೂ ಶ್ರವಣಬೆಳ್ಗೊಳದ ಶಾಸನದಲ್ಲಿ 'ಶ್ರಿತಂ' ಎಂದೂ ಪಾಠಾಂತರ ಗಳಿವೆ. (Ep. Car Vol. II. No. 81 (1973) p. 63). ಶ್ರ. ಬೆ. ಪಾಠ ಕೆಟ್ಟಿದೆ.

[28] ಕಾವ್ಯಗಳಲ್ಲಿ 'ಪೆ' ಎಂದಿದೆ. ಶಾಸನವನ್ನು ಇನ್ನೊಮ್ಮೆ ಪರೀಕ್ಷಿಸಬೇಕು. (ರಾ. ಚ. ಪು. ಆ- –೧೬ ; ಮ. ನಾ. ಪು. ಆ ೧೦-೯)

[29] 'ಲೀಳೆಯುಂ' (ರಾ. ಚ. ಪು.) 'ಲೀಲೆಯುಂ' (ಮ. ನಾ. ಪು)

[30] 'ಸ್ರೋತಂಗಳಂ' ಎಂದು ಕಾವ್ಯಗಳಲ್ಲಿ ಸರಿಯಾಗಿದೆ.

[31] 'ಶುದ್ಧ'— ,, — (ರಾ. ಚ. ಪು. ಆ. ೧–೧೮ ; ಮ. ನಾ. ಪು. ಆ. ೧–೨೦)

[32] ರಾ. ಚ ಪು. ಕೆಲ ಪ್ರತಿಗಳಲ್ಲಿ 'ಪ್ರಕಾಶ' ಎಂಬ ಪಾಠವನ್ನು ಯಾರೋ ಪ್ರಕ್ಷೇಪಿಸಿ ದ್ದಾರೆ 'ಪ್ರಭಾವ' ಎಂಬುದೇ ಕವಿಪಾಠ.

[33] ಈ ಶಾಸನದ 'ಚತುರಂಗುಳ' ದಿಂದ ಆರಂಭಮಾಡಿ 'ಅಚ್ಚರಿಯೋ' ದವರೆಗೆ (Lines 26–38, ಗದ್ಯದ ಕೊಂಡಿಯನ್ನು ಬಿಟ್ಟರೆ) ಇರುವ ಪದ್ಯಗಳು ನಾಗಚಂದ್ರನ ಕಾವ್ಯಗಳಲ್ಲಿ ಬಂದಿವೆ (ರಾ. ಚ. ಪು. ಆ. ೧–ಪದ್ಯ ೨೨, ೧೫, ೧೬ ಮತ್ತು ೧೮ ; ಮ. ನಾ. ಪು. ಆ. ೧–೧೫, ೧೮, ಆ. ೧೦–೯೧, ಆ. ೧–೨೦)

ಈ ಶಾಸನದಲ್ಲಿ ಬಂದಿರುವ ಅರ್ಹಣಂದಿ ಭಟ್ಟಾರಕನನ್ನು ನಾಗಚಂದ್ರ ಎರಡು ಪುರಾಣಗಳಲ್ಲೂ ಸ್ತುತಿಸಿಲ್ಲ. ಇದಕ್ಕೆ ಕಾರಣ ಪ್ರಾಯಃ ಅರ್ಹಣಂದಿ ಆ ಎರಡು ಕೃತಿಗಳು ಸಂಪೂರ್ಣವಾಗುವ ಸಮಯದಲ್ಲಿ ಅಷ್ಟು ಪ್ರಸಿದ್ಧ ವ್ಯಕ್ತಿಯಾಗಿರಲಿಕ್ಕಿಲ್ಲ. 1112ರಲ್ಲಿ ಅರ್ಹಣಂದಿಯು ಬಹು ಪ್ರಸಿದ್ಧ ತಪಸ್ವಿ ಎಂದು ಶಾಸನದಿಂದ ಸ್ಪಷ್ಟವಿರುವುದರಿಂದ ತತ್ಪೂರ್ವದಲ್ಲಿ ಆತ ತಪಸ್ಸನ್ನೆಸಗಿ ಪ್ರಸಿದ್ಧಿಗೆ ಬಂದ. ಇದಕ್ಕೆ ಇನಿತು ಸಮಯಬೇಕಷ್ಟೆ. ಇದನ್ನು ಲಕ್ಷಿಸಿದಾಗ ಏನಿಲ್ಲವೆಂದರೂ ನಾಗಚಂದ್ರ ಆ ಎರಡೂ ಕಾವ್ಯಗಳನ್ನು ಕ್ರಿ. ಶ. ಸು. 1080ರ ಎಡಬಲದಲ್ಲಿ ರಚಿಸಿರಬೇಕು. ಕಣ್ಣೂರು ಶಾಸನದಲ್ಲಿ ಉಕ್ತನಾದ ಅರ್ಹಣಂದಿ ಯತಿಯ ಉಲ್ಲೇಖ ಕ್ರಿ.ಶ. 1097-98ರ ಹುಣಸಿ ಹಡಗಲಿ ಶಾಸನದಲ್ಲಿಯೂ ಬಂದಿರುವುದರಿಂದ (JISI) ಈತನನ್ನು ಉಲ್ಲೇಖಿಸದ, ಆ ಗುರುಪರಂಪರೆಯನ್ನು ಚೆನ್ನಾಗಿ ಬಲ್ಲ ನಾಗಚಂದ್ರ ಇದಕ್ಕೂ ಹಿಂದೇಇದ್ದ.

ಬಿಜಾಪುರ ಜಿಲ್ಲೆಯಲ್ಲಿ ನಾಗಚಂದ್ರನಿಗೆ ಸಂಬಂಧಿಸಿದಂತೆ ಈಗ ಮೂರು ಶಾಸನಗಳು ದೊರಕಿದಂತಾಗಿದೆ. ತಲಕಾಡಿನ ವಿಜಯಪುರದಲ್ಲಿ ಒಂದೂ ಪ್ರಮಾಣ ದೊರಕಿಲ್ಲ. ಕಾರಣ ಉತ್ತರಕರ್ನಾಟಕದ ಬಿಜಾಪುರ ಜಿಲ್ಲೆಯೆಂದು ಪ್ರತಿಪಾದಿಸಿದ ಕವಿಚರಿತೆಕಾರರು ಮಧುರಚೆನ್ನ ಮೊದಲಾದವರ ಹೇಳಿಕೆ ಸಮಂಜಸವಾಗಿದೆಯೆಂದು ನನಗೆ ತೋರುತ್ತದೆ. ಬಿಜಾಪುರ ವಸ್ತು ಸಂಗ್ರಾಲಯದ ಶಾಸನ ಸಂಪೂರ್ಣ ದೊರೆತಿಲ್ಲವಾದುದರಿಂದ ಅದರ ಕರ್ತೃತ್ವದ ಬಗ್ಗೆ ಹೀಗೆಯೆ ಎಂದು ಖಚಿತವಾಗಿ ಹೇಳುವಂತಿಲ್ಲ ಎಂಬ ಸಿ. ಪಿ. ಕೆ. ಅವರ ಮಾತು ಅರ್ಥಪೂರ್ಣವಾಗಿದೆ.[34] ಈ ಶಾಸನವೂ ಎನ್. ಲಕ್ಷ್ಮೀನಾರಾಯಣರಾಯರು ಸಂಪಾದಿಸಿದ ಶಾಸನ ಸಂಪುಟದಲ್ಲಿ ಬಂದಿದೆ. [35]

ನಾಗಚಂದ್ರನ ಕಾವ್ಯಗಳಿಂದ ಎತ್ತಿ ಬರೆದ ಶ್ರವಣಬೊಳ್ಗೊಳದ ಶಾಸನ ಪದ್ಯಗಳನ್ನು ಮಹಂತಿ ಕವಿಚರಿತೆಕಾರರು[36] ಮತ್ತು ಡಾ. ಹೆಂಡಿ[37] ಗುರುತಿಸಿ ಕೊಟ್ಟಿದ್ದಾರೆ. ಬಿಜಾಪುರದ ಶಾಸನ ಸಂಗತಿಯನ್ನು ಮಧುರಚೆನ್ನರು ಬೆಳಕಿಗೆ ತಂದಿದ್ದಾರೆ.[38] ಕಂಚಿಹಂಪನ ಕಿಂವದಂತಿಯನ್ನು, [39] ಬ್ರಹ್ಮಶಿವ ನಾಗಚಂದ್ರನ ಮೊಮ್ಮಗ ಎಂಬ ನಿರಾಧಾರ ಸಮಕಾಲೀನ ಋಜುವಿಲ್ಲದ ಸಂಗತಿಯನ್ನು ನಾವು ಇನ್ನು ಕೈಬಿಡಬಹುದು. ಅಭಿನವ ಪಂಪನನ್ನು ಕುರಿತು ಅಭ್ಯಾಸ

---

[34] ನಾಗಚಂದ್ರ (ಸಿ. ಪಿ. ಕೆ.), ಪು. ೬

[35] S I. I. Vol, III, No. 125

[36] ಕವಿಚರಿತೆಕಾರರು ಗುರುತಿಸಿದ ಶಾಸನಗಳು : 64, 127, 140 ಮತ್ತು 158. ಇಲ್ಲಿನ ಅಂಕೆಗಳು ಅವರೇ ಸಂಪಾದಿಸಿದ *Ep. Car.* Vol II ಇದಕ್ಕೆ ಸಂಬಂಧಪಟ್ಟಿವೆ.

[37] ಡಾ. ಬಿ. ಬಿ. ಹೆಂಡಿ, ಮಲ್ಲಿನಾಥ ಪುರಾಣಂ, ಪ್ರಸ್ತಾವನೆ, ಪು. XI-XII

[38] ಅಭಿನವ ಪಂಪ ಬರೆದ ಶಿಲಾಲಿಪಿ ಜಯಕರ್ನಾಟಕ, ಸಂ, ೮, ೧೬ನೆಯ ಡಿಸೆಂಬರ್ ೧೯೩೯.

[39] ಅನೇಕರು ಈ ಸಂಗತಿಯನ್ನು ಈಗಾಗಲೇ ಪ್ರಸ್ತಾಪಿಸಿದ್ದಾರೆ.

ಮಾಡುವವರು ಬಿಜಾಪುರ ಜಿಲ್ಲೆಯ ಭಾಗವನ್ನು ಚೆನ್ನಾಗಿ ಪರಿವೀಕ್ಷಿಸಿದರೆ ಇನ್ನಷ್ಟು ಹೊಸ ಸಂಗತಿಗಳು ಹೊರಬರಬಹುದು. ಅದು ಆಗಬೇಕಾದ ಕೆಲಸ. ಆಗ ನಾಗಚಂದ್ರನಿಗೆ ಇದ್ದ ಮಕ್ಕಳ,[40] ಮೊಮ್ಮಕ್ಕಳ ಬಗೆಗೆ ನಮಗೆ ಇನ್ನಷ್ಟು ಖಚಿತ ಅಂಶಗಳು ದೊರೆಯಬಹುದು ; ನಾಗಚಂದ್ರನ ಪರಿಸರದ ಕಲ್ಪನೆಯೂ ಸರಿಯಾಗಿ ಮೂಡುತ್ತದೆ.[41]

---

[40] ಕ. ಕ. ಚ., ಭಾಗ–೧, ಪು. 112

[41] ಈ ಲೇಖನವನ್ನು ಬರೆಯುವಲ್ಲಿ ನೆರವಾದ ಡಾ. ಬಾ. ರಾ. ಗೋಪಾಲ್ ಅವರಿಗೆ ನಾನು ವಿಶೇಷ ಋಣಿಯಾಗಿದ್ದೇನೆ.

ಪುಸ್ತಕ ಲೋಕ

Karnataka Paintings : ಲೇ : ಡಾ. ಶಿವರಾಮ ಕಾರಂತ ; ಪ್ರ : ಪ್ರಸಾರಾಂಗ, ಮೈಸೂರು ; ಪು. 98, 40 ಚಿತ್ರಗಳು ; ಬೆಲೆ ರೂ. 35

ಡಾ. ಶಿವರಾಮ ಕಾರಂತರ ಬಹುಮುಖ ವ್ಯಕ್ತಿತ್ವಕ್ಕೆ ಇದೊಂದು ನಿದರ್ಶನ. ಡಾ. ಕುಮಾರಸ್ವಾಮಿ ಮುಂತಾದವರ ಗ್ರಂಥಗಳಿಂದ ಪ್ರಚೋದಿತರಾದ ಕಾರಂತರು ಬಹಳ ಹಿಂದಿನಿಂದಲೂ ಕಲಾಭಿಮಾನಿಗಳು. ಪ್ರಸಿದ್ಧ ಚಿತ್ರಪ್ರದರ್ಶನಾಲಯಗಳನ್ನು ಕಂಡುಬರಲೆಂದೇ ಯುರೋಪ್ ಖಂಡದ ಪರ್ಯಟನೆ ಕೈಗೊಂಡ ಇವರು, ಚಿತ್ರಕಲೆಯ ಮೂಲತತ್ತ್ವಗಳ ಪರಿಚಯವೂ ಇಲ್ಲದ ನಮ್ಮ ದೇಶದ ಅನೇಕ ಹಿರಿಯ ಬರೆಹಗಾರರು ಚಿತ್ರಗಳ, ಶಿಲ್ಪಗಳ ವಿಮರ್ಶೆ ಮಾಡುವಾಗ 'ಸತ್ಯಂ ಶಿವಂ ಸುಂದರಂ' ಎಂಬ ದೊಡ್ಡದೊಡ್ಡ ಮಾತುಗಳನ್ನು ಬಳಸುವುದು ಸಹಜ; ಆದರೆ ಅರ್ಥಹೀನ—ಎಂದು ಹೇಳಿ, ಕನ್ನಡಿಗರಿಗೆ ನಮ್ಮ ನಾಡಿನ,ಹಾಗೂ ವಿಶಿಷ್ಟವಾಗಿ ಕರ್ನಾಟಕದ ಚಿತ್ರಕಲೆಯನ್ನು ಪರಿಚಯ ಮಾಡಿಕೊಡಲೆಂದೇ ಈ ಗ್ರಂಥವನ್ನು ಬರೆದಿದ್ದಾರೆ. ಲಲಿತ ಕಲಾ ಅಕಾಡಮಿಯ ಸದಸ್ಯರಾಗಿ ಅದರ ನೀತಿಗಳನ್ನು ಒಪ್ಪದೆ, ಆ ಸಂಸ್ಥೆ, ಮಾಡಬೇಕಾಗಿದ್ದಂತಹ ಕಾರ್ಯವನ್ನು ತಾವು ವೈಯಕ್ತಿಕವಾಗಿ ಈ ಮೂಲಕ ಮಾಡಿ ತೋರಿಸಿದ್ದಾರೆ.

ಇಲ್ಲಿನ 9 ಅಧ್ಯಾಯಗಳಲ್ಲಿ ಮೊದಲನೆಯ ಪ್ರಾಸ್ತಾವಿಕವೆನ್ನಬಹುದು. ಭಾರತದ, ಕರ್ನಾಟಕದ ಚಿತ್ರಕಲೆಯನ್ನು ಪರಿಶೀಲಿಸುವ ಮುನ್ನ ಪ್ರಾಗಿತಿಹಾಸಯುಗದ ಯುರೋಪ್, ಆಫ್ರಿಕ ಖಂಡಗಳಲ್ಲಿ ಕಂಡುಬಂದ ಕ್ರೊಮ್ಯಾಗ್ನನ್ ಜನರು ರೂಪಿಸಿದ ಚಿತ್ರಗಳನ್ನು ಕುರಿತು ವಿವೇಚಿಸಿದ್ದಾರೆ. ಆ ಕಾಲದ (ಕ್ರಿ. ಪೂ. 35000–15000) ಪ್ರಾಣಿಗಳನ್ನು ಬೇಟೆಯಾಡಿದಾಗ ಅವುಗಳು ತೋರುವ ಪ್ರತಿಕ್ರಿಯೆಯನ್ನು ಎಷ್ಟು ಕಲಾತ್ಮಕವಾಗಿ ಚಿತ್ರಗಳು ನಿರೂಪಿಸುತ್ತವೆ ಎಂಬುದನ್ನು ತೋರಿಸುತ್ತ, ಆ ಚಿತ್ರಗಳು ಅಂದಿನ ಜನಜೀವನದ ಮೇಲೂ ಬೆಳಕನ್ನು ಚೆಲ್ಲಿವೆ ಎಂದಿದ್ದಾರೆ. ಅಂದಿನ ಜನ ಸಹಜೀವಿಗಳು. ಮೃಗಗಳನ್ನು ಬೇಟೆಯಾಡಿ ಜೀವಿಸಬೇಕಾಗಿದ್ದ ಕಾರಣ, ಮಾಟ–ಮಂತ್ರಗಳಿಂದ, ಪೂಜೆ–ಪುನಸ್ಕಾರಗಳಿಂದ ಮೇಲುಗೈ ಪಡೆಯಬೇಕಿತ್ತು. ಎಂತಲೇ ಸಾಂಕೇತಿಕವಾಗಿ ತಮಗಿಂತಲೂ ಹೆಚ್ಚು ಶಕ್ತಿಯುತವಾಗಿದ್ದ ಆ ಮೃಗಗಳನ್ನು ಕೊಂದು ಚಿತ್ರಿಸಿರುವುದು ಅವರ ಪೂಜಾ ವಿಧಾನದ ಒಂದು ಅಂಶ ಎಂದಿದ್ದಾರೆ.

ಕ್ರಿ. ಪೂ. 4000ದ ಅನಂತರದ ಸಾವಿರ ವರ್ಷಗಳ ಕಾಲದಲ್ಲಿ ಇಂದು ಮರುಭೂಮಿಯಾಗಿದ್ದು ಅಂದು ಸಮಶೀತೋಷ್ಣ ವಾಯುಗುಣ ಹೊಂದಿದ್ದ ಸಹಾರಾ ಮರುಭೂಮಿಯಲ್ಲಿದ್ದ

ಆದಿವಾಸಿ ಜನರು ಬರೆದ ಚಿತ್ರಗಳಲ್ಲಿ ಮೊದಮೊದಲ ಚಿತ್ರಗಳು ಮಕ್ಕಳ ಕೃತಿಗಳಂತೆ ಪ್ರಾಣಿಗಳ ಮಾನಸಿಕ ಚಿತ್ರಗಳು. ಆದರೂ ಇವುಗಳಲ್ಲಿ ಲಾಲಿತ್ಯವಿದೆ. ಅನಂತರದ ಹಲವು ಭಾವಸೂಚಕ ಚಿತ್ರಗಳು. ಇವುಗಳಲ್ಲಿ ಚೆಲುವಿನ ಪ್ರಜ್ಞೆ ಇದೆ.

ಭಾರತದ ಪುರಾತನ ಆದಿವಾಸಿಗಳು ಬರೆದ ಚಿತ್ರಗಳನ್ನು ವಿಮರ್ಶಿಸುತ್ತ, ಅವರು ಬಹು ಮಟ್ಟಿಗೆ ಕಾವಿ ಮಣ್ಣನ್ನೇ ಉಪಯೋಗಿಸಿದ್ದಾರೆ; ಗಿಡಗಳ ಅಂಟು ಅಥವಾ ಕೊಬ್ಬಿನೊಡನೆ ಬಣ್ಣಗಳನ್ನು ಅರೆದಿರಬಹುದು. ಜೀಳಲ ತುಂಡುಗಳಿಂದ ಕುಂಚಗಳನ್ನು ನಿರ್ಮಿಸಿಕೊಂಡರು ಎಂದಿದ್ದಾರೆ. ಕರ್ನಾಟಕದಲ್ಲಿಯ ಬಾದಾಮಿ, ಅಂಕಲಗಿಮಠ, ಬೆನಕಲ್‌ಗುಡ್ಡ, ರಾಮಪುರದಲ್ಲಿ ಕಾಣುವ ಚಿತ್ರಗಳ ವಿಮರ್ಶೆಯನ್ನು ಕಾರಂತರು ಮಾಡಿದ್ದಾರೆ. ಯುರೋಪ್ ಆಫ್ರಿಕಗಳಲ್ಲಿಯ ಪ್ರಾಕ್ಚಿತ್ರಗಳ ಮಟ್ಟಕ್ಕೆ ಇವು ಏರಲಾರವು ಎಂದು ಅಭಿಪ್ರಾಯಪಟ್ಟಿದ್ದಾರೆ.

ಗುಹಾಲಯಗಳಲ್ಲಿ ಚಿತ್ರಕಲೆ ಎಂಬ ಅಧ್ಯಾಯದಲ್ಲಿ ಅಜಂತಾ ಫ್ರೆಸ್ಕೊ ಎಂಬ ಮಾತಿಗೆ ತಮ್ಮ ಅಸಮ್ಮತಿ ಸೂಚಿಸಿ, ಫ್ರೆಸ್ಕೊ ಎಂಬ ಪದ ಗಾರೆ ಚಿತ್ರಕ್ಕೆ ಸಲ್ಲಬೇಕಾದದ್ದು. ವಾಸ್ತವಿಕವಾಗಿ ಅಜಂತಾದಲ್ಲಿ ನಾವು ಕಾಣುವುದು ಭಿತ್ತಿ ಚಿತ್ರಗಳು-ಇಂಗ್ಲಿಷಿನ ಮ್ಯೂರಲ್ (mural) ಎಂದು ಸೂಚಿಸಿದ್ದಾರೆ. ಆ ಚಿತ್ರಗಳನ್ನು ರೂಪಿಸಲು ಬೇಕಾದ ಬಣ್ಣಗಳ ತಯಾರಿಕೆಗೆ ಸಂಬಂಧಿಸಿದ ವಿವರಗಳನ್ನು ಕೊಟ್ಟಿದ್ದಾರೆ. ಕನ್ನಡನಾಡಿನ ಭಿತ್ತಿಚಿತ್ರಗಳ ವಿವರಣೆ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಕಾರಂತರು ಹೇಳಿರುವ, 'In ndian painting, line is the very essence of draftsmanship, whereas in sculpture it is a varying quality dependant on the point from which one views', ಎಂಬ ಮಾತು ಮೆಲುಕು ಹಾಕುವಂತಹುದು.

ಮುಂದಿನ ಅಧ್ಯಾಯಗಳಲ್ಲಿ ಧವಲಾ ಗ್ರಂಥಚಿತ್ರಗಳ, ವಿಜಯನಗರದ ಭಿತ್ತಿಚಿತ್ರಗಳ ಹಾಗೂ ಉತ್ತರ ಕರ್ನಾಟಕದ ಚಿತ್ರಗಳ ಪ್ರಸ್ತಾಪಗಳಿವೆ. ಇದುವರೆಗೂ ಹೆಚ್ಚಾಗಿ ಗಮನಕ್ಕೆ ಬಾರದಿದ್ದ, ಅಥಣಿ, ನಿಪ್ಪಾಣಿ, ನರಗುಂದ ಮುಂತಾದ ಕಡೆಗಳಲ್ಲಿ ಮಠಗಳಲ್ಲಿ, ದೇವಾಲಯಗಳಲ್ಲಿ, ಜಮೀನುದಾರರ ಪಾಳೆಯಗಾರರ ವಾಡೆಗಳಲ್ಲಿ ಕಾಣಿಸುವ ಚಿತ್ರಗಳ ದೀರ್ಘವಿವರಣೆಗಳು ಈ ಗ್ರಂಥದಲ್ಲಿವೆ. ನರಗುಂದದ ಚಿತ್ರಗಳನ್ನು ವಿಶ್ಲೇಷಿಸುತ್ತ, 'Naragund shows that potent folk art existed upto the last century. Though we can find a few paintings done by our folk artists during the beginning of this century, they lack the grace, and folkish qualities of earlier times.' ಎಂದಿರುವ ಮಾತುಗಳು ಸಮಕಾಲೀನ ಚಿತ್ರಕಲೆಯ ದಾರುಣ ಪರಿಸ್ಥಿತಿಯನ್ನು ಸೂಚಿಸುತ್ತವೆ. ಕೊನೆಯ ಅಧ್ಯಾಯದಲ್ಲಿ ಚಿತ್ರದ ಗೊಂಬೆಗಳ ಸೂಕ್ಷ್ಮಾವಲೋಕನ ಇದೆ.

ಕರ್ನಾಟಕದ ಚಿತ್ರಕಲೆಯ ಒಟ್ಟಾರೆ ನೋಟದಿಂದ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಕಾಲ ಮತ್ತು ಶೈಲಿಗಳಲ್ಲಿರುವ ಭಿನ್ನತೆಯೇ ಅಲ್ಲದೆ ಜಾನಪದ ಶೈಲಿಯಲ್ಲಿಯೂ ಹಲವಾರು ಭೇದಗಳಿವೆ. ಉತ್ಕೃಷ್ಟವಲ್ಲದಿದ್ದರೂ ತಮ್ಮದೇ ಆದ ಒಂದು ಸಂಪ್ರದಾಯವನ್ನು ಅವು ನಿರೂಪಿಸು

ತ್ತವೆ. ವಾಸ್ತವಿಕಗಳ ಅನುಕರಣವಾಗಿರದೆ, ರೇಖಾವಿನ್ಯಾಸದಲ್ಲಾಗಲಿ ವರ್ಣಗಳಲ್ಲಿ ಆಗಲಿ ಹೊಸ ಭಾವನೆಗಳಿಗೆ ಅವು ಎಡೆಮಾಡಿಕೊಟ್ಟಿವೆ. When most of our Karnataka artists consider painting as a mechanical reproduction of nature, it is time to assess why our folk artists adapted radical change ಎಂಬ ಲೇಖಕರ ಕೊನೆಯ ಮಾತು ವಿಚಾರಣೀಯವಾಗಿದೆ.

ಡಾ. ಬಾ. ರಾ. ಗೋಪಾಲ್

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

ಮಾನವಿಕ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸ ಗಂಗೋತ್ರಿ, ಮೈಸೂರು-೫೭೦೦೧೬